KARNATAKA

BALA-VYAKARANAM

(STUDENTS' GRAMMAR)

IN KANARESE

BY

PANDIT K. R. NARASIMHAIYA

KOLAR

ಕರ್ಣಾಟಕ ಬಾಲವ್ಯಾಕರಣಂ

(ಪಾಠಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿ)

ಕೋಲಾರದಲ್ಲಿರುವ ಪಂಡಿತ ಕೆ. ಆರ್. ನರಸಿಂಹಯ್ಯನವರಿಂದ

ರಚಿಸಲ್ಪಟ್ಟಿತು.

(Rivised & Enlarged Edition)

೩ನೆಯ ಮುದ್ರಣ ೧೦೦೦ ಪ್ರತಿಗಳು.

Printed at the Universal Power Press, Sulthanpet, Bangalore City.

1929.

Price 10 as.] [ಕ್ರಯ 10 ಆಣೆ.

ವಿಷಯ ಸೂಚಿಕೆ.

ವಿಜ್ಞಾಪನೆ

ಕನ್ನಡ ಭಾಷೆಯಲ್ಲಿ ಶಬ್ದಮಣಿದರ್ಪಣ ಶಬ್ದಾನು ಶಾಸನವೆಂಬ ಪುಸ್ತಕಗಳು ಪ್ರಾಚೀನ ವ್ಯಾಕರಣಗಳಲ್ಲಿ ಮುಖ್ಯವಾಗಿವೆ. ಇವು ಹಳಗನ್ನಡದ ಭಾಷಾ ಸ್ವಭಾವವನ್ನು ವಿವರಿಸುತ್ತಾ ಪ್ರೌಢವ್ಯಾಕರಣಗಳೆನಿಸಿವೆ.

ಶಬ್ದಾದರ್ಶ, ಹೊಸಕನ್ನಡ ವ್ಯಾಕರಣ ಮೊದಲಾದುವು ಕೇವಲ ಹೊಸಕನ್ನಡದ ಸ್ವರೂಪವನ್ನೇ ತೋರಿಸುತ್ತಾ, ರೂಢಿಯಲ್ಲಿರುವ ಕಥಾ ಪುಸ್ತಕಗಳ ಮತ್ತು ವೃತ್ತ ಪತ್ರಿಕೆಗಳ ಭಾಷಾಲಕ್ಷಣವನ್ನು ತಕ್ಕಮಟ್ಟಿಗೆ ತಿಳಿಸುತ್ತವೆ.

ಪಾಠಶಾಲೆಗಳಲ್ಲಿ ನೇಮಿಸಲ್ಪಡುತ್ತಿರುವ ಷಟ್ಪದಿ ಕಾವ್ಯಗಳಲ್ಲಿ ಹೊಸಕನ್ನಡ ವ್ಯಾಕರಣದಿಂದಲೂ, ಹಳಗನ್ನಡ ವ್ಯಾಕರಣದಿಂದಲೂ ಸಿದ್ಧವಾಗುವ ರೂಪಗಳಲ್ಲದೆ ಕೆಲವು ವಿಲಕ್ಷಣವಾದ ರೂಪಗಳೂ ಇವೆ. ಇವುಗಳನ್ನು ಸಮಂಜಸಮಾಡಬೇಕಲ್ಲದೆ ಕನ್ನಡ ಭಾಷೆಯಲ್ಲಿ ರೂಢಿಯಾಗಿ ಬಂದಿರುವ ಸಂಸ್ಕೃತಶಬ್ದ ಸ್ವರೂಪ ವಿವರಣೆಗೆ ತಕ್ಕ ಸಂಸ್ಕೃತ ವ್ಯಾಕರಣಾಂಶಗಳನ್ನು ತಿಳಿಸುವುದೂ ಆವಶ್ಯಕವಾಗಿಯೇ ಇದೆ.

ಈ ವಿಷಯಗಳನ್ನೆಲ್ಲಾ ಒಳಕೊಂಡಿರುವ ಒಂದು ವ್ಯಾಕರಣವನ್ನು ಬರೆದು ಪಾಠದ ಸಮಯದಲ್ಲಿ ತಮಗೆ ಉಂಟಾಗಿರುವ ಕ್ಲೇಶವನ್ನು ತಪ್ಪಿಸಬೇಕೆಂದು ಕೆಲವರು ಉಪಾಧ್ಯಾಯರು ನನಗೆ ಪ್ರೇರಿಸಿದ ಕಾರಣ ಮಧ್ಯಮ ತರಗತಿ (Middle Schools) ಯ ವಿದ್ಯಾರ್ಥಿಗಳಿಗಾಗಿ 1915ನೆಯ ವರ್ಷದಲ್ಲಿ ನಾನು ಮುದ್ರಿಸಿದ್ದ ಬಾಲವ್ಯಾಕರಣವನ್ನೇ ಈ ರೂಪದಲ್ಲಿ ಪುನಃ ಮುದ್ರಿಸಿದೆನು. ಬಾಲಕರೂ ಉಪಾಧ್ಯಾಯರೂ ಇದು ತಮಗೆ ಬೇಕಾದ ಸೌಕರ್ಯಗಳೊಡನೆ ಅನುಕೂಲವಾಗಿರುವುದೆಂದು ಭಾವಿಸುವುದಾದರೆ ನನ್ನ ಶ್ರಮವು ಸಾರ್ಥಕವಾಯಿತೆಂದೆಣಿಸುವೆನು. ಇದರಲ್ಲಿ ಬರುವ ವ್ಯಾಕರಣ ಸೂತ್ರಗಳು ಸರ್ವಸಾಮಾನ್ಯವಾಗಿದ್ದರೂ, ಉದಾಹರಣೆಗಳನ್ನು ಹೊಸಗನ್ನಡ ರೂಪದಲ್ಲಿಯೇ ಬರೆದು, ಇವುಗಳ ಜತೆಯಲ್ಲಿ ಹಳಗನ್ನಡದ ಸ್ವರೂಪ ತಿಳಿಯಲೋಸುಗ ವಿಭಕ್ತಿ ಮತ್ತು ಕ್ರಿಯಾಪ್ರತ್ಯಯಗಳನ್ನು ಉದಾಹರಣೆಗಳೊಡನೆ ಅಲ್ಲಲ್ಲಿ ವಿವರಿಸಿರುವೆನು.

ಇಂಗ್ಲೀಷ್ ಭಾಷೆಯನ್ನು ಓದುವ ವಿದ್ಯಾರ್ಥಿಗಳಿಗೆ ಸುಲಭವಾಗಿ ಈ ಭಾಷೆಯಲ್ಲಿ ಪರಿಚಯವುಂಟಾಗಲೆಂದು ವಾಕ್ಯವಿಭಜನೆ, ರೂಪನಿಷ್ಪತ್ತಿ, ಛಂದೋ ಲಕ್ಷಣ, ಪ್ರತ್ಯಕ್ಷ ಪರೋಕ್ಷಕಥನ, ವ್ಯಾಕರಣದಲ್ಲಿ ಬರುವ ಶಬ್ದಗಳಿಗೆ ತಕ್ಕ ಇಂಗ್ಲೀಷ್ ಶಬ್ದಗಳ ಪಟ್ಟಿ, ಈ ಗ್ರಂಥದ ಉದಾಹರಣೆಗಳಲ್ಲಿ ಬರುವ ಕ್ಲಿಷ್ಟಪದಗಳಿಗೆ ಅಕಾರಾದಿಯಾಗಿ ಅರ್ಥ, ಪ್ರಶ್ನೆಪತ್ರಿಕೆ, ಷಟ್ಪದಿಕಾವ್ಯಗಳಲ್ಲಿ ಕೆಲವು ಹೊಸಗನ್ನಡ ಪ್ರಯೋಗಗಳ ಪಟ್ಟಿಸಹ ಇದರಲ್ಲಿ ಸೇರಿಸಲ್ಪಟ್ಟಿರುವುದು.

ಸಹೃದಯರಾದ ಮಹನೀಯರು ಈ ಪುಸ್ತಕದಲ್ಲಿ ಗುಣಲೇಶವನ್ನು ಸ್ವೀಕರಿಸಿ ದೋಷಜಾಲವನ್ನೆಣಿಸದೆ ತಮ್ಮಭಿಮತವನ್ನು ಕರುಣದಿಂದ ಅನುಗ್ರಹಿಸಿದರೆ ಆದರದಿಂದ ಸ್ವೀಕರಿಸಿ ಮುಂದಣ ಮುದ್ರಣದಲ್ಲಿ ಸರಿಮಾಡುವೆನು.

ಇಂತು ಸುಜನ ವಿಧೇಯ, ಕೆ. ಆರ್. ಎನ್.

ಶ್ರೀ

॥ ಶ್ರೀ ಶಾರದಾಂಬಾಯೈನಮಃ ॥

ಬಾಲವ್ಯಾಕರಣಂ

ಕಂ॥ ಆರ ಕೃಪಾಳುತೆಯಿಂನುಡಿ ।
ಸಾರತರಂ ಚಾರುತರಮು ಮೆಂದೆನಿಪುದೊ ಆ ।
ಭಾರತಿ ಬಾಲರ ರಸನಾ ।
ಗಾರದೊಳಿರ್ದನಿಶವಿಾಗೆ ಸದ್ಭಾರತಿಯಂ ॥ ೧ ॥

ಕಂ॥ ವಂದಿಪೆ ನಾಂ ಪಾಣಿನಿಯಂ ।
ವಂದಿಪೆ ನಾಂ ನಾಗವರ್ಮ ಕವಿಶೇಖರನಂ
ವಂದಿಪೆ ನಾನತ್ಯಾದರ ।
ದಿಂದಂ ಕವಿಕೇಶರಾಜನಂ ಕೃತಿಯಮೊದಲ್ ॥ ೨ ॥

ಸೂತ್ರಂ* 1. ವ್ಯಾಕರಣವೆಂದರೆ ಭಾಷೆಯಲ್ಲಿರುವ ಶಬ್ದ ವಿಭಾಗಗಳನ್ನೂ ಅವು ರೂಢಿಗೆ ಬಂದು ಭಾಷಾಜ್ಞಾನವನ್ನುಂಟುಮಾಡುವ ಕ್ರಮಗಳನ್ನೂ ತೋರಿಸಿಕೊಡುವ ಶಾಸ್ತ್ರವು. ಇದಕ್ಕೆ ಶಬ್ದಶಾಸ್ತ್ರವೆಂದೂ ಹೆಸರುಂಟು.

2. ಲೋಕದಲ್ಲಿ ಭಾಷೆಯು ಶ್ರಾವಣ, ಚಾಕ್ಷುಷ ಎಂದು ಎರಡು ರೂಪವಾಗಿರುವುದು. ಶ್ರಾವಣವು ಧ್ವನಿರೂಪವಾಗಿ ಕಿವಿಗೆ ಕೇಳಿಸತಕ್ಕದು. ಚಾಕ್ಷುಷವು ಲಿಪಿರೂಪವಾಗಿ ಕಣ್ಣಿಗೆ ಕಾಣಿಸತಕ್ಕದು. ಆ ಲಿಪಿಯು ಅಕ್ಷರರೂಪವಾಗಿ ಓದುವುದಕ್ಕೂ ಬರೆಯುವುದಕ್ಕೂ ಅನುಕೂಲವಾಗಿರುವುದು. ಆದುದರಿಂದ ವ್ಯಾಕರಣ ಶಾಸ್ತ್ರದ ಆರಂಭದಲ್ಲಿ ಅಕ್ಷರ ಲಕ್ಷಣವನ್ನು ತಿಳಿವುದು ಆವಶ್ಯಕವು.

* ಇದು ಈ ಗ್ರಂಥದಲ್ಲಿ ಸೂತ್ರಸಂಜ್ಞೆಯನ್ನು ತೋರಿಸುವ ಚಿಹ್ನೆಯಾಗಿರುವುದು.

I ಅಕ್ಷರ ಲಕ್ಷಣ (Orthagraphy)

3. ಕನ್ನಡಭಾಷೆಯಲ್ಲಿ ರೂಢಿಯಾಗಿ 50 ಅಕ್ಷರಗಳಿರುವುವು. ಅವು ಯಾವುವೆಂದರೆ :—

ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಡ ಢ ಣ, ತ ಥ ದ ಧ ನ, ಪ ಫ ಬ ಭ ಮ, ಯ ರ ಲ ವ ಶ ಷ ಸ ಹ ಳ.

4. ಅಕ್ಷರ(1)ಗಳಲ್ಲಿ ಅಕಾರ(2)ದಿಂದ ಔಕಾರದವರೆಗೆ 14 ಅಕ್ಷರಗಳಿಗೆ ಸ್ವರ(3)ಗಳೆಂದೂ, ಕಕಾರದಿಂದ ಳಕಾರದವರೆಗೆ 34 ಅಕ್ಷರಗಳಿಗೆ ವ್ಯಂಜನ(4) ಗಳೆಂದೂ, ಅಂ ಅಃ ಎಂಬ ಅಕ್ಷರಗಳಲ್ಲಿ "ಅಂ" ಎಂಬುದರ ಮೇಲಿರುವ ಒಂದು ಸೊನ್ನೆಗೆ ಅನುಸ್ವಾರ ಅಥವಾ ಬಿಂದುವೆಂದೂ, ಅಃ ಎಂಬಲ್ಲಿ ಒಂದರಮೇಲೊಂದಿರುವ ಎರಡು ಸೊನ್ನೆಗಳಿಗೆ ವಿಸರ್ಗ ಅಥವಾ ವಿಸರ್ಜನೀಯವೆಂದೂ ಹೆಸರು. ಈ ಬಿಂದು ವಿಸರ್ಗಗಳನ್ನು ಯೋಗವಾಹ(5)ಗಳೆಂದು ಕರೆಯುತ್ತಾರೆ.

II ಸಂಜ್ಞಾ ಪ್ರಕರಣ.

5. ಸ್ವರಗಳಲ್ಲಿ ಕೆಲವು ಉಚ್ಚಾರಣೆಯಲ್ಲಿ ನೋಟಕಾಗಿ ಒಂದು ಮಾತ್ರೆಯಷ್ಟು ಕಾಲದಲ್ಲಿ (6) ಮಾತ್ರ ಉಚ್ಚರಿಸಲ್ಪಡುವುದರಿಂದ ಹ್ರಸ್ವವೆಂದೂ, ಕೆಲವು ಉದ್ದವಾಗಿ ಎರಡು ಮಾತ್ರೆಯಷ್ಟು ಕಾಲದಲ್ಲಿ ಉಚ್ಚರಿಸಲ್ಪಡುವುದರಿಂದ ದೀರ್ಘವೆಂದೂ, ಇನ್ನೂ ಕೆಲವು ಇದಕ್ಕಿಂತ ಉದ್ದವಾಗಿ ಮೂರುಮಾತ್ರೆಯಷ್ಟು ಕಾಲದಲ್ಲಿ ಉಚ್ಚರಿಸಲ್ಪಡುವುದರಿಂದ ಪ್ಲುತವೆಂದೂ ಹೇಳಲ್ಪಡುವುವು. ವ್ಯಂಜನಗಳೆಲ್ಲಾ ಅರ್ಧ ಮಾತ್ರಾಕ್ಷರಗಳು.

---

(1) ಅಕ್ಷರಕ್ಕೆ ವರ್ಣವೆಂಬ ಹೆಸರೂ ಉಂಟು. (2) ಅಕ್ಷರಗಳನ್ನು ಉಚ್ಚರಿಸುವಾಗ ಕಾರ ಎಂಬ ಶಬ್ದವನ್ನು ಸೇರಿಸಿ ಹೇಳುವುದುಂಟು. (3) ಬೇರೆ ಅಕ್ಷರ ಸಹಾಯವಿಲ್ಲದೆ ತಾನಾಗಿಯೇ ಉಚ್ಚಾರಣೆಗೆ ಬರುವುದು. (4) ಸ್ವರ ಸೇರಿಯೇ ಉಚ್ಚಾರಣೆಗೆ ಬರುವುದು. ಸ್ವರಗಳನ್ನು ಸಜೀವ ವರ್ಣಗಳೆಂದೂ, ವ್ಯಂಜನಗಳನ್ನು ನಿರ್ಜೀವ ವರ್ಣಗಳೆಂದೂ ಹೇಳುತ್ತಾರೆ. ವ್ಯಂಜನ ಸ್ವರೂಪವು ಕ್, ನ್, ಮ್ ಯ್ (ಇತ್ಯಾದಿ) (5) ಯೋಗ-ಸ್ವರ ಸಂಬಂಧವನ್ನು, ವಾಹ - ಪಡೆದಿರುವುದು ಅಂದರೆ ಇವುಗಳ ಹಿಂದೆ ಯಾವಾಗಲೂ ಸ್ವರವಿರಲೇ ಬೇಕೆಂದು ತಾತ್ಪರ್ಯವು. ಇದಲ್ಲದೆ ಅಯೋಗವಾಹಗಳೆಂದೂ ಇವುಗಳನ್ನು ಹೇಳುವುದುಂಟು. ಇವು ಅಕಾರಾದಿ ಸ್ವರಗಳಲ್ಲಿಯೂ ಕಕಾರಾದಿ ವ್ಯಂಜನಗಳಲ್ಲಿಯೂ ಸೇರದಿರುವುದೇ ಕಾರಣ. (6) ಮಾತ್ರೆ ಅಂದರೆ (* 125-3) ಒಂದು ಚಿಟಿಕೆ ಹಾಕುವಷ್ಟು ಅಥವಾ ಗುಬ್ಬಚ್ಚಿ ಕೂಗುವಷ್ಟು ಕಾಲ.

ಉದಾಹರಣೆ

ಹ್ರಸ್ವ—ಅ, ಇ, ಉ, ಋ, ಎ, ಒ.—(ಜನರು, ಗಳಿಗೆ, ವಸತಿ)
ದೀರ್ಘ:—ಆ, ಈ, ಊ, ೠ, ಏ, ಐ, ಓ, ಔ.—(ಮಾಲಾ, ಶಾಲಾ)
ಪ್ಲುತ:—ಆ3 ಈ3 ಊ3—(ಅಣ್ಣಾ3 ಬಾರೋ3)

ಕು1 ಕೂ2 ಕೂ3 ಎಂದು ಕೋಳಿ ಕೂಗಿತು ಎಂಬಲ್ಲಿ ಮೂರು ಅಕ್ಷರಗಳಲ್ಲಿಯೂ ಕ್ರಮವಾಗಿ ಹ್ರಸ್ವ ದೀರ್ಘ ಪ್ಲುತಗಳು ಕಾಣುತ್ತವೆ.

ಋ ೠ ಶಷ, ವಿಸರ್ಗಗಳಿಗೆ ಕನ್ನಡದಲ್ಲಿ ಪ್ರಯೋಗವಿಲ್ಲ (1) ಇವು ಸಂಸ್ಕೃತ ಶಬ್ದಗಳಲ್ಲಿ ಮಾತ್ರ ಬರುವುವು. ಱ ೞ (*9) ಎ ಒ (*5) ಕನ್ನಡದಲ್ಲಿ ಮಾತ್ರ ಬರುವುವು ಸಂಸ್ಕೃತದಲ್ಲಿ ಪ್ರಯೋಗವಿಲ್ಲ.

6. ವ್ಯಂಜನಗಳಲ್ಲಿ ಕಕಾರದಿಂದ ಮಕಾರದವರೆಗೆ 25 ಅಕ್ಷರಗಳು ವರ್ಗೀಯ (2) ವ್ಯಂಜನಗಳೆಂದೂ, ಯಕಾರದಿಂದ ಳಕಾರದವರೆಗೆ 9 ಅಕ್ಷರಗಳು ಅವರ್ಗೀಯ (3) ವ್ಯಂಜನಗಳೆಂದೂ ಹೇಳಲ್ಪಡುವುವು. ಉದಾ:—

ವರ್ಗೀಯಗಳು:—ಕ ಖ ಗ ಘ ಙ - ಕವರ್ಗ
ಚ ಛ ಜ ಝ ಞ - ಚವರ್ಗ
ಟ ಠ ಡ ಢ ಣ - ಟವರ್ಗ
ತ ಥ ದ ಧ ನ - ತವರ್ಗ
ಪ ಫ ಬ ಭ ಮ - ಪವರ್ಗ

7. ವರ್ಗೀಯ ವ್ಯಂಜನಗಳಲ್ಲಿ 1-2ನೆಯ ಅಕ್ಷರಗಳು ಪರುಷ(4)ಗಳೆಂದೂ, 3-4ನೆಯ ಅಕ್ಷರಗಳು ಸರಳ(5)ಗಳೆಂದೂ 5ನೇ ಅಕ್ಷರವು ಅನುನಾಸಿಕ(6)ವೆಂದೂ ಹೇಳಲ್ಪಡುವುವು. ಮತ್ತು ವರ್ಗೀಯಗಳಲ್ಲಿ 1-3ನೆಯ ವರ್ಣಗಳೂ ಅವರ್ಗೀಯಗಳಲ್ಲಿ ಯ ರ ಲ ವ ಎಂಬುವೂ ಅಲ್ಪಪ್ರಾಣಗಳು (7) ವರ್ಗೀಯಗಳಲ್ಲಿ 2-4ನೆಯ ವರ್ಣಗಳೂ, ಅವರ್ಗೀಯಗಳಲ್ಲಿ ಶ ಷ ಸ ಹ ಎಂಬುವೂ ಮಹಾಪ್ರಾಣಗಳು (8) ಎಂದೆನಿಸುವುವು. (*6) ನೋಡಿ.

---

(1) ಋ ೠ ಗೆ=ರ, ಶ ಷ ಕ್ಕೆ—ಸ, ವಿಸರ್ಗಕ್ಕೆ ಲೋಪ ಬರುವುದು. ಆದ್ದರಿಂದ ಕನ್ನಡ ಭಾಷೆಯಲ್ಲಿ ಋ ೠ, ಶ ಷ, ವಿಸರ್ಗಗಳುಳ್ಳ ಶಬ್ದಗಳನ್ನು ಪ್ರಾಯಶಃ ಸಂಸ್ಕೃತ ಶಬ್ದಗಳೆಂದೇ ತಿಳಿಯಬೇಕು. (2) ಅದೇ ಜಾತಿಗೆ (ಅದೇ ವರ್ಗಕ್ಕೆ) ಸೇರಿದ ಅಕ್ಷರಗಳು (3) ಬೇರೆಬೇರೆ ಜಾತಿಯ ಅಕ್ಷರಗಳು (4) ಉಚ್ಚಾರಣೆಗೆ ಕಠಿನ. (5) ಉಚ್ಚಾರಣೆಗೆ ಸುಲಭ. (6) ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವುದು. (7) ಅಲ್ಪ ಪ್ರಯತ್ನದಿಂದ ಉಚ್ಚಾರಣೆ. (8) ಮಹಾ (ಹೆಚ್ಚು) ಪ್ರಯತ್ನದಿಂದ ಉಚ್ಚಾರಣೆ (ಒತ್ತಿ ಹೇಳುವುದು.)

8. ಸ್ವರಗಳಲ್ಲಿ ಒಂದೇ ಜಾತಿಯ ಹ್ರಸ್ವ ದೀರ್ಘ ಪ್ಲುತಗಳೂ ವ್ಯಂಜನಗಳಲ್ಲಿ ಒಂದೊಂದು ವರ್ಗಕ್ಕೆ ಸೇರಿದ ಅಕ್ಷರಗಳೂ ಸವರ್ಣಗಳೆನಿಸಿಕೊಳ್ಳುವುವು.

ಉದಾಹರಣೆ

ಸವರ್ಣಸ್ವರಗಳು—ಅ ಆ ಆ3 ಇ ಈ ಈ3 ಉ ಊ ಊ3 (ಇ)

,, ವ್ಯಂಜನ—ಕ ಖ ಗ ಘ ಙ, ಚ ಛ ಜ ಝ ಞ (ಇ)

9. ಅಕ್ಷರಗಳು—ಕಂಠ (ಗಂಟಲು) ತಾಲು (ದವಡೆ) ಮೂರ್ಧ (ತಲೆ=ಬಾಯಿಯ ಮೇಲ್ಭಾಗ) ದಂತ (ಹಲ್ಲು) ಓಷ್ಠ (ತುಟಿ) ನಾಸಿಕ (ಮೂಗು) ಎಂಬ ಸ್ಥಾನಗಳಲ್ಲಿ ಹುಟ್ಟುತ್ತವೆ. ಅಚ್ಚಗನ್ನಡದಲ್ಲಿ ಪ್ರಯೋಗವಿರುವ ೞ, ಱ, ಎಂಬ ಅಕ್ಷರಗಳು ಡಕಾರ ಮತ್ತು ರೇಫ (ರಕಾರ) (1) ಗಳನ್ನು ಒತ್ತಿ ಉಚ್ಚರಿಸುವುದರಿಂದ ಹುಟ್ಟುತ್ತವೆ:—

ಉದಾಹರಣೆ

ಕಂಠದಲ್ಲಿ ಹುಟ್ಟುವ ವರ್ಣಗಳು :—ಕಂಠ್ಯಗಳು ಅವರ್ಣ (* 8) ಕವರ್ಗ ಹಕಾರ (2) ವಿಸರ್ಗಗಳು.

ತಾಲು ,, ,, ತಾಲವ್ಯಗಳು ಇವರ್ಣ ಚವರ್ಗ ಯಕಾರ ಶಕಾರಗಳು.

ಮೂರ್ಧ ,, ,, ಮೂರ್ಧನ್ಯ ಋವರ್ಣ ಟವರ್ಗ ರೇಫ ಷಕಾರಗಳು.

ದಂತ ,, ,, ದಂತ್ಯ ತವರ್ಗ ಲಕಾರ ಸಕಾರಗಳು.

ಓಷ್ಠ ,, ,, ಓಷ್ಠ್ಯ ಉವರ್ಣ ಪವರ್ಗಗಳು.

ನಾಸಿಕ ,, ,, ನಾಸಿಕ್ಯ ಅನುಸ್ವಾರವು (ಸೊನ್ನೆ)

ಕಂಠತಾಲು(3) ,, ,, ಕಂಠತಾಲವ್ಯ ಎ ಏ ಐ

ಕಂಠೋಷ್ಠ ,, ,, ಕಂಠೋಷ್ಠ್ಯ ಒ ಓ ಔ

ದಂತೋಷ್ಠ ,, ,, ದಂತೋಷ್ಠ್ಯ ವಕಾರ

ೞ ಕಾರಕ್ಕೆ – ಕಡಲ್ = ಕಡಲ್ ನಾಡುಗಳ್ - ನಾೞ್ಕೞ್

ಱ ,, - ಮೊರೆ - ಮೊಱೆ (ಇಲ್ಲಿ ಡಕಾರಸ್ಥಾನದಲ್ಲಿ ೞಕಾರವೂ ರಕಾರ ಸ್ಥಾನದಲ್ಲಿ ಱಕಾರವೂ ಹುಟ್ಟಿವೆ.

---

(1) ಡಕಾರದಿಂದ ಹುಟ್ಟುವುದು ೞ ; ರಕಾರದಿಂದ ಱ ; ಇವುಗಳ ಉಚ್ಚಾರಣೆ ಸುಲಭವಲ್ಲವಾದುದರಿಂದ ಅವುಗಳ ಹಿಂದೆ ಒಂದು ಱಕಾರವನ್ನು ಸೇರಿಸಿ ಱ ೞ, ಱ ಱ ಎಂದು ಹೇಳುತ್ತಾರೆ. (2) ಹಕಾರವು ಉರಸ್ಸೆಂಬ ಸ್ಥಾನದಲ್ಲಿ ಹುಟ್ಟುವುದೆಂದು ಕೆಲವರ ಮತ. (3) ಈ ಎರಡರ ಸಹಾಯದಿಂದಲೂ ಹುಟ್ಟುವುದು ಕಂಠತಾಲು. ಹೀಗೆಯೇ ಕಂಠೋಷ್ಠ್ಯ, ದಂತೋಷ್ಠ್ಯ.

10. ವ್ಯಂಜನಕ್ಕೆ ಸ್ವರ ಸೇರುವುದು ಗುಣಿತಾಕ್ಷರವೆಂದೂ, ವ್ಯಂಜನಕ್ಕೆ ಬೇರೆ ವ್ಯಂಜನವೇ ಸೇರುವುದು ಸಂಯುಕ್ತಾಕ್ಷರ (1) ವೆಂದೂ, ವ್ಯಂಜನಕ್ಕೆ ಅದೇ ವ್ಯಂಜನ ಸೇರುವುದು ದ್ವಿತ್ವಾಕ್ಷರವೆಂದೂ ಹೇಳಲ್ಪಡುವುವು.

ಉದಾಹರಣೆ

ಗುಣಿತಾಕ್ಷರಕ್ಕೆ :—ಕ್+ಅ=ಕ, ಚ್+ಉ=ಚು, ಯ್+ಇ=ಯಿ, ಕ್+ಐ=ಕೈ.

ಸಂಯುಕ್ತಾಕ್ಷರಕ್ಕೆ :—ಪ್+ರ್+ಅ=ಪ್ರ, ಸ್+ತ್+ಉ=ಸ್ತು.

ಇಲ್ಲಿ ಪಕಾರ ರೇಫಗಳೂ ಸಕಾರ ತಕಾರಗಳೂ ಬೇರೆ ಬೇರೆ ವ್ಯಂಜನಗಳಾಗಿರುವುದರಿಂದ ಸಂಯುಕ್ತಾಕ್ಷರಗಳು.

ದ್ವಿತ್ವಾಕ್ಷರಕ್ಕೆ :—ಕ್+ಕ್+ಅ=ಕ್ಕ, ನ್+ನ್+ಉ=ನ್ನು.

ಇಲ್ಲಿ ಕಕಾರ ಕಕಾರಗಳೂ, ನಕಾರ ನಕಾರಗಳೂ ಸೇರಿರುವುದರಿಂದ ದ್ವಿತ್ವಾಕ್ಷರಗಳೆನಿಸಿದುವು—ಇವುಗಳ ಮೇಲಿನ ಸ್ವರಗಳು ಉಚ್ಚಾರಣಾರ್ಥವು.

11. ಮೊದಲಿನಲ್ಲಿ ಒಂದೇ ಹ್ರಸ್ವಸ್ವರವೂ ಕೊನೆಯಲ್ಲಿ ನ ಣ ಲ ಯ ಳ ತ ಟ ಕಾರಗಳೂ ಇರುವ ಶಬ್ದಗಳಿಗೆ ಹ್ರಸ್ವಸ್ವರಗಳು ಪರವಾದರೆ ಆ ನ ಣ ಳಾದಿಗಳಿಗೆ ದ್ವಿತ್ವ ಬರುವುದು. ಶಬ್ದದ ಆದಿಯಲ್ಲಿ ದೀರ್ಘಸ್ವರವಿದ್ದರೂ ಆ ಶಬ್ದದಲ್ಲಿ ಒಂದಕ್ಕಿಂತ ಹೆಚ್ಚಾದ ಸ್ವರಗಳಿದ್ದರೂ ಅಲ್ (*96) ಪರವಾದರೂ ದ್ವಿತ್ವ ಬರುವುದಿಲ್ಲ.

ಉದಾಹರಣೆ

ನಕಾರಕ್ಕೆ :—ಬೆನ್ (2)+ಉರಿ=ಬೆನ್ನುರಿ, ಪೊನ್+ಇಲ್ಲ=ಪೊನ್ನಿಲ್ಲ.

ಣಕಾರಕ್ಕೆ :—ನುಣ್+ಅರಿಸಿನ=ನುಣ್ಣರಿಸಿನ, ಮಣ್+ಒಳ್ಳೆಯದು=ಮಣ್ಣೊಳ್ಳೆಯದು.

ಲಕಾರಕ್ಕೆ :—ಕಲ್+ಇಲ್ಲ=ಕಲ್ಲಿಲ್ಲ. ಪಲ್=ಉದುರಿತು=ಪಲ್ಲುದುರಿತು.

ಯಕಾರಕ್ಕೆ:—ಸುಯ್+ಒತ್ತಿತ್ತು=ಸುಯ್ಯೊತ್ತಿತ್ತು, ಮುಯ್+ಇಲ್ಲ=ಮುಯ್ಯಿಲ್ಲ

ಳಕಾರಕ್ಕೆ ;—ಎಳ್+ಎಣ್ಣೆ=ಎಳ್ಳೆಣ್ಣೆ, ಮುಳ್+ಇಲ್ಲ=ಮುಳ್ಳಿಲ್ಲ.

ತಕಾರಕ್ಕೆ :—ಇತ್ (*83)+ಅನು=ಇತ್ತನು, ಕಿತ್+ಉ=ಕಿತ್ತು (*83).

ಟಕಾರಕ್ಕೆ :—ನಿಟ್+ಉಸಿರ್=ನಿಟ್ಟುಸಿರ್, ಕಟ್+ಆಳ್=ಕಟ್ಟಾಳ್ (*72) ದ್ವಿತ್ವವಿಲ್ಲದಿರುವುದು.

---

(1) ಸಂಯುಕ್ತಾಕ್ಷರವನ್ನು ವಿಜಾತೀಯ ದ್ವಿತ್ವಾಕ್ಷರವೆಂದೂ ದ್ವಿತ್ವಾಕ್ಷರವನ್ನು ಸಜಾತೀಯ ದ್ವಿತ್ವಾಕ್ಷರವೆಂದೂ ಹೇಳುವುದುಂಟು (2) ಬೆನ್ ಎಂಬಲ್ಲಿ ಎಕಾರ ಹ್ರಸ್ವ, ಒಂದೇಸ್ವರ, ನಕಾರ ಅದರ ಮುಂದಿರುವ ವ್ಯಂಜನ ಅದಕ್ಕೆ ಉಕಾರ ಸ್ವರ ಪರವಾಗಲು ನಕಾರಕ್ಕೆ ದ್ವಿತ್ವವುಂಟಾಯಿತು.

ಆದಿಯಲ್ಲಿ ದೀರ್ಘಸ್ವರಕ್ಕೆ :—ಏನ್+ಇದು=ಏನಿದು(1), ಏನ್+ಆಯ್ತು =ಏನಾಯ್ತು.
ಅನೇಕ ಸ್ವರಗಳಿರುವುದಕ್ಕೆ :—ನೆರಳ್ (2) + ಇಲ್ಲ = ನೆರಳಿಲ್ಲ, ಕೊರಳ್ + ಉಳುಕಿತು=ಕೊರಳುಳುಕಿತು.
ಅಲ್ ಪರವಾದುದಕ್ಕೆ :—ಕೊಲ್+ಅಲ್=ಕೊಲಲ್, ಉಣ್+ಅಲ್=ಉಣಲ್

12. ನಾವು ಓದುವ ಪದ್ಯಕಾವ್ಯಗಳಲ್ಲಿ ಸಂಯುಕ್ತಾಕ್ಷರದ (*10) ಹಿಂದಣ ಹ್ರಸ್ವವನ್ನು ಒತ್ತಿ ಹೇಳದೆ ಬಿಡಿಸಿ ಹೇಳುವುದುಂಟು. ಅದಕ್ಕೆ ಶಿಥಿಲ ದ್ವಿತ್ವವೆಂದು ಹೆಸರು. ಸೂ॥ ಆದಿಯಲ್ಲಿ ಹ್ರಸ್ವವೂ ಕೊನೆಯಲ್ಲಿ ರ ಟ ಲ ಳ ವರ್ಣಗಳೂ ಇರುವ ಕನ್ನಡ ಶಬ್ದಗಳಿಗೆ ಗೆ, ಗಳ್, ದ, ಗುಂ (*80) ಪರವಾದರೆ ಆ ರ ಟ ಲ ಳ ಗಳಿಗೆ ವಿಕಲ್ಪವಾಗಿ ಶಿಥಿಲದ್ವಿತ್ವ (3) ಬರುವುದು.

ಉದಾಹರಣೆ

ರ=ಅಲರ್+ಗೆ=ಅಲರ್ಗೆ,(4) ಅಲರ್ಗ್ಗೆ, ಅಲರ್ದು, ಅಲರ್ದ್ದು
ಟ=ಜಗುಟ್, ಜಗುಟ್ಗುಂ
ಳ=ನುಸುಳ್ಗುಂ, ನುಸುಳ್ಗ್ಗುಂ,
ಲ=ಆಳಲ್ದಂ, ಆಳಲ್ದ್ದಂ.

ಪದ್ಯಭಾಗಂ :—ಕಂ॥ ತೆಗಳ್ದುದು (5) ಸಭೆ ನರಪತಿಯುಂ ।
ತೆಗಳ್ದ (6) ನಾಭೂಮಿಪಾಲನಾತ್ಮ ಸಚಿವರಂ ॥
ಕಂ॥ ಒಂದೆಡೆ ನರಳ್ಗುಂ (7) ಮಗುಬೇ ।
ರೊಂದೆಡೆಯೊಳ್ತಾಯ್ನರಳ್ಗ (8) ಮಡಸಿದ ರುಜೆಯಿಂ ॥
ಕಂ॥ ನೆಗಟ್ಗಳ್ (9) ಕಡಲೊಳಗಿರ್ಪುವು ।
ನೆಗಳ್ದ (10)ದಾ ಜಳಧಿ ರತುನಗಳ ನೆಲೆಯೆನುತುಂ ॥

III ಸಂಧಿಪ್ರಕರಣಂ.

13, ಒಂದು ಶಬ್ದದ ಮುಂದೆ ಮತ್ತೊಂದು ಶಬ್ದ ಬಂದಾಗ (ಪರವಾದಾಗ) ಪೂರ್ವಶಬ್ದದ ಕೊನೆಯಕ್ಷರವೂ, ಮುಂದಣ ಶಬ್ದದ ಮೊದಲಕ್ಷರವೂ

(1) ಇಲ್ಲಿ ಆದ್ಯಕ್ಷರ ದೀರ್ಘವಿರುವ ಕಾರಣ ನಕಾರಕ್ಕೆ ದ್ವಿತ್ವವಿಲ್ಲ. (2) ಇಲ್ಲಿ ಎಕಾರ ಅಕಾರಗಳೆಂಬ ಎರಡು ಸ್ವರಗಳಿರುವ ಕಾರಣ ಳಕಾರಕ್ಕೆ ದ್ವಿತ್ವವಿಲ್ಲ. (3) ದ್ವಿತ್ವವಿಲ್ಲದಿರುವುದೇ ಶಿಥಿಲ. ಶಿಥಿಲಬಂದಾಗ ಹಿಂದಣ ಅಕ್ಷರವು ಲಘು (*125) ವಾಗಿರುವುದು. (4) ಅಲರ್ಗೆ ಶಿಥಿಲ ಅಲರ್ಗ್ಗೆ-ದ್ವಿತ್ವ, ಅಲರ್ದು-ಶಿಥಿಲ-ಅಲರ್ದ್ದು-ದ್ವಿತ್ವ (5) (7) (9) ಶಿಥಿಲ, (6) (8) (10) ದ್ವಿತ್ವ.

ಕೂಡುತ್ತವೆಯಷ್ಟೆ? ಸೂ॥ ಅಕ್ಷರಗಳನ್ನು ಎಡಬಿಡದೆ ಕೂಡಿಸಿ ಹೇಳುವುದು ಸಂಧಿ (1) ಯೆನಿಸುವುದು. ಇದರಲ್ಲಿ ಸ್ವರಸಂಧಿ (2) ಯೆಂದೂ, ವ್ಯಂಜನಸಂಧಿ (3) ಎಂದೂ ಎರಡು ಮುಖ್ಯಭೇದಗಳಿರುವುವು.

ಉದಾಹರಣೆ.

ಸ್ವರಸಂಧಿಗೆ:—ನನ್ನ+ಅನುಭವ=ನನ್ನನುಭವ, (ನನ್ನ್+ಅ+ಅನುಭವ) ಇಲ್ಲಿ ಅಕಾರಗಳೆರಡೂ ಕೂಡಿವೆ.

ವ್ಯಂಜನಸಂಧಿಗೆ:—ಸತ್ + ಜನ - ಸಜ್ಜನ (ಸತ್ + ಜನ) = ಇಲ್ಲಿ ತಕಾರ ಜಕಾರಗಳೆರಡೂ ಸೇರಿವೆ. (* 23-1)

14. ಸಂಧಿಯಲ್ಲಿ ಪ್ರಕೃತಿಗೆ ಪ್ರತ್ಯಯ (* 29) ಕೂಡುವದು ಪದ ಮಧ್ಯ ಸಂಧಿಯೆಂದೂ, ಒಂದು ಪದ (*29)ಕ್ಕೆ ಮತ್ತೊಂದು ಪದ ಕೂಡುವುದು ಪದಾಂತ ಸಂಧಿಯೆಂದೂ ಪ್ರತಿಯೊಂದರಲ್ಲಿಯೂ ಎರಡೆರಡು ಭೇದಗಳುಂಟು.

ಉದಾಹರಣೆ.

ಪದಮಧ್ಯ ಸಂಧಿಗೆ:—ಔಷಧ + ಅನ್ನು = ಔಷಧವನ್ನು, (*49) ಇಲ್ಲಿ ಅಕಾರ ಅಕಾರಗಳು ಪದಮಧ್ಯ ಸ್ವರಗಳು. ಔಷಧವನ್ನು ಪದ.)

ಪದಾಂತ ಸಂಧಿಗೆ:—ಮನೆಯ + ಅಂಗಳ = ಮನೆಯಂಗಳ, ಎಲ್ಲಿ + ಇರುವನು = ಎಲ್ಲಿರುವನು (ಇಲ್ಲಿ ಮನೆಯ, ಎಲ್ಲಿ ಎಂಬುವು ಪದಗಳು.)

15. ಎರಡಕ್ಷರಗಳು ಪರಸ್ಪರ ಕೂಡಿದಾಗ ಏನಾದರೊಂದು ವ್ಯತ್ಯಾಸವಾಗಬೇಕಷ್ಟೆ? ಅಂದರೆ ಒಂದಕ್ಷರ ಕಡಮೆಯಾಗಬೇಕು, ಅಥವಾ ಒಂದಕ್ಷರಕ್ಕೆಬದಲಾಗಿ ಬೇರೊಂದಕ್ಷರ ಬರಬೇಕು, ಇಲ್ಲವೆ, ಮೊದಲಿದ್ದಕ್ಷರಗಳೂ ಇದ್ದು ಇನ್ನೊಂದು ಹೊಸ ಅಕ್ಷರ ಬರಬೇಕು. ಈ ಮೂರು ಕಾರ್ಯಗಳಲ್ಲಿ ಮೊದಲನೆಯದಕ್ಕೆ ಲೋಪವೆಂದೂ, ಎರಡನೆಯದಕ್ಕೆ ಆದೇಶವೆಂದೂ, ಮೂರನೆಯದಕ್ಕೆ ಆಗಮವೆಂದೂ ಹೆಸರು. ಈ ಲೋಪಾಗಮಾದೇಶಗಳು ಸಂಧಿಕಾರ್ಯಗಳೆನಿಸುವುವು.

---

(1) ಇದಕ್ಕೆ ಸಂಹಿತೆಯೆಂಬ ಹೆಸರೂ ಉಂಟು. (2) ಸ್ವರ ಸ್ವರಗಳೇ ಸೇರುವುದು ಸ್ವರಸಂಧಿ. (3) ವ್ಯಂಜನ ವ್ಯಂಜನಗಳೇ ಸೇರುವುದು ವ್ಯಂಜನಸಂಧಿ (ಸ್ವರ ವ್ಯಂಜನಗಳಿಗೆ ಸಂಧಿಯಿಲ್ಲವು).

ಉದಾಹರಣೆ.

ಲೋಪಕ್ಕೆ :—ಸ್ವರಕ್ಕೆ ಸ್ವರ ಪರವಾದಾಗ ನಾಮರೂಢಿ (1) ಕೆಟ್ಟುಹೋಗದಿದ್ದರೆ ಪೂರ್ವ ಸ್ವರಕ್ಕೆ ಲೋಪಬರುವುದು.

ಹಲಸಿನ + ಎಲೆ = ಹಲಸಿನೆಲೆ, ಅಲ್ಲಿ + ಇಲ್ಲ ಅಲ್ಲಿಲ್ಲ,—ಇಲ್ಲಿ ಮೊದಲನೆಯ ಉದಾಹರಣೆಯಲ್ಲಿ ಅಕಾರವೂ, 2ನೆಯ ಉದಾಹರಣೆಯಲ್ಲಿ ಇಕಾರವೂ ಲೋಪವಾಗಿವೆ.

ಆದೇಶಕ್ಕೆ :—ಮಳೆ + ಕಾಲ = ಮಳೆಗಾಲ (ಇಲ್ಲಿ ಕಕಾರಕ್ಕೆ ಬದಲಾಗಿ ಗಕಾರಾದೇಶವು.

ಒಂದು + ತುತ್ತು = ಒರ್ತುತ್ತು (ಇಲ್ಲಿ ಒಂದು ಎಂಬ ಶಬ್ದಕ್ಕೆ ಒರ್ ಎಂಬ ಆದೇಶ ಬಂದಿದೆ.)

ಆಗಮಕ್ಕೆ :—ಗುರು + ಅನ್ನು = ಗುರುವನ್ನು (ಗುರು + ವ್ + ಅನ್ನು) ಇಲ್ಲಿ (* 17) ವಕಾರ ಆಗಮವು. ಜನ + ಇಂದ=ಜನದಿಂದ (ಜನ+ದ್+ಇಂದ. ಇಲ್ಲಿ ದಕಾರ ಆಗಮುವಾಯ್ತು. (* 49b)

16. ಅ ಇ ಈ ಎ ಏ ಐ ಓ ಎಂಬ ಸ್ವರಗಳಿಗೆ ಬೇರೆ (ಮುಂದೆ) ಸ್ವರಪರವಾದರೂ, ಷಷ್ಠೀ ವಿಭಕ್ತಿಯ (*48) ಅಕಾರಕ್ಕೆ (ಅದೇ ಎಂಬರ್ಥ ತೋರುವ) ಎ ಏ ಕಾರಗಳು (* 20c) ಪರವಾದರೂ ಕೆಲವು ಅಕಾರಾಂತ ಶಬ್ದಗಳಿಗೆ ಇಸು ಪ್ರತ್ಯಯು ಪರವಾದರೂ ನಡುವೆ ಯ (ಯ್) ಕಾರಾಗಮವು ಬರುವುದು. ಉದಾಹರಣೆ :—

ಅಕಾರಕ್ಕೆ ಸ್ವರಪರವಾದುದಕ್ಕೆ—ಕಾ+ಅಲು=ಕಾಯಲು. (ಇಲ್ಲಿ ಅಕಾರಕ್ಕೆ ಅಕಾರಪರವಾಗಿ ಯಕಾರ ಆಗಮುವಾಯಿತು)

ಇ „ „ —ನುಡಿ+ಇದು = ನುಡಿಯಿದು.

ಈ „ „ —ಶ್ರೀ+ಎಲ್ಲಿ=ಶ್ರೀಯೆಲ್ಲಿ, ಹ್ರೀ (ಲಜ್ಜೆ) + ಏಕೆ =ಹ್ರೀಯೇಕೆ ? (2)

ಎ „ „ —ಮನೆ+ಆರದು=ಮನೆಯಾರದು ?

ಏ „ „ —ತೇ+ಎಲೆ=ತೇಯೆಲೆ, ಮೇ+ಅಲು=ಮೇಯಲು

(1) ನಾಮರೂಢಿ ಕೆಡುವುದೆಂದರೆ ಶಬ್ದರೂಪವೇ ತಿಳಿಯದೆ ಹೋಗುವುದು :—ಕೆರು+ಅದು= ಇಲ್ಲಿ ಉಕಾರ ಲೋಪಮಾಡಿದರೆ, ರಕಾರದ ಮೇಲೆ ಅಕಾರ ಸೇರಿ "ಕೆರದು" ಎಂದಾಗುವುದಷ್ಟೆ ? ಹಾಗೆಯೇ, ಕೆರಿ+ಅದು, ಕೆರೆ+ಅದು, ಕೆರ+ಅದು ಇವುಗಳಲ್ಲಿ ಯಾವುದು ಕೂಡಿಸಿದರೂ ಕೆರದು ಆಗುತ್ತದೆ. ಆಗ ಪೂರ್ವಪದ ಇಂಥದೆಂದೂ, ಲೋಪವಾಗಿರುವ ಸ್ವರ ಇಂಥದೆಂದೂ ತಿಳಿಯಲು ಸಾಧ್ಯವಿಲ್ಲ. ಅದರಿಂದ ಕೆರದು ಎಂಬುದು ನಾಮರೂಢಿ ಕೆಟ್ಟಪದವಾಗಿದೆ = ಇದರ ಸರಿಯಾದ ಪದವು ಕೆರುವದು. (2) ಇದು ಸಂಸ್ಕೃತ ಶಬ್ದವು.

ಐ „ „ —ನ್ಯೈ+ಒರಸು=ನ್ಯೈಯೊರಸು, ಕೈ+ಅಲ್ಲಿ = ಕೈಯಲ್ಲಿ

ಓ „ „ —ನೋ+ಅಲು=ನೋಯಲು, ತೋ+ಇಸು= ತೋಯಿಸು.

ಷಷ್ಠೀವಿಭಕ್ತಿಯ ಅಕಾರಕ್ಕೆ:—ಅದರ+ಏ=ಅದರಯೇ, ಇವನ+ಎ=ಇವನಯೆ.
(ಅದರದೇ, ಇವನದೇ ಎಂಬುವು ಹೊ· ಗ·)

ಇಸು ಪ್ರತ್ಯಯಕ್ಕೆ —ಪೂರ+ಇಸು=ಪೂರಯಿಸು, ಮೇಳ+ಇಸು+ಮೇಳಯಿಸು ಪೂರೈಸು, ಮೇಳೈಸು ಎಂದು ಇದಕ್ಕೆ ಐಕಾರಬರುವುದೂ ಉಂಟು. (*86)

17. ಉ ಊ ಋ ೠ ಓ ಔ ಎಂಬ ಸ್ವರಗಳಿಗೆ ಮುಂದೆ ಸ್ವರ ಪರವಾದರೆನಡುವೆ ವಕಾರಾಗಮ ಬರುವುದು.

ಉದಾಹರಣೆ.

ಉ ಕಾರಕ್ಕೆ - ವಕಾರ—ತರು+ಇದು÷ತರುವಿದು. (ತರು+ವ್+ಇದು) (ಇಲ್ಲಿ ಉಕಾರಕ್ಕೆ ಇಕಾರ ಪರವಾಗಿ ವಕಾರ ಆಗಮವಾಯ್ತು)

ಊ ,, ,, ಪೂ+ಉಂಟು=ಪೂವುಂಟು, ಭ್ರೂ (ಹುಬ್ಬು)+ಅನ್ನು= ಭ್ರೂವನ್ನು.

ಋ ,, ,, ಪಿತೃ+ಆತನು, ಪಿತೃವಾತನು, ನೇತೃ(ಧೊರೆ) +ಈತನೆ =ನೇತೃವೀತನೆ.

ಓ ,, ,, ಗೋ+ಅದು=ಗೋವದು,(1)

ಔ ,, ,, ನೌ+ಇಲ್ಲ=ನೌವಿಲ್ಲ. (ನೌ-ಹಡಗು)

18. ಈ (2) ಎಂಬ ಶಬ್ದ(*70)ಕ್ಕೆ ಉ ಊ ಒ ಓ ಎಂಬ ವರ್ಣಗಳು ಪರವಾದರೆ ಕೆಲವು ಕಡೆ ಯಕಾರ ವಕಾರಾಗಮುಗಳೆರಡೂ ಬರುವುವು. ಆ ಎಂಬುದಕ್ಕೆ ಸಾಧಾರಣವಾಗಿ ವಕಾರಾಗಮುವೇ ಬರುವುದು.

ಉದಾಹರಣೆ.

ಆ + ಉರಿ = ಆವುರಿ, ಆ + ಊಟ = ಆವೂಟ.

ಈ + ಓಡು = ಈವೋಡು, ಈಯೋಡು, ಈವುಂಗುರ, ಈಯುಂಗರ.

---

(1) (*17)ರಲ್ಲಿ ಓಕಾರಕ್ಕೆ ಯಕಾರಾಗಮ ಬರುವುದೆಂದೂ ಈ ಸೂತ್ರದಲ್ಲಿ ವಕಾರಾಗಮ ಬರುವುದೆಂದೂ ಹೇಳಿರುವ ಕಾರಣ ಅದಕ್ಕೆ ಎರಡು ವಿಧವಾದ ಆಗಮುಗಳೂ ಬರುವಂತಾಯಿತು. (2) ಆ, ಈ, ಎಂಬುವು ಅದು ಇದು ಎಂಬ ಶಬ್ದಗಳ ಸ್ಥಾನದಲ್ಲಿ ಬಂದಿರುವುದರಿಂದ (* 70) ಇವುಗಳನ್ನೂ ಶಬ್ದಗಳೆಂದೇ ಹೇಳುವರು.

19. ಆ ಈ ಎಲ್ಲಾ ಎಂಬ ಶಬ್ದಗಳಿಗೆ ಪರವಾದ ಋಕಾರಕ್ಕೆ ರು ಎಂಬ ಎಂಬ ಅಕ್ಷರವು ಆದೇಶವಾಗುವುದು.

ಉದಾಹರಣೆ.

ಆ + ಋತು = ಆರುತು, ಈ + ಋಷಿ = ಈರುಷಿ, ಎಲ್ಲಾ + ಋಷಿಗಳು = ಎಲ್ಲಾರುಷಿಗಳು

20. ಹಿಂದಿನ ಸೂತ್ರಗಳ ಪ್ರಕಾರ ಅಕ್ಷರ ಸಂಯೋಗದಲ್ಲಿ ಸಂಧಿಕಾರ್ಯಗಳು ಬರಬಹುದಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಬರುವುದಿಲ್ಲ. ಅದಕ್ಕೆ ಪ್ರಕೃತಿಭಾವವೆಂದು ಹೆಸರು.

ಪ್ರಕೃತಿಭಾವ ಬರುವ ಸಂದರ್ಭಗಳು :—

(*a*) ಆ ಎಂಬ ಶಬ್ದಕ್ಕೆ ಅ ಆ ಐ ಔ ಕಾರಗಳು ಪರವಾದರೆ ಪ್ರಕೃತಿಭಾವ ಬರುವುದು. (1)

ಉದಾಹರಣೆ :—ಆ + ಅಂಗಳ = ಆ ಅಂಗಳ, ಆ + ಆಡು = ಆ ಆಡು, ಆ ಐಶ್ವರ್ಯ, ಆ ಔತಣ(2), (ಅವುತಣ ಎಂಬ ಶಬ್ದವೂ ಉಂಟು).

(*b*) ಪ್ಲುತಕ್ಕೆ ಸ್ವರಪರವಾದರೆ ಪ್ರಕೃತಿಭಾವ ಬರುವುದು.

ಉದಾಹರಣೆ :—ಅಣ್ಣಾ3+ಓಡಿಬಾ=ಅಣ್ಣಾ ಓಡಿಬಾ.
ಓ ಲಕ್ಷ್ಮಣಾ 3+ಎಲ್ಲಿರುವೆ=ಓ ಲಕ್ಷ್ಮಣಾ 3 ಎಲ್ಲಿರುವೆ ?

(*c*) ಅವಧಾರಣೆ (* 65) ನಿಪಾತ (* 102-8) ಪ್ರಶ್ನೆ, ಆಕ್ಷೇಪ, ಮೆಚ್ಚಿಗೆ ಎಂಬರ್ಥಗಳು ತೋರುವ ಶಬ್ದಗಳಿಗೆ ಸ್ವರ ಪರವಾದರೆ ಪ್ರಕೃತಿಭಾವ ಬರುವುದು.

ಉದಾಹರಣೆ.

ಅವಧಾರಣೆಗೆ :—ಅವನೇ+ಇವನು=ಅವನೇ ಇವನು, ಅದೇ+ಇದು(3).
ನಿಪಾತಕ್ಕೆ:—ಆಹಾ+ಏನಿದು=ಆಹಾ ಏನಿದು ? ಓಹೋ ಇದೀಗ ಆಶ್ಚರ್ಯ.
ಪ್ರಶ್ನೆಗೆ :—ಅವನು ಬಂದನೇ+ಇಲ್ಲವೇ ?
ಆಕ್ಷೇಪಕ್ಕೆ:—ಊಟ ಮಾಡಲಿಲ್ಲವೋ+ಇನ್ನು ನೀನು ಅನ್ನ ಕಾಣುವೆ ?
ಮೆಚ್ಚಿಗೆಗೆ:—ಆಹಾ ! ಎಷ್ಟೋ ಸೊಗಸಾಗಿದ್ದಿತು ನಾಟಕವು.

---

(1) ಸಂಧಿಕಾರ್ಯಗಳು (* 15) ಬರುವುದಿಲ್ಲ. (2) (* 16) ಪ್ರಕಾರ ಯಕಾರಾಗಮ ಬರಬೇಕಾಗಿದ್ದುದು ಬರಲಿಲ್ಲ. (3) ಇಲ್ಲಿ ಸಂಧಿಕಾರ್ಯ ಬರಲಿಲ್ಲ.

(*d*) ಹೊರಗು, ಒಳಗು, ಹಳದು, ಎಳದು, ಹೊಸದು (ಹೊಸತು) ಎಂಬ ಶಬ್ದಗಳಿಗೆ ಸ್ವರಪರವಾದರೆ ಕೊನೆಯಕ್ಷರ ಲೋಪವಾಗಿ ಪ್ರಕೃತಿ ಭಾವ ಬರುವುದು.

ಉದಾಹರಣೆ.

ಹೊರಗು + ಅಂಗಳ = ಹೊರ ಅಂಗಳ. (ಇಲ್ಲಿ ಗು ಲೋಪವಾಗಿದೆ).
ಒಳಗು + ಅಡಿ = ಒಳ ಅಡಿ. ,,
ಹಳದು + ಅಕ್ಕಿ=ಹಳ ಅಕ್ಕಿ (ಹಳೆಯ ಅಕ್ಕಿ) ದು ,,
ಎಳದು + ಅವರೆ=ಎಳ ಅವರೆ. ,, ,,
ಹೊಸದು + ಅಡಿಕೆ=ಹೊಸ ಅಡಿಕೆ. ,, ,,

21. ಕೆಲವು ಶಬ್ದಗಳಲ್ಲಿ ಯಕಾರ ವಕಾರಾಗಮಗಳು ವಿಕಲ್ಪವಾಗಿ ಬರುವುವು.

ಉದಾಹರಣೆ.

ಯಕಾರಕ್ಕೆ :—ಒತ್ತೆ + ಇಡು = ಒತ್ತೆಯಿಡು, ಒತ್ತಿಡು (1)
ಒಡವೆ + ಇಲ್ಲ = ಒಡವೆಯಿಲ್ಲ, ಒಡವಿಲ್ಲ.
ವಕಾರಕ್ಕೆ :—ಮಾತು + ಒಂದು = ಮಾತುವೊಂದು, ಮಾತೊಂದು.

ಇದುವರೆಗೆ ವಿವರಿಸಿದ ಸಂಧಿ ಸೂತ್ರೋದಾಹರಣೆಗಳು ಕನ್ನಡ ಶಬ್ದಗಳಿಗೆ ಮಾತ್ರ ಅನ್ವಯಿಸುವುವು. ಸಂಸ್ಕೃತ ಶಬ್ದಗಳ ಸಂಧಿ ಸೂತ್ರೋದಾಹರಣಗಳು ಮುಂದೆ ವಿವರಿಸಲ್ಪಡುವುವು.

22. ಸಂಸ್ಕೃತ ಸಂಧಿಗಳು.

ಸಂಸ್ಕೃತಸಂಧಿಗಳಲ್ಲಿ ಸವರ್ಣದೀರ್ಘ, ಯಣ್ಸಂಧಿ, ಗುಣಸಂಧಿ, ವೃದ್ಧಿ ಸಂಧಿ ಎಂದು ನಾಲ್ಕು ಮುಖ್ಯ ಭೇದಗಳು.

(*a*) ಸವರ್ಣದೀರ್ಘಸಂಧಿ :—ಸೂ ॥ ಸವರ್ಣ (*8) ಸ್ವರಗಳು ಒಂದಕ್ಕೊಂದು ಕೂಡಿದರೆ ಪೂರ್ವಪರ ಸ್ವರಗಳೆರಡಕ್ಕೂ ಅದೇ ದೀರ್ಘಸ್ವರವು ಆದೇಶವಾಗುವುದು.

ಉದಾಹರಣೆ.

ಅಕಾರಕ್ಕೆ ಅಕಾರ ಕೂಡುವುದಕ್ಕೆ—ಕಾಲ+ಅತಿಕ್ರಮ=ಕಾಲಾತಿಕ್ರಮ. (ಇಲ್ಲಿ ಲಕಾರದ ಮೇಲಣ ಅಕಾರಕ್ಕೂ ಮುಂದಣ

(1) ಆಗಮವಿಲ್ಲದಿರುವಾಗ ಲೋಪಬರುವುದು.

ಆಕಾರಕ್ಕೂ ಆದರ ದೀರ್ಘ ಆಕಾರವೇ ಆದೇಶವಾಗಿದೆ.) (ಹೀಗೆಯೇ)

ಆಕಾರಕ್ಕೆ ಆಕಾರ ಕೂಡುವುದಕ್ಕೆ—ಲೋಕ+ಅಧಿಪತ್ಯ=ಲೋಕಾಧಿಪತ್ಯ.
ಆ ,, ಆ ,, —ಪದ್ಮಾ+ಆಲಯ=ಪದ್ಮಾಲಯ.
ಆ ,, ಅ ,, —ಛಾಯಾ+ಅಧಿಪತಿ=ಛಾಯಾಧಿಪತಿ.

(ಇಕಾರಾದಿಗಳಲ್ಲಿಯೂ ಹೀಗೆಯೇ)

(*b*) ಯಣ್ಸಂಧಿ—"ಯ ರ ವ" ಎಂಬ ಅಕ್ಷರಗಳನ್ನು "ಯಣ್" ಎಂದು ಹೇಳುತ್ತಾರೆ. ಸಂಧಿ ಮಾಡಿದಾಗ ಈ ಅಕ್ಷರಗಳು ಬಂದರೆ ಯಣ್ಸಂಧಿಯೆನಿಸುವುದು.

ಸೂ॥ ಪದದ ಕೊನೆಯಲ್ಲಿರುವ ಇ, ಉ ಋವರ್ಣ(1)ಗಳಿಗೆ ಸವರ್ಣವಲ್ಲದ (ಬೇರೆ) ಸ್ವರಗಳು ಪರವಾದರೆ ಇವರ್ಣ ಸ್ಥಾನದಲ್ಲಿ ಯಕಾರವೂ, ಉವರ್ಣ ಸ್ಥಾನದಲ್ಲಿ ವಕಾರವೂ, ಋವರ್ಣ ಸ್ಥಾನದಲ್ಲಿ ರಕಾರವೂ ಆದೇಶವಾಗುವುವು.

ಉದಾಹರಣೆ.

ಯಕಾರಕ್ಕೆ—ಅತಿ + ಆಶೆ = ಅತ್ಯಾಶೆ (ಅತ್ + ಇ + ಆಶೆ = ಅತ್ + ಯ್ + ಆಶೆ=ಅತ್ಯಾಶೆ) ಇಲ್ಲಿ ಅತಿ ಎಂಬುದರ ಕೊನೆಯಲ್ಲಿರುವ ಇಕಾರಕ್ಕೆ ಅದಕ್ಕೆ ಸವರ್ಣವಲ್ಲದ ಆಕಾರ ಸೇರಲು ಇಕಾರಕ್ಕೆ ಯಕಾರ (ಯ್) ಆದೇಶವಾಯಿತು.

ವಕಾರಕ್ಕೆ—ಮನು+ಆದಿ = ಮನ್ವಾದಿ, ವಧೂ + ಆಭರಣ = ವಧ್ವಾಭರಣ, ಗುರು + ಆಜ್ಞೆ = ಗುರ್ವಾಜ್ಞೆ.

ರಕಾರಕ್ಕೆ—ಪಿತೃ + ಅರ್ಥ = ಪಿತ್ರರ್ಥ, ಮಾತೃ + ಅಂಶ = ಮಾತ್ರಂಶ.

(*c*) ಗುಣಸಂಧಿ—ಅ(2) ಏ ಓ(3) ಎಂಬ ಸ್ವರಗಳಿಗೆ ಗುಣವೆಂಬ ಹೆಸರು.

ಸೂ॥ ಪದದ ಕೊನೆಯಲ್ಲಿರುವ ಅವರ್ಣಕ್ಕೆ ಇವರ್ಣ ಪರವಾದರೆ ಏಕಾರವೂ, ಉವರ್ಣ ಪರವಾದರೆ ಓಕಾರವೂ, ಋವರ್ಣ ಪರವಾದರೆ "ಅರ್"ಕಾರವೂ ಪೂರ್ವಪರ ಸ್ವರಗಳೆರಡಕ್ಕೂ ಆದೇಶವಾಗುವುದು ಗುಣಸಂಧಿ.

---

(1) ಸ್ವರಗಳಲ್ಲಿ ಆಯಾ ಹ್ರಸ್ವ ದೀರ್ಘ ಪ್ಲುತಗಳಿಗೂ ಅಕ್ಷರಸಾಮಾನ್ಯಕ್ಕೂ ವರ್ಣವೆಂಬ ಸಂಜ್ಞೆಯುಂಟು. (2) ರಕಾರದೊಡನೆ ಕೂಡಿದ ಅಕಾರ (ಅರ್). (3) ಅ + ಉ=ಓ. ಅ+ಇ=ಏ.

ಉದಾಹರಣೆ.

ಏಕಾರ ಬರುವುದಕ್ಕೆ—ಪರ+ಇಂಗಿತ=ಪರೇಂಗಿತ. (ಇಲ್ಲಿ ಅಕಾರ ಇಕಾರಗಳ ಸ್ಥಾನದಲ್ಲಿ ಏಕಾರಾದೇಶವು), ಉಮಾ+ಈಶ=ಉಮೇಶ.

ಓಕಾರ ಬರುವುದಕ್ಕೆ—ಜನ + ಉಪಕಾರ=ಜನೋಪಕಾರ, ಪ್ರಜಾ+ಉತ್ಪತ್ತಿ= ಪ್ರಜೋತ್ಪತ್ತಿ.

ಅರ್ ಬರುವುದಕ್ಕೆ—ಹೇಮಂತ + ಋತು = ಹೇಮಂತರ್ತು, ಋಣ + ಋಣ = ಋಣರ್ಣ, ಮಹಾ+ಋಣ=ಮಹರ್ಣ.

(ಇಲ್ಲಿ ಅ ಆ ಮತ್ತು ಋಕಾರಗಳ ಸ್ಥಾನದಲ್ಲಿ ಅರ್ಕಾರ ಬಂದಿದೆ.)

(*d*) ವೃದ್ಧಿಸಂಧಿ—ವೃದ್ಧಿ ಸಂಜ್ಞೆಯುಳ್ಳ ಐ ಔ(1)ಸ್ವರಗಳು ಸಂಧಿಮಾಡಿದಾಗ ಬರುವುದು ವೃದ್ಧಿಸಂಧಿ.

ಸೂ॥ ಪದದಕೊನೆಯಲ್ಲಿರುವ ಅವರ್ಣಕ್ಕೆ ಏ ಐಕಾರಗಳು ಮುಂದೆ ಬಂದರೆ ಐಕಾರವೂ, ಓ ಔಕಾರಗಳು ಮುಂದೆ ಬಂದರೆ ಔಕಾರವೂ ಪೂರ್ವಪರಸ್ವರಗಳೆರಡಕ್ಕೂ ಆದೇಶವಾಗುವುದು ವೃದ್ಧಿಸಂಧಿ.

ಉದಾಹರಣೆ.

ಐಕಾರ ಬರುವುದಕ್ಕೆ—ಜನ+ಏಕತ್ವ=ಜನೈಕತ್ವ. (ಇಲ್ಲಿ ನಕಾರದ ಮೇಲಿರುವ ಅಕಾರಕ್ಕೂ ಮುಂದೆ ಬಂದ ಏಕಾರಕ್ಕೂ ಐಕಾರವೊಂದೇ ಆದೇಶವಾಗಿದೆ. (ಹೀಗೆಯೆ.)
ಸಂಖ್ಯಾ + ಏಕ = ಸಂಖ್ಯೈಕ್ಯ.

ಔಕಾರ ಬರುವುದಕ್ಕೆ—ಜಲ+ಓಘ=ಜಲೌಘ, ಮಹಾ+ಓಜ=ಮಹೌಜ.
ಮಹಾ+ಔನ್ನತ್ಯ=ಮಹೌನ್ನತ್ಯ. (ಇ)

ಸಂಸ್ಕೃತ ವ್ಯಂಜನ ಸಂಧಿಗಳು.

23. ವ್ಯಂಜನ ಸಂಧಿಗಳಲ್ಲಿ ಶ್ಚುತ್ವ, ಷ್ಟುತ್ವ, ಜಶ್ತ್ವ, ಛತ್ವ, ಅನುನಾಸಿಕ, ವಿಸರ್ಗ, ಉತ್ವಾದೇಶ, ಪೂರ್ವಸವರ್ಣಾದೇಶ. ರಲೋಪ ಎಂದು 9 ಮುಖ್ಯ ಭೇದಗಳು.

1. ಶ್ಚುತ್ವ(2)ಸಂಧಿ—ಸೂ॥ ಪದದ ಕೊನೆಯಲ್ಲಿರುವ ಸಕಾರ ತವರ್ಗಗಳಿಗೆ ಶಕಾರ ಚವರ್ಗಗಳು ಮುಂದೆ ಬಂದರೆ ಮೊದಲಿನ ಸಕಾ

(1) ಅ+ಏ=ಐ ; ಅ+ಓ=ಔ, ಎಂಬಂತೆ ಏ ಐ ಓ ಔ, ಎಂಬುವು ಸಧಿಂಸ್ವರಗಳೆನಿಸುವವು. (2) ಶ್ಚು=ಎಂದರೆ ಶಕಾರ ಚವರ್ಗಗಳು-ಸಂಧಿಮಾಡಿದಾಗ ಇವು ಬರುವುದೇ ಶ್ಚುತ್ವಸಂಧಿ.

ರಕ್ಕೆ ಶಕಾರವೂ ತವರ್ಗಕ್ಕೆ ಚವರ್ಗವೂ(1) ಆದೇಶವಾಗಿ ಬರುವುದು.

ಉದಾಹರಣೆ.

ಸಕಾರಕ್ಕೆ ಶಕಾರ—ಮನಸ್+ಶುದ್ಧಿ=ಮನಶ್ಶುದ್ಧಿ (ಮನಶ್+ಶುದ್ಧಿ) ಇಲ್ಲಿಪೂರ್ವ ಪದದ ಸಕಾರಕ್ಕೆ ಮುಂದೆ ಬಂದ ಶಕಾರವೇ ಆದೇಶವಾಗಿ ಶಕಾರ ದ್ವಿತ್ವವಾಯಿತು.

ಶಕಾರಕ್ಕೆ ಚವರ್ಗ—ಯಶಸ್+ಚಂದ್ರ=ಯಶಶ್ಚಂದ್ರ. (ಯಶಶ್+ಚಂದ್ರ) ಇಲ್ಲಿ ಸಕಾರಕ್ಕೆ ಚಕಾರ (ಚವರ್ಗಾಕ್ಷರ) ಪರವಾಗಿ, ಆ ಸಕಾರಕ್ಕೆ ಶಕಾರ ಆದೇಶವಾಯಿತು.

ತಕಾರಕ್ಕೆ ಚವರ್ಗ—ಲಸತ್+ಚಿತ್ರ=ಲಸಚ್ಚಿತ್ರ (ಲಸಚ್+ಚಿತ್ರ). ಇಲ್ಲಿ ಚಕಾರ ಮುಂದೆ ಬರಲಾಗಿ, ಹಿಂದಣ ತಕಾರಕ್ಕೆ ಚಕಾರವೇ ಆದೇಶವಾಯ್ತು.

,, ,, —ಜ್ವಲತ್+ಜ್ಯೋತಿ=ಜ್ವಲಜ್ಜ್ಯೋತಿ(ಜ್ವಲಜ್+ಜ್ಯೋತಿ) ಇಲ್ಲಿ ತಕಾರಕ್ಕೆ ಜಕಾರ ಪರವಾಗಿ ಜಕಾರವೇ ಆದೇಶವಾಯ್ತು.

,, ,, —ಬೃಹತ್+ಛತ್ರ=ಬೃಹಚ್ಛತ್ರ. ಇಲ್ಲಿ ತಕಾರಕ್ಕೆ ಚಕಾರ ಬಂದಿದೆ.

2. ಷ್ಟುತ್ವ(2)ಸಂಧಿ—ಸೂ॥ ಪದದ ಕೊನೆಯಲ್ಲಿರುವ ಸಕಾರ ತವರ್ಗಾಕ್ಷರಗಳಿಗೆ ಷಕಾರವಾಗಲೀ, ಟವರ್ಗವಾಗಲೀ ಪರವಾದರೆ ಆ ಸಕಾರಕ್ಕೆ ಷಕಾರವೂ, ತವರ್ಗಕ್ಕೆ ಟವರ್ಗವೂ(3) ಆದೇಶವಾಗುವುದು.

ಉದಾಹರಣೆ.

ಸಕಾರಕ್ಕೆ ಷಕಾರ—ವಯಸ್+ಷಷ್ಠಿ=ವಯಷ್ಷಷ್ಠಿ. (ವಯಷ್ ಷಷ್ಠಿ) ಇಲ್ಲಿ ಪರಪದದ ಮೊದಲಲ್ಲಿರುವ ಷಕಾರವು ಪೂರ್ವಪದದ ಸಕಾರಕ್ಕೆ ಆದೇಶವಾಗಿ ಷಕಾರಕ್ಕೆ ದ್ವಿತ್ವವಾಯ್ತು.

ತವರ್ಗಕ್ಕೆ ಟವರ್ಗ—ಶನತ್+ಟಂಕಾರ=ಶನಟ್ಟಂಕಾರ (ಶನಟ್+ಟಂಕಾರ) ಇಲ್ಲಿ ಪರಪದದ ಟಕಾರವು ಪೂರ್ವ ಪದದ ತಕಾರಕ್ಕೆ ಆದೇಶ

(1) ಚ ಛ ಜ, ಎಂಬುವು. (2) ಷಕಾರ ಟವರ್ಗಗಳು ಸಂಧಿ ಮಾಡಿದಾಗ ಇವು ಬರುವುದೇ ಷ್ಟುತ್ವಸಂಧಿ. (3) ಟ ಠ ಡ.

ವಾಗಿ ಟಕಾರ ದ್ವಿತ್ವವಾಯಿತು. ಹೀಗೆಯೇ, ಲಸಡ್ಡ ಕಾರ (ಇ)

3. ಜಶ್ತ್ವ(1)ಸಂಧಿ—ಸೂ॥ ಪೂರ್ವಪದದ ಕೊನೆಯಲ್ಲಿರುವ ವರ್ಗ ಪ್ರಥಮಾಕ್ಷರಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ 3ನೆಯ ಅಕ್ಷರಗಳು ಆದೇಶವಾಗುವುವು. ಆದರೆ ವರ್ಗದ 1ನೇ 2ನೇ ಅಕ್ಷರಗಳೂ ಸ, ಷ, ವರ್ಣಗಳೂ ಪರವಾದರೆ ಬರುವುದಿಲ್ಲ.

ಉದಾಹರಣೆ.

ಕಕಾರಕ್ಕೆ ಗಕಾರ—ವಾಕ್=ಅಧಿಕ=ವಾಗಧಿಪ (ವಾಗ್+ಅಧಿಪ) ಇಲ್ಲಿ ಕವರ್ಗದ ಕಕಾರಕ್ಕೆ ಸ್ವರ ಪರವಾಗಿ 3ನೇ ಅಕ್ಷರವಾದ ಗಕಾರ ಆದೇಶವಾಗಿದೆ.

,, ,, ವಾಕ್+ರೂಪ=ವಾಗ್ರೂಪ, (ವಾಗ್+ರೂಪ) ಇಲ್ಲಿ ಕಕಾರಕ್ಕೆ ವ್ಯಂಜನ ರಕಾರ ಪರವಾಗಿ 3ನೇ ಅಕ್ಷರ ಗಕಾರ ಆದೇಶವು.

ಹೀಗೆಯೇ

ಚಕಾರಕ್ಕೆ ಜಕಾರ—ಅಚ್+ಆದಿ=ಅಜಾದಿ.

ಟಕಾರಕ್ಕೆ ಡಕಾರ—ಷಟ್+ಅಂಗ=ಷಡಂಗ, ವಿರಾಟ್+ರೂಪ=ವಿರಾಡ್ರೂಪ.

ತಕಾರಕ್ಕೆ ದಕಾರ—ಏತತ್+ಯುಕ್ತಿ=ಏತದ್ಯುಕ್ತಿ.

ಪಕಾರಕ್ಕೆ ಬಕಾರ—ಸುಪ್+ವಿಭಕ್ತಿ=ಸುಬ್ವಿಭಕ್ತಿ, ಅಪ್+ಅಂಶ=ಅಬಂಶ.

ವರ್ಗದ 1-2ನೇ ವರ್ಣಗಳು ಪರವಾದುದಕ್ಕೆ— ವಾಕ್+ಪತಿ=ವಾಕ್ಪತಿ, ತತ್+ಖದಿರ=ತತ್ಖದಿರ, ಷಟ್ಖಂಡ. ಇಲ್ಲಿ ಜಶ್ತ್ವ(3ನೇ ಅಕ್ಷರ) ಬರಲಿಲ್ಲ.

ಸ, ಷಕಾರಗಳು ಪರವಾದುದಕ್ಕೆ—ಉದ್ಯತ್+ಸೂರ್ಯ=ಉದ್ಯತ್ಸೂರ್ಯ, (ಉದ್ಯತ್+ಸೂರ್ಯ), ಲಸತ್+ಷೋಡಶ=ಲಸತ್ಷೋಡಶ. ಇಲ್ಲಿಯೂ ಜಶ್ತ್ವವಿಲ್ಲ.

4. ಛತ್ವ(2)ಸಂಧಿ—ಸೂ॥ ಮೊದಲನೆಯ ಪದದ ಕೊನೆಯಲ್ಲಿ ವರ್ಗ ಪ್ರಥಮ ವರ್ಣಗಳಿದ್ದು ಪರಪದದ ಮೊದಲಲ್ಲಿ ಸ್ವರ ಅಥವಾ "ಯ ರ ಲ ವ"ಗಳು ಮುಂದೆ ಬಂದಿರುವ ಶಕಾರವಿದ್ದರೆ ಆ ಶಕಾರಕ್ಕೆ ಛಕಾರಾದೇಶ ಬರುವುದು.

---

(1) ಜಶ್=ಎಂದರೆ ವರ್ಗದ ಮೂರನೆಯ ವರ್ಣಗಳು ಸಂಧಿಮಾಡಿದಾಗ ಇವು ಬರುವದೇ ಜಶ್ತ್ವ ಸಂಧಿ. (2) ಛಕಾರ, ಸಂಧಿಯಲ್ಲಿ ಇದು ಬರುವುದೇ ಛತ್ವಸಂಧಿ.

ಉದಾಹರಣೆ.

ಸ್ವರಯುಕ್ತ ಶಕಾರಕ್ಕೆ ಛಕಾರ—ತ್ವಕ್+ಶರೀರ = ತ್ವಕ್ಛರೀರ. ಇಲ್ಲಿ ತ್ವಕ್ ಶಬ್ದದ ಕಕಾರಕ್ಕೆ ಪರವಾದ ಶಕಾರಕ್ಕೆ ಅಕಾರ ಸ್ವರ ಸೇರಿರುವುದರಿಂದ ಆ ಶಕಾರಕ್ಕೆ ಛಕಾರ ಆದೇಶವಾಯಿತು.

ಸತ್+ಶಿಷ್ಯ=ಸಚ್ಛಿಷ್ಯ, (ಸಚ್+ಶಿಷ್ಯ) ಇಲ್ಲಿ ಶಕಾರದ ಮೇಲೆ ಇಕಾರ ಸ್ವಕಾರವಿರುವುದರಿಂದ ಛಕಾರ ಬಂದಿತು. ಬಳಿಕ ಶ್ಚುತ್ವ (* 23-1) ದಿಂದ ತಕಾರಕ್ಕೆ ಚಕಾರ ಬಂದು ಸಚ್ಛಿಷ್ಯ ಆಯಿತು.

ಯ ರ ಲ ವ ಕೂಡಿರುವ ,, ,,—ಜಲಮುಕ್+ಶ್ಯಾಮ=ಜಲಮುಕ್ಛ್ಯಾಮ(ಜಲಮುಕ್+ಛ್ಯಾಮ). ಇಲ್ಲಿ ಶಕಾರದ ಮುಂದೆ ಯಕಾರ ಬಂದಿರುವುದರಿಂದ ಅದಕ್ಕೆ ಛಕಾರ ಆದೇಶವಾಯ್ತು. ಹೀಗೆಯೇ ಉತ್+ಶ್ವಾಸ=ಉಚ್ಛ್ವಾಸ, ವಾಕ್+ಶ್ರವಣ=ವಾಕ್ಛ್ರವಣ, ವಿಲಸತ್+ಶ್ಲೋಕ=ವಿಲಸಚ್ಛ್ಲೋಕ.

5. ಅನುನಾಸಿಕ(1)ಸಂಧಿ—ಸೂ॥ಪೂರ್ವಪದದ ಕೊನೆಯಲ್ಲಿರುವ ಕ ಚ ಟ ತ ಪ ಗಳಿಗೆ ಅನುನಾಸಿಕ ವರ್ಣ ಪರವಾದರೆ ಕ್ರಮವಾಗಿ ಙ ಞ ಣ ನ ಮ ಗಳು ಆದೇಶವಾಗುವುದು ಅನುನಾಸಿಕಸಂಧಿ.—ಉದಾಹರಣೆ.

ವಾಕ್+ಮಯ=ವಾಙ್ಮಯ, (ವಾಙ್+ಮಯ). ಇಲ್ಲಿ ವರ್ಗ ಪ್ರಥಮಾಕ್ಷರವಾದ ಕಕಾರಕ್ಕೆ ಮಕಾರ ಅನುನಾಸಿಕ ಮುಂದೆ ಬರಲು ಕಕಾರಕ್ಕೆ ಅದರ ಅನುನಾಸಿಕ ಙಕಾರ ಆದೇಶವಾಯ್ತು. (ಹೀಗೆಯೇ) ಸತ್+ಮಣಿ=ಸನ್ಮಣಿ, ಷಟ್‌ಮಾಸ=ಷಣ್ಮಾಸ (ಷಾಣ್ಮಾಸ) ಅಪ್ + ಮಾಧುರ್ಯ=ಅಮ್ಮಾಧುರ್ಯ.

6. ವಿಸರ್ಗ(2)ಸಂಧಿ—ಸೂ॥ ಪೂರ್ವಪದದ ಕೊನೆಯಲ್ಲಿ ರಕಾರ(3)ವಿದ್ದು ಪರದಲ್ಲಿ ಕ ಖ ಪ ಫ ವರ್ಣಗಳಾಗಲಿ, ಕ್ಷಕಾರವಾಗಲಿ ಇದ್ದರೆ ಆ ರಕಾರಕ್ಕೆ ವಿಸರ್ಗಾದೇಶ ಬರುವುದು.

---

(1) ಸಂಧಿ ಮಾಡಿದಾಗ ಅನುನಾಸಿಕಾಕ್ಷರ ಬರುವುದು. (2) ಸಂಧಿಕೂಡಿದಾಗ ವಿಸರ್ಗ ಬರುವುದು. (3) ರಕಾರವೇ ಸಕಾರವಾಗುವುದು. ಪುನಃ ಆ ಸಕಾರಕ್ಕೆ ರಕಾರ ಬರುವುದು. (ರಕಾರದ ಸಕಾರ ವಿಸರ್ಗಗಳು ಸಂದರ್ಭಾನುಸಾರ ಒಂದಕ್ಕೆ ಬದಲಾಗಿ ಮತ್ತೊಂದು ಬರುತ್ತಿರುತ್ತವೆ.)

ಉದಾಹರಣೆ.

ಅಂತರ್+ಕರಣ=ಅಂತಃಕರಣ. ಇಲ್ಲಿ ತಕಾರ ಪರವಾಗಲು ಪೂರ್ವಪದದ ರೇಫಕ್ಕೆ ವಿಸರ್ಗ ಆದೇಶವಾಯಿತು. (ಹೀಗೆಯೇ)

ಪುನರ್ + ಪಾಕ = ಪುನಃಪಾಕ
ಮನರ್ + ಖೇದ = ಮನಃಖೇದ
ತೇಜರ್ + ಕ್ಷಮಾ = ತೇಜಃಕ್ಷಮಾ

ವಿಸರ್ಗಕ್ಕೆ ಹಿಂದೆ ಇಕಾರ ಉಕಾರಗಳಿದ್ದರೆ ಅಲ್ಲಿ ಬರುವ ಸಕಾರಕ್ಕೆ ಷಕಾರ ಆದೇಶವಾಗುವುದು.

ಉದಾಹರಣೆ.

ದುರ್+ಫಲ=ದುಸ್+ಫಲ=ದುಷ್ಫಲ, ಹೀಗೆಯೇ, ನಿಷ್ಕಂಟಕ, ದುಷ್ಪುತ್ರ, ನಿಷ್ಕಾಮ.

೭. ಉತ್ವಾದೇಶ(1)ಸಂಧಿ—ಸೂ ॥ ಅಕಾರ ಉಪಧೆ(2)ಯಾಗಿರುವ ಸಕಾರವು ಪದದ ಕೊನೆಯಲ್ಲಿದ್ದು ಅದಕ್ಕೆ ವರ್ಗ ಪ್ರಥಮ ದ್ವಿತೀಯ ಮತ್ತು ಶ ಷ ಸ ಎಂಬ ವರ್ಣಗಳು ಹೊರತು ಮಿಕ್ಕ ಯಾವ ವರ್ಣ ಪರವಾದರೂ ಉಕಾರ ಆದೇಶ ಬರುವುದು.

ಉದಾಹರಣೆ.

ಉತ್ವಬರುವುದಕ್ಕೆ—ವಾಚಸ್+ಯುಕ್ತಿ=ವಾಚೋಯುಕ್ತಿ (ಇಲ್ಲಿ ಚಕಾರದ ಮೇಲೆಯಿರುವ ಅಕಾರವು ಸಕಾರಕ್ಕೆ ಉಪಧೆಯಾಗಿದೆ. ಇದಕ್ಕೆ ಯಕಾರ ಮುಂದೆ ಬರಲಾಗಿ ಉಕಾರ ಆದೇಶವಾಯ್ತು. ಬಳಿಕ ಅಕಾರ ಉಕಾರಗಳು ಗುಣಸಂಧಿ ಸೂತ್ರದಿಂದ ಓಕಾರವಾದುವು.)

(ಹೀಗೆಯೇ)

ಏನಸ್+ನಿವಾರಣ=ಏನೋ (ಪಾಪ) ನಿವಾರಣ, ಮನೋಜಯ, ಮನೋಹರ, ತಪೋಮಹಿಮೆ. (ಇ)

ವರ್ಗದ 1-2ನೇ ವರ್ಣಗಳು ಪರವಾದುದಕ್ಕೆ	ಮನರ್ (ಸ್)+ಪ್ರಾಚುರ್ಯ=ಮನಃಪ್ರಾಚುರ್ಯ, ಯಶಸ್+ಕಾಮ=ಯಶಃಕಾಮ, ಮನಸ್+ಖೇದ=ಮನಃಖೇದ	ಇಲ್ಲಿ ಉತ್ವಾದೇಶವಿಲ್ಲ.

(1) ಸಂಧಿಯಲ್ಲಿ ಉಕಾರ ಬರುವುದು. (2) ಕೊನೆಯಕ್ಷರದ ಹಿಂದಣ ಅಕ್ಷರಕ್ಕೆ ಉಪಧೆಯೆಂದು ಹೆಸರು. ಯಶಸ್ಕಾಮಿ ತೇಜಸ್ಕಾಮಿ ಎಂದೂ ಉಂಟು.

ಶ ಷ ಸ ಪರವಾದುದಕ್ಕೆ—ತಮಸ್ + ಶ್ರೇಷ್ಠ = ತಮಶ್ಶ್ರೇಷ್ಠ (*23-1) ವಯಸ್+ ಷೋಡಶ = ವಯಷ್ಷೋಡಶ (* 23-2) ಪಯಸ್ + ಸ್ವಾದು=ಪಯಸ್ಸ್ವಾದು.

8. ಪೂರ್ವಸವರ್ಣಾದೇಶ ಸಂಧಿ.

ಸೂ॥ ಪೂರ್ವಪದದ ಕೊನೆಯಲ್ಲಿರುವ ವರ್ಗ ಪ್ರಥಮ ವರ್ಣಗಳಿಗೆ ಹಕಾರ ಪರವಾದರೆ, ಆ ಹಕಾರಕ್ಕೆ ಪೂರ್ವ (ಮೊದಲಿರುವ) ವರ್ಣದ ಸವರ್ಣಾಕ್ಷರವು ಆದೇಶವಾಗುವುದು.

ಉದಾಹರಣೆ

ಉತ್+ಹತಿ = ಉದ್ಧತಿ, ವಾಕ್+ಹತಿ = ವಾಗ್ಘತಿ, ಅಪ್+ಹವ್ಯ = ಅಬ್ಭವ್ಯ, ತತ್+ಹೋಮ=ತದ್ಧೋಮ.

(ಈ ಉದಾಹರಣೆಗಳಲ್ಲಿ ಪದಾಂತದಲ್ಲಿರುವ ಕ್, ತ್, ಪ್, ವರ್ಣಗಳಿಗೆ ಪರವಾಗಿರುವ ಹಕಾರವು ಮಹಾಪ್ರಾಣಾಕ್ಷರ(* 7)ವಾಗಿದೆ. ಆದರಿಂದ ಅದೇ ಕ, ತ, ಪ, ವರ್ಣಗಳಿಗೆ ಸವರ್ಣಗಳಾಗಿಯೂ, ಮಹಾಪ್ರಾಣಾಕ್ಷರಗಳಾಗಿಯೂ ಇರುವ ಘ, ಧ, ಭ ಎಂಬಕ್ಷರಗಳು ಹಕಾರಕ್ಕೆ ಆದೇಶವಾಗಿದೆ.)

9. ರೇಫಲೋಪಸಂಧಿ—ಸೂ॥ ಪದದ ಕೊನೆಯಲ್ಲಿರುವ ರಕಾರಕ್ಕೆ ಮತ್ತೊಂದು ರಕಾರವು ಮುಂದೆ ಬಂದರೆ ಮೊದಲಿನ ರಕಾರವು ಲೋಪವಾಗುವುದಲ್ಲದೆ ಅದರ ಹಿಂದೆ ಇರುವ ಹ್ರಸ್ವಸ್ವರವು ದೀರ್ಘವಾಗುತ್ತದೆ.

ಉದಾಹರಣೆ.

ನಿರ್+ರಾಜನ=ನೀರಾಜನ, ಬಹಿರ್+ರಾಗ=ಬಹೀರಾಗ. (ಇಲ್ಲಿ 2 ರೇಫಗಳು ಸೇರಿದುದರಿಂದ ಮೊದಲನೆಯ ರೇಫ ಲೋಪವಾಗಿ ನಿರಾಜನ, ಬಹಿರಾಗ ಎಂದಾಯ್ತು. ಬಳಿಕ ಆ ಹ್ರಸ್ವಗಳಿಗೆ ದೀರ್ಘಬಂದು ನೀರಾಜನ, ಬಹೀರಾಗ ಎಂದಾಯ್ತು.)

(ಹೀಗೆಯೇ) ನೀರೋಗ (ನಿರ್+ರೋಗ)

ಇಂತು ಸಂಧಿಪ್ರಕರಣಂ.

IV ಶಬ್ದಲಕ್ಷಣಂ.

24. ಯಾವುದಕ್ಕೆ ಅರ್ಥವಿರುವುದೋ ಯಾವುದಕ್ಕೆ ಅರ್ಥವ್ಯತ್ಯಾಸವಿಲ್ಲದೆ ರೂಪ ಬದಲಾಗುವುದಿಲ್ಲವೋ ಅಂತಹ ಒಂದು ಅಥವಾ ಅನೇಕ ಅಕ್ಷರಗಳಿರುವುದಕ್ಕೆ ಶಬ್ದವೆಂದು ಹೆಸರು.

ಉದಾಹರಣೆ.

ಕಾ (ರಕ್ಷಿಸು), ತಾ, ಮರ, ಮನುಷ್ಯ, ನಗೆ, ಮಾಡು. (ಇ)

25. ನಾವು ನೋಡುವ ಹಾಗೆ ಭಾಷೆಯಲ್ಲಿ ಲೆಕ್ಕವಿಲ್ಲದಷ್ಟು ಶಬ್ದಗಳಿವೆ. ಪ್ರತಿಯೊಂದು ಶಬ್ದಕ್ಕೂ ಒಂದೊಂದು ಹೆಸರಿಡಲು ಸಾಧ್ಯವಿಲ್ಲವಾಗಿ ಒಂದೊಂದು ಗುಂಪಿಗೆ ಸೇರಿದ ಶಬ್ದಗಳನ್ನು ಬೇರೆ ಬೇರೆ ಮಾಡಿ, ಆಯಾ ಗುಂಪಿಗೆ ತಕ್ಕ ಹೆಸರುಗಳನ್ನು ಕೊಟ್ಟಿರುತ್ತಾರೆ. ಅಂತಹ ಗುಂಪುಗಳಲ್ಲಿ ಶಬ್ದಗಳ ಸ್ವರೂಪವನ್ನೂ ಅವುಗಳಲ್ಲಿ ಉಂಟಾಗಿರುವ ಪರಸ್ಪರ ವ್ಯತ್ಯಾಸಗಳನ್ನೂ ತಿಳಿಯುವುದು ಶಬ್ದ ಲಕ್ಷಣವೆನಿಸುವುದು.

26. ಕನ್ನಡ ಭಾಷೆಯಲ್ಲಿ ರೂಢಿಯಾಗಿರುವ ದೇಶ್ಯ (ಅಚ್ಚಗನ್ನಡ) ಶಬ್ದಗಳು ನಡೆವಳಿಕೆಗೆ ಸಾಕಾಗದಿರುವುದರಿಂದ ಅವುಗಳ ಜತೆಗೆ ರೂಢಿಯಲ್ಲಿರುವ ಕೆಲವು ಸಂಸ್ಕೃತ ಶಬ್ದಗಳನ್ನು ರೂಪ ವ್ಯತ್ಯಾಸಮಾಡದೆಯೂ, ಕೆಲವನ್ನು ವ್ಯತ್ಯಾಸಮಾಡಿಯೂ ಉಪಯೋಗಿಸುವುದುಂಟು. ಇಲ್ಲಿ ೧ನೇ ತರದ ಶಬ್ದಗಳಿಗೆ ತತ್ಸಮಗಳೆಂದೂ, ೨ನೇ ತರದ ಶಬ್ದಗಳಿಗೆ ತದ್ಭವ(1)ಗಳೆಂದೂ ಹೇಳುವರು.

ಉದಾಹರಣೆ.

ದೇಶ್ಯ ಶಬ್ದಗಳು—ಮನೆ, ಕದ, ನೆಲ, ಕೆರೆ, ದನ, ಆಳು.
ತತ್ಸಮ ,, —ಜನ, ಗೃಹ, ಸಕಲ, ಪಿತೃ, ಮಾ, ಶ್ರೀ.
ತದ್ಭವ ,, —ಸಂಸ್ಕೃತ, ಸ್ವರ್ಗ, ವರ್ತಿ, ಅಮೃತ, ನದೀ.
,, ,, —ತದ್ಭವ, ಸಗ್ಗ, ಬತ್ತಿ, ಅಮರ್ದು, ನದಿ.

27. ಸ್ವಲ್ಪ ಭಾಗ ರೂಪ ವ್ಯತ್ಯಾಸವಾಗಿ ರೂಢಿಯಲ್ಲಿರುವ ಕೆಲವು ತದ್ಭವ ಶಬ್ದಗಳು.

ಸಂಸ್ಕೃತ	ತದ್ಭವ	ಸಂಸ್ಕೃತ	ತದ್ಭವ
ಸಖಿ	—ಸಖಾಯ	ಯಶಸ್	—ಯಶಸ್ಸು, ಯಶ
ರಮಾ	—ರಮೆ	ಜಗತ್	—ಜಗತ್ತು, ಜಗ
ಮಾಲಾ	—ಮಾಲೆ	ದಿವ್	—ದಿವ
ಕರುಣಾ	—ಕರುಣ	ಅಕ್ಷತ	—ಅಕ್ಷತೆ
ಗ್ರೀವಾ	—ಗ್ರೀವ, ಗ್ರೀವೆ	ವಧೂ	—ವಧು
ಪಾತ್ರ	—ಪಾತ್ರೆ	ಪಿತೃ	—ಪಿತರ, ಪಿತ
ಅಪ್	—ಅಪ್ಪು	ಧಾತೃ	—ಧಾತಾರ
ಪರಿಷತ್	—ಪರಿಷದ	ಭಿಷಕ್	—ಭಿಷಜ

(1) ತತ್-ಆ ಸಂಸ್ಕೃತ ಶಬ್ದಗಳಿಂದ, ಭವ-ಹುಟ್ಟಿದುದು=ತದ್ಭವ.

ಸಂಸ್ಕೃತ	ತದ್ಭವ	ಸಂಸ್ಕೃತ	ತದ್ಭವ	
ವಿಧಾತೃ	—ವಿಧಾತ್ರ	ರಾಜನ್	—ರಾಜ	
ಕರಿನ್	—ಕರಿ	ಏಕ, ದ್ವಿ, ತ್ರಿ, ಚತುರ್,	ಏಕತ್ವ, ಏಕತಯ, ದ್ವಿತಯ ತ್ರಿತಯ, ಚತುಷ್ಟಯ	(1)
		ಬಹಿಃ	—ಬಹಿರ್ಮುಖ	
ಅಂತಃ	—ಅಂತಃಕರಣ	ವಿದ್ವಾನ್	—ವಿದ್ವಾಂಸ	
ಶ್ರೀಮಾನ್	—ಶ್ರೀಮಂತ	ತ್ವಕ್	—ತ್ವಚ	
ತಮಸ್	—ತಮ, ತಮಸ್ಸು			

28. ಶಬ್ದಗಳು ಸಾಮಾನ್ಯವಾಗಿ ನಾಮಪದ, ಕ್ರಿಯಾಪದ ಅವ್ಯಯವೆಂದು ಮೂರು ವಿಧವು.

ಉದಾಹರಣೆ.

ನಾಮಪದ—ರಾಮನು	ನದಿ	ಹಣ್ಣು
ಕ್ರಿಯಾಪದ—ಬರುತ್ತಾನೆ	ಹರಿಯಿತು	ಉದುರಿತು
ಅವ್ಯಯ—ಬೇಗನೆ	ಥೋರೆಂದು	ತಟ್ಟನೆ (ಇ)

29. ರಾಮನು, ರಾಮನೆ, ರಾಮನನ್ನು, ರಾಮನಿಂದ ಮೊದಲಾದ ಶಬ್ದಗಳಲ್ಲಿ ರಾಮ ಎಂಬ ಶಬ್ದವು ಪ್ರತಿಯೊಂದರಲ್ಲಿಯೂ ಸಾಮಾನ್ಯ (common)ವಾಗಿದೆ. ಆದರ ಮೇಲೆ ಬಂದಿರುವ ಅಕ್ಷರಗಳು ಒಂದಕ್ಕೊಂದು ವ್ಯತ್ಯಾಸವಾಗಿವೆ. ಈಗ ಎಲ್ಲಾ ಪದಗಳಲ್ಲಿಯೂ ಏಕರೂಪವಾಗಿರುವ ರಾಮ ಎಂಬುದೇ ಮೂಲ ಶಬ್ದ ಅಥವಾ ಪ್ರಾತಿಪದಿಕವೆಂದೂ ಆದರ ಮೇಲೆ ಬಂದಿರುವ ಬೇರೆ ಬೇರೆ ಅಕ್ಷರಗಳೇ ಪ್ರತ್ಯಯಗಳೆಂದೂ ತಿಳಿಯಬೇಕು. (ಆದಕಾರಣ)

ಸೂ॥ ನಾಮಪದಕ್ಕೆ ಮೂಲಭೂತವಾಗಿಯೂ, ಕ್ರಿಯಾರ್ಥವಿಲ್ಲದೆಯೂ, ಅರ್ಥವಿರುವುದಾಗಿಯೂ ಇರುವ ಶಬ್ದವು ಪ್ರಾತಿಪದಿಕ ಅಥವಾ ಪ್ರಕೃತಿಯೆನಿಸುವುದು. ಪ್ರಕೃತಿಗೆ ಪ್ರತ್ಯಯ ಸೇರಿದರೆ ಪದ(2) ವಾಗುವುದು. ಹೀಗೆಯೇ ಧಾತುವಿಗೂ ಪ್ರಕೃತಿಸಂಜ್ಞೆ ಉಂಟು. (*74).

---

(1) ಸಂಸ್ಕೃತಸಂಖ್ಯಾವಾಚಕಗಳೂ ಅವ್ಯಯಗಳೂ ಸಮಾಸವಾಗಿಯಾಗಲಿ ಪ್ರತ್ಯಯಾಂತವಾಯಾಗಲಿ ಕನ್ನಡಕ್ಕೆ ಪ್ರಕೃತಿಗಳಾಗುವುವು. (2) ಈನಾಮಪದದಂತೆ ಧಾತುವಿಗೆ ಕ್ರಿಯಾಪ್ರತ್ಯಯವು ಸೇರಿದರೆ ಅದೂ ಪದವಾಗಿ ಕ್ರಿಯಾಪದವೆನಿಸುವುದು. (*74) ಅವ್ಯಯ. (*28) ಗಳ ಮೇಲೆ ವಿಭಕ್ತಿ ಪ್ರತ್ಯಯಗಳು ಬಂದು ಲೋಪವಾಗಿರುತ್ತವೆಯಾಗಿ ಅವುಗಳಿಗೂ ಪದತ್ವವುಂಟು.

ಉದಾಹರಣೆ.

ಪ್ರಕೃತಿ	ಪ್ರತ್ಯಯ	ಪದ
ಅರಸ	ಅನ್ನು	ಅರಸನನ್ನು
ಮನೆ	ಅಲ್ಲಿ	ಮನೆಯಲ್ಲಿ

30. ಪ್ರಾತಿಪದಿಕವು ನಾಮವಾಚಕ, ಸಮಾಸ, ಕೃದಂತ, ತದ್ಧಿತಾಂತವೆಂದು ೪ ವಿಧವಾಗಿರುವುದು. (ಉದಾಹರಣೆಗಳು ಆಯಾ ಪ್ರಕರಣಗಳಲ್ಲಿ ತೋರಿಸಲ್ಪಟ್ಟವೆ.)

31. ನಾಮವಾಚಕ—ಇದರಲ್ಲಿ ವಸ್ತುವಾಚಕ, ಸರ್ವನಾಮ, ಗುಣವಾಚಕ,(1) ಸಂಖ್ಯಾವಾಚಕ, ಸಂಖ್ಯೇಯವಾಚಕ, ಪರಿಮಾಣವಾಚಕ, ಪ್ರಕಾರವಾಚಕ ಎಂದು ೭ ವಿಧವುಂಟು.

32. ವಸ್ತುವಾಚಕ—ಚೇತನ (ಪ್ರಾಣವಿರುವ) ಅಚೇತನ (ಪ್ರಾಣವಿಲ್ಲದ)ದ ವಸ್ತುಗಳನ್ನು ಬೋಧಿಸುವ ಶಬ್ದಗಳು ವಸ್ತುವಾಚಕಗಳು. ಇವುಗಳಲ್ಲಿ ವಸ್ತುವಿನ ರೂಢಿಯಾದ (ಎಲ್ಲರಿಗೂ ತಿಳಿದ) ಅರ್ಥವನ್ನು ತಿಳಿಸುವ ಶಬ್ದಗಳು ರೂಢನಾಮಗಳೆಂದೂ, ಅರ್ಥಕ್ಕೆ ಅನುಸಾರವಾದ (ಅವಯವಾರ್ಥವುಳ್ಳ) ಶಬ್ದಗಳು ಅನ್ವರ್ಥನಾಮಗಳೆಂದೂ, ಅವರವರ ಇಷ್ಟಾನುಸಾರ (ವಸ್ತುವಿನ ಗುರುತು ತಿಳಿಯಲೋಸುಗ) ಇಟ್ಟುಕೊಂಡಿರುವ ಹೆಸರುಗಳನ್ನು ಬೋಧಿಸುವ ಶಬ್ದಗಳು ಅಂಕಿತನಾಮಗಳೆಂದೂ ಮೂರು ವಿಧವು.

ಉದಾಹರಣೆ.

ರೂಢನಾಮ	ಅನ್ವರ್ಥನಾಮ	ಅಂಕಿತನಾಮ
ನದಿ, ಮನೆ, ಊರು, ಹೆಂಗಸು.	ಯೋಗಿ, ರೋಗಿ, ಕುಂಟ, ವ್ಯಾಪಾರಿ, ವಿದ್ವಾಂಸ.	ವೆಂಕಟ, ತುಮ್ಕೂರು, ಕಾವೇರಿ, ವಿಂಧ್ಯ

33. ಸರ್ವನಾಮ—ಸರ್ವವಸ್ತುವಾಚಕಗಳಾದ ಶಬ್ದಗಳ ಸ್ಥಾನದಲ್ಲಿಯೂ (ಬದಲಾಗಿ) ನಿಂತು ಅವುಗಳನ್ನು ಬೋಧಿಸುವ ಶಬ್ದಗಳು ಸರ್ವನಾಮಗಳು.

ಉದಾಹರಣೆ.

ಅದು, ಇದು, ಯಾವುದು, ಎಲ್ಲಾ, ಏನು, ಪೆರತು, ಏತರದು ಎಂಬುವು ರೂಢಿಯಾದ ಸರ್ವನಾಮಶಬ್ದಗಳು.

34. ಸರ್ವನಾಮಗಳಲ್ಲಿ ವಿಶೇಷಣಾರ್ಥಕ, ಪ್ರಶ್ನಾರ್ಥಕ, ಪುರುಷತ್ರಯಾರ್ಥಕವೆಂದು ೩ ವಿಧವು.

---

(1) ಇದಕ್ಕೆ ಗುಣವಾಚಕವೆಂದೂ ಹೆಸರುಂಟು.

ವಿಶೇಷಣಾ(1)ರ್ಥಕ—ಅದು, ಇದು, ಎಲ್ಲಾ, ಪರರು—ಅದು + ಮನೆ = ಆಮನೆ,
ಈ ಕೆಲಸ, ಎಲ್ಲಾ ಹಣ, ಪರರ (ಪರ) ಮನೆ

ಪ್ರಶ್ನಾರ್ಥಕ { ಯಾವುದು, ಏನು, ಏತರದು, (ಹೊ.ಗ.)
ಆವುದು, ಏನ್, ಏತರ್ (ಹ.ಗ.)-ಯಾವುದು ಕೆಲಸ
ಏನು ಮಾತು, ಏತರ ವಿಚಾರ.

ಪುರುಷತ್ರಯಾರ್ಥಕ—ನಾನು, ನೀನು, ತಾನು. (ಆಂ, ನಾಂ, ನೀಂ, ತಾಂ (ಹಳೆಗನ್ನಡ) ನಾನು ಬಂದೆನು, ನೀನು ಹೋದೆ, ತಾನು ಹೋದನು (2)

ಸರ್ವನಾಮವು ಶಬ್ದಗಳ ಸ್ಥಾನದಲ್ಲಿ (ಬದಲಾಗಿ) ಬರುವುದು ಹೇಗೆಂದರೆ:— ರಾಮನು ರಾಮನ ಉಡುಪನ್ನು ಧರಿಸಿಕೊಂಡು ರಾಮನ ಪುಸ್ತಕಗಳನ್ನು ತೆಗೆದುಕೊಂಡು, ರಾಮನ ಪಾಠಶಾಲೆಗೆ ಹೋದನು ಎಂಬ ವಾಕ್ಯವನ್ನು, ರಾಮನು ತನ್ನ ಉಡುಪನ್ನು ಧರಿಸಿಕೊಂಡು ತನ್ನ ಪುಸ್ತಕಗಳನ್ನು ತೆಗೆದುಕೊಂಡು ಅವನ ಪಾಠಶಾಲೆಗೆ ಹೋದನು ಎಂದು ಹೇಳಿದರೆ, ಕೇಳುವುದಕ್ಕೆ ಹಿತವಾಗಿಯೂ, ಅರ್ಥ ಕೆಡದಂತೆಯೂ ಇರುವುದು.

35. ಗುಣವಾಚಕ—ವಸ್ತುವಿನ ಗುಣಗಳನ್ನು ತಿಳಿಸುವ ಶಬ್ದಗಳು ಗುಣವಾಚಕಗಳು.

ಒಳ್ಳಿತು, ಮೆಲ್ಲಿತು, ಬೆಟ್ಟಿತು, ತೆಳ್ಳಿತು, ಕಡಿದು, ನಿಡಿದು, ಇನಿದು, ಕರಿದು, ಪಿರಿದು (ಹಿರಿದು), ಕಿರಿದು, ದೊಡ್ಡದು, ಚಿಕ್ಕದು, ಹಳೆದು, ಎಳೆದು ಎಂಬುವು ಪ್ರಸಿದ್ಧವಾದ ಗುಣವಾಚಕಗಳು. ಇವು ನಾಮಪದಗಳಿಗೆ ವಿಶೇಷಣಗಳಾಗಿ ಪ್ರಯೋಗಿಸಲ್ಪಡುವುವು.

ಉದಾಹರಣೆ.

ಬಿಳಿದು+ಕೊಡೆ=ಬೆಳ್ಗೊಡೆ. ಇಲ್ಲಿ ಬಿಳಿದು ಎಂಬುದು.
ಕೊಡೆಯ ಗುಣ (ಬಣ್ಣ)ವನ್ನು ಹೇಳುವುದರಿಂದ ಗುಣವಾಚಕವಾಯಿತು. (ಹೀಗೆಯೇ ಎಲ್ಲವನ್ನೂ ತಿಳಿಯುವುದು.)

36. ಸಂಖ್ಯಾವಾಚಕ—ಸಂಖ್ಯೆ (ಲೆಕ್ಕ) ಯನ್ನು ಬೋಧಿಸುವ ಶಬ್ದಗಳು ಸಂಖ್ಯಾವಾಚಕಗಳು.

---

(1) ವಿಶೇಷಣವೆಂದರೆ—ನಾಮಪದದ ಗುಣ, ಸಂಖ್ಯೆ, ಪರಿಮಾಣ ಮೊದಲಾದುವನ್ನು ತಿಳಿಸುವ ಶಬ್ದವು. ಇದು ಯಾವುದನ್ನು ವಿಶೇಷಿಸುವುದೋ ಅದು ವಿಶೇಷ್ಯವೆನಿಸುವುದು. ಅದೇ ನಾಮಪದವು. (2) ಇವುಗಳಿಗೆ ಲಿಂಗಭೇದವಿಲ್ಲ.

ಉದಾಹರಣೆ.

ಒಂದು, ಎರಡು, ನಾಲ್ಕು, ಹತ್ತು, ನೂರು, ಸಾವಿರ, ಲಕ್ಷ ಇವು ಗುಣವಾಚಕಗಳಂತೆ ನಾಮಪದಗಳನ್ನು ವಿಶೇಷಿಸುವುವು:—ಒಂದು ಮನೆ, ಮೂರು ಗುಣ, ನಾಲ್ಕುಜನ, ಎಂಟುದಿಕ್ಕು, ಲಕ್ಷದೀಪ. (೩)

37. ಸಂಖ್ಯೇಯವಾಚಕ—ಸಂಖ್ಯಾವಿಶಿಷ್ಟ ವಸ್ತುಗಳನ್ನು ಬೋಧಿಸುವ ಶಬ್ದಗಳು:—ಇವುಗಳಿಂದ ಸಂಖ್ಯೆಯೂ, ವಸ್ತುವೂ ಸಹ ಬೋಧೆಗೆ ಬರುವ ಕಾರಣ ಇವು ಸಂಖ್ಯೇಯವಾಚಕಗಳಾದುವು.

ಉದಾಹರಣೆ.

ಒಬ್ಬನು(1), ಇಬ್ಬರು, ಮೂವರು, ನಾಲ್ವರು, ಐವರು, ನೂರ್ವರು ಹದಿಮುಂದಿ (ಹದಿಂಬರು ಹ. ಗ.) ಇವು ಪುಲ್ಲಿಂಗ, ಸ್ತ್ರೀಲಿಂಗವೆರಡರಲ್ಲಿಯೂ ಸಾಮಾನ್ಯವಾಗಿವೆ. ಇದಲ್ಲದೆ, ಷಟ್ಛಾಸ್ತ್ರ. ಸಪ್ತದ್ವೀಪ, ನವರತ್ನ, ದಶದಿಕ್ಕು ಮೊದಲಾದ ಪದಗಳಲ್ಲಿ ಶಾಸ್ತ್ರ, ದ್ವೀಪ, ರತ್ನ, ದಿಕ್ಕು ಎಂಬ ಪದಗಳು ಷಟ್, ಸಪ್ತ, ನವ ಮೊದಲಾದ ಸಂಖ್ಯೆಗಳಿಂದ ವಿಶೇಷಿಸಲ್ಪಡುವುದರಿಂದ ಸಂಖ್ಯೇಯವಾಚಕಗಳೆಂದು ಕೆಲವರು ಹೇಳುವರು.

38. ಪರಿಮಾಣವಾಚಕ—ವಸ್ತುಗಳ ಸಾಮಾನ್ಯವಾದ(2) ಅಳತೆ, ಪರಿಮಾಣ, ಗಾತ್ರಗಳನ್ನು ಸೂಚಿಸುವ ಶಬ್ದಗಳು ಪರಿಮಾಣವಾಚಕಗಳು.

ಉದಾಹರಣೆ.

ರೂಢಿಯಲ್ಲಿರುವ ಪರಿಮಾಣವಾಚಕಗಳು:—

ಹೊಸಗನ್ನಡ—ಅಷ್ಟು, ಇಷ್ಟು, ಎಷ್ಟು, ಹಲವು, ಕೆಲವು.
ಹಳಗನ್ನಡ—ಅನಿತು, ಇನಿತು, ಎನಿತು, ಪಲವು ಕೆಲವು.
ಐಸು (ಅಸು), ಈಸು, ಏಸು.

ಇವುಗಳಲ್ಲಿ—ಅಳತೆಗೆ -- ಇಷ್ಟುದೂರ, ಅಷ್ಟುಕೆಲಸ.
ಪರಿಮಾಣಕ್ಕೆ—ಕೆಲವು ದಿನಗಳು, ಹಲವು ಗಾವುದ.
ಗಾತ್ರಕ್ಕೆ—ಬೆಟ್ಟದಷ್ಟು, ಒಂದು ಹಿಡಿಯಷ್ಟು, ಒಂದಾನೆಯಷ್ಟು.

---

(1) ಒಬ್ಬರು ಎಂದೂ ಹೇಳುವುದುಂಟು. (2) ಮಣ, ಖಂಡಗ ಮೊದಲಾದ ಗೊತ್ತಾದ ಅಳತೆಯಲ್ಲ. ಒಂದು, ಎರಡು ಮೊದಲಾದ ಸಂಖ್ಯೆಯೂ ಅಲ್ಲ.

39. ಪ್ರಕಾರವಾಚಕ—ವಸ್ತುಗಳ ಸ್ಥಿತಿ ಅಥವಾ ರೀತಿಯನ್ನು ಬೋಧಿಸುವ ಶಬ್ದಗಳು. ಉದಾ:—

ಅಂಥದು, ಇಂಥದು, ಎಂಥದು(1) (ಇವೆಲ್ಲಾ ನಪುಂಸಕಲಿಂಗ ಶಬ್ದಗಳು) ಇವು ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ಅಂಥವನು, ಅಂಥವಳು, ಅಂಥವರು, ಇಂಥವನು, ಇಂಥವಳು, ಇಂಥವರು. (ಇ) ಎಂದು ಪ್ರಯೋಗಿಸಲ್ಪಡುವುವು.

ಮೇಲೆ ಹೇಳಿದ ಶಬ್ದಗಳೆಲ್ಲಾ ಭಾಷೆಯಲ್ಲಿ ಸಮಯೋಚಿತವಾಗಿ ಲಿಂಗ ವಿಭಕ್ತಿ ವಚನಗಳಲ್ಲಿ ಭೇದವಾಗುವುವು.

40. ಲಿಂಗ—ವಸ್ತುಗಳ ಪುಂಸ್ತ್ರೀ ನಪುಂಸಕ ಜಾತಿಗಳನ್ನು ತಿಳಿಸುವ ಶಬ್ದಗಳು ಕ್ರಮವಾಗಿ ಪುಲ್ಲಿಂಗ ಸ್ತ್ರೀಲಿಂಗ ನಪುಂಸಕಲಿಂಗಗಳೆಂದು ಹೇಳಲ್ಪಡುವುವು. ಅಂದರೆ-ಪುರುಷಜಾತಿಯನ್ನು ಹೇಳುವ ಶಬ್ದಗಳು ಪುಲ್ಲಿಂಗಗಳೆಂದೂ, ಸ್ತ್ರೀಜಾತಿಯನ್ನು ಹೇಳುವ ಶಬ್ದಗಳು ಸ್ತ್ರೀಲಿಂಗಗಳೆಂದೂ, ಉಳಿದ ಎಲ್ಲಾ ಪುಂಸ್ತ್ರೀಲಿಂಗಗಳ ಭೇದ ತಿಳಿಯದಿರುವ) ಶಬ್ದಗಳೂ ನಪುಂಸಕಲಿಂಗಗಳೆಂದೂ ಹೇಳಲ್ಪಡುವುವು. ಈ ಮೂರು ಭೇದಗಳಲ್ಲದೆ ರೂಢಿಯನ್ನನುಸರಿಸಿ ಪುನ್ನಪುಂಸಕ, ಸ್ತ್ರೀನಪುಂಸಕ, ಪುಂಸ್ತ್ರೀಲಿಂಗ, ವಾಚ್ಯಲಿಂಗ ಎಂದು ಒದೊಂದನ್ನೇ ಎರಡು ಮೂರು ಲಿಂಗಗಳಲ್ಲಿ ಉಪಯೋಗಿಸುವುದುಂಟು.

ಉದಾಹರಣೆ.

ಪುಲ್ಲಿಂಗಕ್ಕೆ —ದೊರೆ, ಹುಡುಗ, ವಿದ್ವಾಂಸ, ಶಂಕರ.
ಸ್ತ್ರೀ ,, —ಹುಡುಗಿ, ದಾಸಿ, ರಾಣಿ, ಹಸು, ಗೌರಿ.
ನಪುಂಸಕ ,, —ಪರಸೆ, ದಂಡು, ಶಿಶು, ಜನ, ಮನೆ, ಊರು, ಬೆಟ್ಟ.

---

(1) ಇವುಗಳನ್ನು ಹೊಸಗನ್ನಡದಲ್ಲಿ ಅಂಥಾದ್ದು, ಇಂಥಾದ್ದು, ಎಂಥಾದ್ದು ಎಂದು ಹೇಳುತ್ತಾರೆ.(ಹ.ಗ.)ದಲ್ಲಿ ಅನ್ನಂ, ಇನ್ನಂ, ಎನ್ನಂ ಎಂದು ಹೇಳುವರು. ಸಿಡಿಲನ್ನಂ, ಕಡಲನ್ನಂ, ಕಿಡಿಯನ್ನಂ ಅಂದರೆ ಸಿಡಿಲಿನಂಥವನು. (ಇ) ಅರ್ಥವು_ಇದಲ್ಲದೆ ಅಂಥ, ಇಂ,ಥ ಎಂಥ ಎಂಬ ಶಬ್ದಗಳನ್ನು ಅಂತಹ, ಇಂತಹ, ಎಂತಹ ಎಂದು (ಹ.ಗ.)ದಲ್ಲಿ ಹೇಳುವರು.

ಪುನ್ನಪುಂಸಕ ,, —ಚಂದ್ರಮೂಡಿದನು, ಚಂದ್ರಮೂಡಿತು(1). ವಸಂತನು ಹುಟ್ಟಿದನು, ವಸಂತ ಹುಟ್ಟಿತು.

ಸ್ತ್ರೀನಪುಂಸಕ ,, —ಆ ಹುಡುಗಿ ಬಂದಳು, ಇದು ಚಿಕ್ಕ ಹುಡುಗಿ(2)

ಪುಂಸ್ತ್ರೀ ,, —ಅವರು ಪುರುಷರು, ಇವರು(3) ಹೆಂಗಸರು.

ವಾಚ್ಯಲಿಂಗ(4)-ಪುಲ್ಲಿಂಗಕ್ಕೆ—ನೀನು ತಂದೆ.
ಸ್ತ್ರೀ ,, —ನೀನು ತಾಯಿ.
ನಪುಂ ,, —ನೀನು ಕೂಸು.
} ಹೀಗೆಯೇ ನಾನು, ತಾನು. ನೀವು ಜನಗಳು(5)

ಇಲ್ಲಿ ನೀನು ಎಂಬುದು ಮೂರು ಲಿಂಗಗಳಲ್ಲಿಯೂ ಉಪಯೋಗಿಸಲ್ಪಟ್ಟಿದೆ.

ಇದಲ್ಲದೆ ಪಶುಪಕ್ಷಿವಾಚಕಗಳಾದ ಕೆಲವು ಶಬ್ದಗಳಲ್ಲಿ ಪುಲ್ಲಿಂಗ ಸ್ತ್ರೀಲಿಂಗವೆಂಬ ಭೇದ ತಿಳಿಯದಿದ್ದರೂ ಅವು ಪುಲ್ಲಿಂಗದಂತೆ ಪ್ರಯೋಗಿಸಲ್ಪಡುವುವು.

ಉದಾಹರಣೆ.

ವ್ಯಾಘ್ರನನ್ನು,(6) ಸರ್ಪನ, ಗರುಡನಿಂದ, ತೋಳನಲ್ಲಿ, ಜೇಡನು (ಇ)

---

(1) ಚಂದ್ರ ಎಂಬ ಶಬ್ದದಲ್ಲಿ ಲಿಂಗಭೇದವಿಲ್ಲದಿದ್ದರೂ ಮೂಡಿದನು ಎಂದು ಹೇಳುವಾಗ ಪುಲ್ಲಿಂಗದಂತೆಯೂ ಮೂಡಿತು ಎಂದು ಹೇಳುವಾಗ ನಪುಂಸಕದಂತೆಯೂ ಪ್ರಯೋಗದಿರುವುದರಿಂದ ಚಂದ್ರ ಎಂಬುದು ಪುನ್ನಪುಂಸಕವಾಯಿತು. ಸೂರ್ಯಾದಿ ಗ್ರಹಗಳೆಲ್ಲಾ ಇದೇ ಕಾರಣದಿಂದಲೇ ಪುನ್ನಪುಂಸಕಗಳೆಂದು ಪರಿಗಣಿಸಲ್ಪಟ್ಟಿವೆ.

(2) ಹುಡುಗಿ ಎಂಬ ಶಬ್ದವು ಸ್ತ್ರೀಲಿಂಗವೆಂದು ಸ್ಪಷ್ಟವಾಗಿದ್ದರೂ "ಇದು ಹುಡುಗಿ" ಎಂದು ಹೇಳುವಾಗ ನಪುಂಸಕಲಿಂಗದಂತೆ ಪ್ರಯೋಗವಿರುವುದರಿಂದ ಸ್ತ್ರೀನಪುಂಸಕವಾಗಿದೆ.

(3) ಇವರು ಎಂಬುದು ಪುಲ್ಲಿಂಗ ಸ್ತ್ರೀಲಿಂಗದ ಎರಡು ಶಬ್ದಗಳಿಗೂ ವಿಶೇಷಣವಾಗಿರುವುದರಿಂದ ಪುಂಸ್ತ್ರೀಲಿಂಗವಾಯಿತು.

(4) ವಾಚ್ಯಲಿಂಗವೆಂದರೆ ವಿಶೇಷ್ಯನಿಘ್ನ ಲಿಂಗವು. (ವಿಶೇಷ್ಯದ (*34 ಟಿ 1) ಲಿಂಗವನ್ನೇ ಅನುಸರಿಸುವುದು.) ನೀನು ಎಂಬ ಶಬ್ದವು ತಂದೆಯೆಂಬುದನ್ನು ವಿಶೇಷಿಸುವಾಗ ಪುಲ್ಲಿಂಗವಾಗಿಯೂ, ತಾಯಿಯೆಂಬುದನ್ನು ವಿಶೇಷಿಸುವಾಗ ಸ್ತ್ರೀಲಿಂಗವಾಗಿಯೂ, ಕೂಸು ಎಂಬುದನ್ನು ವಿಶೇಷಿಸುವಾಗ ನಪುಂಸಕಲಿಂಗವಾಗಿಯೂ ಇರುವ ಕಾರಣ ವಾಚ್ಯಲಿಂಗವೆನಿಸಿತು.

(5) ಜನಶಬ್ದದ ಹಿಂದೆ ದುರ್, ಸರ್, ಸು, ಕು, ಎಂಬ ಪೂರ್ವಪ್ರತ್ಯಯ (Prefixes) ಗಳನ್ನು ಸೇರಿಸಿದಾಗ ಇವನು ದುರ್ಜನನು, ಸುಜನನು ಕುಜನನು ಎಂದು ಪುಲ್ಲಿಂಗದಂತೆ ಪ್ರಯೋಗಿಸಲ್ಪಡುವುದು.

(6) ವ್ಯಾಘ್ರಮೊದಲಾದ ಶಬ್ದಗಳಲ್ಲಿ ಗಂಡು, ಹೆಣ್ಣು ಜಾತಿಯ ಭೇದ ತಿಳಿಯದಿದ್ದರೂ ಅವುಗಳಿಗೆ ಪುಲ್ಲಿಂಗದಂತೆ ಪ್ರಯೋಗವುಂಟು.

ವರಾಹ ಶಬ್ದಕ್ಕೆ ವಿಕಲ್ಪದಿಂದ ಪುಲ್ಲಿಂಗವಾಗುವುದು.

ಉದಾ :—ವರಾಹನ, ವರಾಹದ.

41. ವಚನ—ವಚನವೆಂದರೆ ಸಂಖ್ಯೆ—ವಸ್ತುಗಳನ್ನು ಸಮಯೋಚಿತವಾಗಿ ಒಂದು, ಎರಡು, ಇನ್ನೂ ಹೆಚ್ಚಾಗಿಯೂ ಲೆಕ್ಕಿಸುವುದುಂಟಷ್ಟೆ? ಆಗ ಒಂದೇ ವಸ್ತುವೆಂದು ಅರ್ಥಕೊಡುವ ಶಬ್ದಕ್ಕೆ ಏಕವಚನವೆಂದೂ, ಎರಡು ವಸ್ತುಗಳನ್ನು ಸೂಚಿಸುವ ಶಬ್ದಕ್ಕೆ ದ್ವಿವಚನವೆಂದೂ, ಎರಡಕ್ಕಿಂತ ಹೆಚ್ಚಾದ ವಸ್ತುಗಳನ್ನು ಸೂಚಿಸುವ ಶಬ್ದಕ್ಕೆ ಬಹುವಚನವೆಂದೂ ಸಂಜ್ಞೆಯುಂಟು. ಸಂಸ್ಕೃತ ಭಾಷೆಯಲ್ಲಿರುವಂತೆ ಕನ್ನಡದಲ್ಲಿ ದ್ವಿವಚನ ಬಹುವಚನಗಳಿಗೆ ಬೇರೆ ಬೇರೆ ಪ್ರತ್ಯಯಗಳೂ ಆಗಮಗಳೂ ಇಲ್ಲದಿರುವುದರಿಂದ ಏಕರೂಪವಾಗಿಯೇ ಕಾಣುತ್ತವೆ. ಆದರೂ ಸಂದರ್ಭಾನುಸಾರ ದ್ವಿವಚನ ಬಹುವಚನಗಳನ್ನು ವಾಚಕರು ನಿರ್ಣಯಿಸಿಕೊಳ್ಳಬೇಕು.

ಉದಾಹರಣೆ.

ಏಕವಚನಕ್ಕೆ—ಅರಸು, ರಾಣಿ, ನೀನು, ಮರ.
ದ್ವಿ ,, —ಕಿವಿಗಳು, ಕೈಗಳು, ವಾಲಿ ಸುಗ್ರೀವರು.
ಬಹು ,, —ಮನೆಗಳು, ಬಾಲಕರು, ಹಸ್ತ್ಯಶ್ವರಥಪದಾತಿಗಳು.

42. ಪ್ರಾತಿಪದಿಕಗಳಿಗೆ ವಿಭಕ್ತಿಪ್ರತ್ಯಯಗಳು (*48) ಪರವಾದಾಗ ರೂಢಿಯನ್ನನುಸರಿಸಿ ಬಹುವಚನದಲ್ಲಿ ಗಳು, ಅರು, ದಿರು, ವಿರು, ಇರು, ವು, ಅವು, ಗಳು, ವರು, ಬರು(1) ಎಂಬಾಗಮಗಳು ಬರುತ್ತವೆ. (2) ಗಳು, ಕಳು ಎಂಬಾಗಮಗಳು ಬೇರೆ ಆಗಮಗಳ ಮೇಲೆಯೂ ಬರುವುದುಂಟು.

ಉದಾಹರಣೆ.

ಗಳು—ಲತೆಗಳು, ನೆಲಗಳು, ನೆಲಂಗಳು,(3) ಬಳ್ಳಿಗಳು, ಗೋಡೆಗಳು, ದೇಶಂಗಳು(4) ತಂದೆಗಳು, ಗುರುಗಳು, ವಧುಗಳು, ಹೆಣ್ಣುಗಳು.

---

(1) ಹ. ಗ. ದಲ್ಲಿ ಇವೆಲ್ಲಾ ವ್ಯಂಜನಾಂತಗಳಾಗಿ ಗಳ್, ಅರ್, ಇರ್, ವಿರ್ ದಿರ್, ಕಳ್, ವರ್ ಎಂಬ ರೂಪದಿಂದುಪಯೋಗಿಸಲ್ಪಡುತ್ತವೆ. (2) ಏಕವಚನದಲ್ಲಿ ಬರತಕ್ಕ (*49 a b c d) ಆಗಮಗಳನ್ನು ನೋಡಿ. (3) ಅಕಾರಾಂತ ಕನ್ನಡ ಶಬ್ದಗಳಿಗೆ ಗಳು ಆಗಮ ಬಂದಾಗ ಅನುಸ್ವಾರಾಗಮ ವಿಕಲ್ಪವಾಗಿ ಬರುತ್ತದೆ. (4) ಅಕಾರಾಂತ ಸಂಸ್ಕೃತ ಶಬ್ದಗಳಲ್ಲಿ ನಿತ್ಯವು.

ಅರು—ಅರಸರು, ಭಂಟರು, ರಾಣಿಯರು, ಹುಡುಗರು, ಹುಡುಗಿಯರು, ವಿದ್ವಾಂಸರು, ದೇವಿಯರು, ಬುಧರು, ಹಿರಿಯರು, ಕಿರಿಯರು, ಅಕ್ಕನವರು,(1)

ಇರು—ಹೆಂಡಿರು.

ದಿರು—ತಂದೆದಿರು ತಾಯ್ದಿರು, ಅತ್ತೆದಿರು, ಮಾವಂದಿರು,(2) ಅಕ್ಕಂದಿರು.

ವಿರು—ಅತ್ತೆವಿರು.

ವು —ಅವು, ಇವು, ಯಾವುವು, ಎಲ್ಲವು, ದೊಡ್ಡವು, ಚಿಕ್ಕವು, ಪೆರವು(3)

ಅವು—ಇನಿಯವು, ಕಿರಿಯವು, ನಿಡಿಯವು, ಅಂಥವು.

ಕಳು—ಮಕ್ಕಳು,(4) ನಾಲ್ಕುಳು, ಕೋಟ್ಕಳು (5)

ವರು—ಇರ್ವರು, ಮೂವರು, ಐವರು, ಸಾಸಿರ್ವರು, ನೂರ್ವರು.

ಬರು—ಅನಿಬರು, ಇನಿಬರು, ಎನಿಬರು, ಪಲಂಬರು (ಹಲವರು ಹೊ. ಗ.)

ಬೇರೆ ಆಗಮಗಳಮೇಲೆ

ಕಳು ಬರುವುದಕ್ಕೆ—ಭಟರ್ಕಳು, ಅರಸರ್ಕಳು, ನೆಂಟರ್ಕಳು, ಅತ್ತೆವಿರ್ಕಳು, ತಾಯ್ವಿರ್ಕಳು.

ಗಳು ಬರುವುದಕ್ಕೆ—ಎಲ್ಲವುಗಳು, ದೊಡ್ಡವುಗಳು, ಅಂಥವುಗಳು, ದೊಡ್ಡವರುಗಳು, ಮಾವಂದಿರುಗಳು, ವಿದ್ವಾಂಸರುಗಳು.

---

(1) ಹೊ. ಗ. ದಲ್ಲಿ ಅವರು ಎಂಬ ಪ್ರತ್ಯಯವೂ ರೂಢಿಯಲ್ಲಿದೆ. ತಂದೆಯವರು, ತಾಯಿಯವರು, ಮಾವನವರು ಎಂಬಂತೆ. (2) ಬಂಧುವಾಚಕಗಳಾದ ಅಕಾರಾಂತ ಶಬ್ದಗಳಿಗೆ ದಿರು ಆಗಮ ಬಂದಾಗ ಅನುಸ್ವಾರಾಗಮ ಬರುವುದು. (3) ಸರ್ವನಾಮ ಗುಣವಾಚಕಗಳಿಗೆ ವು, ಅವು ಪ್ರತ್ಯಯ ಬಂದಾಗ ಶಬ್ದದ ಕೊನೆಯಕ್ಷರಕ್ಕೆ ಲೋಪವು ಅದು+ವು=ಅವು, ದೊಡ್ಡದು+ವು=ದೊಡ್ಡವು. ಕಿರಿದು+ಅವು=ಕಿರಿಯವು ಎಂಬಂತೆ. (4) ಮಗು, ಮಗನು, ಮಗಳು ಎಂಬ ಮೂರು ಶಬ್ದಗಳಿಗೂ ಮಕ್ಕಳು ಎಂಬುದು ಒಂದೇ ಬಹುವಚನರೂಪವು. (5) ನಾಡು ಕೋಡು—ಪೂರ್ವಪದಗಳು. ಇವುಗಳಿಗೆ ಜಟಾದೇಶವು.

43. ಕೆಲವು ಶಬ್ದಗಳು ಲಿಂಗವಚನಗಳಲ್ಲಿ ರೂಪ ಭೇದವಾಗುವುವು.

ಶಬ್ದ ನಪುಂ. ಏ. ವ.	ನಪುಂಸಕ ಬಹುವಚನ	ಪುಲ್ಲಿಂಗ ಏಕವಚನ	ಸ್ತ್ರೀಲಿಂಗ ಏಕವಚನ	ಪುಂಸ್ತ್ರೀಲಿಂಗ ಬ. ವಚನ	ಸರೂಪ ಶಬ್ದಗಳು	ವಿಶೇಷ ವಿಷಯಗಳು
ಅದು	ಅವು	ಅವನು ಆತನು	ಅವಳು ಆಕೆ	ಅವರು	ಇದು	ಆಕೆ ಗೌರವಾರ್ಥ
ಯಾವುದು	ಯಾವುವು	ಯಾವನು	ಯಾವಳು	ಯಾರು	....	ಆವುದು, ಆವಂ, ಆರ್.
ಏನು	ಏನು	ಏನು	ಏನು	ಏನು	....	(ಏೞ ಹ. ಗ.)
ನಾನು	....	....	....	ನಾವು	ನೀನು ತಾನು	ಆೞ ಆಂ ಎನ್ನಂ (ಹ.ಗ)
ಒಳ್ಳಿತು }	ಒಳ್ಳಿದುವು	ಒಳ್ಳಿದನು	ಒಳ್ಳಿದಳು	ಒಳ್ಳಿದರು	ಮೆಲ್ಲಿತು ಮೆಟ್ಟಿತು	
ಒಳ್ಳೆಯದು }	ಒಳ್ಳೆಯುವು	ಒಳ್ಳೆಯವನು	ಒಳ್ಳೆಯವಳು	ಒಳ್ಳೆಯವರು	ತೆಳ್ಳಿತು ಅಸಿದು(ಇ)	
ಎಳದು } ಎಳೆಯದು }	ಎಳೆಯುವು	ಎಳೆಯನು	ಎಳೆಯವನು	ಎಳೆಯರು } ಎಳೆಯವರು }		
ಇನಿದು	ಇನಿಯುವು	ಇನಿಯನು	ಇನಿಯಳು	ಇನಿಯರು	ಕರಿದು ಬಿಳಿದು	
ಹಳದು	ಹಳೆಯುವು	ಹಳಬನು	ಹಳಬಳು	ಹಳಬರು	ಹೊಸದು (ತು)	
ಒಂದು	....	ಒಬ್ಬನು	ಒಬ್ಬಳು	ಒಬ್ಬರು	....	ಒಬ್ಬರು ಗೌರವಾರ್ಥದಲ್ಲಿ
ಎರಡು	ಎರಡು	....	....	ಇಬ್ಬರು	ಮೂರು ನಾಲ್ಕು ಐ	[ಬಹುವಚನ
ಕೆಲವು	ಕೆಲವು	....	....	ಕೆಲವರು	ಹಲವು [ದು(ಇ)	ಇದು ನಿತ್ಯ ಬ. ವ.
ಅನಿತು	ಅನಿತು	....	....	ಅನಿಬರು	ಇನಿತು ಎನಿತು	
ಅಲ್ಲಿಯದು	ಅಲ್ಲಿಯುವು	ಅಲ್ಲಿಯವರು	ಅಲ್ಲಿಯವಳು	ಅಲ್ಲಿಯವರು	ಇಲ್ಲಿಯದು ಎಲ್ಲಿ	ಅಲ್ಲೀದು ಇಲ್ಲೀದು ಎಲ್ಲೀ
ದೊಡ್ಡದು	ದೊಡ್ಡವು	ದೊಡ್ಡವರು	ದೊಡ್ಡವಳು	ದೊಡ್ಡವರು	ಚಿಕ್ಕದು [ಯದು	ದು (ಗ್ರಾಮ್ಯ)

44. ಗುರುತ್ವ, ಹಾಸ್ಯ, ನಿಂದೆ ಈ ಅರ್ಥಗಳು ತೋರುವಾಗ ಏಕವಚನಕ್ಕೆ ಬಹುವಚನ ಬರುವುದು.

ಉದಾಹರಣೆ.

ಗುರುತ್ವಕ್ಕೆ—ಗುರುಗಳು ಬಂದರು, ದೊರೆಗಳು ದಯಮಾಡಿಸಿದರು, ಶೃಂಗಗಿರಿ ಸ್ವಾಮಿಗಳ ದರ್ಶನವಾಯ್ತು. ಇಲ್ಲಿ ಗುರು, ದೊರೆ, ಸ್ವಾಮಿ ಎಂಬ ಶಬ್ದಗಳಿಗೆ ಒಬ್ಬೊಬನೇ ಮನುಷ್ಯನೆಂದು ಅರ್ಥವಾದರೂ ಗೌರವಕ್ಕಾಗಿ ಬಹುವಚನ ಪ್ರಯೋಗವು. (ಹೀಗೆಯೇ)

ಹಾಸ್ಯಕ್ಕೆ —ಏನು ಶಾಸ್ತ್ರಿಗಳೇ, ರುಜುಹಾಕುವುದು ಬರುತ್ತದೆಯೇ?

ನಿಂದೆ —ಇದೇನು ದೀಕ್ಷಿತರೆ, ಧೂಮಪಾನ ಮಾಡುತ್ತೀರಿ? ಓಹೋ ದೊಡ್ಡಮನುಷ್ಯರಾದಿರಿ. ದೂರವಿರಿ.

45. ಜಾತಿ (ಗುಂಪು) ತೋರುವಾಗ ಬಹುವಚನ ಬರಬೇಕಾದ ಸ್ಥಳದಲ್ಲಿ ಏಕವಚನವು ವಿಕಲ್ಪವಾಗಿ ಬರುವುದು. ಉದಾ :—

ಪರಸೆಯಲ್ಲಿ ಎತ್ತು (ಎತ್ತುಗಳು) ಕೂಡಿವೆ.
ಕೆರೆಯಲ್ಲಿ ಮೀನು (ಮೀನುಗಳು) ಕುಣಿದಾಡುತ್ತವೆ.
ಮರದಿಂದ ಎಲೆ (ಎಲೆಗಳು) ಉದುರುತ್ತವೆ.

46. ವಿಧೇಯ ವಿಶೇಷಣ ಭಾವನಾಮ ಇವುಗಳಿಗೆ ಬಹುವಚನಕ್ಕೆ ವಿಕಲ್ಪದಿಂದ ಏಕವಚನ ಬರುವುದು.

ಉದಾಹರಣೆ.

ವಿ. ವಿ.— ನೀತಿವಾಕ್ಯಗಳೇ ಲೋಕಕ್ಕೆ ಕನ್ನಡಿ (ಕನ್ನಡಿಗಳು) ನ್ಯಾಯಶಾಸ್ತ್ರಗಳೇ ಪ್ರಭುತ್ವಕ್ಕೆ ಆಸ್ತಿಭಾರವು. (ಆಸ್ತಿಭಾರಗಳು.

ನಮ್ಮ ಸುಕೃತ ದುಷ್ಕೃತಗಳೇ ನಮ್ಮ ಸುಖ ದುಃಖಗಳಿಗೆ ಕಾರಣವು. (ಕಾರಣಗಳು)

ಇಲ್ಲಿ ನೀತಿವಾಕ್ಯಗಳು, ನ್ಯಾಯಶಾಸನಗಳು, ಸುಕೃತ ದುಷ್ಕೃತಗಳೆಂಬ ವಿಶೇಷ್ಯ ಶಬ್ದಗಳ ಅರ್ಥವನ್ನು ಕನ್ನಡಿ, ಆಸ್ತಿಭಾರ, ಕಾರಣ ಎಂಬ ವಿಶೇಷಣಗಳು ವಿಧಾನ (ನಿರ್ಧರ) ಮಾಡುವುದರಿಂದ ಕನ್ನಡಿ ಮೊದಲಾದ ಪದಗಳು ವಿಧೇಯ ವಿಶೇಷಣಗಳಾದುವು.

ಭಾನಾ—ದೀಪಗಳ ಕಾಂತಿ (ಕಾಂತಿಗಳು).

47. ವಿಭಕ್ತಿ (*case*) ಹಿಂದೆ (*41) ಪ್ರಾತಿಪದಿಕಗಳಮೇಲೆ ವಿಭಕ್ತಿ ಪ್ರತ್ಯಯಗಳು ಬರುವುವೆಂದು ಹೇಳಿರುವುದು ಸರಿಯಷ್ಟೆ? ಹಾಗೆ ಬರುವ ಪ್ರತ್ಯಯಗಳು ಯಾವುವು? ಅವುಗಳ ಪ್ರಯೋಜನವೇನು ಎಂಬುದನ್ನು ತಿಳಿಯ ಬೇಕಾಗಿದೆ. "ರಾಮನು ತನ್ನ ಚೆಂಡನ್ನು ಕೈಯಿಂದೆಸೆದನು" ಎಂಬಲ್ಲಿ ರಾಮನು, ತಾನು, ಚಂಡು, ಕೈ ಎಂಬ ಪ್ರಾತಿಪದಿಕಗಳನ್ನು ಮಾತ್ರವೇ ಹೇಳಿದರೆ ಇವುಗ ಳಿಗೆ ಇರುವ ಪರಸ್ಪರ ಸಂಬಂಧವೇನೋ ಗೊತ್ತಾಗಲಿಲ್ಲ. ರಾಮ ಎಂಬುದರ ಮೇಲೆ "ಉ" ಎಂಬ ಪ್ರತ್ಯಯವನ್ನು ಸೇರಿಸುವುದರಿಂದ ಎಸೆಯುವುದೆಂಬ ಕೆಲಸವನ್ನು ಮಾಡಿದವನು ರಾಮನೇ ಎಂದೂ, ಆ ವಾಕ್ಯದಲ್ಲಿ ರಾಮ ಎಂಬ ಪದವು ಕರ್ತೃವಾಯಿತೆಂದೂ ಗೊತ್ತಾಗುವುದು. ಚೆಂಡು ಎಂಬುದಕ್ಕೆ "ಅನ್ನು" ಪ್ರತ್ಯಯವನ್ನು ಸೇರಿಸುವುದರಿಂದ ಅದು "ಎಸೆದನು" ಎಂಬ ಕ್ರಿಯೆಗೆ ಕರ್ಮಪದವೆಂದು ಹೇಳಬಹುದು. "ಕೈ" ಎಂಬುದಕ್ಕೆ "ಇಂದ" ಎಂಬ ಪ್ರತ್ಯಯವನ್ನು ಸೇರಿಸುವುದರಿಂದ ಎಸೆಯುವುದಕ್ಕೆ ಸಾಧನಭೂತನವಾದುದು ಕೈಯೆಂದು ಗೊತ್ತಾಗುವುದು. "ತಾನು" ಎಂಬುವುದಕ್ಕೆ "ಅ ಪ್ರತ್ಯಯ ವನ್ನು ಸೇರಿಸುವುದರಿಂದ ಆ ಚಂಡು ರಾಮನದು ಎಂದು ತಿಳಿಯುತ್ತದೆ. ಹೀಗೆ ಉ, ಅನ್ನು, ಇಂದ, ಅ, ಎಂಬ ಪ್ರತ್ಯಯಗಳು ಈ ವಾಕ್ಯದಲ್ಲಿರುವ ರಾಮ, ಚೆಂಡು, ಕೈ, ತಾನು, ಎಂಬ ಶಬ್ದಗಳಿಗಿರುವ ಪರಸ್ಪರ ಸಂಬಂಧವನ್ನು ತಿಳಿಸಿ ದಂತಾಯಿತು.

ಈಗ ಉ ಅನ್ನು ಮೊದಲಾದ ಪ್ರತ್ಯಯಗಳೇ ಕಾರಕ ವಿಭಕ್ತಿಗಳೆಂದೂ, ಇವುಗಳಿಂದ ತೋರುವ ಕರ್ತೃ, ಕರ್ಮ ಮೊದಲಾದ ಅರ್ಥಗಳೇ ಕಾರಕಾರ್ಥ ಗಳೆಂದೂ, ತಿಳಿಯಬೇಕು. ಆದರಿಂದ

ಸೂ ॥ ಕರ್ತೃ ಮೊದಲಾದ ಕಾರಕಾರ್ಥಗಳನ್ನು ವಿಭಾಗಿಸಿ ಕೊಡುವುದು ವಿಭಕ್ತಿಯೆನಿಸುವುದು. ಈ ವಿಭಕ್ತಿಗಳನ್ನು "ಸುಪ್" ಪ್ರತ್ಯ ಯಗಳೆಂದೂ ಇವು ಸೇರಿರುವ ಪ್ರಾತಿಪದಿಕಗಳನ್ನು ಸುಬಂತ (ಪದ)ಗಳೆಂದೂ ಹೇಳುವರು. ಇವುಗಳ ವಿವರವನ್ನು ಮುಂದಣ ಪಟ್ಟಿಯಲ್ಲಿ ನೋಡಬಹುದು.

ವಿಭಕ್ತಿಗಳು	ಪ್ರತ್ಯಯಗಳು		ಕಾರಕಾರ್ಥಗಳು	ವಿಭಕ್ತ್ಯಂತ ಪದಗಳುಳ್ಳ ವಾಕ್ಯಗಳು	
	ಹೊಸಗನ್ನಡ	ಹಳಗನ್ನಡ		ಹೊಸಗನ್ನಡ	ಹಳಗನ್ನಡ
ಪ್ರಥಮಾವಿಭಕ್ತಿ	ಉ (1)	ಮ್ (೦) (2)	ಕರ್ತೃ (4)	ರಾಮನು ಬಂದನು	ರಾಮಂ ಬಂದಂ
ಸಂಬೋಧನ ಪ್ರಥಮಾವಿಭಕ್ತಿ	ಎ ಏ (1)	ಎ ಏ (3)	ಆಮಂತ್ರಣ(5)	ರಾಮ, ರಾಮಾ (6) ರಾಮನೇ, ಬಾ	ರಾಮ, ರಾಮಾ ರಾಮನೇ ಬಾರೈ
ದ್ವಿತೀಯಾವಿಭಕ್ತಿ	ಅನ್ನು ಅನು, ವ	ಅಮ್	ಕರ್ಮ (7)	ಅವನನು, ಅವನನ್ನು ಕೇಳು ಕೇಳಿದನು ಮುದವ	ರಾಮನಂ ಕಂಡಂ ಅವನಂ ಕೇಳ್
ತೃತೀಯಾವಿಭಕ್ತಿ	ಇಂದ ಇಂದಲಿ	ಇಂ, ಇಂದಂ ಇಂದೆ	ಕರಣ (8)	ಕೊಡಲಿಯಿಂದ ಕೊಡಲಿಯಿಂದ ಕಡಿದನು	ಕೊಡಲಿಯಿಂ, ದಂ ದೆ, ಕಡಿದಂ
ಚತುರ್ಥೀವಿಭಕ್ತಿ	ಗೆ. ಇಗೆ ಕೆ. ಕ್ಕೆ (9)	ಗೆ. ಕೆ. (9)	ಸಂಪ್ರದಾನ (10)	ಅವನಿಗೆ ದಾನಮಾಡು ತಂದೆಗೆ ವಿಧೇಯನಾಗು ಗಿಡಕೆ (ಕ್ಕೆ) ಹೋಗು	ಯತಿಗೆ ಭಿಕ್ಷವ ನಿತ್ತಂ ದೇಶಕ್ಕೆ(ಕೆ)ಕ್ಷೇಮವಾಗಲಿ
ಪಂಚಮೀವಿಭಕ್ತಿ	ದೆಸೆಯಿಂದ ದೆಸೆಯಿಂದಲಿ	ಅತ್ತಣಿಂ ದಂ, ದೆ.	ಅಪಾದಾನ(11)	ಮರದ ದೆಸೆಯಿಂದ ಯಿಂದಲಿ ಎಲೆಯುದುರಿತು	ಮರದತ್ತಾಣಿಂ, ದಂ, ದೆ, ಎಲೆಯುದುರಿತು
ಷಷ್ಠೀವಿಭಕ್ತಿ	ಅ ಆ (12) ಆಯ	ಅ ಆ	ಸಂಬಂಧ	ರಾಮನ ಪುಸ್ತಕ ರಾಮನಾ ಆಡಳಿತ	ರಾಮನ ಪುಸ್ತಕಂ ರಾಮನಾ ಮಾತು ನಿನ್ನ, ನಿನ್ನಯ ಮನೆ
ಸಪ್ತಮೀವಿಭಕ್ತಿ	ಅಲ್ಲಿ, ಅಲಿ ಒಳು, ಎ	ಅಲ್ಲಿ, ಒಳ್ ಒಳಗೆ	ಅಧಿಕರಣ(13)	ದೀನರಲಿ, ದೀನರಲ್ಲಿ ದಯೆ ದೋರು. ಮನೆಯೊಳಗೆ ಇರು.	ದೇವರಲ್ಲಿ, ದೇವರೊಳು ಭಕ್ತಿಯಿಡು, ಮನೆಯೊಳಿರು.

48. ಹಿಂದಿನ ಪುಟದ ಪಟ್ಟಿಯಲ್ಲಿ ಕಂಡ ಸಂಖ್ಯೆಗಳಚಿಹ್ನೆ †(1ರಿಂದ 13) ರ ವರೆಗಿನ ಟಿಪ್ಪಣಿ (Foot Note)

---

†(1) ಈ ಪ್ರತ್ಯಯಗಳನ್ನು ಲೋಪಮಾಡಿ ರಾಮ ಬಂದನು, ರಾಮ ಏನು ಮಾಡುತ್ತೀ ಎಂದು ಹೇಳುವುದುಂಟು. (2) ಅಕಾರಾಂತವಲ್ಲದ ಸ್ವರಾಂತ ವ್ಯಂಜನಾಂತ ಶಬ್ದಗಳ ಮೇಲೆಯೂ, ಇದಕ್ಕೆ ಲೋಪವುಂಟು. ಉದಾ :—ಗುರು+ಮ್=ಗುರು, ತಾಯ್+ಮ್ =ತಾಯ್ (ಇಲ್ಲಿ ಪ್ರಥಮಾವಿಭಕ್ತಿಯಾದ ಮಕಾರ ಲೋಪವಾಯಿತು.) (3) ಇವುಗಳಿಗೂ ವಿಕಲ್ಪವಾಗಿ ಲೋಪವುಂಟು. (4) ವಾಕ್ಯದಲ್ಲಿ ಸ್ವತಂತ್ರಪದ (5) ದೂರದಲ್ಲಿರುವವರನ್ನು ಕರೆಯುವುದು. ಇದಕ್ಕೂ ಷಷ್ಠೀವಿಭಕ್ತಿಗೂ ಕಾರಕಾರ್ಥವಿಲ್ಲ. (6) ರಾಮಾ ಎಂದು ಪ್ಲುತ ಬರುವುದುಂಟು. (7) ಕರ್ತೃವಿನ ಕಾರ್ಯಕ್ಕೆ ವಿಷಯಭೂತವಾದ ಅಥವಾ ಕರ್ತೃವಿನಿಂದ ಅಪೇಕ್ಷಿಸಲ್ಪಡುವ ವಸ್ತು ಅಥವಾ ಕಾರ್ಯ. (8) ಕ್ರಿಯಾಸಾಧನವು ಅಂದರೆ, ಯಾವ ವಸ್ತುವಿನ ಸಹಾಯವಿಲ್ಲದೆ ಕೆಲಸ ನಡೆಯುವುದಿಲ್ಲವೋ ಅಂತಹ ವಸ್ತು. (9) ಇವು ನಪುಂಸಕಲಿಂಗದಲ್ಲಿ ಮಾತ್ರ ಬರುವುವು. ಇಗೆ ಎಂಬುದು ಪುಂಸ್ತ್ರೀಲಿಂಗ ಶಬ್ದಗಳ ಮೇಲೆ ಸಾಧಾರಣವಾಗಿ ಬರುವುದು. ಅಣ್ಣನಿಗೆ, ಅಕ್ಕನಿಗೆ, ದೇವಂಗೆ, ಮನುಷ್ಯನಿಗೆ (ಇತ್ಯಾದಿ) (10) ಕೊಟ್ಟ ವಸ್ತುವಾಗಲಿ ಅಥವಾ ಒಂದು ಪ್ರಯೋಜನವಾಗಲಿ ಯಾರನ್ನು ಅಥವಾ ಯಾವುದನ್ನು ಸೇರುವುದೋ ಆ ಮನುಷ್ಯ ಅಥವಾ ಆ ವಸ್ತು ಸಂಪ್ರದಾನವೆನಿಸುವುದು. (11) ಯಾವ ವಸ್ತುವಿನಿಂದ ಅಗಲಿಕೆಯಾಗಲಿ ಭಯವಾಗಲಿ ತೋರುವುದೋ ಅಂತಹ ವಸ್ತು ಅಪಾದಾನವೆನಿಸುವುದು. (12) ಅಯ ಎಂಬ ವಿಭಕ್ತಿಯು ಪ್ರಾಯಶಃ ಪುರುಷತ್ರಯಾರ್ಥಕ ಸರ್ವನಾಮ (*34) ಗಳಲ್ಲಿ ಮಾತ್ರ ಬರುವುದು, (13) ಆಧಾರ ವಸ್ತುವೇ ಅಧಿಕರಣವು.

49. ಹಿಂದೆ (* 41) ಪ್ರಾತಿಪದಿಕಗಳಮೇಲೆ ಬಹುವಚನದಲ್ಲಿ ಬರುವ ಆಗಮಗಳನ್ನು ಹೇಳಿರುವುದು ಸರಿಯಷ್ಟೆ? ಈಗ ಏಕವಚನದಲ್ಲಿ ಬರುವ ಆಗಮಗಳು ತಿಳಿಸಲ್ಪಡುವುವು.

(*a*) ಅಕಾರಾಂತ ಪುಲ್ಲಿಂಗ ಸ್ತ್ರೀಲಿಂಗ ಪ್ರಕೃತಿಗಳಿಗೂ ಪ್ರಾಣಿವಾಚಕ(1)ಗಳಾದ ಕೆಲವು ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೂ ವಿಭಕ್ತಿಪ್ರತ್ಯಯಗಳು ಸೇರುವಾಗ ನಕಾರಾಗಮ ಬರುವುದು.

ಉದಾಹರಣೆ.

(ಪು) ಅಣ್ಣನು, ಅಣ್ಣನೆ, ಅಣ್ಣನನ್ನು. ಅಣ್ಣನಿಂದ, ಅಣ್ಣನಿಗೆ (ಇ)
(ಸ್ತ್ರೀ) ಅಕ್ಕನು, ಅಕ್ಕನೇ, ಅಕ್ಕನನ್ನು, ಅಕ್ಕನಿಂದ, ಅಕ್ಕನಿಗೆ (ಇ)
ಪ್ರಾಣಿವಾಚಕಗಳಿಗೆ—ತೋಳನು, ಬಸವನಿಗೆ, ಕೂರ್ಮನನ್ನು, ಸರ್ಪನಿಗೆ, ಗರುಡನಲ್ಲಿ (ಇ)

ನೆಲ, ಮರ, ಎಂಬ ಶಬ್ದಗಳು ಪ್ರಾಣಿವಾಚಕಗಳಲ್ಲದಿದ್ದರೂ ನಕಾರಾಗಮ ಬರುವುದುಂಟು. ನೆಲನಂ, ನೆಲನ, ಮರನು, ಮರನಿಂ, ಮರನೋಳ್(ಇ)

(*b*) ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೆ ಏಕವಚನದಲ್ಲಿ ಪ್ರಥಮಾ, ದ್ವಿತೀಯಾ ವಿಭಕ್ತಿಗಳು ಪರವಾದಾಗ ವಕಾರಾಗಮವೂ(2) ಚತುರ್ಥಿಗೆ ವಿಕಲ್ಪವಾಗಿ ಕಕಾರಾಗಮವೂ, ತೃತೀಯೆ, ಪಂಚಮಿ ಷಷ್ಠೀ ಸಪ್ತಮೀವಿಭಕ್ತಿಗಳಲ್ಲಿ ದಕಾರಾಗಮವೂ ಬರುವುವು.

ಉದಾಹರಣೆ.

ವಕಾರಾಗಮಕ್ಕೆ—ಗುಣವು, ಮನವು, ಜನವು, ದೀಪವನ್ನು, ಮರವನ್ನು (3)
ಚತುರ್ಥಿಯ ಕೆಕಾರಕ್ಕೆ—ಮರಕ್ಕೆ, ಬನಕ್ಕೆ (ಬನ+ಕ್+ಕೆ)=ಬನಕ್ಕೆ ಹಣಕ್ಕೆ.
ವಿಕಲ್ಪಕ್ಕೆ—ಮರಕೆ, ಬನಕೆ, ಹಣಕೆ (ಇ)
ತೃತೀಯೆ ಮೊದಲಾದುದಕ್ಕೆ—ಹಣದಿಂದ, ಮರದಿಂದ, ಜನದ, ದೀಪದಲ್ಲಿ, ಕಾರ್ಯದೊಳು.

(*c*) ಉವರ್ಣ ಋವರ್ಣ ಓ ಔಕಾರಾಂತ ಪ್ರಕೃತಿಗಳಿಗೆ ತೃತೀಯೆ ಪಂಚಮೀ ಷಷ್ಠೀ ಸಪ್ತಮೀವಿಭಕ್ತಿ ಪ್ರತ್ಯಯಗಳು ಪರವಾದಾಗ ಲಿಂಗತ್ರಯ ಭೇದವಿಲ್ಲದೆ "ಇನ್" ಆಗಮ ವಿಕಲ್ಪವಾಗಿ ಬರುವುದು.

---

(1) ಪ್ರಾಣಿವಾಚಕವೆಂದರೆ—ಪ್ರಸಿದ್ಧವಾದ ಕೆಲವು ಪಶುಪಕ್ಷ್ಯಾದಿಗಳು ಅವುಗಳನ್ನು ಪುಲ್ಲಿಂಗದಂತೆ ಪ್ರಯೋಗಿಸುವುದುಂಟು. (2) ಹ. ಗ. ದಲ್ಲಿ ಮಕಾರನಕಾರಾಗಮಗಳೂ ಉಂಟು. ಜನಮಂ, ವನಮಂ, ಪಣಂ, ನೆಲನಂ ಎಂಬಂತೆ. (3) ಮರಶಬ್ದಕ್ಕೆ ವಕಾರಾಗಮವೂ ಉಂಟು.

ಉದಾಹರಣೆ.

ಉಕಾರಾಂತಕ್ಕೆ ಪುಲ್ಲಿಂಗ—ಮನುವಿನಿಂ, ಕರುವಿನ, ಪ್ರಭುವಿನ ದೆಸೆಯಿಂದ
ಮನುವಿಂ(1) ಕರುವ, ಪ್ರಭುವಿನ ದೆಸೆಯಿಂದ
ಸ್ತ್ರೀ ,, —ವಧುವಿನಿಂದ, ವಧುವಿಂದ, ವಧುವಿನ, ವಧುವ.
ನಪುಂ —ಊರಿನಿಂದ, ಊರಿಂದ, ಊರಿನ, ಊರ.
ಋಕಾರಾಂತಕ್ಕೆ ,, —ಭ್ರೂವಿನಿಂದ, ಭ್ರೂವಿಂದ, ಭ್ರೂವಿನೊಳ್,
ಭ್ರೂವೊಳ್.
ಪುಂಸ್ತ್ರೀ—ಪಿತೃವಿನಿಂದ, ಪಿತೃವ, ಮಾತೃವಿನಲ್ಲಿ, ಮಾತೃವಲ್ಲಿ.
ಓ ,, ಗೋವಿನಿಂದ, ಗೋವಿಂದ, ನೋವಿನಿಂದ, ನೋವಿಂದ (2)
ಔ ,, ಗ್ಲೌ (ಚಂದ್ರ) ವಿನ, ಗ್ಲೌವ, ನೌವಿನಿಂದ, ನೌವಿಂದ (3)

(*d*) ಸರ್ವನಾಮ, ಗುಣವಾಚಕ, ಸಂಖ್ಯಾವಾಚಕ, ಪರಿಮಾಣವಾಚಕ, ಪ್ರಕಾರವಾಚಕಗಳಿಗೆ ತೃತೀಯಾ, ಪಂಚಮೀ, ಷಷ್ಠೀ, ಸಪ್ತಮೀ ವಿಭಕ್ತಿ ಪ್ರತ್ಯಯಗಳು ಪರವಾದಾಗ ನಪುಂಸಕಲಿಂಗದಲ್ಲಿ ಏಕವಚನ ಬಹುವಚನಗಳಿಗೆ ಅರ್ (4) ಆಗಮ ಬರುವುದು. ದಿಗ್ವಾಚಕ(5)ಗಳಿಗೆ ಏಕವಚನದಲ್ಲಿ ಅಣ್ ಆಗಮ ಬರುವುದು.

ಉದಾಹರಣೆ.

ಸರ್ವನಾಮಕ್ಕೆ—ಏ. ವ. ಅದು+ಅರ್+ಇಂದ=ಅದರಿಂದ, ಅದರ, ಅದರಲ್ಲಿ.
ಬ. ವ. ಅವು+ಅರ್+ಇಂದ=ಅವರಿಂದ, ಅವರ, ಅವರಲ್ಲಿ.
ಗುಣವಾಚಕ ,,—ಏ. ವ. ಪಿರಿದು+ಅರ್+ಇಂದ=ಪಿರಿದರಿಂದ, ಹಿರಿದು(ಹೊ.ಗ.)
ಬ. ವ. ಪಿರಿಯವು+ಅರ್+ಇಂದ=ಪಿರಿಯವರಿಂದ.
ಕಿರಿಯವರಲ್ಲಿ, ದೊಡ್ಡವರ ದೆಸೆಯಿಂದ.
ಪರಿಮಾಣ ,,—ಬ.ವ. ಕೆಲವು+ಅರ್+ಇಂದ=ಕೆಲವರಿಂದ. ಹಲವರಲ್ಲಿ.
ಅಷ್ಟು+ಅರ್+ಇಂದ=ಅಷ್ಟರಿಂದ, ಅಷ್ಟರಲ್ಲಿ.
ಅನಿತು+ಅರ್+ಇಂದ=ಅನಿತರಿಂದ, ಅನಿತರ.
ಪ್ರಕಾರ ,,—ಏ. ವ. ಅಂಥದು+ಅರ್+ಇಂದ=ಅಂಥದರಿಂದ, ಅಂಥದರ.
ಬ. ವ. ಅಂಥವು+ಅರ್+ಇಂದ=ಅಂಥವರಿಂದ,
ಅಂಥವರೊಳ್. ಅಂಥಾದ್ದು, ಇಂಥಾದ್ದು, ಎಂಥಾದ್ದು (ಹೊ. ಗ.) ದಲ್ಲಿ ವಾಡಿಕೆ.

---

(1) ಇನಾಗಮವಿಲ್ಲದುದಕ್ಕೆ. (2) ನೋವು ಪ್ರಕೃತಿ. (3) ನೌ ಪ್ರಕೃತಿ. (4) ಹ.ಗ. ದಲ್ಲಿ ಅಙ್ ಎಂದು ಹೇಳುವರು. (5) ದಿಕ್ಕುಗಳನ್ನು ಹೇಳುವ ಶಬ್ದಗಳು.

ದಿಗ್ವಾಚಕಕ್ಕೆ —ಬಡಗು+ಅಣ್+ಇಂದ= ಬಡಗಣಿಂದ, ಮೇಗಣ್ಗೆ, ಕೆಳಗಣ, ಹಿಂದಣ, ಮುಂದಣ, ನಡುವಣ, ಅತ್ತಣ, ಇತ್ತಣ್ಗೆ, ಎತ್ತಣ(1)

50. ಇದುವರೆಗೆ ಹೇಳಿದ ನಾಮವಿಭಕ್ತಿ ಪ್ರತ್ಯಯಗಳು ಪ್ರಾತಿಪದಿಕಗಳಮೇಲೆ ಬೇರೆ ಬೇರೆ ಕಾರಕಾರ್ಥಗಳಲ್ಲಿಯೂ ಬರುವುದುಂಟು.

ಉದಾಹರಣೆ.

ಪ್ರಥಮಾವಿಭಕ್ತಿ— ಕರ್ತ್ರರ್ಥದಲ್ಲಿ- { ಅಕರ್ಮಕ (*76) - ಕೂಸು ಮಲಗಿತು.
ಸಕರ್ಮಕ (,,) - ಕೂಸು ಹಾಲನ್ನು ಕುಡಿಯಿತು.

,, —ಕರ್ಮಾರ್ಥ -ಅಕ್ಕಸಾಲೆಯಿಂದ ಚಿನ್ನವು ಕರಗಿಸಲ್ಪಟ್ಟಿತು. (*77*d*)

, ,, (*77e) ಯಾಚಕನಿಂದ ಅರಸನು ಹಣವನ್ನು ಕೇಳಲ್ಪಟ್ಟನು. (2)

ದ್ವಿತೀಯಾ — ,, ಗೋಪಾಲನು ಹಸುಗಳನ್ನು ಮೇಯಿಸಿದನು.

ತೃತೀಯಾ —ಕರ್ತ್ರರ್ಥ ,, -ಕಪಿಗಳಿಂದ ಲಂಕೆಯು ಮುತ್ತಲ್ಪಟ್ಟಿತು.

,, —ಕರಣಾರ್ಥ -ಲೇಕಣಿಯಿಂದ ಬರೆದನು.

,, —ಕಾರಣ -ವಿದ್ಯೆಯಿಂದ ಜ್ಞಾನವುಂಟಾಗುವುದು.

,, —ಲಕ್ಷಣ (ಗುರುತು)-ಹೊಗೆಯಿಂದ ಬೆಂಕಿಯನ್ನು ತಿಳಿದರು.

,, —ಒಡನೆಯೆಂಬರ್ಥ-ಗಂಡನೊಡನೆ ಹೆಂಡತಿ ಬಂದಳು.
ಗುರುವಿನ ಸಂಗಡ ಶಿಷ್ಯನು ಬಂದನು.

ಚತುರ್ಥೀ —ಸಂಪ್ರದಾನ -ಯಾಚಕನಿಗೆ ದಾನವನ್ನು ಕೊಟ್ಟನು.
ಅತಿಥಿಗೆ ಅನ್ನವನ್ನಿಕ್ಕಿದನು.

, —ಕಾರಣ -ವಿನಾಶಕ್ಕೆ ವಿಪರೀತಬುದ್ಧಿ.

—ಪ್ರತಿನಿಧಿ -ರಾಮನಿಗೆ (ಬದಲು) ಕೃಷ್ಣನು.

,, —ಆಶೀರ್ವಾದ -ನಿನಗೆ ಶುಭವಾಗಲಿ.

, —ತಾದರ್ಥ್ಯ (3)-ಗೋಡೆಗೆ ಮಣ್ಣು. ಮೊಸರಿಗೆ ಹಾಲುಬೇಕು.

---

(1) ದಿಗ್ವಾಚಕಗಳಿಗೆ ಪ್ರಥಮಾ, ದ್ವಿತೀಯಾ, ಸಪ್ತಮಿಗಳಿಗೆ ಅಣಾಗಮವಿಲ್ಲ. ಮೂಡಲ್ ಪ್ರಥಮಾ, ಮೂಡಲ್ ದ್ವಿತೀಯಾ, ಮೂಡಲ್ ಸಪ್ತಮೀ, ಮೂಡಲಲ್ಲಿ, ಮೊದಲಲ್ಲಿ ಎಂದೂ ಉಂಟು. (2) ದ್ವಿಕರ್ಮಕ ಪ್ರಯೋಗ. ಇಲ್ಲಿ ಹಣವನ್ನು ಮುಖ್ಯಕರ್ಮ. (3) ಅದಕ್ಕೋಸ್ಕರವೇ ಎಂಬರ್ಥವು.

ಚತುರ್ಥೀ ವಿಭಕ್ತಿ—ಸಾಮ್ಯ -ಅದಕ್ಕೆ ಇದು ಸರಿ. ಗುಣವು ಚಿನ್ನಕ್ಕೆ ಸಮಾನವು.

ಪಂಚಮೀ ,, —ಅಪಾದಾನ -ಕೋಡಿಯ ದೆಸೆಯಿಂದ ನೀರುಹರಿಯಿತು.
ಮರದ ದೆಸೆಯಿಂದ ಹಣ್ಣು ದುರಿತು.
(ಹ. ಗ.) ಮರದತ್ತಣಿಂ ಪಣ್ಣುರುಳ್ದುದು.

ಷಷ್ಠೀ ,, —ಸಂಬಂಧ -ಇದರಲ್ಲಿ ಅನೇಕ ಸಂಬಂಧಗಳಿವೆ.

1. ಕುಲಸಂಬಂಧ - ನಮ್ಮ ತಂದೆ, ನಿಮ್ಮ ಜ್ಞಾತಿ.
2. ಜಾತಿ ,, - ಮಲ್ಲಿಗೆಯ ಹೂ, ಹುಣಸೆಯ ಹಣ್ಣು.
3. ಅವಯವ - ಕೈಯ ಬೆರಳು, ಮರದ ಕೊಂಬೆ.
4. ಸ್ವಾಮಿ - ಮನೆಯ ಯಜಮಾನ, ನಾಡಿನ ಒಡೆಯ.
5. ಸಮೀಪ - ಮನೆಯ ಮುಂದೆ, ಬಾಗಿಲಹತ್ತಿರ.
6. ಲಕ್ಷಣ (ಗುರುತು) - ಗಡ್ಡದ ಮುದುಕ, ಟೋಪಿಯ ಹುಡುಗ.

ಸಪ್ತಮೀ ,, —ಅಧಿಕರಣ - (*48) ಮನೆಯಲ್ಲಿ ವಾಸ, ಹಾಲಿನಲ್ಲಿ ಸಿಹಿ, ನೀರಿನಲ್ಲಿ ತಂಪು.
—ಅವಧಾರಣೆ(1) - ಕವಿಗಳಲ್ಲಿ ಕಾಳಿದಾಸನು ಉತ್ತಮನು.
ಮರಗಳಲ್ಲಿ ಶ್ರೀಗಂಧ ಒಳ್ಳೆಯದು.
ಶಕ್ತ್ಯರ್ಥ - ವೈದ್ಯದಲ್ಲಿ ಗಟ್ಟಿಗ.

51. ಮೇಲಣ ಸೂತ್ರದಿಂದ ಇಂಥಿಂಥ ಅರ್ಥದಲ್ಲಿ ಇಂಥಿಂಥ ವಿಭಕ್ತಿಯನ್ನೇ ಉಪಯೋಗಿಸಬೇಕೆಂದು ಗೊತ್ತಾದರೂ, ಕೆಲವು ಸಂದರ್ಭಗಳಲ್ಲಿ ಈ ನಿಯಮಕ್ಕೆ ಒಳಪಡದೆ, ಒಂದು ವಿಭಕ್ತಿಯ ಅರ್ಥದಲ್ಲಿ ಮತ್ತೊಂದನ್ನು ಉಪಯೋಗಿಸುವುದುಂಟು. ಅದಕ್ಕೆ ವಿಭಕ್ತಿ ಪಲ್ಲಟವೆಂದು ಹೆಸರು.

ಉದಾಹರಣೆ.

	ನಿಜವಾಗಿ ಇರಬೇಕಾದ ವಿಭಕ್ತಿ.	ಪಲ್ಲಟದಿಂದ ಬಂದಿರುವ ವಿಭಕ್ತಿ.
ಸಪ್ತಮಿಗೆ ಪ್ರಥಮೆ(2)—	ನಿನ್ನೆ ರಾತ್ರಿಯಲ್ಲಿ ಬಂದೆನು. (3)	ನಿನ್ನೆ ರಾತ್ರಿ ಬಂದೆನು.

(1) ಸಮೂಹದಲ್ಲಿ ಒಂದನ್ನು ವಿಶೇಷಿಸಿ ಹೇಳುವಾಗ ಸಮೂಹವಾಚಕದ ಮೇಲೆ ಸಪ್ತಮೀವಿಭಕ್ತಿ ಬರುವುದು. (2) ಸಪ್ತಮಿಯ ಅರ್ಥದಲ್ಲಿ ಪ್ರಥಮೆ. (3) ಬರು ಎಂಬ ಕ್ರಿಯೆಗೆ ರಾತ್ರಿ ಅಧಿಕರಣವಾಗಿರುವುದರಿಂದ ರಾತ್ರಿ ಶಬ್ದದಮೇಲೆ ಸಪ್ತಮಿ ಬರಬೇಕು.

ಪ್ರಥಮೆಗೆ ದ್ವಿತೀಯೆ	—ಜ್ಞಾನವುಳ್ಳವನು (1)	ಜ್ಞಾನವನ್ನುಳ್ಳವನು.
ತೃತೀಯೆಗೆ ,,	—ಮಣ್ಣಿನಿಂದ ಮುಚ್ಚಿದನು. (2)	ಮಣ್ಣನ್ನು ಮುಚ್ಚಿದನು
ಪಂಚಮಿಗೆ ತೃತೀಯೆ	—ಮೋಡದ ದೆಸೆಯಿಂದ ಮಳೆ ಸುರಿಯಿತು.(3)	ಮೋಡದಿಂದ ಮಳೆ ಸುರಿಯಿತು.
	—ಬಂಡಿಯ ದೆಸೆಯಿಂದ ಬಿದ್ದನು.	ಬಂಡಿಯಿಂದ ಬಿದ್ದನು.
ಷಷ್ಠಿಗೆ ಚತುರ್ಥಿ	—ನನ್ನ ಯಜಮಾನ (4)	ನನಗೆ ಯಜಮಾನ.
ದ್ವಿತೀಯೆಗೆ ,,	—ಊರನ್ನು ಸೇರಿದನು. (5)	ಊರಿಗೆ ಸೇರಿದನು.
ತೃತೀಯೆಗೆ ಪಂಚಮಿ	—ಬೆತ್ತದಿಂದ ಹೊಡೆದನು (6)	ಬೆತ್ತದ ದೆಸೆಯಿಂದ ಹೊಡೆದನು.
ಸಪ್ತಮಿಗೆ ಷಷ್ಠಿ	—ಹರಳಿನಲ್ಲಿ ಎಣ್ಣೆ (7) ಕಾಡಿನಲ್ಲಿ ಮೃಗಗಳು	ಹರಳೆಣ್ಣೆ ಕಾಡಿನ ಮೃಗಗಳು.
ತೃತೀಯೆಗೆ ,,	—ಹಣದಿಂದ ಸುಖ (8)	ಹಣದ ಸುಖ
ದ್ವಿತೀಯೆಗೆ ,,	—ನನ್ನನ್ನು ಕೇಳಿದನು (9)	ನನ್ನ ಕೇಳಿದನು.
ಚತುರ್ಥಿಗೆ ,,	—ಕೆಲಸಕ್ಕೆ ಪ್ರಯತ್ನ(10)	ಕೆಲಸದ ಪ್ರಯತ್ನ.
ದ್ವಿತೀಯೆಗೆ ಸಪ್ತಮಿ	—ಅವರನ್ನು ಕೇಳು (11)	ಅವರಲ್ಲಿ ಕೇಳು.
ತೃತೀಯೆಗೆ ,,	—ಕುಡುಗೋಲಿಂದ ಕುಯ್ದನು (12)	ಕುಡುಗೋಲಲ್ಲಿ ಕುಯ್ದನು.

52. ಮಕಾರ ನಕಾರಗಳಿಗೆ ಮುಂದೆ ವರ್ಗೀಯವಲ್ಲದ (*6) ವ್ಯಂಜನವಿದ್ದರೆ ಸೊನ್ನೆ ಆದೇಶವಾಗುವುದು. ವರ್ಗೀಯವ್ಯಂಜನವಿದ್ದರೆ ಆದೇ ವರ್ಗದ ಪಂಚಮಾಕ್ಷರವು ವಿಕಲ್ಪವಾಗಿ ಆದೇಶ ಬರುವುದು.

---

(1) ಉಳ್ ಧಾತುವಿಗೆ ಜ್ಞಾನ ಕರ್ತೃವಾದುದರಿಂದ ಪ್ರಥಮ ಬರಬೇಕು. (2) ಮುಚ್ಚುವುದಕ್ಕೆ ಮಣ್ಣು ಕರಣವಾದುದರಿಂದ ತೃತೀಯ ಬರಬೇಕು. (3) ಅಗಲಿಕೆ ತೋರುವುದರಿಂದ ಪಂಚಮಿ ಬರಬೇಕು. (4) ಸಂಬಂಧಾರ್ಥದಲ್ಲಿ ಷಷ್ಠಿ ಬರಬೇಕು. (5) ಸೇರು ಧಾತುವಿಗೆ ಕರ್ಮ ಬೇಕಾಗಿರುವುದರಿಂದ ದ್ವಿತೀಯೆ ಬರಬೇಕು. (6) ಕರಣಾರ್ಥದಲ್ಲಿ ತೃತೀಯೆ ಬರಬೇಕು. (7) ಅಧಿಕರಣಾರ್ಥದಲ್ಲಿ ಸಪ್ತಮಿ ಬರಬೇಕು. (8) ಕಾರಣಾರ್ಥದಲ್ಲಿ ತೃತೀಯೆ ಬರಬೇಕು. (9) ಕೇಳು ಧಾತುವಿಗೆ ಕರ್ಮ ಬೇಕಾಗಿರುವುದರಿಂದ ದ್ವಿತೀಯೆ ಬರಬೇಕು. (10) ಉದ್ದೇಶಾರ್ಥದಲ್ಲಿ ಚತುರ್ಥಿ ಬರಬೇಕು. (11) ಕರ್ಮಾರ್ಥದಲ್ಲಿ ದ್ವಿತೀಯೆ ಬರಬೇಕು. (12) ಕರಣಾರ್ಥದಲ್ಲಿ ತೃತೀಯೆ ಬರಬೇಕು.

ಉದಾಹರಣೆ.

ಅವರ್ಗೀಯ ವ್ಯಂಜನಕ್ಕೆ :—ನೀಮ್+ಶ್ರೋತ್ರಿಯರ್=ನೀಂಶ್ರೋತ್ರಿಯರ್.
ಆಮ್+ಸುಖಿಗಳ್=ಆಂಸುಖಿಗಳ್.
ನೀನ್+ಶುಂಠಂ=ನೀಂಶುಂಠಂ.
ಆಮ್+ಸೇವ್ಯಂ=ಆಂಸೇವ್ಯಂ.
ತಾಮ್+ವಯಸ್ಯಂ=ತಾಂವಯಸ್ಯಂ.

ವರ್ಗೀಯ ವ್ಯಂಜನಕ್ಕೆ—ಅವಮ್+ಕಟ್ಟಾಳ=ಅವಙ್ಕಟ್ಟಾಳ್, (1)
ಅವಂಕಟ್ಟಾಳ್.
ನೀಮ್+ಪುರುಷಂ=ನೀಮ್ಪುರುಷಂ=ನೀಂಪುರುಷಂ.
ತಾನ್+ಜಾಣಂ=ತಾಞ್ಜಾಣಂ=ತಾಂಜಾಣಂ.
ತಾಮ್+ತೆತ್ತಿಗರ್+ತಾನ್ತೆತ್ತಿಗರ್=ತಾಂತೆತ್ತಿಗರ್.

53. ಪ್ರಥಮಾ ವಿಭಕ್ತ್ಯಂತವಾದ ವಿಶೇಷಣಗಳು ಬೇರೆ ವಿಭಕ್ತ್ಯಂತವಾದ ವಿಶೇಷ್ಯದ (*$\frac{34}{1}$) ವಿಭಕ್ತಿಯನ್ನನುಸರಿಸುವುದುಂಟು.

ಉದಾಹರಣೆ.

ಧೀರನೂ, ಶೂರನೂ, ಸುಂದರ ಶರೀರನೂ, ಆದ ವರನಿಗೆ ಕನ್ನಿಕೆಯನ್ನು ಕೊಡಬೇಕು. ಇಲ್ಲಿ ಧೀರ, ಶೂರ, ಸುಂದರ ಶರೀರ ಎಂಬ ವಿಶೇಷಣಗಳ ಮೇಲೆ ಇರುವ ಪ್ರಥಮಾ ವಿಭಕ್ತಿಯು ವರ ಎಂಬ ವಿಶೇಷ್ಯದಲ್ಲಿರುವ ಚತುರ್ಥೀ ವಿಭಕ್ತಿಯಲ್ಲಿ ಅನ್ವಯಿಸಲ್ಪಟ್ಟು ಧೀರನಿಗೆ, ಶೂರನಿಗೆ, ಸುಂದರ ಶರೀರನಿಗೆ ಎಂದು ಅನ್ವಯವಾಗುವುದು.

54. ಭಿನ್ನ(2)ಲಿಂಗಗಳಾದ ಏಕವಚನದ ಅನೇಕ ಕರ್ತೃಪದಗಳುಳ್ಳ ವಾಕ್ಯದಲ್ಲಿ ಬಹುವಚನ ಕ್ರಿಯಾಪದ ಬಂದು, ಅದು ಕೊನೆಯ ಕರ್ತೃವಿನ ಲಿಂಗವನ್ನು ಅನುಸರಿಸುವುದು.

ಉದಾಹರಣೆ.

ಕ್ರಿಯೆ

ಮಗನೂ, ಮಗಳೂ, ಕುದುರೆಯೂ ಬಂದುವು. (ನ)
ಕುದುರೆಯೂ, ಮಗನೂ, ಮಗಳೂ ಬಂದರು. (ಸ್ತ್ರೀ)
ಮಗಳೂ, ಕುದುರೆಯೂ, ಮಗನೂ ಬಂದರು. (ಪು)

---

(1) ಈ ರೂಪದಿಂದ ಅಂದರೆ ಅನುನಾಸಿಕವನ್ನು ಬರೆದು ಬರೆಯುವುದು ಕನ್ನಡದಲ್ಲಿ ಅಪರೂಪವು. (2) ಭಿನ್ನಲಿಂಗ=ಬೇರೆಬೇರೆ ಲಿಂಗಗಳು.

55. ವಾಕ್ಯದಲ್ಲಿ ಸಂದರ್ಭಾನುಸಾರ ಕರ್ತೃ, ಕರ್ಮ, ಕ್ರಿಯೆ, ಸಮುಚ್ಚಯ (104-6) ಇವುಗಳನ್ನು ಅಧ್ಯಾಹಾರ (Understood) ಮಾಡಬಹುದು.

ಉದಾಹರಣೆ.

ಕರ್ತೃವಿನ ಅಧ್ಯಾಹಾರಕ್ಕೆ :—ಅಹಾ! ಶೂರನಲ್ಲವೇ? (ಅವನು)
ಕರ್ಮ ,, ಅವನಿಗೆ ಕೊಡಬಹುದೆ? (ಅದನ್ನು)
ಕ್ರಿಯೆ ,, ಇವನು ಸಾಮಾನ್ಯನಾಗಿರುವನೇ? (ಇಲ್ಲ)
ಸಮುಚ್ಚಯ (102-6) ಅವನೂ ಬರುತ್ತಾನೋ? (ಇನ್ನೊಬ್ಬನೂ)

ಇಲ್ಲಿ ಅವನು, ಅದನ್ನು, ಇಲ್ಲ, ಇನ್ನೊಬ್ಬನೂ ಎಂಬುವು ಅಧ್ಯಾಹಾರ್ಯ ಪದಗಳು.

ಇಂತು ಶಬ್ದಲಕ್ಷಣಂ.

IV ಸಮಾಸಪ್ರಕರಣಂ.

56. ಭಾಷೆಯಲ್ಲಿ ಪದಗಳನ್ನು ಬಿಡಿಬಿಡಿಯಾಗಿ ಉಪಯೋಗಿಸೋಣವೆಂದರೆ, ಹೆಚ್ಚಾದ ಮತ್ತು ವಿಶೇಷವಾದ ಅರ್ಥವನ್ನು ಅಲ್ಪಸಂಖ್ಯೆಯುಳ್ಳ ಶಬ್ದಗಳಲ್ಲಣಗಿಸಿ ಹೇಳುವುದು ಸಾಧ್ಯವಲ್ಲ. ಆದರಿಂದ ಅನೇಕ ಪದಗಳನ್ನು ಒಟ್ಟುಗೂಡಿಸಿ, ಒಂದೇ ಪದವನ್ನಾಗಿ ಮಾಡುವುದುಂಟು. ಇದಕ್ಕೆ ಸಮಾಸವೆಂದು ಹೆಸರು. (ಸಮಾಸವೆಂದರೆ ಸಂಕ್ಷೇಪರೂಪವೆಂದರ್ಥ) ಹೀಗೆ ಒಟ್ಟುಗೂಡಿಸುವಾಗ ಅವುಗಳ ಮಧ್ಯದಲ್ಲಿರುವ ವಿಭಕ್ತಿಪ್ರತ್ಯಯಗಳು ಲೋಪವಾಗಿ ಅಕ್ಷರ ಸಂಖ್ಯೆ ಕಡಮೆಯಾದರೂ ಅರ್ಥಕ್ಕೇನೂ ಕೊರತೆಯಿಲ್ಲ.

ಹೀಗೆ ಎರಡು ಪದಗಳನ್ನು ಕೂಡಿಸಿದ ಬಳಿಕ ಆ ಒಟ್ಟನ್ನು ಮೊದಲನೆಯ ಪದವಾಗಿ ಇಟ್ಟುಕೊಂಡು ಮುಂದೆ ಇದೇ ರೀತಿಯಲ್ಲಿ ಒಂದೊಂದು ಪದವನ್ನೇ ಸೇರಿಸುತ್ತಾ ಒಂದು ದೊಡ್ಡ ಸಮಾಸಪದವನ್ನಾಗಿ ಮಾಡಬಹುದು. ಸಮಾಸಪದಕ್ಕೆ ಸಮಸ್ತಪದವೆಂದೂ, ಸಮಾಸ ಮಾಡದೆ ಬೇರೆ ಬೇರೆಯಾಗಿ ದುವುದಕ್ಕೆ ವ್ಯಸ್ತಪದ ಅಥವಾ ವಿಗ್ರಹವಾಕ್ಯವೆಂದೂ ಹೇಳುವರು.

ಉದಾಹರಣೆ.

ಸಮಾಸಪದ.	ವ್ಯಸ್ತಪದ ಅಥವಾ ವಿಗ್ರಹವಾಕ್ಯ.
ನೀಲೋತ್ಪಲ	ನೀಲವಾದ+ಉತ್ಪಲ
ದೊಡ್ಡಮನುಷ್ಯ	ದೊಡ್ಡವನು+(ಆದ)ಮನುಷ್ಯ (1)

(1) ಈ ತರದ (*65 (a) ಸಮಾಸಶಬ್ದಗಳಲ್ಲಿ "ಆದ" ಎಂಬುದು ಆ ಎರಡು ಪದಗಳ ಅರ್ಥವನ್ನು ಕೂಡಿಸುವುದಕ್ಕೋಸ್ಕರ ರೂಢಿಯಾಗಿ ಬರುವುದು.

ಎರಡು ಪದಗಳ ಸಮಾಸಕ್ಕೆ :—ಬಿಳಿದು+ಬಟ್ಟೆ=ಬಿಳಿಯ ಬಟ್ಟೆ.
ಅನೇಕ ,, ಲೋಕನಿರ್ಮಾಣವೈಚಿತ್ರ್ಯ.
ಇದರ ವಿಗ್ರಹವಾಕ್ಯಗಳು ಲೋಕಗಳ+ನಿರ್ಮಾಣ=ಲೋಕನಿರ್ಮಾಣ 1ನೇ ಪದ.
ಲೋಕನಿರ್ಮಾಣದಲ್ಲಿ+ವೈಚಿತ್ರ್ಯ=ಲೋಕ [ನಿರ್ಮಾಣವೈಚಿತ್ರ್ಯ. 2ನೇ ಪದ.
(ಹೀಗೆ ಅರ್ಥವನ್ನನುಸರಿಸಿ ಅನೇಕ ಪದಗಳಿಂದ ಒಂದು ದೊಡ್ಡ ಸಮಾಸ ಪದವನ್ನು ಮಾಡಬಹುದು.)—(ಆದರಿಂದ)

ಸಮಾಸದ ಸಾಮಾನ್ಯ ಸೂತ್ರ—(General Rule) ಎರಡು ಅಥವಾ ಇನ್ನೂ ಹೆಚ್ಚಾದ ಸುಬಂತ (*47)ಪದಗಳು ಮಧ್ಯದಲ್ಲಿ ಬರುವ ವಿಭಕ್ತಿಪ್ರತ್ಯಯಗಳ ಲೋಪದಿಂದ ಒಂದರ್ಥವನ್ನು ಕೊಡುವ ಒಂದು ಪದವಾಗುವುದು ಸಮಾಸವೆನಿಸುವುದು.

57. ನಾವು ನೋಡುವ ಹಾಗೆ ಕನ್ನಡಭಾಷೆಯಲ್ಲಿ ಸಾಮಾನ್ಯವಾಗಿ ಸಂಸ್ಕೃತ (ತತ್ಸಮ), ಮತ್ತು ಅವುಗಳಿಂದ ಹುಟ್ಟಿದ ಶಬ್ದ(1)ಗಳೂ, ಕನ್ನಡ ಶಬ್ದಗಳೂ ಸೇರಿರುವುವು. ಇದಲ್ಲದೆ ಈಗ ಪ್ರಚುರವಾಗಿರುವ ಹಿಂದೂಸ್ಥಾನಿ, ಇಂಗ್ಲೀಷ್ ಮೊದಲಾದ ಅನ್ಯದೇಶ್ಯಶಬ್ದಗಳೂ ಸೇರಿವೆ. ಆದರೆ ಪ್ರಾಚೀನ ಕಾಲದಿಂದ ರೂಢಿಗೆ ಬಂದಿರುವಂತೆ ತತ್ಸಮತತ್ಸಮ ಶಬ್ದಗಳೇ ಅಥವಾ ಕನ್ನಡ ಕನ್ನಡ ಶಬ್ದಗಳೇ ಸಮಾಸದಲ್ಲಿ ಪರಸ್ಪರ ಸೇರಬೇಕೆಂಬುದು ವ್ಯಾಕರಣಕಾರರ ಮತವು. ಇಲ್ಲಿ ಮೊದಲನೆಯದಕ್ಕೆ ತತ್ಸಮಶಬ್ದ ಸಮಾಸವೆಂದೂ 2 ನೆಯದಕ್ಕೆ ಕನ್ನಡಶಬ್ದ ಸಮಾಸವೆಂದೂ ಹೆಸರು. ಈ ನಿಯಮಕ್ಕೆ ಒಳಪಡದೆ ಸಂಸ್ಕೃತ ಶಬ್ದಗಳೂ ಕನ್ನಡ ಶಬ್ದಗಳೂ ಸೇರಿರುವ ಕೆಲವು ಸಮಾಸಪದಗಳು ಪೂರ್ವಗ್ರಂಥಗಳಲ್ಲಿಯೂ ಇವೆ. ಅವು ಪ್ರಮಾದವಶದಿಂದ ಬಂದಿರುವಕಾರಣ ಅಂಥವುಗಳಿಗೆ ಅರಿಸಮಾಸ(ವಿರುದ್ಧಸಮಾಸ)ವೆಂದು ಹೆಸರಿಟ್ಟು ಅವು ಹೊರತು ಹೊಸದಾಗಿ ಅರಿಸಮಾಸಗಳನ್ನು ಮಾಡಕೂಡದೆಂದು ಕಟ್ಟುಮಾಡಿರುವರು.

ಉದಾಹರಣೆ.

ತತ್ಸಮಶಬ್ದ ಸಮಾಸ.	ಕನ್ನಡಶಬ್ದ ಸಮಾಸ.	ಅರಿಸಮಾಸ.
ದೇವಲೋಕ, ನದೀಮುಖ(2)	ಮೆಲ್ಗನ್ನಡ, ಹಣೆಗಣ್ಣು(3)	ಕೂರಸಿ, ತುರಗದಳ (4)

(1)ತದ್ಭವಶಬ್ದ. (2) ಈ ಎರಡು ಉದಾಹರಣೆಗಳಲ್ಲಿಯೂ ಸಂಸ್ಕೃತಶಬ್ದಗಳೇ ಸೇರಿವೆ. (3) ಇವೆರಡರಲ್ಲಿಯೂ ಕನ್ನಡಶಬ್ದಗಳು ಸೇರಿವೆ. (4) ಇವುಗಳಲ್ಲಿ, ಅಸಿ, ತುರಗ ಎಂಬುವು ಸಂಸ್ಕೃತ, ಕೂರ್, ದಳ ಎಂಬುವು ಕನ್ನಡ ಅದರಿಂದ ಇವು ಅರಿಸಮಾಸಗಳು.

58. ಯಾವುದಾದರೊಂದತಿಶಯದ ಕೆಲಸದಲ್ಲಿ ಹೆಸರುವಾಸಿಪಡೆದವರಿಗೆ ಪ್ರಭುಗಳು ಬಿರುದುಗಳನ್ನು ಕೊಡುವುದುಂಟಷ್ಟೆ? ಅಂತಹ ಬಿರುದಾವಳಿಯಲ್ಲಿ ಅರಿಸಮಾಸದೋಷವಿಲ್ಲ.

ಉದಾಹರಣೆ.

ದಳಮುಖಧವಳಂ(1), ರಾಯಕೋಲಾಹಲಂ(2), ಅಂಕ ತ್ರಿಣೇತ್ರಂ(3).

59. ಸಮಾಸದಲ್ಲಿ ಮೊದಲು ಬರುವ ಪದಕ್ಕೆ ಪೂರ್ವಪದವೆಂದೂ, ಮುಂದೆ ಬರುವ ಪದಕ್ಕೆ ಪರಪದ ಅಥವಾ ಉತ್ತರಪದವೆಂದೂ ಸಂಜ್ಞೆಯುಂಟು. ಪರಪದದ ಮೊದಲಲ್ಲಿ ಕ ತ ಪ ವರ್ಣಗಳಿದ್ದರೆ ಸಮಾಸದಲ್ಲಿ ಅವುಗಳಿಗೆ ಕ್ರಮವಾಗಿ ಗ ದ ಬ ಗಳು ಆದೇಶವಾಗಿ ಬರುವುವು.

ಉದಾಹರಣೆ.

ಕಕಾರಕ್ಕೆ ಗಕಾರ—ಮಳೆಯ + ಕಾಲ = ಮಳೆಗಾಲ, ಕೆಚ್ಚನೆ + ಕುದುರೆ = ಕೆಂಗುದುರೆ,(4)
ತ ,, ದ ,, ಸೀರಿನ+ತಾಣ=ಸೀದಾಣ, ಮರದ+ತುದಿ=ಮರದುದಿ.
ಪ ,, ಬ ,, ತಣ್ಣಿತು + ಪುಳಿಲ್(ಮರಳು) = ತಣ್ಬುಳಿಲ್, ಕಣ್ಣಿನ+ ಪೊಗರ್=ಕಣ್ಬೊಗರ್.

ಆದರೆ

60. ಪೂರ್ವಪದದ ಕೊನೆಯಲ್ಲಿ ಒಂದಕ್ಷರಕ್ಕೆ ಆದೇಶವಾಗಿ ಬಂದಿರುವ ರಕಾರ(ರೇಫ)ವಿದ್ದರೂ, ಡಕಾರಕ್ಕೆ ಆದೇಶವಾಗಿರುವ ಬಕಾರವಿದ್ದರೂ ಮುಂದೆ ಪರವಾದ ಕ ತ ಪ ಗಳಿಗೆ ಗ ದ ಬ ಗಳು ಬರುವುದಿಲ್ಲ.

ಉದಾಹರಣೆ.

ಆದೇಶ ರಕಾರಕ್ಕೆ—ಒಂದು+ಕಡೆ ಒರ್ಕಡೆ, ಎರಡು + ತಡಿ = ಇರ್ತಡಿ,(ಇಲ್ಲಿ ಒಂದು, ಎರಡು ಎಂಬ ಶಬ್ದಗಳಿಗೆ ಆದೇಶವಾಗಿ ಬಂದಿರುವ ಒರ್, ಇರ್ ಎಂಬವು ಪೂರ್ವಪದಗಳಾಗಿರುವುದರಿಂದ ಮುಂದೆ ಪರವಾದ ಕಕಾರ ತಕಾರಗಳಿಗೆ ಗಕಾರ ದಕಾರಗಳು ಬರಲಿಲ್ಲ.)

ಮಾಱು+ಪಡು=ಮಾರ್ಪಡು=ಇಲ್ಲಿ ಱು ಎಂಬುದಕ್ಕೆ ಆದೇಶವಾದ ರಕಾರವು ಪೂರ್ವಪದಾಂತ್ಯದಲ್ಲಿರುವುದರಿಂದ ಮುಂದೆ ಬಂದ ಪಕಾರಕ್ಕೆ ಬಕಾರ ಬರಲಿಲ್ಲ (ಹೀಗೆಯೇ)

(1) ದಳ - ಕನ್ನಡ. (2) ರಾಯ-ಕನ್ನಡ. (3) ಅಂಕ - ಕನ್ನಡ. (ಈ ಶಬ್ದವು ಸಂಸ್ಕೃತದಲ್ಲಿಯೂ ಉಂಟು.) (4)ಕೆಚ್ಚನೆ ಶಬ್ದಕ್ಕೆ ಸಮಾಸದಲ್ಲಿ 'ಕೆಮ್' ಆದೇಶ ಬರುವುದು. (*72)

ಆದೇಶ ಟಕಾರಕ್ಕೆ—ಕಾಡು+ಕೋಣ=ಕಾಟ್ಕೋಣ, ಆದೇಶ ರಕಾರ ಟಕಾರ ಗಳು ಇಲ್ಲದಿದ್ದರೂ ಕೆಲವು ಕಡೆ ಗ ದ ಬ ಗಳು ಬರುವುದಿಲ್ಲ.
ಉದಾ :—ಕಯ್ಪುರೆ, ನೀರ್ಕೋಳಿ. (ಇ)

61. ವ್ಯಂಜನಾಂತವಾದ ಪೂರ್ವಪದಗಳಿಗೆ ಸಕಾರ ಮೊದಲಿರುವ ಪದ ಗಳು ಪರವಾದರೆ ಆ ಸಕಾರಕ್ಕೆ ಚ ಛ ಜ ಕಾರಗಳಲ್ಲಿ ಯಾವುದಾದರೊಂದು ಆದೇಶ ಬರುವುದು. ಯಕಾರ ಲಕಾರಗಳು ಪೂರ್ವಪದಾಂತದಲ್ಲಿದ್ದರೆ ಚವರ್ಗಾ ಕ್ಷರ ಬರುವುದಿಲ್ಲ.

ಉದಾಹರಣೆ.

ಚಕಾರ ಬರುವುದಕ್ಕೆ—ಇನಿದು+ಸರ=ಇಂಚರ. (ಇಲ್ಲಿ ಇನಿದು ಎಂಬ ಶಬ್ದದ "ಇದು" ಲೋಪವಾಗಿ "ಇಣ್" ಮಾತ್ರ ಉಳಿಯಿತು. ಅದಕ್ಕೆ ಪರವಾದ ಸಕಾರಕ್ಕೆ ಚಕಾರ ಬಂದು ಇಣ್+ಚರ= ಇಂಚರ ಆಯ್ತು.) ಹೀಗೆಯೇ—

ಛ ,, ,, ಐನೂರ್+ಸಾಸಿರ=ಐನೂರ್ಛಾಸಿರ, ಎಂಟು + ಸಾಸಿರ= ಎಣ್ಛಾಸಿರ.

ಜ ,, ,, ಪೊೞ್ + ಸವುಟು = ಪೊಂಜವುಟು, ಕಣ್ + ಸೊಡರ್= ಕಣ್ಜೊಡರ್. (ಇ)

ಕೆಲವು ಕಡೆ ಸಕಾರವೇ ಇರುವುದು. ಉದಾ :—ನುಣ್ಸರ, ಬೆಳ್ಸರಿ.

ಯಕಾರ ಲಕಾರಗಳಿಗೆ ಚವರ್ಗವಿಲ್ಲದುದಕ್ಕೆ :-ಉದಾ :—ಮಯ್ಸೊಗಸು, ಕೈಯ್ಸಾಲ, ಕಾಲ್ಸೆಳವು, ಬಲ್ಸೋಜಿಗ.

ಕೆಲವುಕಡೆ ಸ್ವರಗಳಿಗೆ ಪರವಾದ ಸಕಾರಕ್ಕೂ ಚವರ್ಗ(1)ಬರುವುದುಂಟು. ಕಡಿದು + ಸೋಜಿಗ = ಕಡುಚೋಜಿಗ(2), ಮೂರು + ಸಾಲ್= ಮುಚ್ಚಾಲ್, ಮೂರು +ಸೇರೆ = ಮುಚ್ಚೇರೆ. (ಇಲ್ಲಿ ಕಡಿದು ಎಂಬಲ್ಲಿ ಇದು ಲೋಪವಾಗಿ ಸ್ವರಾಂತವಾದ ಕಡು ಎಂಬುದು ಪೂರ್ವಪದವಾಯಿತು. ಮೂರು ಎಂಬಲ್ಲಿ ಮು ಎಂಬ ಒಂದೇ ಅಕ್ಷರ ಉಳಿದು ಅದೂ ಸ್ವರಾಂತವಾಯಿತು. ಅದಕ್ಕೆ ಮುಂದೆ ಬಂದ ಸಕಾರಕ್ಕೆ ಚಕಾರ ಬಂದಿತು.

62. ಪೂರ್ವಪದದ ಕೊನೆಯಲ್ಲಿ ಸ್ವರಗಳಾಗಲಿ, ಆದೇಶವಲ್ಲದ (ಸ್ವಾಭಾ ವಿಕದ)ವ್ಯಂಜನಗಳಾಗಲಿ ಇದ್ದು ಮುಂದೆ ಪವರ್ಗ (ಪ, ಬ, ಮ) ಬಂದರೆ, ಆ ಪವರ್ಗಕ್ಕೆ ವಕಾರಾದೇಶ ಬರುವುದು.

---

(1) ಚ, ಛ, ಜ. (2) ಕಡುಚೋಜಿಗ ಎಂದೂ ಬರುವುದುಂಟು.

ಉದಾಹರಣೆ.

ಸ್ವರಗಳಿಗೆ ಪರವಾದ ಪಕಾರಕ್ಕೆ—ಬೆಳೆವ + ಪೊಲ = ಬೆಳೆವೊಲ, ನಡೆವ+ಪೆಣ—(ಹೆಣ)=ನಡೆವೆಣ.

,, ಬಕಾರಕ್ಕೆ—ನಸು+ಬಿರಿದ=ನಸುವಿರಿದ.

ನಿಡಿದು+ಬಾಳೆ=ನಿಡುವಾಳೆ.

,, ಮ ,, —ಸರಿ + ಮಳೆ = ಸರಿವಳೆ, ಮರದ + ಮಣೆ=ಮರವಣೆ.

ವ್ಯಂಜನ ಪರವಾದ ಪಕಾರಕ್ಕೆ —ನೀರ್+ಪಾವು=ನೀರ್ವಾವು.

,, ಬ ,, —ತೋಳ್+ಬಲ=ತೋಳ್ವಲ.

,, ಮ ,, —ಬೆಳ್ವಾತು, ಕಲ್ವಳೆ.

ಆದೇಶವಾಗಿ ಬಂದ ವ್ಯಂಜನಗಳಿಗೆ ಪರವಾದ ಪವರ್ಗಕ್ಕೆ ವಕಾರವಿಲ್ಲ.

ಉದಾಹರಣೆ

ಕಾಡು+ಪೊದೆ=ಕಾಟ್ಪೊದೆ, ಮಾಱು+ಪೊಱಲು=ಮಾರ್ಪೊಱಲು, ಒಂದು+ಮೊದಲ್=ಒರ್ಮೊದಲ್. (ಇಲ್ಲಿ ಟಕಾರ ರೇಫಗಳು ಆದೇಶ ವ್ಯಂಜನಗಳಾದುದರಿಂದ ಪವರ್ಗಕ್ಕೆ ವಕಾರ ಬರಲಿಲ್ಲ.

63. ಣಕಾರಾನ್ತ ಪದಗಳಿಗೆ ಸಮಾಸದಲ್ಲಿ ನಕಾರ ಪರವಾದರೆ ಅದಕ್ಕೆ ಣಕಾರಾದೇಶ ಬರುವುದು. ಉದಾಹರಣೆ.

ಕಣ್+ನೋವು=ಕಣ್ಣೋವು, ತಣ್+ನೀರು=ತಣ್ಣೀರು.

(ಇಲ್ಲಿ ಣಕಾರಗಳಿಗೆ ಪರವಾದ ನಕಾರಕ್ಕೆ ಣಕಾರವೇ ಆದೇಶ ಬಂದು ಣಕಾರ ದ್ವಿತ್ವವಾಗಿದೆ.

ಇದುವರೆಗೆ ಹೇಳಿದ ಸೂತ್ರೋದಾಹರಣೆಗಳು ಕನ್ನಡಶಬ್ದ ಸಮಾಸಗಳಿಗೆ ಮಾತ್ರ ಸಂಬಂಧಪಟ್ಟವು. ಮುಂದೆ ಉಭಯವಿಧವಾದ (ಸಂಸ್ಕೃತ ಮತ್ತು ಕನ್ನಡ) ಶಬ್ದ ಸಮಾಸಗಳು ವಿವರಿಸಲ್ಪಡುವುವು.

64. ಕನ್ನಡಭಾಷೆಯಲ್ಲಿ ಮುಖ್ಯವಾಗಿ ತತ್ಪುರುಷ, ಕರ್ಮಧಾರಯ, ದ್ವಂದ್ವ, ಬಹುವ್ರೀಹಿ, ದ್ವಿಗು, ಅವ್ಯಯೀಭಾವ, ಗಮಕ, ಕ್ರಿಯಾಸಮಾಸವೆಂದು 8 ವಿಧವು.(1)

---

(1) ತತ್ಪುರುಷ ಭೇದವು ಕರ್ಮಧಾರಯ ಮತ್ತು ಕ್ರಿಯಾಸಮಾಸಗಳು; ಕರ್ಮಧಾರಯ ಭೇದವೇ ದ್ವಿಗು ಮತ್ತು ಗಮಕ ಸಮಾಸಗಳು. ಹೀಗೆ ಮೂಲಭೂತವಾದ ತತ್ಪುರುಷದಲ್ಲಿ ಉಳಿದ ನಾಲ್ಕು ಸೇರಿದುವು. ಅದರಿಂದ ಸ್ವತಂತ್ರ ಸಮಾಸಗಳು ತತ್ಪುರುಷ ಬಹುವ್ರೀಹಿ, ದ್ವಂದ್ವ, ಅವ್ಯಯೀಭಾವವೆಂದೂ ನಾಲ್ಕೇ ವಿಧವು.

1. ತತ್ಪುರುಷ ಸಮಾಸ—ಪರಪದದಲ್ಲಿ ಮುಖ್ಯಾರ್ಥವಿರುವುದು. (1)

ಇದರಲ್ಲಿ ದ್ವಿತೀಯಾ ತತ್ಪುರುಷ—ಭೂ (ಭೂಮಿ)ವನ್ನು ಗತ=ಭೂಗತ, (2)
ಮೋಕ್ಷವನ್ನು+ಪ್ರಾಪ್ತ=ಮೋಕ್ಷಪ್ರಾಪ್ತ.

ತೃತೀಯಾ ,, —ಕೂಲಿಯಿಂದ ಬದುಕು=ಕೂಲಿಬದುಕು.
ಪಿತೃವಿನಿಂದ+ಲಾಲಿತ=ಪಿತೃಲಾಲಿತ.
ಕವಿಗಳಿಂದ+ವಂದಿತ=ಕವಿವಂದಿತ.
ಕಣ್ಣಿನಿಂದ+ಕುರುಡ=ಕಣ್ಣುರುಡ.
ವಯಸ್ಸಿನಿಂದ+ವೃದ್ಧ=ವಯೋವೃದ್ಧ.

ಚತುರ್ಥೀ ,, —ಬಾಗಿಲಿಗೆ+ಮರ=ಬಾಗಿಲುಮರ.
ಭೂತಗಳಿಗೆ+ಬಲಿ=ಭೂತಬಲಿ.

ಪಂಚಮೀ ,, —ವ್ಯಾಘ್ರದ ದೆಸೆಯಿಂದ+ಭಯ=ವ್ಯಾಘ್ರಭಯ.
ವೃಕ್ಷದ ದೆಸೆಯಿಂದ + ಪತಿತನು = ವೃಕ್ಷ ಪತಿತನು.
ಕರ್ಮದ ದೆಸೆಯಿಂದ + ಭ್ರಷ್ಟನು = ಕರ್ಮಭ್ರಷ್ಟನು.

ಷಷ್ಠೀ ,, —ಕೈಯ+ಬೆರಳು=ಕೈವೆರಳು (*62)
ಧನದ+ರಕ್ಷಣೆ=ಧನರಕ್ಷಣೆ.
ಎಳ್ಳಿನ+ಎಣ್ಣೆ=ಎಳ್ಳೆಣ್ಣೆ.

ಸಪ್ತಮೀ ,, —ಕಾಡಿನಲ್ಲಿ+ಕುರುಬ=ಕಾಡುಕುರುಬ.
ಆಹಾರದಲ್ಲಿ+ನಿಯಮ=ಆಹಾರನಿಯಮ.
ಸಮರದಲ್ಲಿ+ಸಾಹಸಿ=ಸಮರಸಾಹಸಿ.
ಉತ್ತಮರಲ್ಲಿ+ಉತ್ತಮ =ಉತ್ತಮೋತ್ತಮ.

ಕೆಲವು ಸಮಾಸಪದಗಳಲ್ಲಿ ಮಧ್ಯದ ವಿಭಕ್ತಿ ಪ್ರತ್ಯಯಗಳು ಲೋಪವಾಗದೆ ಇರುವುದುಂಟು. ಆದಕ್ಕೆ ಅಲುಕ್(3)ಸಮಾಸವೆಂದು ಹೆಸರು

---

(1) ಪೂರ್ವಪದದ ಅರ್ಥವು ಪರಪದದಲ್ಲಿ ಸೇರಿಯೇ ಒಂದು ಪೂರ್ಣಾರ್ಥವನ್ನು ಕೊಡುವುದರಿಂದ ಪರಪದವೇ ಪ್ರಧಾನವಾಯಿತು. (2) ಸಮಾಸದಲ್ಲಿ ಯಾವ ವಿಭಕ್ತಿ ಲೋಪವಾಗುವುದೋ ಅಂತಹ ತತ್ಪುರುಷವೆಂದು ತಿಳಿಯಬೇಕು. (3) ಲುಕ್=ವಿಭಕ್ತಿಪ್ರತ್ಯಯ ಲೋಪವು, ನ=ಇಲ್ಲದಿರುವುದು, ಅಲುಕ್_(ಇಲ್ಲಿನ ನಕಾರದಲ್ಲಿ ಅಕಾರ ಮಾತ್ರ ಉಳಿಯುತ್ತದೆ.)

ಉದಾಹರಣೆ.

ಸರಸ್ಸಿನಲ್ಲಿ+ಜ=ಹುಟ್ಟಿದುದು=ಸರಸಿಜ.
ಪಂಕ (ಕೆಸರು)ದಲ್ಲಿ ಹುಟ್ಟಿದುದು=ಪಂಕೇಜ. } (1)

65. ಕರ್ಮಧಾರಯ ಸಮಾಸ—(ಇದು ತತ್ಪುರುಷ ಭೇದವೆ) (2)

ಸೂ॥ ಪೂರ್ವ ಮತ್ತು ಪರಪದದ ಅರ್ಥವು ಒಂದೇ ವಸ್ತುವಿನಲ್ಲಿ ಅನ್ವಯವಾದರೆ (ಎರಡು ಪದಗಳ ಅರ್ಥವೂ ಒಂದೇ ವಸ್ತುವಿನಲ್ಲಿ ಸೇರಿದರೆ) ಕರ್ಮಧಾರಯ ಸಮಾಸವೆನಿಸುವುದು. ಇದರಲ್ಲಿ 9 ವಿಧವು.

ಉದಾಹರಣೆ.

(*a*) ವಿಶೇಷಣ ಪೂರ್ವಪದ (ಪೂರ್ವ ಪದವು ವಿಶೇಷಣವಾಗಿರುವುದು.) (*34-1)

ಶ್ವೇತವಾದ+ಛತ್ರ=ಶ್ವೇತಚ್ಛತ್ರ. (ಇಲ್ಲಿ ಶ್ವೇತ ಶಬ್ದದ ಅರ್ಥವೂ, ಛತ್ರಶಬ್ದದ ಅರ್ಥವೂ ಛತ್ರದಲ್ಲಿಯೇ ಅನ್ವಯವಾಗುವುದರಿಂದ ಏಕವಸ್ತ್ವಾಶ್ರಯವಾಯ್ತು.

ನೀಲವಾದ+ಘಟ=ನೀಲಘಟ, ಕೆಂಜೆಡೆ, ಬೆನ್ನೀರ್ (*72)
ಕರಿದು+(ಆದ) ಹಲಿಗೆ = ಕರಿಯ ಹಲಗೆ.
ಚಿಕ್ಕದು+(ಆದ) ಮನೆ=ಚಿಕ್ಕಮನೆ.

(*b*) ವಿಶೇಷಣೋತ್ತರಪದ—(ವಿಶೇಷಣವು ಉತ್ತರಪದವಾಗಿರುವುದು.)
ಮಲ್ಲೀ+ಮತಲ್ಲಿಕಾ=ಮಲ್ಲೀಮತಲ್ಲಿಕಾ (ಶ್ರೇಷ್ಠವಾದ ಮಲ್ಲಿಗೆ).
(ಇಲ್ಲಿ ಮತಲ್ಲಿಕಾ ಎಂಬುದು ವಿಶೇಷಣವು ಉತ್ತರಪದವಾಗಿದೆ.)
ದೂತಾಪಶದ=(ನೀಚನಾದ ದೂತನೆಂದರ್ಥವು.)
(ಅಪಶದ ಶಬ್ದವು ವಿಶೇಷಣವು)

(*c*) ವಿಶೇಷಣೋಭಯಪದ—(ಎರಡು ಪದಗಳೂ ವಿಶೇಷಣಗಳಾಗಿರುವುದು.

---

(1) ಸರಸಿ, ಪಂಕೇ ಎಂಬ ಶಬ್ದರೂಪಗಳಲ್ಲಿ ಸಂಸ್ಕೃತ ಸಪ್ತಮೀ ವಿಭಕ್ತಿ ಪ್ರತ್ಯಯ ಇಕಾರ ಲೋಪವಾಗಿಲ್ಲವಾಗಿ ಅಲುಕ್ಸಮಾಸವಾಯಿತು. ಅದನ್ನು ಲೋಪ ಮಾಡಿದರೆ ಸರೋಜ, ಪಂಕಜ ಎಂದು ಸಪ್ತಮೀ ತತ್ಪುರುಷಸಮಾಸವಾಗುವುದು. (2) ತತ್ಪುರುಷ ಕರ್ಮಧಾರಯ, ಇವೆರಡರಲ್ಲೂ ಉತ್ತರಪದವೇ ಮುಖ್ಯವು. ತತ್ಪುರುಷದಲ್ಲಿ ಬರುವ ಪದಗಳೆಲ್ಲಾ ನಾಮಪದಗಳು. ಕರ್ಮಧಾರಯದಲ್ಲಿ ಪ್ರಾಯಶಃ ಉತ್ತರಪದಕ್ಕೆ ಮೊದಲ ಪದಗಳು ವಿಶೇಷಣಗಳಾಗಿರುತ್ತವೆ.

ದಿವ್ಯಂ+ಸುಂದರಂ=ದಿವ್ಯಸುಂದರಂ (ಶರೀರಂ)
ಹಿತಂ+ಉಷ್ಣಂ=ಹಿತೋಷ್ಣಂ (ಹಾಲು).
ಇಲ್ಲಿ ವಿಶೇಷ್ಯ ಶಬ್ದಗಳಾದ ಶರೀರ, ಹಾಲು ಎಂಬುವು ಉಕ್ತವಾಗಿಲ್ಲದಿದ್ದರೂ ಹಿಂದಿನ ಎರಡೂ ವಿಶೇಷಣಗಳಾಗಿ ಅದನ್ನು ಸೂಚಿಸುತ್ತವೆ.

(*d*) ಉಪಮಾನ(1)ಪೂರ್ವಪದ—ತಾವರೆಯಂತೆ ಇರುವ ಕಣ್ =ತಾವರೆಗಣ್.
ಗಜದ ಗಮನದಂತೆ ಗಮನ = ಗಜಗಮನ. ಇಲ್ಲಿ ಪೂರ್ವಪದಗಳು ಉಪಮಾನಗಳಾಗಿವೆ.

(*e*) ಉಪಮಾನೋತ್ತರ ಪದ—ಅಡಿ+ತಾವರೆಯಂತೆ=ಅಡಿದಾವರೆ.
ಕಣ್ಣು+ಕೆಂಡದಂತೆ=ಕಣ್ಗೆಂಡ.
ಕರುಣಾ+ಲಹರಿ= ಕರುಣಾಲಹರಿ (ಪ್ರವಾಹ) (2)

(*f*) ಅವಧಾರಣಾ(3)ಪೂರ್ವಪದ—ಫಲಾಹಾರ (ಫಲವೇ ಆಹಾರ).
ನಖಾಯುಧ (ನಖಗಳೇ ಆಯುಧ).

(*g*) ಸಂಭಾವನಾ (4) ,, —ಹಸ್ತಿನನಗರ ಹಸ್ತಿನವೆಂಬ ನಗರ.
ಕಾವೇರಿನದಿ (ಕಾವೇರಿಯೆಂಬ ನದಿ),
ನಳರಾಜ.

(*h*) ಲುಪ್ತಮಧ್ಯಮ—ದಧ್ಯನ್ನ (ದಧಿ (ಮಿಶ್ರ) ಅನ್ನ) ಇಲ್ಲಿ ಮಿಶ್ರ ಎಂಬ ಮಧ್ಯಮ ಪದವು ಲೋಪವಾಗಿದೆ.

---

(1) ಉಪಮೇಯವು ಉತ್ತರಪದವಾಗಿದೆ. ಉಪಮಾನೋಪಮೇಯಗಳೆಂದರೆ ಅಲ್ಪಗುಣವುಳ್ಳ ವಸ್ತುವಿನಲ್ಲಿ ಅಧಿಕ ಗುಣವನ್ನು ತೋರಿಸುವುದಕ್ಕಾಗಿ ಅಧಿಕ ಗುಣವುಳ್ಳ ವಸ್ತುವಿಗೆ ಅದನ್ನು ಹೋಲಿಸುತ್ತೇವೆ. ಯಾವುದು ಅಲ್ಪಗುಣವುಳ್ಳ ವಸ್ತುವೋ, ಯಾವುದನ್ನು ಹೋಲಿಸುತ್ತೇವೋ ಅದು ಉಪಮೇಯವು. ಯಾವುದು ಅಧಿಕ ಗುಣವುಳ್ಳ ವಸ್ತುವೋ, ಯಾವುದಕ್ಕೆ ಹೋಲಿಸುತ್ತೇವೊ ಅದು ಉಪಮಾನವು. ಇಲ್ಲಿ ಅಲ್ಪಗುಣವುಳ್ಳ ಕಣ್ಣನ್ನು ಅಧಿಕ ಗುಣವುಳ್ಳ ತಾವರೆಗೆ ಹೋಲಿಸಿರುತ್ತಾರೆ. ಈ ಹೋಲಿಕೆಯಿಂದ ಕಣ್ಣಿಗೆ ಅಧಿಕ ಗುಣವುಂಟಾಯಿತು. ಆದರಿಂದ ಕಣ್ಣು ಉಪಮೇಯ, ತಾವರೆ ಉಪಮಾನ. (2) ಪ್ರವಾಹದಂತೆ ಅವಿಚ್ಛಿನ್ನವಾಗಿರುವ ಕರುಣವೆಂದರ್ಥವು. (ಲಹರಿ ಉಪಮಾನ). (3) ಅದೇ ಎಂದು ಗೊತ್ತಾಗಿ ಹೇಳುವ ಅರ್ಥವು (Emphasis) (4) ಸಂಭಾವನಾ-ಅಂದರೆ ಊಹೆ (ಈ ವಸ್ತುವಿಗೆ ಈ ಹೆಸರು ಇರುವುದೆಂಬ ಊಹೆಯನ್ನು ತಿಳಿಸುವುದು.)

(*i*) ನ ಞ್ ಸಮಾಸ— ನಕಾರ ಮೊದಲು ಪದವಾಗಿ ನಿಂತು ಆಗುವ ಸಮಾಸ.

ನ+ಶುದ್ಧ=ಅಶುದ್ಧ (ಶುದ್ಧವಲ್ಲದುದು)

ನ+ಕಾಲ=ಅಕಾಲ (ತಕ್ಕಕಾಲವಲ್ಲ)

ನ+ಆದರಣೆ=ಅನಾದರಣೆ(1)ಆದರಣೆಯಿಲ್ಲದುದು

66. ದ್ವಿಗುಸಮಾಸ.—ಇದು ಕರ್ಮಧಾರಯ ಭೇದ. (2)

ಸೂ॥ ಪೂರ್ವಪದವು ಸಂಖ್ಯಾವಾಚಕವಾಗಿಯೂ ಪರಪದವು ನಾಮವಾಚಕವಾಗಿಯೂ ಇರುವುದು ದ್ವಿಗುಸಮಾಸವು.

ಇದರಲ್ಲಿ ದ್ವಿಗುವೆಂದೂ ಸಮಾಹಾರದ್ವಿಗುವೆಂದೂ ೨ ವಿಧವು. ಸಮಾಸದ ಕೊನೆಯಲ್ಲಿ ಬಹುವಚನವಿದ್ದರೆ ದ್ವಿಗುವೆಂದೂ, ಏಕವಚನವಿದ್ದರೆ ಸಮಾಹಾರದ್ವಿಗುವೆಂದೂ ತಿಳಿಯಬೇಕು.

ಉದಾಹರಣೆ.

ದ್ವಿಗುವಿಗೆ—ನಾಲ್ಕು ದಿಕ್ಕುಗಳು, ಚತುರ್ದಶ ವಿದ್ಯೆಗಳು, ಎಂಟು ಆನೆಗಳು.

ಸಮಾಹಾರದ್ವಿಗುವಿಗೆ—ಮೂರುಕುಪ್ಪೆಗಳ ಸಮಾಹಾರ=ಮುಕ್ಕುಪ್ಪೆ.

ಸಪ್ತ ಅರ್ಣವ (ಸಮುದ್ರ) ಗಳ ಸಮಾಹಾರ ಸಪ್ತಾರ್ಣವ. (ಹೀಗೆಯೇ) ನೂರು ರೂಪಾಯಿ, ಶತಾಪರಾಧ, ಪಂಚಾಗ್ನಿ.

67. ದ್ವಂದ್ವಸಮಾಸ—(ಕೂಡಿರುವುದು)

ಸೂ॥ ಎರಡು ಅಥವಾ ಅನೇಕ ಮುಖ್ಯಾರ್ಥವುಳ್ಳ (ಸ್ವತಂತ್ರ)ಪದಗಳು ಕೂಡಿಕೊಂಡು ಬರುವುದು ದ್ವಂದ್ವಸಮಾಸವು.

ಇದರಲ್ಲಿ ಇತರೇತರ ಯೋಗದ್ವಂದ್ವವೆಂದೂ, ಸಮಾಹಾರದ್ವಂದ್ವವೆಂದೂ, ೨ ವಿಧವು. ಸಮಾಸದ ಕೊನೆಯಲ್ಲಿ ಬಹುವಚನವಿದ್ದರೆ, ಇತರೇತರ ಯೋಗದ್ವಂದ್ವವೆಂದೂ, ಏಕವಚನವಿದ್ದರೆ ಸಮಾಹಾರದ್ವಂದ್ವವೆಂದೂ ತಿಳಿಯಬೇಕು.

ಉದಾಹರಣೆ. (3)

ಇತರೇತರ ಯೋಗದ್ವಂದ್ವಕ್ಕೆ—ಮಳೆಯೂ+ಬೆಳೆಯೂ=ಮಳೆಬೆಳೆಗಳು ಆದುವು.

ವಸ್ತ್ರಗಳೂ+ಆಭರಣಗಳೂ= ವಸ್ತ್ರಾಭರಣಗಳು.

ರಾಮನೂ+ಲಕ್ಷ್ಮಣನೂ = ರಾಮಲಕ್ಷ್ಮಣರು.

ಹಸ್ತ್ಯಶ್ವ ರಥಪದಾತಿಗಳು

---

(1) ಸ್ವರಪರವಾದಾಗ ನಕಾರಕ್ಕೆ "ಅನ್" ಆದೇಶ ಬರುವುದು. (2) ಇದು ಕರ್ಮಧಾರಯದಂತೆಇದ್ದರೂ ಪೂರ್ವಪದವು ಸಂಖ್ಯಾವಾಚಕವಾಗಿರುವುದರಿಂದ ದ್ವಿಗುವೆನ್ನುವರು. (3) ಇದನ್ನು ಬೇರೆ ಮಾಡಿದರೆ ಮಳೆಯೂ ಆಯಿತು, ಬೆಳೆಯೂ ಆಯಿತು ಎಂದು ಅರ್ಥಯುವು.

ಸಮಾಹಾರದ್ವಂದ್ವಕ್ಕೆ—ಧನವೂ+ಧಾನ್ಯವೂ ಇವುಗಳ ಸಮಾಹಾರ=ಧನಧಾನ್ಯ.
ಅನ್ನವೂ+ಬಟ್ಟೆಯೂ ,, ಅನ್ನಬಟ್ಟೆ.
ಫಲಗಳೂ+ಪುಷ್ಪಗಳೂ ,, ಫಲಪುಷ್ಪ.

(*a*) ಇದಲ್ಲದೆ—ರೂಪದಿಂದಲಾಗಲಿ, ಅರ್ಥದಿಂದಲಾಗಲಿ ಸಮಾನ ತೋರುವ ಎರಡು ಪದಗಳಿಗೆ ಸಮಾಸವಾದಾಗ ಒಂದೇಪದ ಉಳಿಯುವುದು. ಇದಕ್ಕೆ ಏಕಶೇಷವೃತ್ತಿ (ಸಮಾಸ) ಯೆಂದು ಹೆಸರು.

ಉದಾಹರಣೆ.

ರೂಪಸಾಮಾನ್ಯಕ್ಕೆ—ಅರಡಿ (ತುಂಬಿ)ಯೂ+ಅರಡಿ(ಶತ್ರು) ಯೂ=ಅರಡಿಗಳು.
(ಅರ್ಥಬೇರೆ) ಮೀನೂ (ನಕ್ಷತ್ರ)+ಮೀನೂ (ಮತ್ಸ್ಯ) = ಮೀನುಗಳು.
ಲೋಕ (ಜನ)ವೂ ಲೋಕ (ಪ್ರಪಂಚ)ವೂ ಲೋಕಗಳು.

ಅರ್ಥಸಾಮಾನ್ಯಕ್ಕೆ—ಜ್ಞಾನಿಯೂ+ವಿವೇಕಿಯೂ=ಜ್ಞಾನಿಗಳು ಅಥವಾ ವಿವೇ
(ರೂಪಬೇರೆ) ಕಿಗಳು.
ಹುಚ್ಚನೂ+ಮರುಳನೂ=ಹುಚ್ಚರು, ಅಥವಾ ಮರುಳರು.

(*b*) ಏಕಶೇಷದಲ್ಲಿ ಪುಲ್ಲಿಂಗ ಸ್ತ್ರೀಲಿಂಗ ಶಬ್ದಗಳು ಕೂಡಿಬಂದಾಗ ಪುಲ್ಲಿಂಗವೇ ಕೊನೆಗೆ ಉಳಿಯುವುದು. ಉದಾ:—

ಜಾಣನೂ+ಜಾಣೆಯೂ=ಜಾಣರು.
ಹುಡುಗರೂ+ಹುಡುಗಿಯರೂ=ಹುಡುಗರು.
ಜನನಿಯೂ+ಜನಕನೂ=ಜನಕರು.

(*c*) ನಾಮಪದಗಳೂ ಸರ್ವನಾಮಗಳೂ ಕೂಡಿಬಂದಾಗ ಕೊನೆಗೆ ಸರ್ವನಾಮಗಳೇ ಉಳಿಯುವುವು.

ಉದಾಹರಣೆ.

ನಾನೂ+ರಾಮನೂ=ನಾವು; ನೀನೂ+ಕೃಷ್ಣನೂ+ಗೋವಿಂದನೂ= ನೀವು; ಚೋರನೂ+ಮಾರನೂ + ನಾರಾಯಣನೂ + ಅವನೂ = ಅವರು.

(*d*) ಪುರುಷತ್ರಯಾರ್ಥಕ ಸರ್ವನಾಮಗಳು ಕೂಡಿಬಂದಾಗ ಮಧ್ಯಮ ಅಥವಾ ಉತ್ತಮಪುರುಷ ಸರ್ವನಾಮವೇ ಕೊನೆಗೆ ಉಳಿಯುವುದು.

ಉದಾಹರಣೆ.

ಉತ್ತಮ ಪುರುಷಕ್ಕೆ—ನಾನೂ+ನೀನೂ+ಅವನೂ=ನಾವು. (ಬಂದೆವು)
ನಾನೂ+ರಾಮನೂ+ನೀನೂ=ನಾವು. ಡಿ.
ಮಧ್ಯಮ ,, —ನೀನೂ+ಗೋಪಾಲನೂ+ಅವನೂ=ನೀವು. (ಬಂದಿರಿ)

68. ಅವ್ಯಯೀಭಾವ ಸಮಾಸ—ಸೂ॥ ಪೂರ್ವೋತ್ತರ ಪದಗಳಲ್ಲಿ ಒಂದು ಪದ ಅವ್ಯಯವಾಗಿದ್ದರೆ ಅವ್ಯಯೀಭಾವ ಸಮಾಸವೆನಿಸುವುದು.

ಉದಾಹರಣೆ.

ನಿರ್ನಿಮಿತ್ತಂ, ಯಥಾಸ್ಥಿತಿ, ಸಾಯಂಕಾಲ, ಕಿಂಚಿತ್ಸುಖ. ಇವು ಸಂಸ್ಕೃತಾವ್ಯಯೀಭಾವ ಸಮಾಸಪದಗಳು. ಇವುಗಳಲ್ಲಿ ನಿರ್,ಯಥಾ, ಸಾಯಂ, ಕಿಂಚಿತ್ ಎಂಬುವು ಅವ್ಯಯಗಳು. ಇವು ನಾಮಪದಗಳಾದ ನಿಮಿತ್ತ, ಸ್ಥಿತಿ, ಕಾಲ, ಸುಖ ಎಂಬವುಗಳೊಡನೆ ಸಮಾಸವಾಗಿ ಅವ್ಯಯೀಭಾವ ಸಮಾಸವೆನಿಸಿತು.

ಕನ್ನಡ ಅವ್ಯಯೀಭಾವ ಸಮಾಸದಲ್ಲಿ ಅಂಶಾಂಶಿಭಾವ ತೋರುವುದರಿಂದ ಅಂಶಿ (1) ಸಮಾಸವೆಂದು ಹೆಸರಾಗಿದೆ. ಈ ಸಮಾಸದಲ್ಲಿ ಬರುವ ಶಬ್ದಗಳು ಪ್ರಾಯಶಃ ಅಡಿ, ಮೇಗು, (ಮೇಲೆ) ಒಳಗು, ಹೊರಗು, ನಡು, ಕೆಳಗು, ಪೆರಗು, ಹಿಂದು, ಮುಂದು ಮೊದಲಾದುವು. ವಿಗ್ರಹವಾಕ್ಯದಲ್ಲಿ ಇವು ಪರಪದವಾಗಿದ್ದು ಸಮಾಸಮಾಡಿದಾಗ ಪೂರ್ವಪದಗಳಾಗುವುವು. ಇದಕ್ಕೆ ಪೂರ್ವನಿಪಾತವೆಂದು ಹೆಸರು. ಉದಾಹರಣೆ.

ಕೈಯ+ಅಡಿ=ಅಂಗೈ,(2) ಕೈಯ + ಮೇಗು = ಮೇಗೈ, ತಲೆಯ+ ಮುಂದು = ಮುಂದಲೆ, ಕೆರೆಯ + ಒಳಗು = ಒಳಗೆರೆ, ಕಾರ + ಹಿಂದು= ಹಿಂಗಾರು, ತಲೆಯ+ಪೆರಗು=ಪೆಡತಲೆ, (ಹೊ. ಗ.) ಹೆಡತಲೆ.

69. ಬಹುವ್ರೀಹಿಸಮಾಸ—ಎರಡು ಅಥವಾ ಅನೇಕ ಸುಬಂತಪದಗಳು ಸೇರಿ ಸಮಾಸವಾದಾಗ ಬೇರೊಂದು ಪದಾರ್ಥ (ವಸ್ತು) ತೋರುತ್ತಿದ್ದರೆ ಅದು ಬಹುವ್ರೀಹಿಸಮಾಸವೆನಿಸುವುದು. ಇದರಲ್ಲಿ, ಸಮಾನಾಧಿಕರಣ, ವ್ಯಧಿಕರಣ, ಸಂಖ್ಯೋಭಯಪದ, ವ್ಯತೀಹಾರಲಕ್ಷಣ, ಸಹಪೂರ್ವಪದ ಎಂದು ಮುಖ್ಯವಾಗಿ 5 ಭೇದಗಳು,

(*a*) ಸಮಾನಾಧಿಕರಣ(3)—ಸೂ॥ ಪೂರ್ವಪದದ ಅರ್ಥವು ಪರಪದದ ಅರ್ಥಕ್ಕೆ ವಿಶೇಷಣವಾಗಿಯೂ, ಎರಡೂ ಸಮಾನಾಧಿಕರಣ(ಒಂದೇ

---

(1) ಈ ಸಮಾಸದಲ್ಲಿ ಅಂಶಾಂಶಿ ಭಾವ ತೋರುವುದು. ಅಂಶಿ ಎಂದರೆ ಒಂದು ಪೂರ್ಣ ವಸ್ತು. ಅಂಶವೆಂದರೆ ಅದರಲ್ಲಿ ಒಂದು ಭಾಗ. ಸಮಾಸದಲ್ಲಿ ಅಂಶಿವಾಚಕವು ಮುಖ್ಯವಾಗಿ (ಕೊನೆಯಲ್ಲಿ) ನಿಲ್ಲುವುದರಿಂದ ಅಂಶಿ ಸಮಾಸವೆಂದು ಹೆಸರಾಯಿತು. (2) ಸಮಾಸದಲ್ಲಿ ಅಡಿ, ಮೇಗು ಎಂಬ ಶಬ್ದಗಳ ಕೊನೆಯಕ್ಷರಕ್ಕೆ ಅನುಸ್ವಾರಾದೇಶ ಬರುವುದು. (3) ಸಮಾನ-ಒಂದೇ, ಅಧಿಕರಣ-ವಿಭಕ್ತಿಯಿರುವುದು.

ವಿಭಕ್ತ್ಯಂತ)ವಾಗಿಯೂ ಇರುವುದು ಸಮಾನಾಧಿಕರಣ ಬಹುವ್ರೀಹಿ. ಕನ್ನಡ ಶಬ್ದಗಳ ಬಹುವ್ರೀಹಿಸಮಾಸದಲ್ಲಿ ಕೊನೆಯಕ್ಷರಕ್ಕೆ ಒಂದು ಅಕಾರವಾಗಲಿ, ಇಕಾರವಾಗಲಿ ಬರುವುದು.

ಉದಾಹರಣೆ.

ಸಂಸ್ಕೃತ—ಹಲ (ನೇಗಿಲು)ವು ಆಯುಧವಾಗಿರುವವನು = ಹಲಾಯುಧನು. (ಬಲರಾಮ)

ಪೀತವಾದ ಅಂಬರವುಳ್ಳವನು = ಪೀತಾಂಬರನು (ವಿಷ್ಣು). ಈ ಸಮಾಸಗಳಲ್ಲಿ ಹಲ-ಆಯುಧ, ಪೀತ - ಅಂಬರ ಎಂಬ ಅರ್ಥಗಳನ್ನೇ ಬಿಟ್ಟು ಬಲರಾಮ, ವಿಷ್ಣು ಎಂಬ ಬೇರೆ ಅರ್ಥಗಳನ್ನು ಕೊಡುವುದರಿಂದ ಬಹುವ್ರೀಹಿಯಾಯಿತು. ಅಲ್ಲದೆ ಈ ಪೂರ್ವೋತ್ತರ ಪದಗಳು ಏಕವಿಭಕ್ತ್ಯಂತವಾಗಿರುವುದರಿಂದ ಸಮಾನಾಧಿಕರಣವಾಯಿತು.

ಕನ್ನಡ —ಡೊಂಕು(ಆದ) ಕಾಲುಳ್ಳವನು=ಡೊಂಕುಗಾಲ } ಕೊನೆಯಲ್ಲಿ
ಸೊತ್ತು(ಆದ) ಕೈ ಉಳ್ಳವನು=ಸೊತ್ತುಗೈಯ } (ಅಕಾರ)
ಕಡಿದು+ಚಾಗ (ತ್ಯಾಗ) ವುಳ್ಳವನು=ಕಡುಚಾಗಿ. ,, (ಇಕಾರ)

(*b*) ವ್ಯಧಿಕರಣ(1)—ಸಮಾಸದಲ್ಲಿ ಪೂರ್ವೋತ್ತರ ಪದಗಳು ಬೇರೆ ಬೇರೆ ವಿಭಕ್ತಿಗಳಿಂದ ಕೂಡಿರುವುದು ವ್ಯಧಿಕರಣ ಬಹುವ್ರೀಹಿಯೆನಿಸುವುದು.

ಉದಾಹರಣೆ.

ಹೂ+ಕಣ್ಣಿನಲ್ಲಿರುವವನು=ಹೂಗಣ್ಣ, ತೊನ್ನು ಮೈಯಲ್ಲಿರುವವನು =ತೊನ್ನುಮೈಯ, ಹಣೆಯಲ್ಲಿ ಕಣ್ಣುಳ್ಳವನು=ಹಣೆಗಣ್ಣ, ಮೀನನ್ನು ಕೊಲ್ಲುವವನು(2)=ಮೀಂಗುಲಿ.

(*c*) ಸಂಖ್ಯೋಭಯಪದ—ಸೂ॥ ಪೂರ್ವಪದ ಪರಪದಗಳು ಸಂಖ್ಯಾವಾಚಕಗಳಾಗಿದ್ದು ವಿಕಲ್ಪ, ಸಂಶಯ, ಆವೃತ್ತಿ(3) ಎಂಬರ್ಥಗಳು ತೋರುತ್ತಿದ್ದರೆ ಸಂಖ್ಯೋಭಯಪದ ಬಹುವ್ರೀಹಿಯೆನಿಸುವುದು.

ಉದಾಹರಣೆ.

ವಿಕಲ್ಪಕ್ಕೆ—ಏಳೋ+ಎಂಟೋ=ಏಳೆಂಟು (ದಿನಗಳು) (4)
ಸಂಶಯ —ಎಂಟೋ+ಹತ್ತೋ=ಎಂಟು ಹತ್ತು(ಕುರಿಗಳು ಮೇಯುತ್ತವೆ).(5)

---

(1) ವಿ. ಬೇರೆ ಬೇರೆ ಅಧಿಕರಣವಿಭಕ್ತಿಯಿರುವುದು. (2) ಕೊಲ್ಲುವ ಪ್ರಭಾವವಿರುವನು. (3) ಗುಣಕ (fold). (4) ಏಳು ಅಥವಾ ಎಂಟು. (ಇದರಲ್ಲಿ ಈ ಎರಡರಲ್ಲಿ ಒಂದು ಸಂಖ್ಯೆಯೆಂದರ್ಥವು. (5) ಇಲ್ಲಿ ಊಹೆ ಮಾತ್ರವೇ, ಸಂಖ್ಯೆ ಗೊತ್ತಿಲ್ಲ.

ಆವೃತ್ತಿ —ಏಳುಬಾರಿ ಹತ್ತು=ಎಪ್ಪತ್ತು; ಮೂರುಬಾರಿ ನೂರು=ಮುನ್ನೂರು.

(*d*) ವ್ಯತೀಹಾರ ಲಕ್ಷಣ ಬಹುವ್ರೀಹಿ—ಒಂದೇ ಅರ್ಥವುಳ್ಳ ಕ್ರಿಯೆಯಿಂದ ಒಬ್ಬರಿಗೊಬ್ಬರು ಹೊಡೆದಾಡಿದ ಜಗಳ ತೋರುವುದು ವ್ಯತೀಹಾರ ಲಕ್ಷಣ (1) ಬಹುವ್ರೀಹಿ—ಈ ಸಮಾಸದಲ್ಲಿ ಪೂರ್ವಪದದಕೊನೆಗೆ ಆಕಾರವೂ ಪರಪದದ ಕೊನೆಗೆ ಇಕಾರವೂ ಬರುವುದು.

ಉದಾಹರಣೆ.

ಜುಟ್ಟನ್ನು ಜುಟ್ಟನ್ನು ಹಿಡಿದು ಒಬ್ಬರಿಗೊಬ್ಬರು ಹೊಡೆದಾಡುವುದು ಯಾವ ಜಗಳದಲ್ಲಿಯೋ ಅದು ಜುಟ್ಟಾಜುಟ್ಟಿ. ಕೋಲನ್ನು ಕೋಲನ್ನು ಹಿಡಿದು ಒಬ್ಬರಿಗೊಬ್ಬರು ಹೊಡೆದಾಡುವುದು ಯಾವ ಜಗಳದಲ್ಲಿಯೋ ಅದು ಕೋಲಾಕೋಲಿ. ಹೀಗೆಯೇ ಹಸ್ತಾಹಸ್ತಿ, ಗದಾಗದಿ, ಖಡ್ಗಾಖಡ್ಗಿ.

(*e*) ಸಹ ಪೂರ್ವಪದ ಬಹುವ್ರೀಹಿ—ಸೂ॥ ಒಡನೆಯೆಂಬರ್ಥದ ಸಹ ಎಂಬ ಪದಕ್ಕೆ ಸುಬಂತವು ಸೇರಿ ಸಮಾಸವಾದರೆ ಅದು ಸಹ ಪೂರ್ವಪದ ಬಹುವ್ರೀಹಿ.

ಉದಾಹರಣೆ.

ಸಹ+ಮಿತ್ರ=ಸಮಿತ್ರ (ಮಿತ್ರರೊಡನೆ) ಕೂಡಿರುವವನು.
ಸಹ+ಪರಿಜನ=ಸಪರಿಜನ (ಪರಿಜನದೊಡನೆ ,,).
ಹೀಗೆಯೇ ಸಬಾಂಧವ, ಸೋದರ ಸಹೋದರ. (ಇ)
(ಇಲ್ಲಿ "ಸಹ" ಶಬ್ದದ ಕೊನೆಯ ಹಕಾರ ಲೋಪವಾಗಿಲ್ಲ.)

70. ಗಮಕ ಸಮಾಸ—ಸೂ॥ ಸರ್ವನಾಮವಾಗಲಿ, ಕೃದಂತವಾಗಲಿ (2) ಪೂರ್ವಪದವಾಗಿದ್ದು ಸುಬಂತವಾದ ಪರಪದದೊಡನೆ ಸಮಾಸವಾದರೆ ಅದು ಗಮಕ ಸಮಾಸವೆನಿಸುವುದು. ಇವರಲ್ಲಿ ಪರಪದವು ಸಂಸ್ಕೃತವಾಗಿಯೂ ಇರಬಹುದು. (ಅರಿಸಮಾಸ ದೋಷವಿಲ್ಲ * 57)

---

(1) ವ್ಯತೀಹಾರ-ಜಗಳದ, ಲಕ್ಷಣ-ಗುರುತು. (2) (ಶ.ಮ.ದ.)ದಲ್ಲಿ ಸರ್ವನಾಮ, ಗುಣವಾಚಕ, ಸಂಖ್ಯಾವಾಚಕ, ಕೃದಂತಗಳು ಪೂರ್ವಪದವಾಗಿದ್ದರೆ ಗಮಕ ಸಮಾಸವೆಂದು ಹೇಳಿದೆ. ಆದರೆ, ಪೂರ್ವಪದ ಗುಣವಾಚಕವಾಗಿದ್ದರೆ ಕರ್ಮಧಾರಯವೆಂದೂ, ಸಂಖ್ಯಾವಾಚಕವಾಗಿದ್ದರೆ ದ್ವಿಗುವೆಂದೂ ಸ್ಪಷ್ಟವಾಗಿಯೇ ಇದೆ. ಆದರಿಂದ ವಿಶೇಷಣಾರ್ಥದ (*34) ಸರ್ವನಾಮಗಳೂ ಕಾರಕ ಕೃದಂತಗಳೂ ಪೂರ್ವಪದವಾಗಿ ಇರಬೇಕೆಂದು ನಿಷ್ಕರ್ಷೆ ತೋರುವುದು. ಈ ಸಮಾಸದಿಂದ ಸಂಸ್ಕೃತ ಪದಕ್ಕೂ ಕನ್ನಡ ಪದಕ್ಕೂ ಸಮಾಸವುಂಟೆಂದು ಊಹೆ (ಗಮಕ) ತೋರುವುದರಿಂದ ಗಮಕ ಸಮಾಸವೆಂದು ಹೆಸರಾಯಿತು.

ಉದಾಹರಣೆ.

ಸರ್ವನಾಮಕ್ಕೆ—ಅದು+ಮರ=ಆ ಮರ, ಇದು+ಮಾತು=ಈ ಮಾತು, ಎಲ್ಲದು+ಮಾತು=ಎಲ್ಲಾ ಮಾತು, ಯಾವನು + ಮನುಷ್ಯ= ಯಾವ ಮನುಷ್ಯ.

ಕೃದಂತಕ್ಕೆ—ಮಾಡಿದ ಕೆಲಸ, ಆಡಿದ ಮಾತು, ನಡೆಯದ ಕಾರ್ಯ, ಕೇಳಲ್ಪಟ್ಟ ಕಥೆ, ತೋರಿಸುವ ಚಿತ್ರ, ಕುಡಿಯಲ್ಪಡುವ ನೀರು.

ಇದಲ್ಲದೆ ಸಹ ಮಹತ್ ಶಬ್ದಗಳಿಗೆ ಸಾ, ಮಾ, ಎಂದು ತದ್ಭವಗಳಾಗಿ ಪರಪದದೊಡನೆ ಸಮಾಸವಾಗುವುದೂ ಗಮಕ ಸಮಾಸವೇ.

ಉದಾಹರಣೆ.

ಸಹ+ಗಮನ=ಸಾಗಮನ, ಸಹ+ವಾಸಿ=ಸಾವಾಸಿ, ಸಹ+ಶಯನ=ಸಾಶಯನ, ಮಹಾ+ಸಭಾ=ಮಾಸಭಾ, ಮಹಾ+ಸಾಹಸಿ=ಮಾಸಾಹಸಿ. (ಇ)

71. ಕ್ರಿಯಾಸಮಾಸ—ಸೂ॥ ಸುಬಂತವಾದ ಪೂರ್ವಪದಕ್ಕೆ ಕ್ರಿಯಾವಾಚಕವು (ಕ್ರಿಯಾಪದ ಅಥವಾ ಕೃದಂತವು) ಪರವಾದರೆ ಕ್ರಿಯಾ ಸಮಾಸವಾಗುವುದು. ಈ ಸಮಾಸದಲ್ಲಿ ಪೂರ್ವಪದವು ಸಂಸ್ಕೃತ (ತತ್ಸಮ) ಶಬ್ದವಾಗಿಯೂ ಇರಬಹುದು (1)

ಉದಾಹರಣೆ.

ಪರಪದ ಕ್ರಿಯಾಪದವಿರುವುದಕ್ಕೆ—ನಿದ್ರೆಯನ್ನು + ಮಾಡಿದನು = ನಿದ್ರೆಮಾಡಿದನು, ಕನಸನ್ನು +ಕಂಡನು = ಕನಸುಗಂಡನು, ಊಟವನ್ನು+ಮಾಡಿದನು = ಊಟಮಾಡಿದನು.

,, ಕೃದಂತಕ್ಕೆ —ನೀರಿನಲ್ಲಿ+ಮಿಂದು= ನೀರುಮಿಂದು, ದಾರಿಯನ್ನು+ಕಾಣದೆ= ದಾರಿಗಾಣದೆ, ಕಾಗದವನ್ನು+ಬರೆದ=ಕಾಗದ ಬರೆದ. (ಇ)

(1) ಅರಿಸಮಾಸ ದೋಷವಿಲ್ಲ. (* 57)

72. ರೂಢಿಯಾದ ಕೆಲವು ಸಮಾಸಗಳ ಸಿದ್ಧರೂಪಗಳನ್ನು ವಿಗ್ರಹವಾಕ್ಯಗಳೊಡನೆ ಇಲ್ಲಿ ತೋರಿಸಿದೆ.

ಸಮಾಸಪದ	ವಿಗ್ರಹವಾಕ್ಯ	ಸಮಾಸ	ಸಮಾಸಪದ	ವಿಗ್ರಹವಾಕ್ಯ	ಸಮಾಸ
ನುಣ್ಬರ	ನುಣ್ಣಿತು+ಸರ	ಕರ್ಮಧಾರಯ	ಕೆಂಗಣಗಲೆ ಚೆಂಗಣಗಲೆ	ಕೆಚ್ಚನೆ+ಕಣಗಲೆ	ಕರ್ಮಧಾರಯ
ಇಂಚರ	ಇನಿದು+ಸರ		ಕಟ್ಟಡವಿ	ಕಡಿದು+ಅಡವಿ	
ಬೆಟ್ಟಬೇಸಗೆ	ಬೆಟ್ಟಿತು+ಬೇಸಗೆ		ಕಟ್ಟಾಸರ್	ಕಡಿದು+ಆಸರ್	
ಹೆಮ್ಮರ(ಪೆರ್ಮರಂ)	ಹಿರಿದು+ಮರ		ನಿಡುದೋಳು	ನಿಡಿದು+ತೋಳು	
ಕೆಂದಳಿರು	ಕೆಚ್ಚನೆ+ತಳಿರು		ಕಡುಗತ್ತಲೆ	ಕಡಿದು+ಕತ್ತಲೆ	
ಬೆನ್ನೀರು ಬಿಸುನೀರು	ಬೆಚ್ಚನೆ+ನೀರು		ಕುರುವಣೆ	ಕಿರಿದು+ಮಣೆ	
ಬೆಂಬೂದಿ	ಬೆಚ್ಚನೆ+ಬೂದಿ		ಕುರುಗಿಡ	ಕಿರಿದು+ಗಿಡ	
ಕೇಸಕ್ಕಿ	ಕೆಚ್ಚನೆ+ಅಕ್ಕಿ		ಕುತ್ತೆಸಳು	ಕಿರಿದು+ಎಸಳು	
ಕಿಸುಸಂಜೆ ಕೆಂಜಂಜೆ	ಕೆಚ್ಚನೆ+ಸಂಜೆ		ಕುಡುಗೋಲು	ಕೊಂಕು+ಕೋಲು	
ಪಂದಳಿರು	ಪಚ್ಚನೆ+ತಳಿರು		ಬಿಳಿಯ ಬಟ್ಟೆ ಬೆಳ್ವಟ್ಟೆ ಬಿಳಿಬಟ್ಟೆ	ಬಿಳಿಯ+ಬಟ್ಟೆ	
ಪಚ್ಚೆಲೆ ಹಸುರೆಲೆ	ಪಚ್ಚನೆ+ಎಲೆ		ತಂಗಾಳಿ	ತಣ್ಣಿತು+ಗಾಳಿ	

ಸಮಾಸಪದ	ವಿಗ್ರಹವಾಕ್ಯ	ಸಮಾಸ	ಸಮಾಸಪದ	ವಿಗ್ರಹವಾಕ್ಯ	ಸಮಾಸ
ಕಾರಿರುಳು	ಕರಿದು+ಇರುಳು	ಕ. ಧಾ. ಸ.	ಇರ್ಕಡೆ	ಎರಡು+ಕಡೆ	ದ್ವಿಗು
ಅಲರ್ವೂ	ಅರಳುತ್ತಿರುವ ಹೂ	ಗ. ಸ.	ಮುಯ್ಯಡಿ	ಮೂರು+ಅಡಿ	,,
ಹದಿಮೂರು	ಹತ್ತಿನೊಡನೆ ಕೂಡಿದ ಮೂರು(1)	ಲುಪ್ತಮಧ್ಯಮ ಪದ	ಮುಯ್ಯೇಳ್	ಮೂರು ಬಾರಿ ಏಳು	ಬ. ವ್ರೀಹಿ
ಹದಿನೆಂಟು	ಹತ್ತಿನೊಡನೆ ಕೂಡಿದ ಎಂಟು	,,	ನಲವತ್ತು	ನಾಲ್ಕು ಬಾರಿ ಹತ್ತು	,,
			ಈರೈದು	ಎರಡು ಬಾರಿ ಐದು	,,
ನೀರ್ಪೊನಲ್	ನೀರಿನ+ಪೊನಲ್	ಷ. ತ.	ಕೂರಿಲಿ	ಕೂರ್(ಹರಿತ)ಇಲ್ಲದುದು	,,
ಅರಮನೆ	ಅರಸಿನ+ಮನೆ	,,	ಕುರಿಗುಲಿ	ಕುರಿಯನ್ನು ಕೊಲ್ಲುವವನು	,,
ಮೂಡಗಾಳಿ	ಮೂಡಣ+ಗಾಳಿ	,,			
ನಡುದಾರಿ	ದಾರಿಯ+ನಡು	ಅಂಶಿ ಸ.	ಸುಡುವಿಸಿಲು	ಸುಡುವ+ಬಿಸಿಲು	ಗಮಕ
ಮುಂಜೂರು	ಸೂರಿನ+ಮುಂದು	,,	ಈ ಕೆರೆ	ಇದು+ಕೆರೆ	,,
ಮುಮ್ಮಾಗಿ	ಮಾಗಿಯ+ಮುಂದು	,,	ಮಾಸೌಖ್ಯ	ಮಹಾ+ಸೌಖ್ಯ	,,
ಮುಪ್ಪೊಳಲ್	ಮೂರು+ಪೊಳಲ್	ದ್ವಿಗು ಸ.	ಏಗೈವೆಂ	ಏನನ್ನು+ಗೈವೆಂ	ಕ್ರಿ. ಸ.
ಮೂಗಾಲು	ಮೂರು+ಕಾಲು	,,	ಏವೇಳ್ವರ್	ಏನನ್ನು+ಪೇಳ್ವರ್	,,
ಒರ್ತುತ್ತು	ಒಂದು + ತುತ್ತು	,,	ಎಯ್ತಂದಳ್	ಎಯ್ದು+ತಂದಳ್	,,
ಮುಕ್ಕುಪ್ಪೆ	ಮೂರು+ಕುಪ್ಪೆಗಳ [ಸಮಾಹಾರ	ಸಮಾ.ದ್ವಿ. ಸ.			

(1) ಕೂಡಿದ ಎಂಬ ಪದಕ್ಕೆ ಲೋಪವಾಗಿ ಲುಪ್ತಮಧ್ಯಮ ಪದವಾಯಿತು. ಇದನ್ನು ಹತ್ತು ಮತ್ತು ಮೂರು ಎಂದು ವಿಗ್ರಹವಾಕ್ಯಮಾಡಿ ದ್ವಂದ್ವ ಸಮಾಸವೆಂದೂ ಕೆಲವರು ಹೇಳುವರು.

VI ದ್ವಿರುಕ್ತಿ.

73. ಎಲೈ ಮಗುವೆ, "ಈಗ ಕಾಡಿನಿಂದ ಊರಿನೊಳಕ್ಕೆ ಒಂದು ಹುಲಿ ಬಂದಿದೆ ನೋಡು" ಎಂದು ಒಬ್ಬನು ತನ್ನ ಮಗನಿಗೆ ಹೇಳುತ್ತಾನೆ. ಈ ವಾಕ್ಯದಲ್ಲಿ ಹುಲಿ ಬಂದಿರುವ ಸಂಗತಿ ಮಾತ್ರ ತಂದೆ ಮಗನಿಗೆ ತಿಳಿಸಿದನೆಂದು ಅರ್ಥವಾಗುತ್ತದೆ. ಈ ವಾಕ್ಯದಲ್ಲಿರುವ ಇದೇ ಶಬ್ದಗಳನ್ನು ಎರಡೆರಡುಸಾರಿ ಹೇಳಿದರೆ ಅದು "ಎಲೆಲಾ, ಮಗುವೆ ಮಗುವೆ, ಈಗೀಗ, ಕಾಡುಕಾಡಿನಿಂದ, ಊರೂರಿನೊಳಕ್ಕೆ; ಒಂದೊಂದು ಹುಲಿ, ಬಂದಿದೆ ಬಂದಿದೆ, ನೋಡು ನೋಡು" ಎಂದು ಆಗುತ್ತದೆ. ಒಂದು ಶಬ್ದವನ್ನು ಒಂದೇಸಾರಿ ಹೇಳುವುದಕ್ಕೂ ಎರಡೆರಡು ಸಾರಿ ಹೇಳುವುದಕ್ಕೂ ಇರುವ ವ್ಯತ್ಯಾಸವನ್ನು ಆಲೋಚಿಸಿದರೆ, ಎಲೆಲಾ,—ಎಂಬಲ್ಲಿ ಆದರವೂ, ಮಗುವೆ ಮಗುವೆ,—ಎಂಬಲ್ಲಿ ಸಂಭ್ರಮವೂ, ಈಗೀಗ,—ಎಂಬಲ್ಲಿ ಈಗತಾನೆ ಎಂದೂ, ಕಾಡು ಕಾಡಿನಿಂದ,—ಎಂಬಲ್ಲಿ ಎಲ್ಲಾ ಕಾಡುಗಳಿಂದಲೂ ಎಂದೂ, ಊರೂರಿನೊಳಕ್ಕೆ,—ಎಂಬಲ್ಲಿ ಎಲ್ಲಾ ಊರುಗಳಿಗೂ ಎಂದೂ, ಒಂದೊಂದು,—ಎಂಬಲ್ಲಿ ಒಂದಕ್ಕಿಂತ ಹೆಚ್ಚಾಗಿಲ್ಲವೆಂದೂ, ಹುಲಿ ಹುಲಿ ಎಂಬಲ್ಲಿ,—ಭಯವೂ, ಬಂದಿದೆ ಬಂದಿದೆ,—ಎಂಬಲ್ಲಿ ನಿಶ್ಚಯವೂ, ನೋಡು ನೋಡು,—ಎಂಬಲ್ಲಿ ಆತುರವೂ ತೋರುತ್ತದೆ. ಆದರಿಂದ:—

ಸೂ॥ ಒಂದು ವಿಶೇಷಾರ್ಥ ತೋರುವಂತೆ ಪದವನ್ನಾಗಲಿ, ವಾಕ್ಯವನ್ನಾಗಲಿ ಅನೇಕಸಾರಿ ಹೇಳುವುದು ದ್ವಿರುಕ್ತಿಯೆನಿಸುವುದು. ರೂಢಿಯಾಗಿ ದ್ವಿರುಕ್ತಿ ಬರುವ ಸಂದರ್ಭಗಳು ಯಾವುವೆಂದರೆ:—

(*a*) ಕ್ರಿಯೆ ಎಡಬಿಡದೆ ನಡೆಯಿತು ಎಂಬರ್ಥದಲ್ಲಿ—ಆಯಿತಾಯಿತು, ಕೊಟ್ಟೆ ಕೊಟ್ಟೆ, ಬಂದೆ ಬಂದೆ.

(*b*) ,, ಅನೇಕವೇಳೆ ,, ನೋಡಿ ನೋಡಿ ಕರೆದನು. ಉಂಡುಂಡು ಹೋದನು. ಬಂದು ಬಂದು ಕೇಳಿದನು.

(*c*) ಕ್ರಿಯೆಯಲ್ಲಿ ಆಧಿಕ್ಯತೋರುವಾಗ—ಬೇಗಬೇಗ ಬಾ (1)

---

(1) ಬಹುಬೇಗ ಬರಬೇಕೆಂದರ್ಥವು.

ಮೆಲ್ಲಮೆಲ್ಲಗೆ ನಡೆ.(1) ಒಳ್ಳೆಯದೊಳ್ಳೆಯದು. ಚಿಕ್ಕಚಿಕ್ಕ ಮಕ್ಕಳು. ಮೊದಲು ಮೊದಲು ಬಿತ್ತಬೇಕು.

(*d*) ಕ್ರಿಯೆ ಸಂಪೂರ್ಣವಾಗಿ ತೋರುವಾಗ—ನಡೆನಡೆಯೆಂದು ನಡೆದನು. (2) ತಿನ್ನು ತಿನ್ನು ಎಂದು ತಿಂದನು.

(*e*) ವೀಪ್ಸೆ(3) ತೋರುವಾಗ—ಮನೆಮನೆಗೂ ದೀಪ, ಊರೂರಿಗೂ ಯಜಮಾನ.(4)

(*f*) ಅವಸರ (ತ್ವರ) ಸಂಭ್ರಮ, ಗಾಬರಿ ಅಥವಾ ಭಯ ತೋರುವಾಗ— } ಸಂಭ್ರಮಕ್ಕೆ—ಓಡು ಓಡು, ಬೇಗ ಬಾ ಬೇಗ ಬಾ, ಇತ್ತ ಬಾ ಇತ್ತಬಾ, ಕೊಡು ಕೊಡು ಕೊಡು, ನಡೆ ನಡೆ ನಡೆ(5). ಗಾಬರಿ ಅಥವಾ ಭಯಕ್ಕೆ—ಹಾವು ಹಾವು, ಬೀಳುತ್ತೀ ಬೀಳುತ್ತೀ.

(*g*) ಅನುಕ್ರಮ—(6)ಮರವು ಮೊದಮೊದಲು ದಪ್ಪವಾಗಿಯೂ, ಕೊನೆಕೊನೆಗೆ ಸಣ್ಣದಾಗಿಯೂ ಇರುತ್ತದೆ. ಈ ವಿಷಯವನ್ನು ದೊಡ್ಡದೊಡ್ಡವರಲ್ಲಿ ಕೇಳಬೇಕು.

(*h*) ಆದರ (ಸಮ್ಮತಿ)—ಅವನೇ ಒಳ್ಳೆಯವನು, ಇರಲಿ ಇರಲಿ, ಮಗನೇ ಬಾ ಬಾ, ಊಟಮಾಡು ಊಟಮಾಡು, ಕೂಸೂ ಕೂಸೂ ಕಾಸು ಬೇಕೆ?

(*i*) ಆಕ್ಷೇಪ, ಕೋಪ—,, ಆಕ್ಷೇಪಕ್ಕೆ—ಎಲೆಲಾ! ನೀನು ಸುಳ್ಳು ಹೇಳಬಹುದೇ?

---

(1) ಬಹಳ ಮೆಲ್ಲಗೆ (†) (2) ಇತರರನ್ನೂ ನಡಿಸಿಕೊಂಡು ತಾನೂ ನಡೆದು ನಡೆಯುವ ಕೆಲಸವನ್ನು ಮುಗಿಸಿದನೆಂದರ್ಥವು. (3) ಒಂದೊಂದು ಜಾತಿಗೆ ಸೇರಿದ ವಸ್ತುಗಳಲ್ಲಿ ಒಂದನ್ನೂ ಬಿಡದೆ ಹೇಳಬೇಕೆಂಬ ಇಚ್ಛೆ. (4) ಯಜಮಾನನಿಲ್ಲದ ಊರೇ ಇಲ್ಲವೆಂದರ್ಥವು. (5) ಸಂಭ್ರಮದಲ್ಲಿ ಕ್ರಿಯೆಯನ್ನು ಅನೇಕಸಾರಿ ಹೇಳುವುದುಂಟು. (6) ಕ್ರಮವನ್ನು ಬಿಡದಿರುವುದು.

(†) ಆಧಿಕ್ಯಾರ್ಥದಲ್ಲಿ ಕಡೆ, ನಡು, ಮೊದಲು, ತುದಿ, ಬಯಲು, ಎಂಬ ಶಬ್ದಗಳು ಪ್ರಯೋಗಿಸಲ್ಪಟ್ಟಾಗ ಮೊದಲನೆಯ ಪದದ ಮೊದಲಕ್ಷರವನ್ನು ಬಿಟ್ಟು ಮಿಕ್ಕ ಅಕ್ಷರಗಳಿಗೆ "ಟ್ಟ" ಎಂಬ ಆದೇಶ ಬರುವುದು. (ಹ. ಗ.)ದಲ್ಲಿ ತ್ತ ಎಂಬುದು ಬರುವುದು. ಕಟ್ಟಕಡೆ, ನಟ್ಟನಡು, ಮೊಟ್ಟಮೊದಲು, ತುಟ್ಟತುದಿ, ಬಟ್ಟಬಯಲು ಎಂದಾಗುವುದು. ಹ. ಗ. ದಲ್ಲಿ ತುತ್ತತುದಿ, ಮೊತ್ತಮೊದಲು ಎಂಬಂತೆ ಬರುವುದು. ಮೊದಲು ಶಬ್ದವನ್ನು ಮೊದಮೊದಲು ಎಂದೂ ಹೇಳುವುದುಂಟು.

ಕೋಪಕ್ಕೆ—ದುಷ್ಟನೆ, ದುಷ್ಟನೆ, ಆ ಗ ಲಾ ಗ ಲಿ, ನಿನ್ನನ್ನು ಬಿಟ್ಟೇನೆ?

(*j*) ಅನೇಕ ವಸ್ತುಗಳುಳ್ಳ ರಾಶಿಯಲ್ಲಿ ಒಂದೊಂದನ್ನು ಗುರ್ತಿಸಿ ಹೇಳುವಾಗ— } ಈ ಚೀಲದಲ್ಲಿ ಇವರಿಗೆ ಒಂದೊಂದಾಣೆ ಕೊಡು. ಅವರಿಗೆ ಒಂದೊಂದು ಕಾಸು ಕೊಡು.

(*k*) ಕೆಲವು ಪದಗಳ ಜತೆಯಲ್ಲಿ ಬೇರೇ ಪದಗಳನ್ನು ಸೇರಿಸಿ ಹೇಳುವ ದ್ವಿರುಕ್ತಿಯೂ ಉಂಟು ಉದಾಹರಣೆ.

ಕಾಯಿಕಸರು, ಬಟ್ಟೆಬರೆ, ಹಣ್ಣುಕಾಯಿ, ಸೊಪ್ಪುಸದೆ, ಮನೆಮಠ, ವ್ಯಾಜ್ಯಸಾಜ್ಯ, ಕಾಸುವೀಸ, ಮಕ್ಕಳುಮರಿ, ಸಾಲಸೋಲ, ಗಿಡಗೆಂಟೆ, ದವಸಧಾನ್ಯ.

(*l*) ದ್ವಿರುಕ್ತಿಯಲ್ಲಿ ೨ನೇ ಪದದ ಮೊದಲಕ್ಷರಕ್ಕೆ "ಗಿ" ಎಂಬುದನ್ನು ಸೇರಿಸಿ ಹೇಳುವುದುಂಟು. ಅದು ನಿಷೇಧಾರ್ಥವನ್ನು (ಇಲ್ಲವೆಂಬರ್ಥವನ್ನು) ಸೂಚಿಸುವುದು.

ಉದಾಹರಣೆ.

ನನ್ನ ಹತ್ತಿರ ಹಣಗಿಣವಿಲ್ಲ. ಅವನಿಗೋ ರೋಗಗೀಗವಿಲ್ಲ. ಆ ಮಾತು ಗೀತು ಹಾಗಿರಲಿ. (ಇ)

ಕ್ರಿಯಾಪ್ರಕರಣಂ.

74. ನಾವು ನೋಡುತ್ತಿರುವ ವಸ್ತುಗಳಿಂದ ಏನಾದರೂ ಒಂದು ಕೆಲಸ ನಡೆಯುತ್ತಿರುವುದು ಸ್ವಾಭಾವಿಕವಾಗಿಯೂ ಎಲ್ಲರಿಗೂ ತಿಳಿದಂತೆಯೂ ಇರುವುದಷ್ಟೆ? ಕೆಲಸ ನಡೆಯಲಿಕ್ಕೆ (ಕ್ರಿಯೆಗೆ) ಕಾರಣಭೂತವಾಗಿರುವ ಆ ವಸ್ತುಗಳನ್ನು ಸೂಚಿಸುವ ಶಬ್ದಗಳೇ ಕರ್ತೃಪದ(*34)ಗಳೆಂದೂ, ಅವುಗಳಿಂದೇನು ನಡೆಯುತ್ತದೆ? (ಯಾವ ಕಾರ್ಯವಾಗುತ್ತದೆ) ಎಂಬುದನ್ನು ಸೂಚಿಸುವ ಶಬ್ದಗಳೇ ಕ್ರಿಯಾಪದಗಳೆಂದೂ ಆ ಕರ್ತೃಪದವು ಅಪೇಕ್ಷಿಸುವ ವಸ್ತು ಅಥವಾ ಭಾವಗಳೇ ಕರ್ಮಪದಗಳೆಂದೂ ತಿಳಿಯಬೇಕು.

ಉದಾಹರಣೆ.

ಕರ್ತೃ	ಕ್ರಿಯೆ	ಕರ್ತೃ	ಕರ್ಮ	ಕ್ರಿಯೆ
ಸೂರ್ಯನು -	ಹೊಳೆಯುತ್ತಾನೆ -	ಅರಸನು -	ಪ್ರಜೆಗಳನ್ನು -	ಪಾಲಿಸುತ್ತಾನೆ.
ಗಿಡಗಳು	ಬೆಳೆಯುತ್ತವೆ.	ಕುಂಬಾರನು	ಗಡಿಗೆಯನ್ನು	ಮಾಡುತ್ತಾನೆ.

ಈ ಉದಾಹರಣೆಗಳಲ್ಲಿರುವ ಹೊಳೆಯುತ್ತಾನೆ, ಬೆಳೆಯುತ್ತವೆ, ಪಾಲಿಸುತ್ತಾನೆ, ಮಾಡುತ್ತಾನೆ ಎಂಬುವು ಸೂರ್ಯನು, ಗಿಡಗಳು, ಅರಸನು,

ಕುಂಬಾರನು ಎಂಬ ಕರ್ತೃಪದಗಳಿಂದುಂಟಾದ ಕೆಲಸ(ಕ್ರಿಯಾಪದ) ಗಳಾಗಿವೆ. ಈ ಕ್ರಿಯಾಪದಗಳಲ್ಲಿ ಕಾಣುವ ಹೊಳೆ, ಬೆಳೆ, ಪಾಲಿಸು, ಮಾಡುಎಂಬುವು ಅವುಗಳ ಮೂಲಶಬ್ದ ಅಥವಾ ಧಾತುಗಳೆಂದೂ ಇವು ಗಳ ಮೇಲೆ ಸೇರಿರುವ ಉತ್ತಾನೆ, ಉತ್ತವೆ, ಉತ್ತಾನೆ, ಉತ್ತಾನೆ ಎಂಬುವು ಕ್ರಿಯಾ ಅಥವಾ ಆಖ್ಯಾತಪ್ರತ್ಯಯಗಳೆಂದೂ ತಿಳಿಯಬೇಕು.

ಆದರಿಂದ :—

ಸೂ ॥ ಕ್ರಿಯಾರ್ಥವನ್ನು ಕೊಡುವುದಾಗಿಯೂ, ವಿಭಕ್ತಿಪ್ರತ್ಯಯವಿಲ್ಲ ದೆಯೂ ಇರುವ ಶಬ್ದವು ಧಾತು (verb) ವೆನಿಸುವುದು. (1)

75. ಕನ್ನಡಭಾಷೆಯಲ್ಲುಪಯೋಗಿಸುವ ಧಾತುಗಳಲ್ಲಿ ತಾನಾಗಿಯೇ ಇರುವುದು ಸಹಜಧಾತುವೆಂದೂ, ಮೊದಲು ಧಾತುವಾಗಿರದೆ ಇಸು ಪ್ರತ್ಯಯ ಸೇರಿದಮೇಲೆ ಧಾತುವಾಗುವುದು ಹೊಸಧಾತು ಅಥವಾ ಪ್ರತ್ಯಯಾಂತಧಾತು ವೆಂದೂ 2 ವಿಧವು. ಉದಾಹರಣೆ.

ಸಹಜಧಾತು	ಪ್ರತ್ಯಯಾಂತ ಅಥವಾ ಹೊಸಧಾತು
ನಡೆ, ಹೋಗು	ಅನುಭವಿಸು, ಕಳವಳಿಸು, ಧಗಧಗಿಸು.
ಕರೆ, ಮಾಡು	ಇಲ್ಲಿ ಅನುಭವ, ಕಳವಳ, ಧಗಧಗ ಎಂಬ ಶಬ್ದ ಗಳ ಮೇಲೆ ಇಸು ಪ್ರತ್ಯಯ ಸೇರಿ ಧಾತುಗಳಾ ಗಿವೆ.

76. ಧಾತುಗಳಲ್ಲಿ ಕೆಲವಕ್ಕೆ ಕರ್ತೃಪದ ಮಾತ್ರವೇ ಬೇಕಾಗುವುದು. ಕೆಲವಕ್ಕೆ ಕರ್ಮಪದವೂ ಬೇಕಾಗಿರುವುದು. ಇವುಗಳಲ್ಲಿ ಮೊದಲನೆಯ ತರದ ಧಾತುಗಳಿಗೆ ಅಕರ್ಮಕ (ಕರ್ಮಪದವಿಲ್ಲದ) ಧಾತುಗಳೆಂದೂ, ಅವುಗಳನ್ನು ವಾಕ್ಯಗಳಲ್ಲುಪಯೋಗಿಸುವ ಕ್ರಮಕ್ಕೆ ಅಕರ್ಮಕ ಪ್ರಯೋಗವೆಂದೂ ಹೆಸರು. ಎರಡನೆಯ ತರದ ಧಾತುಗಳಿಗೆ ಸಕರ್ಮಕ (ಕರ್ಮಪದವಿರುವ) ಧಾತುಗ ಳೆಂದೂ, ಅವುಗಳನ್ನು ವಾಕ್ಯದಲ್ಲುಪಯೋಗಿಸುವ ಕ್ರಮಕ್ಕೆ ಸಕರ್ಮಕಪ್ರಯೋ ಗವೆಂದೂ ಹೆಸರು. ಉದಾಹರಣೆ.

ಅಕರ್ಮಕ ಪ್ರಯೋಗಕ್ಕೆ	ಸಕರ್ಮಕ ಪ್ರಯೋಗಕ್ಕೆ
ಮಳೆ ಬೀಳುತ್ತದೆ.	ಸಜ್ಜನರು ಲೋಕಸುಖವನ್ನು ಬಯಸುತ್ತಾರೆ.

(1) ಧಾತುವನ್ನು ಕ್ರಿಯಾಪ್ರಕೃತಿಯೆಂದೂ ಹೇಳುವರು :—ಧಾತುವಿಗೆ ಪ್ರತ್ಯಯ ಸೇರಿದ ಮೇಲೆ ಪದವಾಗುವುದರಿಂದ ಧಾತುವೂ ಪ್ರಕೃತಿಯೆನಿಸಿತು. ಹೀಗೆಯೇ ನಾಮ ಪ್ರಕೃತಿ ಅಥವಾ ಪ್ರಾತಿಪದಿಕ. (*29)

77. ಈ ಮೇಲಣ ಉದಾಹರಣೆಗಳಿಂದ ಅಕರ್ಮಕ ಪ್ರಯೋಗದಲ್ಲಿ ಕರ್ತೃ ಕ್ರಿಯೆಗಳೇ ಬರುವುವೆಂದೂ, ಸಕರ್ಮಕ ಪ್ರಯೋಗದಲ್ಲಿ ಕರ್ತೃ, ಕರ್ಮ, ಕ್ರಿಯೆ ಮೂರೂ ಬರುವುವೆಂದೂ ಗೊತ್ತಾಗುತ್ತದೆ. ಇದರಿಂದ ಕರ್ತ್ರರ್ಥದಲ್ಲಿ ಅಕರ್ಮಕ ಮತ್ತು ಸಕರ್ಮಕ ಧಾತುಗಳ ಮೇಲೆಯೂ, ಕರ್ಮಾರ್ಥದಲ್ಲಿ ಸಕರ್ಮಕ ಧಾತುಗಳ ಮೇಲೆಯೂ ಕ್ರಿಯಾ (ಆಖ್ಯಾತ) ಪ್ರತ್ಯಯಗಳು ಬರುವುವು.

ಉದಾಹರಣೆ.

ಕರ್ತ್ರರ್ಥಕ್ಕೆ	ಕರ್ಮಾರ್ಥಕ್ಕೆ
(*a*) ಕಲ್ಲು ಉರುಳಿತು.	
(*b*) ಬಡಗಿ ಪೆಟ್ಟಿಗೆಯನ್ನು ಮಾಡಿದನು.	(*d*) ಬಡಗಿಯಿಂದ ಪೆಟ್ಟಿಗೆ ಮಾಡಲ್ಪಟ್ಟಿತು.
(*c*) ಹುಡುಗರು ಉಪಾಧ್ಯಾಯನನ್ನು ಪ್ರಶ್ನೆಯನ್ನು ಕೇಳಿದರು.	(*e*) ಹುಡುಗರಿಂದ ಉಪಾಧ್ಯಾಯನು ಪ್ರಶ್ನೆಯನ್ನು ಕೇಳಲ್ಪಟ್ಟನು.

ಇಲ್ಲಿ *a b c* ಗುರ್ತಿನ ವಾಕ್ಯಗಳಲ್ಲಿ ಯಾವುದು, ಯಾರು, ಏನು ಎಂದು ಪ್ರಶ್ನೆಮಾಡಿದಾಗ ಕಲ್ಲು, ಬಡಗಿ, ಹುಡುಗರು ಎಂಬ ಪದಗಳು ಉತ್ತರಗಳಾಗಿ ಆ ವಾಕ್ಯಗಳಲ್ಲಿ ಕರ್ತೃಪದಗಳಾಗಿರುವುವು. ಆದರಿಂದ ಇವು ಮೂರೂ ಕರ್ತ್ರರ್ಥಕ ವಾಕ್ಯಗಳು. (1) (*d e*) ಗುರ್ತಿನ ವಾಕ್ಯಗಳಲ್ಲಿ ಅದೇ (ಯಾವುದು, ಯಾರು, ಏನು) ಪ್ರಶ್ನೆಗಳಿಗೆ ಪೆಟ್ಟಿಗೆ, ಉಪಾಧ್ಯಾಯನು, ಪ್ರಶ್ನೆ ಎಂಬ ಪದಗಳು ಉತ್ತರಗಳಾಗಿ ಕರ್ಮಪದಗಳಾಗಿರುವುವು ಆದರಿಂದ ಆ ವಾಕ್ಯಗಳು ಕರ್ಮಾರ್ಥಕ(2) ಅಥವಾ ಕರ್ಮಣ್ಯರ್ಥಕ ವಾಕ್ಯಗಳಾದುವು. (*c e*) ಗುರ್ತಿನ

(a) ಕಲ್ಲು ಉರುಳಿತು ಎಂಬ ವಾಕ್ಯದಲ್ಲಿ ಉರುಳಿತು ಎಂಬ ಕ್ರಿಯೆಗೆ ಯಾವುದು ಎಂದು ಪ್ರಶ್ನೆ ಮಾಡಿದಾಗ ಕಲ್ಲು ಎಂದು ಉತ್ತರಬಂದು ಅದು ವಾಕ್ಯದಲ್ಲಿ ಕರ್ತೃವಾಗಿದೆ. (ಕರ್ಮಪದ ಬೇಕಾಗಿಲ್ಲ.) (b) ಸಕರ್ಮಕ ಪ್ರಯೋಗದಲ್ಲಿ (ಬಡಗಿ ಪೆಟ್ಟಿಗೆಯನ್ನು ಮಾಡಿದನು, ಹುಡುಗರು ಉಪಾಧ್ಯಾಯನನ್ನು ಪ್ರಶ್ನೆಯನ್ನು ಕೇಳಿದರು) ಎಂಬ ವಾಕ್ಯಗಳಲ್ಲಿ ಮಾಡಿದನು, ಕೇಳಿದರು ಎಂಬ ಕ್ರಿಯೆಗಳಿಗೆ ಯಾರನ್ನು ಏನನ್ನು ಎಂದು ಪ್ರಶ್ನೆ ಮಾಡಲು ಪೆಟ್ಟಿಗೆಯನ್ನು, ಉಪಾಧ್ಯಾಯನನ್ನು, ಪ್ರಶ್ನೆಯನ್ನು ಎಂಬ ಕರ್ಮಪದಗಳು ಬೇಕಾಗಿವೆ. ಆದರಿಂದ ಈ ವಾಕ್ಯಗಳು ಸಕರ್ಮಕಗಳೇ ಹೊರತು ಅಕರ್ಮಕಗಳಲ್ಲ.

(1) ಕರ್ತ್ರರ್ಥಕವೆಂದರೆ :-ಕ್ರಿಯಾಪದದ ಅರ್ಥದಿಂದ ಕರ್ತೃಪದ ತೋರಿಸಲ್ಪಡುವುದು.
(2) ಕರ್ಮಾರ್ಥಕ ,, ,, ,, ಕರ್ಮಪದ ,,

ಅದು ಹೇಗೆಂದರೆ:—ಕ್ರಿಯೆಗೆ ಯಾರು ಏನು, ಯಾವುದು ಎಂದು ಪ್ರಶ್ನೆ ಮಾಡಿದಾಗ ಬರುವ ಉತ್ತರವು ವಾಕ್ಯದಲ್ಲಿ ಕರ್ತೃವಾಗಿದ್ದರೆ ಕರ್ತ್ರರ್ಥಕವೆಂದೂ, ಕರ್ಮಪದವಾಗಿದ್ದರೆ ಕರ್ಮಾರ್ಥಕವೆಂದೂ ತಿಳಿಯಬೇಕು. ಇವುಗಳ ಭೇದವು ಗೊತ್ತಾಗುವುದು ಹೇಗೆಂದರೆ:—ಪ್ರಥಮಾಂತ ಕರ್ತೃ, ದ್ವಿತೀಯಾಂತ ಕರ್ಮ, ಸಾಧಾರಣ ಕ್ರಿಯಾಪದ ಇರುವುದು ಕರ್ತ್ರರ್ಥಕ, ತೃತೀಯಾಂತ ಕರ್ತೃ, ಪ್ರಥಮಾಂತ ಕರ್ಮ. ಅಲ್ಪಡು ಸೇರಿದ ಕ್ರಿಯಾಪದ ಇರುವುದು ಕರ್ಮಾರ್ಥಕವು.

ವಾಕ್ಯಗಳಲ್ಲಿ ಎರಡು ಕರ್ಮಪದಗಳಿರುವುದರಿಂದ ದ್ವಿಕರ್ಮಕಪ್ರಯೋಗ ವಾಕ್ಯಗಳೆನಿಸಿದುವು. ಇಲ್ಲಿ ಪ್ರಶ್ನೆ ಎಂಬುದು ಮುಖ್ಯಕರ್ಮ. (Direct object) ಉಪಾಧ್ಯಾಯನೆಂಬುದು ಅಮುಖ್ಯಕರ್ಮ, (Indirect object) ದ್ವಿಕರ್ಮಕ ಪ್ರಯೋಗದ ವಾಕ್ಯವು ಕರ್ಮಾರ್ಥಕದಲ್ಲಿರುವಾಗ ಮುಖ್ಯಕರ್ಮಕ್ಕೆ ದ್ವಿತೀಯಾ ವಿಭಕ್ತಿಯೂ, ಅಮುಖ್ಯಕರ್ಮಕ್ಕೆ ಪ್ರಥಮಾವಿಭಕ್ತಿಯೂ ಬರುವುದುಂಟು.

78. ಧಾತುಗಳಿಗೆ ಆಖ್ಯಾತಪ್ರತ್ಯಯಗಳು ಸೇರುವಾಗ ರೂಪ, ಪುರುಷ, ಲಿಂಗ, ವಚನಗಳನ್ನು ಅನುಸರಿಸಿ ಕ್ರಿಯಾಪದಗಳಲ್ಲಿ ಭೇದ ತೋರುವುದು. ರೂಪಗಳು 6 :—

(1) ಭೂತರೂಪ (ಕಳೆದುಹೋದ ಕಾಲವನ್ನು ಸೂಚಿಸುವುದು).
(2) ವರ್ತಮಾನರೂಪ (ಈಗ ನಡೆಯುತ್ತಿರುವ ಕಾಲವನ್ನು ಸೂಚಿಸುವುದು.)
(3) ಭವಿಷ್ಯದ್ರೂಪ (ಮುಂದೆಬರುವ ಕಾಲವನ್ನು ಸೂಚಿಸುವುದು.)
(4) ವಿಧಿರೂಪ—ಇದಕ್ಕೆ ವಿಧ್ಯಾದಿರೂಪವೆಂದೂ ಹೆಸರುಂಟು. ವಿಧಿಯೆಂದರೆ=ನಿಯಮ, ವಿಧಿ, ಆಜ್ಞೆ, ವಿಜ್ಞಾಪನೆ, ಪ್ರಾರ್ಥನೆ, ಆಶೀರ್ವಾದ ಎಂಬ ಮುಖ್ಯವಾದರ್ಥಗಳಲ್ಲಿ ವಿಧ್ಯಾದಿರೂಪ ಬರುವುದು.
(5) ನಿಷೇಧರೂಪ—ಇದು ಕಾಲತ್ರಯಭೇದವಿಲ್ಲದೆ ನಿಷೇಧ (ಕೂಡದು ಎಂಬ) ದ ಅರ್ಥವನ್ನು ತೋರಿಸುವುದು.
(6) ಸಂಶಯರೂಪ—ಕ್ರಿಯೆನಡೆಯುವುದರಲ್ಲಿ ಸಂದೇಹವನ್ನು ಸೂಚಿಸುವುದು. ಇದಕ್ಕೆ ಹೊಸಗನ್ನಡದಲ್ಲಿ ಮಾತ್ರ ಪ್ರಯೋಗವುಂಟು.

ಪುರುಷಗಳು 3 :—ಉತ್ತಮ ಪುರುಷ (ನಾನು ಅಂದರೆ ಮಾತನಾಡುವವನು.)
,, ಮಧ್ಯಮ ,, (ನೀನು ಅಂದರೆ ಯಾರನ್ನು ಕುರಿತು ಮಾತುಹೇಳಲ್ಪಡುತ್ತದೆಯೋ ಅವನು)
,, ಪ್ರಥಮ ,, (ಅವನು, ಅವರು ಅಂದರೆ—ಆಮಾತು ಯಾರವಿಷಯದಲ್ಲಿ ಉಂಟಾಯಿತೋ, ಅಥವಾ ಯಾರನ್ನು ಅಥವಾ ಯಾವುದನ್ನು ಕುರಿತು ಈ ಇಬ್ಬರು ಮಾತನಾಡುವರೋ ಅವನು ಅಥವಾ ಆ ವಸ್ತು.)

ಲಿಂಗಗಳು 3 ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ *40

ವಚನಗಳು 3, ಇವುಗಳಲ್ಲಿ ಮುಖ್ಯವಾಗಿರುವುದು ಎರಡು.(*41)

79. ಧಾತುಗಳಿಗೆ ಕರ್ತ್ರರ್ಥಕ ಕರ್ಮಾರ್ಥಕಗಳಲ್ಲಿ ಕ್ರಿಯಾಪ್ರತ್ಯಯಗಳು ಸೇರುವಾಗ ಭೂತರೂಪಕ್ಕೆ ದ, ವರ್ತಮಾನರೂಪಕ್ಕೆ ಉತ್ತಾ (ಹ.ಗ.ದಲ್ಲಿ "ದ ಪ"), ಭವಿಷ್ಯದ್ರೂಪಕ್ಕೆ ವ ಎಂಬ ಆಗಮುಗಳು ಬರುವುವು. ವಿಧಿ, ನಿಷೇಧ ರೂಪಗಳಿಗೆ ಆಗಮುವಿಲ್ಲ. ಹೊಸಗನ್ನಡದಲ್ಲಿ ಮಾತ್ರ ಬರುವ ಸಂಶಯರೂಪಕ್ಕೆ ಕೆಲವು ಧಾತುಗಳಲ್ಲಿ ದಕಾರಾಗಮ ಬರುವುದುಂಟು. ಈ ಆಗಮುಗಳಿಗೆ ದಕಾರ ಮೊದಲಲ್ಲಿ ಬರುವುದರಿಂದ ದಕಾರಾದಿ ಪ್ರತ್ಯಯಗಳೆಂದೂ, ವಿಕರಣ ಪ್ರತ್ಯಯಗಳೆಂದೂ ಹೆಸರುಂಟು. ದಕಾರಾದಿ ಪ್ರತ್ಯಯಗಳು—ದ, ದು, ದರೆ (ಹ.ಗ.ದಲ್ಲಿ) ದ, ದ ಪ, ದು, ದೊಡೆ ಎಂಬುವು. ಕರ್ಮಾರ್ಥಕದಲ್ಲಿ ಪತ್ಯಯಗಳು ಸೇರುವಾಗ ಧಾತುಪ್ರತ್ಯಯಗಳ ನಡುವೆ "ಅಲ್ಪಡು" ಎಂಬ ಆಗಮ ಬರುವುದು.

ಉದಾಹರಣೆ.

	ಕರ್ತ್ರರ್ಥಕ್ಕೆ	ಕರ್ಮಾರ್ಥಕ್ಕೆ
ಭೂತರೂಪ	ಮಾಡಿದನು, ಮಾಡಿದ, ಮಾಡಿದರೆ, ಹ.ಗ.(ಮಾಡಿದೊಡೆ)	ಮಾಡಲ್ಪಟ್ಟನು, ಮಾಡಲ್ಪಟ್ಟ, ಮಾಡಲ್ಪಟ್ಟರೆ, (ಹ.ಗ. ಮಾಡಲ್ಪಟ್ಟೊಡೆ)
ವರ್ತಮಾನ	ಮಾಡುತ್ತಾನೆ, ಮಾಡುತ್ತಾ.	ಮಾಡಲ್ಪಡುತ್ತಾನೆ, ಮಾಡಲ್ಪಡುತ್ತಾ.
ಭವಿಷ್ಯದ್ರೂಪ	ಮಾಡುವನು, ಮಾಡುವ.	ಮಾಡಲ್ಪಡುವನು, ಮಾಡಲ್ಪಡುವ.

80. ಈ ಕೆಳಗೆ ಹೇಳುವ ಅರ್ಥಗಳಲ್ಲಿ ದ್ವಿಕರ್ಮಕ ಪ್ರಯೋಗಗಳು ಬರುತ್ತವೆ.

ಇವುಗಳ ಕರ್ತ್ರರ್ಥಕ ಕರ್ಮಾರ್ಥಕಗಳಲ್ಲಿ ಬರುವ ರೂಪಭೇದಗಳು.

(1) ಹಾಲು ಕರೆಯುವುದು (To milk)
- ಕರ್ತ್ರರ್ಥಕ—ಗೋಪಾಲನು ಹಸುವನ್ನು ಹಾಲನ್ನು ಕರೆದನು.
- ಕರ್ಮಾರ್ಥಕ— ಗೋಪಾಲನಿಂದ ಹಸುವು ಹಾಲನ್ನು ಕರೆಯಲ್ಪಟ್ಟಿತು.

(2) ಅಡುವುದು (To cook)
- ಕರ್ತ್ರರ್ಥ— ಅಡಿಗೆಯವನು ಅಕ್ಕಿಯನ್ನು ಅನ್ನವನ್ನು ಮಾಡಿದನು.
- ಕರ್ಮಾರ್ಥಕ—ಅಡಿಗೆಯವನಿಂದ ಅಕ್ಕಿ ಅನ್ನವನ್ನು ಮಾಡಲ್ಪಟ್ಟಿತು.

(3) ಯಾಚಿಸುವುದು (To beg)

ಕರ್ತ್ರರ್ಥಕ—ಮಗನು ತಂದೆಯನ್ನು ದುಡ್ಡನ್ನು ಕೇಳಿದನು.
ಕರ್ಮಾರ್ಥಕ—ಮಗನಿಂದ ತಂದೆ ದುಡ್ಡನ್ನು ಕೇಳಲ್ಪಟ್ಟನು.

(4) ಕಡೆಯುವುದು (To churn)

ಕರ್ತ್ರರ್ಥಕ—ಕವಾಡಿಗನು ಮೊಸರನ್ನು ಮಜ್ಜಿಗೆಯನ್ನು ಕಡೆದನು
ಕರ್ಮಾರ್ಥಕ— ಕವಾಡಿಗನಿಂದ ಮೊಸರು ಮಜ್ಜಿಗೆಯನ್ನು ಕಡೆಯಲ್ಪಟ್ಟಿತು.

(5) ಕಟ್ಟು (To tie)

ಕರ್ತ್ರರ್ಥಕ—ವ್ಯಾಪಾರಿಯು ಸಕ್ಕರೆಯನ್ನು ಪೊಟ್ಟಣವನ್ನು ಕಟ್ಟಿದನು.
ಕರ್ಮಾರ್ಥಕ— ವ್ಯಾಪಾರಿಯಿಂದ ಸಕ್ಕರೆ ಪೊಟ್ಟಣವನ್ನು ಕಟ್ಟಲ್ಪಟ್ಟಿತು. (ಇ)

82. ಧಾತುಗಳ ಮೇಲೆ ಕ್ರಿಯಾಪ್ರತ್ಯಯಗಳು ಬರುವುದನ್ನು ಕುರಿತು ಕೆಲವು ನಿಯಮಗಳು.

(1) ಉಳ್ ಧಾತುವಿಗೆ ದಕಾರಾದಿ ಪ್ರತ್ಯಯಗಳು ಬಂದಾಗ (ಹೊ.ಗ.) ದಲ್ಲಿ ಇಕಾರ ಆಗಮ ಬರುವುದು (ಹ.ಗ.)ದಲ್ಲಿ ಧಾತುವಿನ ಉಕಾರಕ್ಕೆ ಒಕಾರ ಆದೇಶವಾಗುವುದಲ್ಲದೆ ಕಾಲಸೂಚಕ ಆಗಮಗಳು ಬರುವುದಿಲ್ಲ.

ಉದಾಹರಣೆ.

(ಹೊ. ಗ. ಕ್ಕೆ)	ಏ. ವ.	ಬ. ವ.	(ಹ.ಗ.1ಕ್ಕೆ
ಉ. ಪು.	ಉಳಿದೆನು,	ಉಳಿದೆವು	ಒಳೆಂ - ಒಳೆವು
ಮ. ಪು.	ಉಳಿದೆ,	ಉಳಿದಿರಿ	ಒಳೆಯ್-ಒಳೆರ್
ಪ್ರ. ಪು. ಪುಲ್ಲಿಂಗ-	ಉಳಿದನು,	ಉಳಿದರು	ಒಳಂ-ಒಳರ್
ಸ್ತ್ರೀಲಿಂಗ-	ಉಳಿದಳು,	ಉಳಿದರು	ಒಳರ್-ಒಳರ್
ನಪುಂ -	ಉಳಿದುದು / ಉಳಿಯಿತು	ಉಳಿದುವು	ಒಳದು-ಒಳವು

(2) ಆದಿಯಲ್ಲಿ ಗುರುವುಳ್ಳ (*125-1)ಅಥವಾ ಎರಡಕ್ಕಿಂತ ಹೆಚ್ಚಾದ ಲಘ್ವಕ್ಷರ(*125-2)ಗಳುಳ್ಳ ಧಾತುಗಳಿಗೆ ದಕಾರಾದಿ ಪ್ರತ್ಯಯ

ಗಳು ಬಂದಾಗ ಧಾತುವಿನ ಕೊನೆಯಕ್ಷರಕ್ಕೆ ಇಕಾರಾದೇಶವಾಗುವುದು. ದು ಎಂಬ ದಕಾರಾದಿ ಪ್ರತ್ಯಯ (*99) ಬಂದಾಗ ಆದಕ್ಕೆ ಲೋಪವಾಗುವುದು.

ಉದಾಹರಣೆ.

ಆದಿ ಗುರುವುಳ್ಳ ಧಾತುವಿಗೆ—ಮಾಡು+ದ+ಅನು=ಮಾಡಿದನು, ಮಾಡಿದರೆ, (ಇಲ್ಲಿ ಮಾ ಎಂಬುದು ಆದಿಗುರು.)

,, —ಎತ್ತು+ದ+ಅನು=ಎತ್ತಿದನು, ಎತ್ತಿ, ಎತ್ತಿದರೆ, ಹ. ಗ. (ಎತ್ತಿದೊಡೆ) ಇಲ್ಲಿ ಎ ಎಂಬುದು ಆದಿಗುರು.

ಅನೇಕ ಲಘುಗಳುಳ್ಳ ಧಾತುಗಳಿಗೆ—ಹರಡು+ದ + ಅನು = ಹರಡಿದನು, ಹರಡಿ, ಹರಡಿದರೆ. (ಇಲ್ಲಿ ಧಾತುವಿನಲ್ಲಿ ಮೂರು ಲಘುಗಳಿವೆ.)

ದು ಲೋಪಬಂದಿರುವುದಕ್ಕೆ—ಮಾಡು + ದು = ಮಾಡಿ, ಕಟ್ಟು+ದು=ಕಟ್ಟಿ, ಹರಡು+ದು=ಹರಡಿ. (ಇಲ್ಲಿ ಧಾತುಗಳ ಕೊನೆಯಕ್ಷರ ಉಕಾರಕ್ಕೆ ಇಕಾರಾದೇಶವಾಗಿ ಮುಂದೆ ಬಂದ ದಕಾರಾದಿ ಪ್ರತ್ಯಯ "ದು" ಲೋಪವಾಗಿದೆ.

(3) ಆಗು, ಹೋಗು, ಧಾತುಗಳಿಗೆ ದಕಾರಾದಿ ಪ್ರತ್ಯಯಗಳು ಪರವಾದಾಗಲೂ, "ಇತು" ಪ್ರತ್ಯಯ ಪರವಾದಾಗಲೂ, ಧಾತುವಿನ ಕೊನೆಯಕ್ಷರಕ್ಕೆ ಲೋಪ ಬರುವುದು. ಭವಿಷ್ಯದ್ರೂಪದ ವಕಾರಕ್ಕೆ "ಪ"ಕಾರಾದೇಶ ಬರುವುದು.

ಉದಾಹರಣೆ.

ದಕಾರ ಮತ್ತು ಇತು ಪರವಾದುದಕ್ಕೆ
ಆಗು+ದ+ಅನು=ಆದನು, ಹೋದನು.
ಆಗು+ದ+ಇತು=ಆಯಿತು, ಹೋಯಿತು.
(ಹ. ಗ. ದಲ್ಲಿ ಆಯ್ತು, ಪೋಯ್ತು.)

ವಕಾರಕ್ಕೆ ಪಕಾರ—ಆಗು+ವಂ=ಅಪ್ಪಂ, ಪೋಗು+ವಂ=ಪೋಪಂ.
ಅಪ್ಪುದು. ಪೋಪುದು. (ಇ)

ಇಲ್ಲಿ ಎಲ್ಲಾ ರೂಪಗಳಲ್ಲಿಯೂ ಧಾತುವಿನ ಕೊನೆಯಕ್ಷರ "ಗು" ಲೋಪವಾಗಿದೆ.

(4) ಏಳು, ಬೀಳು, ಕಳು, ಇರು ಧಾತುಗಳಿಗೆ ದಕಾರಾದಿ ಪ್ರತ್ಯಯಗಳು ಬಂದಾಗ ಆದಿ ದೀರ್ಘಕ್ಕೆ ಹ್ರಸ್ವವೂ, ಕೊನೆಯಕ್ಷರಕ್ಕೆ ದ್ವಿತ್ವ (*10) ದಕಾರವೂ ಬರುವುದು.

ಉದಾಹರಣೆ.

ಏಳು+ದ+ಅನು=ಎದ್ದನು. (ಇಲ್ಲಿ ದೀರ್ಘ ಏಕಾರಕ್ಕೆ ಹ್ರಸ್ವ ಬಂದು "ಳು"ಗೆ "ದ್ದ" ಬಂದಿದೆ. ಹೀಗೆಯೇ ಬೀಳು, ಕಳು, ಇರು.)

(5) ಪಾಲಿಸು ಎಂಬ ಅರ್ಥವುಳ್ಳ ಆಳು ಧಾತುವಿಗೆ ದಕಾರಾದಿ ಪ್ರತ್ಯಯಗಳು ಬಂದಾಗ ಮೇಲಿನ ಸೂತ್ರದಂತೆ ಆಳಿದನು, ಆಳಿ, ಆಳುವನು ಎಂದಾಗುವುದು. ಅದೇ ಧಾತುವಿಗೆ ಮುಳುಗು ಎಂಬ ಅರ್ಥ ಬರುವಾಗ ಅಳ್ದನು, (ಹೊ.ಗ. ಅದ್ದನು) ಅಳ್ದು (ಅದ್ದು) ಅಳ್ದರೆ, (ಅದ್ದರೆ) ಎಂದಾಗುವುದು.

81 ಈ ಕೆಳಗಣ ಪಟ್ಟಿಯಲ್ಲಿ ಕರ್ತ್ರರ್ಥಕ, ಕರ್ಮಾರ್ಥಕ, ಕ್ರಿಯಾರೂಪಗಳು ಕ್ರಿಯಾಪ್ರತ್ಯಯಗಳೊಡನೆ ತೋರಿಸಲ್ಪಟ್ಟಿವೆ.

ಪುರುಷ ವಚನ	ವರ್ತಮಾನರೂಪ			ಭೂತರೂಪ			ಭವಿಷ್ಯದ್ರೂಪ		
	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ
ಉ. ಪು. ಏ. ವ.	ಏನೆ	ಕರೆಯುತ್ತೇನೆ	ಕರೆಯಲ್ಪಡುತ್ತೇನೆ	ಎನು (1)	ಕರೆದೆನು (2)	ಕರೆಯಲ್ಪಟ್ಟೆನು	ವು	ಕರೆವೆನು	ಕರೆಯಲ್ಪಡುವೆನು
								ಕರೆಯುವೆನು	,,
(ಹ. ಗ.)	ಎಂ	ಕರೆದಪೆಂ	ಕರೆಯಲ್ಪಟ್ಟಪೆಂ	ಎಂ	ಕರೆದೆಂ	ಕರೆಯಲ್ಪಟ್ಟೆಂ	ಎಂ	ಕರೆವೆಂ	ಕರೆಯಲ್ಪಡುವೆಂ
ಬಹುವಚನ	ಏವೆ	ಕರೆಯುತ್ತೇವೆ	ಕರೆಯಲ್ಪಡುತ್ತೇವೆ	ಎವು	ಕರೆದೆವು	ಕರೆಯಲ್ಪಟ್ಟೆವು	ಎವು	ಕರೆವೆವು	ಕರೆಯಲ್ಪಡುವೆವು
								ಕರೆಯುವೆವು	
(ಹ. ಗ.)	ಎವು	ಕರೆದಪೆವು	ಕರೆಯಲ್ಪಟ್ಟಪೆವು	,,	ಕರೆದೆವು	ಕರೆಯಲ್ಪಟ್ಟೆವು	ಎವು	ಕರೆವೆವು	ಕರೆಯಲ್ಪಡುವೆವು
ಮ. ಪು. ಏ. ವ.	ಈಯೆ	ಕರೆಯುತ್ತೀಯೆ	ಕರೆಯಲ್ಪಡುತ್ತೀಯೆ	ಎ	ಕರೆದೆ (3)	ಕರೆಯಲ್ಪಟ್ಟೆ	ಎ	ಕರೆವೆ	ಕರೆಯಲ್ಪಡುವೆ
								ಕರೆಯುವೆ	
(ಹ. ಗ.)	ಅಯ್	ಕರೆದಪಯ್	ಕರೆಯಲ್ಪಟ್ಟಪಯ್	ಅಯ್	ಕರೆದಯ್	ಕರೆಯಲ್ಪಟ್ಟಯ್	ಅಯ್	ಕರೆವಯ್	ಕರೆಯಲ್ಪಡುವಯ್
ಬಹುವಚನ	ಈರಿ	ಕರೆಯುತ್ತೀರಿ	ಕರೆಯಲ್ಪಡುತ್ತೀರಿ	ಇರಿ	ಕರೆದಿರಿ	ಕರೆಯಲ್ಪಟ್ಟಿರಿ	ಇರಿ	ಕರೆವಿರಿ	ಕರೆಯಲ್ಪಡುವಿರಿ
								ಕರೆಯುವಿರಿ	
(ಹ. ಗ.)	ಇರ್	ಕರೆದಪಿರ್	ಕರೆಯಲ್ಪಟ್ಟಪಿರ್	ಇರ್	ಕರೆದಿರ್	ಕರೆಯಲ್ಪಟ್ಟಿರ್	ಇರ್	ಕರೆವಿರ್	ಕರೆಯಲ್ಪಡುವಿರ್
ಪ್ರ. ಪು. ಪುಲ್ಲಿಂಗ ಏ. ವ.	ಆನೆ	ಕರೆಯುತ್ತಾನೆ	ಕರೆಯಲ್ಪಡುತ್ತಾನೆ	ಅನು (4)	ಕರೆದನು	ಕರೆಯಲ್ಪಟ್ಟನು	ಅನು	ಕರೆವನು	ಕರೆಯಲ್ಪಡುವನು
								ಕರೆಯುವನು	
(ಹ. ಗ.)	ಅಂ	ಕರೆದಪಂ	ಕರೆಯಲ್ಪಟ್ಟಪಂ	ಅಂ	ಕರೆದಂ	ಕರೆಯಲ್ಪಟ್ಟಂ	ಅಂ	ಕರೆವಂ	ಕರೆಯಲ್ಪಡುವಂ
ಸ್ತ್ರೀಲಿಂಗ ಏ. ವ.	ಆಳೆ	ಕರೆಯುತ್ತಾಳೆ	ಕರೆಯಲ್ಪಡುತ್ತಾಳೆ	ಅಳು	ಕರೆದಳು	ಕರೆಯಲ್ಪಟ್ಟಳು	ಅಳು	ಕರೆವಳು	ಕರೆಯಲ್ಪಡುವಳು
								ಕರೆಯುವಳು	
(ಹ. ಗ.)	ಅಳ್	ಕರೆದಪಳ್	ಕರೆಯಲ್ಪಟ್ಟಪಳ್	ಅಳ್	ಕರೆದಳ್	ಕರೆಯಲ್ಪಟ್ಟಳ್	ಅಳ್	ಕರೆವಳ್	ಕರೆಯಲ್ಪಡುವಳ್
ಪುಂ. ಸ್ತ್ರೀ. ಬ. ವ.	ಆರೆ	ಕರೆಯುತ್ತಾರೆ	ಕರೆಯಲ್ಪಡುತ್ತಾರೆ	ಅರು	ಕರೆದರು	ಕರೆಯಲ್ಪಟ್ಟರು	ಅರು	ಕರೆವರು	ಕರೆಯಲ್ಪಡುವರು
								ಕರೆಯುವರು	
(ಹ. ಗ.)	ಅರ್	ಕರೆದಪರ್	ಕರೆಯಲ್ಪಟ್ಟಪರ್	ಅರ್	ಕರೆದರ್	ಕರೆಯಲ್ಪಟ್ಟರ್	ಅರ್	ಕರೆವರ್	ಕರೆಯಲ್ಪಡುವರ್
ನಪುಂ. ಏ.	ಅದೆ	ಕರೆಯುತ್ತದೆ	ಕರೆಯಲ್ಪಡುತ್ತದೆ	ಉದು	ಕರೆದುದು	ಕರೆಯಲ್ಪಟ್ಟುದು	ಉದು	ಕರೆವುದು	ಕರೆಯಲ್ಪಡುವುದು
				ಇತು (5)	ಕರೆಯಿತು	ಕರೆಯಲ್ಪಟ್ಟಿತು		ಕರೆಯುವುದು	
(ಹ. ಗ.)	ಉದು	ಕರೆದಪುದು	ಕರೆಯಲ್ಪಟ್ಟಪುದು	ಉದು	ಕರೆದುದು	ಕರೆಯಲ್ಪಟ್ಟುದು	ಉದು	ಕರೆವುದು	ಕರೆಯಲ್ಪಡುವುದು
				ಇತು	ಕರೆಯಿತು	ಕರೆಯಲ್ಪಟ್ಟಿತು			
ಬಹುವಚನ	ಅವೆ	ಕರೆಯುತ್ತವೆ	ಕರೆಯಲ್ಪಡುತ್ತವೆ	ಉವು	ಕರೆದುವು	ಕರೆಯಲ್ಪಟ್ಟುವು	ಉವು	ಕರೆವುವು	ಕರೆಯಲ್ಪಡುವುವು
				ಅವು	ಕರೆದವು	ಕರೆಯಲ್ಪಟ್ಟವು	ಅವು	ಕರೆಯುವವು	ಕರೆಯಲ್ಪಡುವವು
(ಹ. ಗ.)	ಉವು	ಕರೆದಪುವು	ಕರೆಯಲ್ಪಟ್ಟಪುವು	ಉವು	ಕರೆದುವು	ಕರೆಯಲ್ಪಟ್ಟುವು	ಉವು	ಕರೆವುವು	ಕರೆಯಲ್ಪಡುವುವು

(1) ಭೂತಭವಿಷ್ಯದ್ರೂಪಗಳಿಗೂ ನಿಷೇಧರೂಪಕ್ಕೂ ಕ್ರಿಯಾಪ್ರತ್ಯಯಗಳಲ್ಲಿ ಭೇದವಿಲ್ಲ. ಆದರೂ ನಿಷೇಧರೂಪಕ್ಕೆ ವಿಕರಣ ಪ್ರತ್ಯಯ (*70) ಗಳು [illegible] [illegible] "ಅ" ಬರುವುದು. ಇಷ್ಟೇ ಭೇದ. (2) ಇಲ್ಲಿ ಪ್ರತ್ಯಯ ಲೋಪವಾಗಿ ನಾನು ಕರೆದೆ, [illegible] [illegible] (3) [illegible] [illegible] (4) ವರ್ತಮಾನ ಭೂತ ಭವಿಷ್ಯದ್ರೂಪಗಳಲ್ಲಿ ಪ್ರಥಮ ಪುರುಷಕ್ಕೆ ಗುಂ, ಕುಂ ಎಂಬ ಪ್ರತ್ಯಯಗಳು ಏಕವಚನ, ಬಹುವಚನಗಳೆರಡಕ್ಕೂ [illegible] [illegible] (5) ಹ. ಗ. [illegible]

ಪುರುಷ ವಚನ	ನಿಷೇಧರೂಪ			ವಿಧ್ಯಾದಿರೂಪ			ಸಂಶಯರೂಪ		
	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ	ಪ್ರತ್ಯಯ	ಕರ್ತ್ರರ್ಥಕ	ಕರ್ಮಾರ್ಥಕ
ಉ. ಪು. ಏ. ವ.	ಎನು	ಕರೆಯೆನು	ಕರೆಯಲ್ಪಡೆನು	ವೆ ಉವೆ	ಕರೆವೆ ಕರೆಯುವೆ		ಏನು	ಕರೆದೇನು	ಕರೆಯಲ್ಪಟ್ಟೇನು
(ಹ. ಗ.)	ಎಂ	ಕರೆಯೆಂ	ಕರೆಯಲ್ಪಡೆಂ	ವೆಂ	ಕರೆವೆಂ				
ಬಹುವಚನ	ಎವು	ಕರೆಯೆವು	ಕರೆಯಲ್ಪಡೆವು	ವ ಉವ	ಕರೆವ ಕರೆಯುವ		ಏವು	ಕರೆದೇವು	ಕರೆಯಲ್ಪಟ್ಟೇವು
				ಓಣ	ಕರೆಯೋಣ				
(ಹ. ಗ.)	ಎವು	ಕರೆಯೆವು	ಕರೆಯಲ್ಪಡೆವು	ವಂ	ಕರೆವಂ				
ಮ. ಪು. ಏ. ವ.	ಎ	ಕರೆಯೆ (6)	ಕರೆಯಲ್ಪಡೆ	ಉದು	ಕರೆವುದು, ಕರೆ,(7)				
					ಕರೆಯುವುದು		ಈಯೆ	ಕರೆದೀಯೆ	ಕರೆಯಲ್ಪಟ್ಟೀಯೆ
(ಹ. ಗ.)	ಅಯ್	ಕರೆಯಯ್	ಕರೆಯಲ್ಪಡಯ್	,,	ಕರೆವುದು, ಕರೆ (9)				
ಬಹುವಚನ	ಅರಿ	ಕರೆಯರಿ (8)	ಕರೆಯಲ್ಪಡರಿ	ಇರಿ	ಕರೆಯಿರಿ		ಈರಿ	ಕರೆದೀರಿ	ಕರೆಯಲ್ಪಟ್ಟೀರಿ
(ಹ. ಗ.)	,,	ಕರೆಯರಿ	ಕರಿಯಲ್ಪಡರಿ	ಇಂ	ಕರೆಯಿಂ				
ಪ್ರ.ಪು.ಪುಲ್ಲಿಂಗ ಏ.ವ.	ಅನು	ಕರೆಯನು	ಕರಿಯಲ್ಪಡನು	ಅಲಿ	ಕರೆಯಲಿ	ಕರ್ತ್ರರ್ಥಕ—ಕರೆಯಲಿ; ಕರ್ಮಾರ್ಥಕ—ಕರೆಯಲ್ಪಡಲಿ ಕರೆಯಲ್ಪಡುಗೆ	ಆನು	ಕರೆದಾನು	ಕರೆಯಲ್ಪಟ್ಟಾನು
				ಉದು	ಕರೆವುದು				
				ಗೆ. ಕೆ.	ಕರೆಗೆ (ಮಾಳ್ಕೆ)				
(ಹ. ಗ.)	ಅಂ	ಕರೆಯಂ	ಕರೆಯಲ್ಪಡಂ	ಅಲಿ	ಕರೆಯಲಿ				
ಸ್ತ್ರೀಲಿಂಗ ಏ. ವ.	ಅಳು	ಕರೆಯಳು	ಕರೆಯಲ್ಪಡಳು	ಉದು	ಕರೆವುದು		ಆಳು	ಕರೆದಾಳು	ಕರೆಯಲ್ಪಟ್ಟಾಳು
				ಗೆ. ಕೆ.	ಕರೆಗೆ (ಮಾಳ್ಕೆ)				
(ಹ. ಗ.)	ಅಳ್	ಕರೆಯಳ್	ಕರೆಯಲ್ಪಡಳ್	ಅಲಿ	ಕರೆಯಲಿ				
				ಉದು	ಕರೆವುದು				
ಪುಂ. ಸ್ತ್ರೀ. ಬ. ವ....	ಅರು	ಕರೆಯರು	ಕರೆಯಲ್ಪಡರು	ಗೆ ಕೆ.	ಕರೆಗೆ (ಮಾಳ್ಕೆ)		ಆರು	ಕರೆದಾರು	ಕರೆಯಲ್ಲಟ್ಟಾರು
				ಅಲಿ	ಕರೆಯಲಿ				
(ಹ. ಗ.)	ಅರ್	ಕರೆಯರ್	ಕರೆಯಲ್ಪಡರ್	ಉದು	ಕರೆವುದು				
ನಪುಂ. ಏ. ವ.	ಅದು	ಕರೆಯದು	ಕರೆಯಲ್ಪಡದು	ಗೆ. ಕೆ.	ಕರೆಗೆ (ಮಾಳ್ಕೆ)		ಈತು	ಕರೆದೀತು	ಕರೆಯಲ್ಪಟ್ಟೀತು
(ಹ. ಗ.)	,,	ಕರೆಯದು	ಕರೆಯಲ್ಪಡದು	ಅಲಿ	ಕರೆಯಲಿ				
				ಉದು	ಕರೆವುದು		ಆವು	ಕರೆದಾವು	ಕರೆಯಲ್ಪಟ್ಟಾವು
ಬಹುವಚನ	ಆವು	ಕರೆಯವು	ಕರೆಯಲ್ಪಡವು	ಗೆ. ಕೆ.	ಕರೆಗೆ (ಮಾಳ್ಕೆ)				
(ಹ. ಗ.)	,,	ಕರೆಯವು	ಕರೆಯಲ್ಪಡವು						

(6) ನಿಷೇಧರೂಪ ಮಧ್ಯಮಪುರುಷ ಏಕವಚನಗಳಿಗೆ ಬೇಡ, ಬೇಡಿರಿ, ಕೂಡದು ಎಂಬ ಪ್ರತ್ಯಯಗಳೂ (ಹ. ಗ) ದಲ್ಲಿ ಮಾಡಲ್, ಮಾಡಬೇಡಂ, ಬೇಡಂ, ಎಂಬ ಪ್ರತ್ಯಯಗಳು ಬರುತ್ತವೆ. ನೀಂ, ಮಾಡಲ್ ನೀಂಮಾಡಲ್ಬೇಡಂ, ನೀಂಬೇಡಂ ಎಂಬಂತೆ ಮಧ್ಯಮ ಪುರುಷಕ್ಕೆ ಓಕಾರ ಬಂದು ನೀನೆಂತಿದಂ ನಂಬಿದವೋ, ನೀನಿದನೆಂತು ಮಾಡುವೆಯೋ (ನೀನು ಮಾಡುವುದಿಲ್ಲವೆಂದರ್ಥವು) ಎಂದು ಹೇಳುವುದುಂಟು. (7) ಪ್ರತ್ಯಯ ಲೋಪವಾಗಿ ಕ್ರಿಯಾಪದವು ಧಾತುಸ್ವರೂಪದಲ್ಲಿಯೇ ನಿಲ್ಲುವುದು, ನಡೆ, ಹೋಗು, ಇರು ಎಂಬಂತೆ. (8) ಇಲ್ಲಿ ಅರಿ ಪ್ರತ್ಯಯವು, (9) ವುದುಗೆ ಇ, ಬಂದು ಕರೆಯಿ, ಸಾಯಿ, ಬೇಯಿಯೆಂದು ಹೇಳುವುದುಂಟು. (10) ಹೊಸ. ಗ. ದಲ್ಲಿ ಶಪಿಸುವುದೆಂಬರ್ಥ ತೋರುವಾಗ ಕೊನೆಯ ಅಲಿ ಪ್ರತ್ಯಯಕ್ಕೆ ಬದಲಾಗಿ ಆಗ, ಹೋಗ, ಎಂಬುವುಗಳನ್ನು ಸೇರಿಸಿ ನಾಶವಾಗ, ಬಿದ್ದುಹೋಗ, ಹಾಳಾಗ, ಎಂದು ಹೇಳುವುದುಂಟು.

೩೩. ಕೆಲವು ಧಾತುಗಳಿಗೆ ದಕಾರಾದಿ ಪ್ರತ್ಯಯಗಳು ಬಂದಾಗ ಆಗುವ ರೂಪಭೇದಗಳು.

ಧಾತು	ಹೊಸಗನ್ನಡ ರೂಪ	ಹಳಗನ್ನಡ ರೂಪ	ಸರೂಪ ಧಾತುಗಳು
ಅರಿ	ಅರಿ+ದ+ಅನು=ಅರಿದನು, ಅರಿತು, ಅರಿ[ತರೆ	ಅರಿದಂ, ಅರಿತು, ಅರಿದೊಡೆ.	ಕುರಿ, ಒರೆ, ಅರೆ.
ಅಳು	ಅತ್ತನು, ಅತ್ತು, ಅತ್ತರೆ.	ಅಳ್ತಂ, ಅಳ್ತು, ಅಳ್ತೊಡೆ.	ಕೀಳ್, ಉಳ್, (Plough)
ಇಡು	ಇಟ್ಟನು, ಇಟ್ಟು, ಇಟ್ಟರೆ.	ಇಟ್ಟಂ, ಇಟ್ಟು, ಇಟ್ಟೊಡೆ.	ಬಿಡು, ನಡು, ಸುಡು, ಅಡು, ಪಡು.
ಇಸು	ಎಚ್ಚನು, ಎಚ್ಚು, ಎಚ್ಚರೆ.	ಎಚ್ಚಂ. ಎಚ್ಚು, ಎಚ್ಚೊಡೆ.	ಬಿಸು.
ಈ	ಇತ್ತನು, ಇತ್ತು, ಇತ್ತರೆ.	ಇತ್ತಂ, ಇತ್ತು ಇತ್ತೊಡೆ.	ಸಾ.
ಕಿಡು	ಕೆಟ್ಟನು, ಕೆಟ್ಟು, ಕೆಟ್ಟರೆ(1)	ಕೆಟ್ಟಂ, ಕೆಟ್ಟು, ಕೆಟ್ಟೊಡೆ.	ಗಿರು, ಕಿರು.
ಕಲ್	ಕಲ್ತನು, ಕಲ್ತು, ಕಲ್ತರೆ. (ಕಲಿತನು ಎಂದೂ ಉಂಟು.)	ಕಲ್ತಂ, ಕಲ್ತು, ಕಲ್ತೊಡೆ.	ಬಲ್, ನಿಲ್,(2) ಮಡಲ್, ಕವಲ್, ಕಳ್.
ಕೊಳ್	ಕೊಂಡನು, ಕೊಂಡು, ಕೊಂಡರೆ.	ಕೊಂಡಂ, ಕೊಂಡು, ಕೊಂಡೊಡೆ.	ಕಾಣು, ಉಣ್.
ಚಳಿ	ಚಳಿತನು, ಚಳಿತು, ಚಳಿತರೆ.	ಚಳಿತಂ, ಚಳಿತು, ಚಳಿತೊಡೆ.	ನೊಳೆ, ತಳಿ, ಬಿಳಿ, ತುಳಿ, ಕಳಿ, ಹುಳಿ.
ತರು	ತಂದನು, ತಂದು, ತಂದರೆ.	ತಂದಂ, ತಂದು, ತಂದೊಡೆ.	ಬರು, ಕೊಲ್ಲು, ತಿನ್ನು, ಎನ್ನು (ಹೊ.) ಅ[ನ್ನು(3)
ತುಡು	ತೊಟ್ಟನು, ತೊಟ್ಟು, ತೊಟ್ಟರೆ.	ತೊಟ್ಟಂ, ತೊಟ್ಟು, ತೊಟ್ಟೊಡೆ.	ಕುಡು(ಹೊ.) ಕೊಡು.
ತೆರು	ತೆತ್ತನು, ತೆತ್ತು, ತೆತ್ತರೆ.	ತೆತ್ತಂ, ತೆತ್ತು, ತೆತ್ತೊಡೆ.	ಹೊರು, ಹೆರು (ಹ.ಗ. ಪೆರು.)
ನೆನೆ	ನೆನೆದನು, ನೆನೆದು, ನೆನೆದರೆ.	ನೆನೆದಂ. ನೆನೆದು, ನೆನೆದೊಡೆ.	ನನೆ.
ನೋ	ನೊಂದನು, ನೊಂದು, ನೊಂದರೆ.	ನೊಂದಂ, ನೊಂದು, ನೊಂದೊಡೆ.	ಬೇ, ವಿಾ. [ಅಣಗು
ನೀಗು	ನೀಗಿದನು, ನೀಗಿ, ನೀಗಿದರೆ.	ನೀಗಿದಂ, ನೀಗಿ, ನೀಗಿದೊಡೆ.	ತಾಗು, ಏಗು, ಬೀಗು, ಒಣಗು, ಹಗುರು

ಪಡೆ	ಪಡೆದನು, ಪಡೆದು, ಪಡೆದರೆ.	ಪಡೆದಂ, ಪಡೆದು, ಪಡೆದೊಡೆ.	ತಡೆ, ಕಡೆ, ನುಡಿ, ಮಿಡಿ, ಕೊಡೆ, ಸುಳಿ
ಪೊರಮಡು	ಪೊರಮಟ್ಟನು, ಪೊರಮಟ್ಟು, ಪೊರಮಟ್ಟರೆ (ಹೊ.) ಹೊರಟನು ಹೊರಟು ಹೊ [ರಟರೆ	ಪೊರಮಟ್ಟಂ, ಪೊರಮಟ್ಟು, ಪೊರಮಟ್ಟೊಡೆ.	ಪೊಡಮಡು, ತುಂಬಿಡು, ಬೇರ್ಪಡು
ಬಾ	ಬಾತನು. ಬಾತು, ಬಾತರೆ.	ಬಾತಂ, ಬಾತು, ಬಾತೊಡೆ.	ಬೀ, ಕಾ, ಕೀ, ಪೂ.
ಬೀಳು	ಬಿದ್ದನು, ಬಿದ್ದು, ಬಿದ್ದರೆ.	ಬಿಳ್ದಂ, ಬಿಳ್ದು, ಬಿಳ್ದೊಡೆ.	ಆಳ್, ಏಳ್.
ಮೇ	ಮೇದಿತು (ಮೇದುದು) ಮೇದು, ಮೇ [ದರೆ	ಮೇದಿತು (ಮೇದುದು) ಮೇದು, ಮೇ [ದೊಡೆ	[ಬಿಚ್ಚು.
ಮೆಚ್ಚು (4)	ಮೆಚ್ಚಿದನು, ಮೆಚ್ಚಿ, ಮೆಚ್ಚಿದರೆ.	ಮೆಚ್ಚಿದಂ, ಮೆಚ್ಚು, ಮೆಚ್ಚಿದೊಡೆ.	ನಚ್ಚು, ಕೊಚ್ಚು, ಹೆಚ್ಚು, ಬೆಚ್ಚು,
ಸಾರು	ಸಾರಿದನು, ಸಾರಿ, ಸಾರಿದರೆ.	ಸಾರಿದಂ, ಸಾರಿ, ಸಾರಿದೊಡೆ. (ಸಾರ್ದಂ, ಸಾರ್ದು, ಸಾರ್ದೊಡೆ.)	ದೂರು, ಮೂರು, ಕೋರು, ತೂರು, ಮಿಾರು, ಹೇರು, ಸೇರು, ಹಾರು, ಕಾರು, ತೀರು, ಪೋರು.
ಸೋಲು	ಸೋತನು, ಸೋತು, ಸೋತರೆ.	ಸೋತಂ, ಸೋತು, ಸೋತೊಡೆ.	ನೇಲು, ಜೋಲು.
ಹೊಗು	ಹೊಕ್ಕನು, ಹೊಕ್ಕು, ಹೊಕ್ಕರೆ.	ಹೊಕ್ಕಂ, ಹೊಕ್ಕು, ಹೊಕ್ಕೊಡೆ.	ಒಗು, ನಗು, ಮಿಗು, ತಗು.
ಹೋಲು	ಹೋಲಿದನು, ಹೋಲಿ, ಹೋಲಿದರೆ.	ಪೋಲ್ತಂ, ಪೋಲ್ತು, ಪೋಲ್ತೊಡೆ.	
ಹರಟು	ಹರಟಿದನು, ಹರಟಿ, ಹರಟಿದರೆ.	ಹರಟಿದಂ, ಹರಟಿ, ಹರಟಿದೊಡೆ.	ಉರುಟು, ತಿಮುಟು, ಸುರುಟು.
ಎಚ್ಚರು (೩)	ಎಚ್ಚತ್ತನು, ಎಚ್ಚತ್ತು, ಎಚ್ಚತ್ತರೆ.	ಎಳ್ಚತ್ತಂ, ಎಳ್ಚತ್ತು, ಎಳ್ಚತ್ತೊಡೆ.	ಆಸರು, ಬೇಸರು.
ಸೀಳು	ಸೀಳಿದನು, ಸೀಳಿ, ಸೀಳಿದರೆ.	ಸೀಳ್ದಂ, ಸೀಳ್ದು, ಸೀಳ್ದೊಡೆ.	ಬೇಳ್, ಊಳ್, ನೋಳ್.
ಓಡಾಡು (5)	ಓಡಾಡಿದನು, ಓಡಾಡಿ, ಓಡಾಡಿದರೆ.	ಓಡಾಡಿದಂ, ಓಡಾಡಿ, ಓಡಾಡಿದೊಡೆ.	ಕಾದಾಡು, ಓಲಾಡು ಅಲ್ಲಾಡು.

(1) ಹೊ. ಗ. ದಲ್ಲಿ ಈ ಧಾತುವನ್ನು "ಕೆಡು" ಎಂದು ಹೇಳುವರು. (2) ದಕಾರ ಬಂದು ನಿಂದನು, ನಿಂದು ಎಂಬ ರೂಪಗಳೂ ಉಂಟು. (3) ಅಂದನು, ಅಂದು, ಅಂದರೆ ಮೊದಲಾದ ಶಬ್ದಗಳು ಹೊಸಗನ್ನಡದಲ್ಲಿರುವುದರಿಂದ ಅನ್ನು ಧಾತು ಕನ್ನಡದಲ್ಲಿರುವುದೆಂದು ತಿಳಿಯಬೇಕು. (4) ಮಚ್ಚು ಎಂದು (ಹ. ಗ. ಧಾತು) (5) ಓಡು, ಆಡು ಎಂಬ ಧಾತುಗಳು ಸೇರಿವೆ. ಇಂಥಾ ಧಾತುಗಳಿಗೆ ಸಂಯುಕ್ತ ಧಾತುಗಳೆಂದು ಹೆಸರು.

ವಿಶೇಷ ವಿಷಯಗಳು.

84. (1) ಧಾತುಗಳಿಗೆ ನಿಷೇಧಾರ್ಥ ಪ್ರತ್ಯಯಗಳು ಬಂದಾಗ ಕಾಲ ಸೂಚಕ ಆಗಮಗಳು ಬರುವುದಿಲ್ಲ.

ಉದಾಹರಣೆ.

ಆವನು, ನಿನ್ನೆ, ಇಂದು, ನಾಳೆ=ಬಾರನು.
ನಾನು ,, ,, ,, ಬಾರೆನು.
ನೀನು ,, ,, ,, ಬರಲೊಲ್ಲೆ. (ಬಾರೆ)

(2) ಬೇಕು ಬೇಡ ಎಂಬ ಪ್ರತ್ಯಯಗಳು ಬಂದಾಗ ಅಲು, ಅಲಿಕ್ಕೆ ಎಂಬಾಗಮಗಳು ವಿಕಲ್ಪವಾಗಿ ಬರುವುವು.

ಉದಾಹರಣೆ.

ನೀನು ಈ ಕೆಲಸವನ್ನು ಮಾಡಬೇಕು, ಮಾಡಲು ಬೇಕು, ಮಾಡಲಿಕ್ಕೆಬೇಕು, (ಮಾಡಲ್ಕೆ, ಮಾಡಲ್, ಹ. ಗ.)
ನಾನು ,, ಮಾಡಕೂಡದು, ಮಾಡಲು ಕೂಡದು, ಮಾಡಲಿಕ್ಕೆ ಕೂಡದು.
ಆವನು ,, ಮಾಡಬೇಡ, ಮಾಡಲು ಬೇಡ, ಮಾಡಲಿಕ್ಕೆ ಬೇಡ.

(3) ರಕಾರ ಟಕಾರಾಂತ ಧಾತುಗಳಿಗೆ ವಕಾರಾದಿ ಪ್ರತ್ಯಯಗಳು ಪರವಾದಾಗ, ಆ ವಕಾರಕ್ಕೆ ಪಕಾರಾದೇಶ ವಿಕಲ್ಪವಾಗಿ ಬರುವುದು.

ಉದಾಹರಣೆ.

ರಕಾರಾಂತಕ್ಕೆ—ಬರುವ (ಧಾತು ಬರ್)=ಬರ್ಪ, ಇರು+ವ=ಇರ್ಪ, ತರು+ವ=ತರ್ಪ, ಕೂರ್+ವ=ಕೂರ್ಪ.
ಟ ,, —ಬೇಡು+ವ=ಬೇಟ್ಪ, ನೋಟ್ಪ. (1)

(4) ತರು ಬರು ಧಾತುಗಳಿಗೆ ನಿಷೇಧಾರ್ಥ ಪ್ರತ್ಯಯಗಳು ಪರವಾದಾಗ ಧಾತುವಿನ ಮೊದಲಕ್ಷರಕ್ಕೆ ದೀರ್ಘ ಬರುವುದು.

ಉದಾಹರಣೆ.

ತಾರನು, ತಾರಳು, ತಾರರು, ತಾರೆ, ತಾರರಿ, ತಾರೆನು, ತಾರೆವು. (ಇ) ಮಧ್ಯಮಪುರುಷ ವಿಧಿರೂಪದಲ್ಲಿ ಈ ಧಾತುಗಳಿಗೆ ಏಕವಚನದಲ್ಲಿ ತಾ,

(1) ಆದೇಶ ಟಕಾರಕ್ಕೆ ಪಕಾರ ಬರುವುದೇ ಹೊರತು ನಿಜ ಟಕಾರಕ್ಕೆ ಪಕಾರ ಬರುವುದಿಲ್ಲ. ಬೀಟ್+ವ=ಬೀಳಟ್ವ ಎಂಬಂತೆ.

ಬಾ ಎಂದೂ, ಬಹುವಚನದಲ್ಲಿ ತನ್ನಿ, ತನ್ನಿರಿ, ಬನ್ನಿ, ಬನ್ನಿರಿ ಎಂದೂ ರೂಪಗಳುಂಟು.

(5) ಎನ್ನು, ತಿನ್ನು ಎಂಬ ಧಾತುಗಳಿಗೆ ವಕಾರ ಬಂದಾಗ ಧಾತುವಿನ ನಕಾರಕ್ಕೆ ಬಕಾರಾದೇಶ ಬರುವುದು.

ಉದಾಹರಣೆ.

ಎಂಬನು, ತಿಂಬನು, ಎಂಬುವ, ತಿಂಬುವ, (ಹ. ಗ.) ದಲ್ಲಿ—ಎಂಬಂ, ತಿಂಬಂ.(ಇ)

(6) ಭವಿಷ್ಯದ್ರೂಪಕ್ಕೆ ವಿಕಲ್ಪವಾಗಿ ವರ್ತಮಾನರೂಪ ಬರುವುದು.

ಉದಾಹರಣೆ.

ನಾಳೆ ಬರುತ್ತೇನೆ (ಬರುವೆವು), ನಾಳೆ ಸೂರ್ಯಗ್ರಹಣ ಬರುತ್ತದೆ (ಬರುವುದು).

(7) ಅವಸರವೂ, ನಿಶ್ಚಯವೂ ತೋರುವಾಗ ವರ್ತಮಾನ, ಭವಿಷ್ಯದ್ರೂಪಗಳಿಗೆ ಭೂತರೂಪ ಬರುವುದು.

ಉದಾಹರಣೆ.

ಅವಸರ (ತ್ವರ) ಕ್ಕೆ—ಇದೋ ಬಂದೆ, ಸ್ವಲ್ಪ ತಡೆ (ಭವಿಷ್ಯತ್ತಿಗೆ ಭೂತ).
ನಿಶ್ಚಯಕ್ಕೆ —ಈಗಲೇ ಹೋದರೆ ನಿನ್ನ ಕೆಲಸವಾಯಿತೆಂದು ತಿಳಿ.
(ವರ್ತಮಾನಕ್ಕೆ ಭೂತ)

(8) ಅಂಗೀಕಾರಾರ್ಥದ ಒಲ್ (ಒಲ್ಲು) ಧಾತುವಿಗೆ ನಿಷೇಧರೂಪದಲ್ಲಿಯೂ, ತಿಳಿಯುವುದು ಎಂಬರ್ಥವುಳ್ಳ "ಬಲ್" ಧಾತುವಿಗೆ ವರ್ತಮಾನ ಭೂತರೂಪಗಳಲ್ಲಿಯೂ, ಸಾಮರ್ಥ್ಯ (ಸಾಧ್ಯ) ವೆಂಬರ್ಥದ ಆರು ಧಾತುವಿಗೆ ನಿಷೇಧ ಭವಿಷ್ಯದ್ರೂಪಗಳಲ್ಲಿಯೂ ಪ್ರಯೋಗವುಂಟು. ಉದಾಹರಣೆ.

ಒಲ್ ಧಾತುವಿನನಿಷೇಧರೂಪಕ್ಕೆ—ಒಲ್ಲೆನು, ಒಲ್ಲೆವು, ಒಲ್ಲೆ, ಒಲ್ಲಿರಿ. ಒಲ್ಲನು, ಒಲ್ಲರು.

ಬಲ್ ,, ವರ್ತಮಾನ ಭೂತರೂಪಕ್ಕೆ—ಬಲ್ಲೆನು, ಬಲ್ಲೆವು, ಬಲ್ಲೆ, ಬಲ್ಲಿರಿ. (ಇ)

ಆರು ,, ನಿಷೇಧ ,, —ಆರೆನು (ಮಾಡಲಾರೆನು) ಆರೆವು, ಆರೆ, ಆರಿರಿ. (ಇ)

,, ಭವಿಷ್ಯದ್ರೂಪಕ್ಕೆ—ಆಪೆನು (ಮಾಡಲಾಪೆನು) ಆಪೆವು, ಆಪೆ, ಆಪಿರಿ, ಆಪನು, ಆಪರು.

(9) "ಅ" ಪ್ರತ್ಯಯ ಸೇರಿದ ಅವ್ಯಯ ಕೃದಂತ (*95) ಗಳಿಗೆ ಬೇಕು, ಬಹುದು ಎಂಬುವು ಪರವಾಗಿ ವಿಧಿರೂಪದ ಅರ್ಥವನ್ನೂ, ಬೇಡ ಬಾರದು, ಆಗದು, ಕೂಡದು ಎಂಬುವು ಪರವಾಗಿ ನಿಷೇಧಾರ್ಥವನ್ನೂ ಕೊಡುವುವು.

ಉದಾಹರಣೆ.

ವಿಧ್ಯರ್ಥಕ್ಕೆ—ನೀವು ಮಾಡಬೇಕು, ಅವರು ಮಾಡಬಹುದು (1)
ನಿಷೇಧಾರ್ಥಕ್ಕೆ—ಮಾಡಬೇಡ, ಹೋಗಬಾರದು, ಹೇಳಕೂಡದು, ಮಾಡಲಾಗದು.

(10) ಕ್ರಿಯೆ ಬಹುಕಾಲ ನಡೆಯಿತೆಂಬರ್ಥದಲ್ಲಿ ವರ್ತಮಾನ ಮತ್ತು ಭೂತಕಾಲದ ಅಪೂರ್ಣ (ನ್ಯೂನ) ಕ್ರಿಯೆ (*94) ಗಳ ಮುಂದೆ ಬರು ಧಾತು ಉಪಯೋಗಿಸಲ್ಪಡುವುದು.

ಉದಾಹರಣೆ.

ಅದು ಹೀಗೆಯೇ ನಡೆದುಬರುತ್ತಾ ಇದೆ.
ಇದು ಹಾಗೆಯೇ ಬಂದುಹೋಗಿದೆ.

(11) ಕ್ರಿಯೆ ಅನೇಕವೇಳೆ ನಡೆಯಿತೆಂಬರ್ಥದಲ್ಲಿಯೂ, ಪರಸ್ಪರ ಕರ್ತೃ ಕರ್ಮ ಭಾವ ತೋರುವಾಗಲೂ ಭೂತ ಅಪೂರ್ಣ ಕ್ರಿಯೆಯ ಮೇಲೆ ಆಡು ಧಾತು ಬರುವುದು.

ಉದಾಹರಣೆ.

ಕ್ರಿಯೆ ಅನೇಕವೇಳೆಗೆ—ಈತನು ಇಲ್ಲಿಯೇ ಓಡಾಡಿಕೊಂಡಿರುವನು.
ಪರಸ್ಪರ ಕರ್ತೃ ಕರ್ಮ ಭಾವಕ್ಕೆ—ವಾಲಿ ಸುಗ್ರೀವರು ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು(2)

(12) ಭೂತ ಅಪೂರ್ಣ ಕ್ರಿಯೆಗಳಮೇಲೆ ಬಿಡು, ಹಾಕು ಎಂಬ ಧಾತುಗಳು ಸೇರಿ ಕ್ರಿಯೆ ಸಂಪೂರ್ಣವಾಯಿತೆಂದು ತಿಳಿಸುವುವು.

ಉದಾಹರಣೆ.

ನಾನು ಹೇಳಿಬಿಟ್ಟೆನು, ಅವನು ತಿಂದುಬಿಟ್ಟನು.
ಅವರು ಆ ಮರವನ್ನು ಹೊಡೆದುಹಾಕಿದರು.

---

(1) ಅವರು ಮಾಡುವುದಕ್ಕೆ ನನ್ನ ಅಭಿಮತವುಂಟೆಂದರ್ಥವು. (2) ವಾಲಿ ಸುಗ್ರೀವನನ್ನು ಹೊಡೆದನು, ಸುಗ್ರೀವನು ವಾಲಿಯನ್ನು ಹೊಡೆದನು ಎಂದರ್ಥವು. ಇಲ್ಲಿ ಒಬ್ಬನು ಕರ್ತೃವಾದಾಗ ಇನ್ನೊಬ್ಬ ಕರ್ಮ. ಅದರಿಂದ ಪರಸ್ಪರ ಕರ್ತೃ ಕರ್ಮ ಭಾವವು.

(13) ಕ್ರಿಯೆ ಪರಾರ್ಥವಾಗಿ (ಇನ್ನೊಬ್ಬರಿಗೋಸ್ಕರ) ನಡೆಯಿತೆಂಬರ್ಥ ದಲ್ಲಿ ಭೂತ ಅಪೂರ್ಣ ಕ್ರಿಯೆಯಮೇಲೆ ಕೊಡು ಧಾತುವೂ ಕ್ರಿಯೆ ಸ್ವಾರ್ಥವಾಗಿ (ತನಗೋಸ್ಕರ) ನಡೆಯಿತೆಂಬರ್ಥದಲ್ಲಿ ಕೊಳ್ಳು ಧಾತುವೂ ಬರುವುವು.

ಉದಾಹರಣೆ.

ಪರಾರ್ಥಕ್ಕೆ—ನಾನು ಅವರಿಗೆ ಮನೆಯನ್ನು ಕಟ್ಟಿಕೊಟ್ಟೆನು. (1)
ಸ್ವಾರ್ಥಕ್ಕೆ—ನಾನು ಈ ಪುಸ್ತಕವನ್ನು ಕೊಂಡುಕೊಂಡೆನು (2)

(14) ಇರು ಧಾತು ಅಕರ್ಮಕವಾಗಿದ್ದರೂ ಇದಕ್ಕೆ ಕರ್ಮಾರ್ಥಕ ಪ್ರಯೋಗವುಂಟು.

ಉದಾಹರಣೆ.

ಅವನು ನನ್ನಿಂದ ರಾತ್ರಿ ಇಲ್ಲಿಯೇ ಇರಲ್ಪಟ್ಟನು.
ನೀನು ಇರಲ್ಪಟ್ಟೆ, ಅವರು ಇರಲ್ಪಟ್ಟಾರು. (ಇ)

85. ಕನ್ನಡಭಾಷೆಯಲ್ಲಿ ದೇಶ್ಯಧಾತುಗಳು ಸಾಲದಿರುವುದರಿಂದ ಸಂಸ್ಕೃತ ಮತ್ತು ಕನ್ನಡ ಭಾವನಾಮ ವಾಚಕಗಳಿಗೂ ಕೆಲವು ಸಹಜ ಧಾತುಗಳಿಗೂ, ಇಸು ಪ್ರತ್ಯಯಗಳನ್ನು ಸೇರಿಸಿ ಧಾತುಗಳನ್ನು ಮಾಡುವುದು (*75) ಸರಿಯಷ್ಟೆ? ಅದರಂತೆ

ಅಕರ್ಮಕ ಧಾತುಗಳಿಗೆ ಇಸು ಪ್ರತ್ಯಯವನ್ನು ಸೇರಿಸುವುದರಿಂದ ಸಕರ್ಮಕ ಧಾತುಗಳೂ, ಸಕರ್ಮಕ ಧಾತುಗಳಿಗೆ ಇಸು ಪ್ರತ್ಯಯವನ್ನು ಕೂಡಿಸುವುದರಿಂದ ಪ್ರೇರಕ (3) ಧಾತುಗಳೂ ಆಗುವುವು.

ಉದಾಹರಣೆ.

ಅಕರ್ಮಕ ಧಾತುವಿಗೆ + ಇಸು = ನಡೆ + ಇಸು = ನಡೆಯಿಸು. (ಅವನನ್ನು ಎಂದು ಕರ್ಮ)
ಸಕರ್ಮಕ ,, =ಮಾಡು+ಇಸು=ಮಾಡಿಸು, ಕೊಡು + ಇಸು ಕೊಡಿಸು.

ತಾಯಿ ಕೂಸನ್ನು ಮಲಗಿಸಿದಳು. (4)

---

(1) ಮನೆಯನ್ನು ಕಟ್ಟಿದುದು ಪರರಿಗೋಸ್ಕರ. ತನಗೋಸ್ಕರವಲ್ಲ. (2) ಪುಸ್ತಕದ ಪ್ರಯೋಜನವು ತನಗೇ ಸೇರುವುದು. (3) ಇನ್ನೊಬ್ಬನು ಕೆಲಸಮಾಡುವಂತೆ ಪ್ರೋತ್ಸಾಹಿಸುವುದು=ಪ್ರೇರಣೆ, ಪ್ರೇರಣೆ ಮಾಡುವವನು ಪ್ರೇರಕ. (4) ಇಲ್ಲಿ ಮಲಗಿದುದು ಕೂಸು=ಇದು ತಾಯಿಯಿಂದ ಪ್ರೇರಿಸಲ್ಪಟ್ಟು ಮಲಗಿದುದರಿಂದ ಪ್ರೇರ್ಯ ಕರ್ತೃವಾಯಿತು. ಕೂಸು ಮಲಗಲು ತಾಯಿ ತಕ್ಕ ಪ್ರಯತ್ನಮಾಡಿದ ಕಾರಣ ತಾಯಿ ಪ್ರೇರಕ ಕರ್ತೃವಾಯಿತು.

ಹೀಗೆಯೇ ಕರೆದನು, ತಿಂದನು, ನೋಡಿದನು ಎಂಬ ಧಾತುಗಳಿಗೆ ಇಸು ಪ್ರತ್ಯಯವನ್ನು ಸೇರಿಸಲು ಕರೆಯಿಸಿದನು, ತಿನ್ನಿಸಿದನು, ನೋಡಿಸಿದನು ಎಂದು ಪ್ರೇರಣಾರ್ಥವಾಗುವುದು.

86. ಇಸು ಪ್ರತ್ಯಯಕ್ಕೆ ಬದಲಾಗಿ ಕೆಲವು ಧಾತುಗಳಿಗೆ ಚು ಪ್ರತ್ಯಯ ಮತ್ತು ಐಸು ಪ್ರತ್ಯಯ ಬರುವುದು.

ಉದಾಹರಣೆ.

ಚು ಪ್ರತ್ಯಯಕ್ಕೆ—ಅಲರ್+ಇಸು=ಅಲರ್ಚು, ತೊಡರ್ + ಇಸು=ತೊಡರ್ಚು, ಪೊಣರ್ಚು, ನಿಮಿರ್ಚು.

ಐಸು (1) ,, —ಪೂರ+ಇಸು=ಪೂರಯಿಸು (2)=ಪೂರೈಸು.
—ಬೋಳ + ಇಸು = ಬೋಳಯಿಸು—ಬೋಳೈಸು.
—ತಾರ + ಇಸು = ತಾರಯಿಸು—ತಾರೈಸು.

87. ಇಸು ಪ್ರತ್ಯಯಾಂತ ಧಾತುಗಳಮೇಲೆ ಪುನಃ ಇಸು ಪ್ರತ್ಯಯ ಬಂದರೆ ಮೊದಲಿದ್ದ ಇಸು ಪ್ರತ್ಯಯ ಲೋಪವಾಗುವುದು.

ಉದಾಹರಣೆ.

ಇಸು ಪ್ರತ್ಯಯಾಂತ ಧಾತು—ತಾಯಿ ಕೂಸನ್ನು ಮಲಗಿಸಿದಳು.

ಇಸು ಲೋಪಕ್ಕೆ—ತಾಯಿ ಮಗಳಿಂದ ಕೂಸನ್ನು ಮಲಗಿಸಿದಳು.
(ಮಲಗಿಸು+ಇಸು=ಮಲಗಿಸು) (3)

—ವೈದ್ಯನು ತಾಯಿಯಿಂದ ಕೂಸಿಗೆ ಔಷಧವನ್ನು ಕುಡಿಸಿದನು. (ಇಲ್ಲಿ ವೈದ್ಯನು ಹೇಳಿದನು, ತಾಯಿ ಕುಡಿಸಿದಳು, ಕೂಸು ಕುಡಿಯಿತು.)

---

(1) ಐಸು ಪ್ರತ್ಯಯಕ್ಕೆ ವಿಕಲ್ಪವಾದುದರಿಂದ ಅದು ಬಾರದಿರುವಾಗ ಇಸು ಪ್ರತ್ಯಯವೇ ಇದ್ದು ಪೂರಯಿಸು ಎಂದು ಆಗುವುದು. (2) ಕನ್ನಡದಲ್ಲಿ ಅಯಿ ಎಂಬುವುದಕ್ಕೆ ಐ ಎಂದೂ, ಅವು ಎಂಬುವುದಕ್ಕೆ ಔ ಎಂದೂ ವಿಕಲ್ಪವಾಗಿ ಪ್ರಯೋಗವುಂಟು. (3) (*16) ಇಲ್ಲಿ ಮೊದಲನೇ ಇಸು ಲೋಪವಾಗಿದೆ.

88. ಮಾದರಿಗಾಗಿ ಕ್ರಿಯಾ ರೂಪಮಾಲೆ.

ಧಾತು	ಪುರುಷ ವಚನ	ವರ್ತಮಾನರೂಪ	ಭೂತರೂಪ	ಭವಿಷ್ಯದ್ರೂಪ	ವಿಧಿರೂಪ	ನಿಷೇಧರೂಪ	ಸಂಶಯರೂಪ
ಕಾಣು	ಉ. ಪು. ಏ.	ಕಾಣುತ್ತೇನೆ	ಕಂಡೆನು	ಕಾಣುವೆನು(2)	ಕಾಣುವೆ	ಕಾಣೆನು	ಕಂಡೇನು
	ಬ.	ಕಾಣುತ್ತೇವೆ	ಕಂಡೆವು	ಕಾಣುವೆವು	ಕಾಣುವ ಕಾಣೋಣ	ಕಾಣೆವು	ಕಂಡೇವು
	ಮ. ಏ.	ಕಾಣುತ್ತೀಯೆ	ಕಂಡೆ	ಕಾಣುವೆ	ಕಾಣುವುದು ಕಾಣು, ಕಾಣ	ಕಾಣೆ ಕಾಣರಿ	ಕಂಡೀಯೆ
	ಬ.	ಕಾಣುತ್ತೀರಿ	ಕಂಡಿರಿ	ಕಾಣುವಿರಿ	ಕಾಣುವುದು	ಕಾಣಬೇಡ	ಕಂಡೀರಿ
	ಪ್ರ. ಪು. ಪು. ಏ. ವ.	ಕಾಣುತ್ತಾನೆ	ಕಂಡನು	ಕಾಣುವನು	ಕಾಣುತಿ	ಕಾಣನು	ಕಂಡಾನು
	ಸ್ತ್ರೀ. ಏ.	ಕಾಣುತ್ತಾಳೆ	ಕಂಡಳು	ಕಾಣುವಳು	ಕಾಣಲಿ	ಕಾಣಳು	ಕಂಡಾಳು
	ಪುಂ ಸ್ತ್ರೀ. ಬ. ವ.	ಕಾಣುತ್ತಾರೆ.	ಕಂಡರು	ಕಾಣುವರು	ಕಾಣಲಿ	ಕಾಣರು	ಕಂಡಾರು
	ನ. ಏ.	ಕಾಣುತ್ತದೆ	ಕಂಡಿತು	ಕಾಣುವುದು	ಕಾಣಲಿ	ಕಾಣದು	ಕಂಡೀತು
	ಬ.	ಕಾಣುತ್ತವೆ.	ಕಂಡವು	ಕಾಣುವುವು	ಕಾಣಲಿ	ಕಾಣವು	ಕಂಡಾವು

ಈ ಕ್ರಿಯಾಪದಗಳ ಹಳಗನ್ನಡ ರೂಪಗಳನ್ನು ಹಿಂದಿನ (*81) ಪಟ್ಟಿಯಿಂದ ಊಹಿಸುವುದು.

VIII ಕೃದಂತ ಪ್ರಕರಣ.

89. ಧಾತುಗಳಮೇಲೆ ಕೃತ್ ಪ್ರತ್ಯಯಗಳು ಸೇರಿದರೆ ಕೃದಂತಗಳಾಗುವುವು.(1) ಇವುಗಳಲ್ಲಿ ಕರ್ತೃ, ಕರ್ಮ ಮೊದಲಾದ ಕಾರಕಾರ್ಥ (ವಿಭಕ್ತ್ಯರ್ಥ)ಗಳನ್ನೊಳಕೊಂಡು ಗುಣವಾಚಕಗಳಂತೆ ನಾಮಪದಗಳನ್ನು ವಿಶೇಷಿಸುವ ಶಬ್ದಗಳು ಕಾರಕಕೃದಂತಗಳೆಂದೂ, ಧಾತುವಿನ ಅರ್ಥವನ್ನು ಮಾತ್ರ ತಿಳಿಸುವ ಶಬ್ದಗಳು ಭಾವಕೃದಂತಗಳೆಂದೂ, ಲಿಂಗವಚನ ವಿಭಕ್ತಿಗಳಲ್ಲಿ ರೂಪಭೇದವಿಲ್ಲದೆ ಅವ್ಯಯಗಳಂತಿರುವ ಶಬ್ದಗಳು ಅವ್ಯಯಕೃದಂತಗಳೆಂದೂ ಮೂರುವಿಧವು.

90. ಕಾರಕಕೃದಂತಗಳು—ಧಾತುಗಳಿಗೆ ವರ್ತಮಾನ ಭೂತ ಭವಿಷ್ಯದ್ರೂಪಗಳಲ್ಲಿ "ಅ" ಪ್ರತ್ಯಯವೂ, ನಿಷೇಧರೂಪದಲ್ಲಿ "ಅದ" ಪ್ರತ್ಯಯವೂ ಸೇರಿದರೆ ಕಾರಕೃದಂತಗಳಾಗುವುವು.

ಉದಾಹರಣೆ.

ಕಾರಕಾರ್ಥಗಳು	ಭೂತರೂಪ	ವರ್ತಮಾನ ಭವಿಷ್ಯತ್	ನಿಷೇಧರೂಪ
ಕರ್ತೃ	ಆಳಿದ ಅರಸು (2)	ಆಳುವ ಅರಸು	ಆಳದ ಅರಸು
	ಆದ ಕೆಲಸ	ಆಗುವ ಕೆಲಸ	ಆಗದ ಕೆಲಸ
ಕರ್ಮ	ಬರೆದ ಕಾಗದ (3)	ಬರೆಯುವ ಕಾಗದ	ಬರೆಯದ ಕಾಗದ
	(ಬರೆಯಲ್ಪಟ್ಟ),,	(ಬರೆಯಲ್ಪಡುವ),,	(ಬರೆಯಲ್ಪಡದ) ,,
ಕರಣ	ಬರೆದ ಲೇಕಣಿ(4)	ಬರೆಯುವ ಲೇಕಣಿ	ಬರೆಯದ ಲೇಕಣಿ
	(ಬರೆಯಲ್ಪಟ್ಟ),,	(ಬರೆಯಲ್ಪಡುವ),,	(ಬರೆಯಲ್ಪಡದ) ,,

---

(1) ಕೃತ್ ಎಂಬ ಪ್ರತ್ಯಯವು, ಅಂತ. ಕೊನೆಯಲ್ಲಿರುವುದು ಕೃದಂತವು. (2) ಇಲ್ಲಿ ಯಾವ ಅರಸು ಆಳಿದನೋ ಆ ಅರಸು, ಯಾವ ಕೆಲಸವಾಯಿತೋ ಆ ಕೆಲಸ ಎಂಬ ವಾಕ್ಯಗಳಲ್ಲಿ ಅರಸು, ಕೆಲಸ ಎಂಬುವು ಕರ್ತೃಪದಗಳಾಗಿರುವುದರಿಂದ ಅವುಗಳನ್ನು ವಿಶೇಷಿಸುವ ಆಳಿದ, ಆದ ಎಂಬುವು ಕರ್ತೃಕಾರಕಕೃದಂತಗಳಾದುವು. (3) ಯಾವ ಕಾಗದವನ್ನು ಬರೆದೆವೋ ಆ ಕಾಗದ ಎಂಬ ವಾಕ್ಯದಲ್ಲಿ ಬರೆ ಧಾತುವಿಗೆ ಕಾಗದ ಎಂಬುದು ಕರ್ಮಪದವಾಗಿರುವುದರಿಂದ ಅದನ್ನು ವಿಶೇಷಿಸುವ ಬರೆದ ಎಂಬುದು ಕರ್ಮಕಾರಕಕೃದಂತವಾಗಿದೆ. (ಹೀಗೆಯೇ ಎಲ್ಲವನ್ನೂ ತಿಳಿಯಬೇಕು.) (4) ಬರೆಯುವುದಕ್ಕೆ ಲೇಕಣಿ ಮುಖ್ಯಸಾಧನವಾಗಿರುವುದರಿಂದ ಬರೆದ ಎಂಬುದು ಕರಣಕಾರಕಕೃದಂತವು.

ಸಂಪ್ರದಾನ—ಭಿಕ್ಷವಿಕ್ಕಿದ ಯಾಚಕ(1)	ಭಿಕ್ಷವಿಕ್ಕುವ ಯಾಚಕ	ಭಿಕ್ಷವಿಕ್ಕದ ಯಾಚಕ
ಅಪಾದಾನ —ನೀರು ಸುರಿದ ಕೊಡ(2)	ನೀರು ಸುರಿಯುವ ಕೊಡ	ನೀರು ಸುರಿಯದ ಕೊಡ
ಅಧಿಕರಣ —ನಡೆದದಾರಿ(3)	ನಡೆವದಾರಿ	ನಡೆಯದದಾರಿ
ಮಲಗಿದ ಹಾಸಿಗೆ	ಮಲಗುವ ಹಾಸಿಗೆ	ಮಲಗದ ಹಾಸಿಗೆ

91. ಮೇಲೆ ಹೇಳಿದ ಕಾರಕಕೃದಂತಗಳಿಗೆ ವಿಭಕ್ತಿಪ್ರತ್ಯಯಗಳನ್ನು ಸೇರಿಸಿದರೆ ಅವೇ ಸ್ವತಂತ್ರಪದಗಳಾಗಿ ಕೃನ್ನಾಮಗಳೆನಿಸುವುವು. (ಕೃನ್ನಾಮವೆಂದರೆ ಕೃದಂತವಾಗಿಯೂ ನಾಮಪದದಂತೆ ವಿಭಕ್ತಿಪ್ರತ್ಯಯಗಳನ್ನು ಹೊಂದಲು ಅರ್ಹವಾಗಿಯೂ ಇರುವ ಶಬ್ದವು.)

ಇವುಗಳಿಗೆ ವಿಭಕ್ತಿಪ್ರತ್ಯಯಗಳು ಸೇರುವಾಗ ಪ್ರಕೃತಿಪ್ರತ್ಯಯಗಳ ನಡುವೆ ಲಿಂಗಸೂಚಕಗಳಾದ ಅನು, ಆಳು, ಅರು, ಉದು, ಉವು ಎಂಬಾಗಮಗಳು ಬರುವುವು. ಉದಾ:—ಮಾಡುವವನು, ಮಾಡುವವಳು, ಮಾಡುವವರು, ಮಾಡುವುದು, ಮಾಡುವುವು ಎಂಬಂತೆ.
ಮಾಡುವಂ, ಮಾಡುವಳ್, ಮಾಡುವರ್.
(ಹ. ಗ. ರೂಪಗಳು)

92. ಕೆಲವು ಧಾತುಗಳಮೇಲೆ ಕರ್ತೃ ಕರ್ಮಾರ್ಥಗಳಲ್ಲಿ ಮಾತ್ರ ಕೃತ್ಪ್ರತ್ಯಯಗಳು ಸೇರಿ ಕೃನ್ನಾಮಗಳಾಗುವುವು.

ಉದಾಹರಣೆ.

ಧಾತು	ಪ್ರತ್ಯಯ	ಕೃನ್ನಾಮ	ಇದರ ಅರ್ಥ	ಉದಾಹರಣೆ
ಉಣ್ +	ಇ	= ಉಣಿ	ಉಣ್ಣುವವನು—	ಆಲರುಣಿ, ಎಲರುಣಿ.
ಕುಂಟು +	ಅ	= ಕುಂಟ	ಕುಂಟುವವನು—	ಕಾಲುಕುಂಟ.
ಗೊಣಗು +	ಅ	= ಗೊಣಗ	ಗೊಣಗುಟ್ಟುವವನು—	ಮೂಗ, ಕರುಚ.

(1) ಇಕ್ಕಿದ ಭಿಕ್ಷವು ಯಾಚಕನಲ್ಲಿ ಸೇರುವುದು. ಅದರಿಂದ ಯಾಚಕ ಎಂಬುದು ಸಂಪ್ರದಾನವಾಯಿತು. ಅದನ್ನು ವಿಶೇಷಿಸುವ ಇಕ್ಕಿದ ಎಂಬುದು ಸಂಪ್ರದಾನಕಾರಕ ಕೃದಂತವಾಯಿತು. (2) ಇಲ್ಲಿ ಕೊಡ ಅಪಾದಾನವು. ಅದನ್ನು ವಿಶೇಷಿಸುವ ಸುರಿದ ಎಂಬುದು ಅಪಾದಾನಕೃದಂತವಾಯಿತು. (3) ನಡೆವದಾರಿ, ಮಲಗುವ ಹಾಸಿಗೆ ಎಂಬಲ್ಲಿ ಅಧಿಕರಣ ಕಾರಕಗಳಾದ ನಾಮಪದಗಳನ್ನು ವಿಶೇಷಿಸುವುದರಿಂದ ನಡೆದ, ಮಲಗಿದ ಎಂಬುವು ಅಧಿಕರಣ ಕಾರಕಕೃದಂತಗಳಾದುವು.

ಮುಕ್ಕು + ಅ = ಮುಕ್ಕ	ಬೇಗ ಬೇಗ ತಿನ್ನುವವನು—ಹಾಲುಮುಕ್ಕ, ಹಿಟ್ಟುಮುಕ್ಕ.
ಉಗ್ಗು + ಅ = ಉಗ್ಗ	ತೊದಲುಮಾತಿನವನು—ಸಿಗ್ಗ.
ಕರುಬು + ಅ = ಕರುಬ	ಅಸೂಯೆಪಡುವವನು
ಕಳ್ + ಅ = ಕಳ್ಳ	ಕದಿಯುವವನು—ಸುಳ್ಳ.
ಮುದು + ಕ = ಮುದುಕ	ಮುದಿಯಾದವನು—ನಡುಕ.
ಹರಿ + ಅಕ = ಹರಕ	ಹರಿಯುವವನು—ಕಚ್ಚೆಹರಕ.
ಬಡಿ + ಅಕ = ಬಡಕ	ಬಡಿಯುವವನು—ಬಾಯಿಬಡಕ
ನೋಡು + ಅಕ = ನೋಟಕ	ನೋಡುವವನು
ಕುಡಿ + ಉಕ = ಕುಡುಕ	ಕುಡಿಯುವವನು—ಹೆಂಡಕುಡುಕ.
ತಿರಿ + ಉಕ = ತಿರುಕ	ತಿರಿದು ತಿನ್ನುವವನು (ಇ)

93. ಭಾವಕೃದಂತ—ಧಾತುಗಳಿಗೆ ಭಾವಾರ್ಥದಲ್ಲಿ ಕೃತ್ಪ್ರತ್ಯಯಗಳು ಸೇರಿ ಭಾವಕೃದಂತಗಳಾಗುವುವು. ಇವುಗಳನ್ನು ಭಾವನಾಮಗಳೆಂದೂ ಹೇಳುವರು.

ಉದಾಹರಣೆ.

(*a*) ಧಾತು	ಪ್ರತ್ಯಯ	ಭಾವಕೃದಂತ	ಸರೂಪ ಪದಗಳು
ಮಾಡು ಕೊಡು	ವುದು ಇಕೆ } (1)	ಮಾಡುವುದು ಮಾಡುವಿಕೆ ಕೊಡುವುದು ಕೊಡುವಿಕೆ	ಕೊಡುವುದು, ಇರುವುದು (ಇ) ಕೊಡುವಿಕೆ, ಇರುವಿಕೆ (ಹೀಗೆಯೇ) ಹೊಂದಿಕೆ, ಕಾಣಿಕೆ, ಆಳಿಕೆ, ಅಂಜಿಕೆ, ಅಡಿಕೆ, ಕೇಳಿಕೆ, ಹೊಂದಿಕೆ.
ಆಡು	ಟ	ಆಟ	ಕೂಟ, ಕಾಟ, ನೋಟ, ಮಾಟ.
ಸಾಲು	ಅ	ಸಾಲ	
ನಗು	ಎ	ನಗೆ	ಕೊಲೆ, ನೊರೆ.
ಮುಸಗು	ಕ	ಮುಸಕ	ಎಸಕ ತೂಕ (2)
ಆಸರ್	ಉ	ಆಸರು	ಬೇಸರು
ಅಳಿ ಹೊಳೆ ಬೆಳೆ	ವು ಅಪು ಅಸು	ಅಳಿವು ಹೊಳಪು ಬೆಳಸು	ಪಳಿವು, ಸುಳಿವು, ತಿಳಿವು, ನೋವು, ಸಾವು, ಬಾವು, (ಬಾಹು) ಹಸಿವು, ಅರಿವು.

(1) ಈ ಪ್ರತ್ಯಯಗಳು ಸಾಮಾನ್ಯವಾಗಿ ಎಲ್ಲಾ ಧಾತುಗಳ ಮೇಲೆಯೂ ಬರುವುದುಂಟು. (2) ಧಾತುವಿನ ಕೊನೆಯಕ್ಷರವಾದ ಗು ಲೋಪವಾಗಿದೆ.

ನೆರೆ	ಅವಿ	ನೆರವಿ	ಬಳವಿ
ಪೊಗಳ್	ತೆ	ಪೊಗಳ್ತೆ	ನೆಗಳ್ತೆ, ಮಿಗುತೆ
ನೆನೆ	ಅಪು	ನೆನಪು	ಪದಪು
ತಿರುಗು	ಅಣೆ	ತಿರುಗಣೆ	ಹರಗಣೆ
ಬಯ್	ಗುಳು	ಬಯ್ಗುಳು	ಪೊಯ್ಗುಳು
ನಲ್	ಮೆ	ನಲ್ಮೆ	ಕೂರ್ಮೆ, ತಾಳ್ಮೆ
ಉಣ್	ಇಸು	ಉಣಿಸು	ತಿನಿಸು, ಕಿನಿಸು.
ಬರೆ	ಪ	ಬರೆಪ (ಹೊ. ಗ. ಬರಹ.)	
ನಡೆ	ವಳಿಕೆ	ನಡೆವಳಿಕೆ	ಬೆಳೆವಳಿಕೆ, ತಿಳಿವಳಿಕೆ, ಚಳವಳಿಕೆ, ಸಲುವಳಿಕೆ.
ನಂಬು	ಗೆ	ನಂಬುಗೆ	ಹೊಲಿಗೆ, ಉಡುಗೆ, ಹಸುಗೆ, ಏಳ್ಗೆ, ಬೆಸುಗೆ.
ಸಲ್	ಇಗೆ	ಸಲಿಗೆ	ತೊಡಿಗೆ, ಕೊಡಿಗೆ, ಮೂಡಿಗೆ.
ಮೇ	ಪು	ಮೇಪು	ಕಾಪು, ಓಪು, ಕೂರ್ಪು, ನೇರ್ಪು ತೀರ್ಪು, ಮುಪ್ಪು
ಮುಳಿ	ಸು	ಮುಳಿಸು	ಮುನಿಸು, ಕಿನಿಸು.
ಇರು	ಇತ	ಇರಿತ	ತಿವಿತ.
ನೆಗೆ	ತ	ನೆಗೆತ	ಈತ, ಜಿಗಿತ, ಇಳಿತ, ಗೆಯ್ತ.
ಅಳಿ	ಅವು	ಅಳವು	ಬಲವು, ಇರವು, ಸಲವು, ಕಳವು, ತೆರವು, ಸೆಳವು, ನೆರವು.
ಮರೆ	ಅವೆ	ಮರವೆ	
ಕಲ್	ಪಿ	ಕಲ್ಪಿ	ನೋಂಪಿ, (ಹೊ.ಗ. ನೋಹಿ)
ಹೊಯ್	ಲು	ಹೊಯ್ಲು	ಸುಯ್ಲು, ಕೊಯ್ಲು.
ಬಾಳ್	ಕೆ	ಬಾಳ್ಕೆ, (ಬಾಳಿಕೆ ಹೊ. ಗ.)	ಆಳ್ಕೆ, ಮಾಳ್ಕೆ, ಆರಯ್ಕೆ, ಸೀನ್ಕೆ, ಆಳಿಕೆ.
ಮಿಾ	ಹ	ಮಿಾಹ	

(*b*) ಕೆಲವು ಧಾತುಗಳು ಸ್ವಲ್ಪ ರೂಪವ್ಯತ್ಯಾಸದಿಂದ ಭಾವಕೃದಂತಗಳಾಗುವುವು.

ಧಾತು	ಭಾವಕೃದಂತ
ಕಿಡು (ಕೆಡು)	ಕೇಡು
ಕುಡು (ಕೊಡು)	ಕೋಡು
ಬಿಡು	ಬೀಡು
ಪಡು	ಪಾಡು
ತುಡು (ತೊಡು)	ತೋಡು

(*c*) ಕೆಲವು ಧಾತುಗಳು ರೂಪವ್ಯತ್ಯಾಸವಾಗದೆಯೇ ಭಾವಕೃದಂತಗಳಾಗುವುವು.

ಉದಾಹರಣೆ.

ನಡೆ, ನುಡಿ,(1) ಓದು, ಕಟ್ಟು, ಅಂಟು, ಹಿಡಿ, ಉರಿ, ಹೇರು, ಉಗುಳು, ಚಳಿ, ಹುಟ್ಟು, ಚಿಗುರು, ಬೆಳೆ, ಸವಿ, ಹೊಗೆ, ಹೂ, ಒಪ್ಪು, ಕುಟ್ಟು.(ಇ)

(*d*) ಕ್ರಿಯಾಪದ ಸ್ಥಾನದಲ್ಲಿ ಭಾವಕೃದಂತವನ್ನುಪಯೋಗಿಸಿದಾಗ ಅದರ ಹಿಂದೆ ಇರುವ ಕರ್ತೃ ಕರ್ಮ ಕಾರಕ ಪದಗಳಿಗೆ ಷಷ್ಠೀವಿಭಕ್ತಿ ಬರುವುದು.

ಉದಾಹರಣೆ.

ಕ್ರಿಯಾಪದ—ಭೀಮನು ಅಡಿಗೆಯನ್ನು ಮಾಡಿದನು.

ಷಷ್ಠಿಬರುವುದಕ್ಕೆ—ಭೀಮನ ಅಡಿಗೆಯ ಮಾಟ. ಇಲ್ಲಿ ಮಾಡಿದನು ಎಂಬ ಕ್ರಿಯೆಗೆ ಮಾಟ ಎಂದು ಭಾವಕೃದಂತ ಬಂದುದರಿಂದ ಹಿಂದಣ ಭೀಮ ಎಂಬ ಕರ್ತೃಕಾರಕಕ್ಕೂ ಅಡಿಗೆಯನ್ನು ಎಂಬ ಕರ್ಮಕಾರಕಕ್ಕೂ ಷಷ್ಠೀವಿಭಕ್ತಿ ಬಂದು "ಭೀಮನ ಅಡಿಗೆಯ ಎಂದಾಯಿತು.

ಹೀಗೆಯೇ

ನಿನ್ನೇ ರಾತ್ರಿ ನಾನು ನಾಟಕವನ್ನು ನೋಡಿದೆನು. ಅದು ವಿನೋದವಾಗಿದ್ದಿತು ಎಂಬುದು ನಿನ್ನೆಯ ರಾತ್ರಿ ನನ್ನ ನಾಟಕದ ನೋಟವು ವಿನೋದವಾಗಿದ್ದಿತು ಎಂದು ಆಗುವುದು.

94. ಅವ್ಯಯ ಕೃದಂತ—ಇವು ಅವ್ಯಯ (*102) ಗಳಾಗಿಯೂ ಕೃತ್ಪ್ರತ್ಯಯಾಂತವಾಗಿಯೂ ಇರುವುದರಿಂದ ಅವ್ಯಯಕೃದಂತಗಳೆನಿಸುವುವು. ಇವುಗಳಲ್ಲಿ ಸಂಪೂರ್ಣಾರ್ಥವಿಲ್ಲದೆ ಮತ್ತೊಂದು ಪೂರ್ಣ ಕ್ರಿಯೆಯನ್ನಪೇಕ್ಷಿಸುವುದರಿಂದ ಅಪೂರ್ಣಕ್ರಿಯೆ ಅಥವಾ ನ್ಯೂನಕ್ರಿಯೆಗಳೆನಿಸುವುವು.

(*a*) ಅವ್ಯಯಕೃದಂತಗಳಲ್ಲಿ ಕೆಲವು ಸಮಾನ (2) ಕರ್ತೃಕಗಳಾಗಿಯೂ ಕೆಲವು ಭಿನ್ನ (3) ಕರ್ತೃಕಗಳಾಗಿಯೂ ಇರುವುವು. ಇವೆಲ್ಲಾ ಒಂದು ಪೂರ್ಣ ಕ್ರಿಯೆಯಲ್ಲಿಯಾಗಲಿ, ಕಾರಕಕೃದಂತದಲ್ಲಿಯಾಗಲಿ, ಭಾವಕೃದಂತದಲ್ಲಿಯಾಗಲಿ ಅವ್ಯಯಕೃದಂತದಲ್ಲಿಯಾಗಲಿ ಅನ್ವಯಿಸುವುವು.

(1) ಅವನು ನಡೆದನು, ಹಲ್ಲಿ ನುಡಿಯಿತು ಎಂಬಲ್ಲಿ ಧಾತುಗಳಾಗಿರುವ ಶಬ್ದಗಳು ಅವನ ನಡೆ ನುಡಿಗಳು ಚೆನ್ನಾಗಿವೆ ಎಂಬಲ್ಲಿ ಭಾವಕೃದಂತವಾಗಿ ನಾಮಪದಗಳೆನಿಸಿಕೊಂಡವು. (2) ಒಂದೇ ಕರ್ತೃ. (3) ಬೇರೆ ಬೇರೆ ಕರ್ತೃಗಳು.

ಉದಾಹರಣೆ.

ಸಮಾನ ಕರ್ತೃಕಕ್ಕೆ—ಉಂಡು ಮಲಗಿದನು. (1)
ಭಿನ್ನಕರ್ತೃಕಕ್ಕೆ—ನೀರು ಬರಲು ಕೆರೆತುಂಬಿತು. (2)
ಪೂರ್ಣಕ್ರಿಯಾನ್ವಯಕ್ಕೆ—ಸೂರ್ಯನು ಹುಟ್ಟಿ ಮುಳುಗಿದನು. (3)
ಕಾರಕಕೃದಂತದಲ್ಲಿ ಅನ್ವಯಕ್ಕೆ—ಕೆಲಸಮಾಡುತ್ತಾ ಇರುವ ಮನುಷ್ಯನು.(4)
ಭಾವಕೃದಂತ ,, ,, —ಆಲೋಚಿಸದೆ ಪ್ರವೇಶಿಸುವುದು ಅಪಾಯಕ್ಕೆ ಕಾರಣವು. (5)
ಅವ್ಯಯ ಕೃದಂತದಲ್ಲಿ ,, —ಬಾಲ್ಯದಲ್ಲಿ ಓದದೆ ಇದ್ದರೆ ಮುಂದೆ ವಿದ್ಯೆ ಬರುವುದಿಲ್ಲ. (6)

95. ಸಮಾನಕರ್ತೃಕ—ಒಬ್ಬ ಮನುಷ್ಯನು ಅನೇಕ ಕೆಲಸಗಳನ್ನು ಮಾಡಬೇಕಾದಾಗ, ಒಂದು ಕೆಲಸ ಮುಗಿದಮೇಲೆ ಇನ್ನೊಂದನ್ನು ಮಾಡಬಹುದು. ಅಥವಾ ಎರಡನ್ನೂ ಒಂದೇಕಾಲದಲ್ಲಿ ಮಾಡಬಹುದು. ಅಥವಾ ಒಂದನ್ನು ಬಿಟ್ಟು ಮತ್ತೊಂದನ್ನು ಮಾಡಬಹುದು. ಹಾಗೂ ಇಲ್ಲದೆ ಇದ್ದರೆ ಒಂದು ಕೆಲಸವು ಇನ್ನೊಂದಕ್ಕೆ ಕಾರಣವಾಗಿಯಾಗಲಿ, ಪ್ರಯೋಜಕವಾಗಿಯಾಗಲಿ ಇರಬಹುದು. ಈಗ, ಎರಡನೇ ಕ್ರಿಯೆಗಿಂತ ಮೊದಲನೇ ಕ್ರಿಯೆಯಲ್ಲಿ ಭೂತಕಾಲ ತೋರಿದರೆ ಅದಕ್ಕೆ ದು ಅಥವಾ ಇ ಪ್ರತ್ಯಯವೂ, ಎರಡು ಕ್ರಿಯೆಗಳಿಗೂ ಸಮಾನಕಾಲ ತೋರಿದರೆ ಮೊದಲನೆ ಕ್ರಿಯೆಗೆ ಉತ್ತಾ ಪ್ರತ್ಯಯವೂ, ಮೊದಲನೆಯ ಕ್ರಿಯೆಯಲ್ಲಿ ನಿಷೇಧ ತೋರಿದರೆ "ಅದೆ" ಎಂಬ ಪ್ರತ್ಯಯವೂ, ಪಕ್ಷಾರ್ಥ ತೋರಿದರೆ "ದರೆ" ಪ್ರತ್ಯಯವೂ, ಮೊದಲನೆಯ ಕ್ರಿಯೆಯಲ್ಲಿ ಕಾರಣ ಅಥವಾ ಪ್ರಯೋಜನ (ಉದ್ದೇಶ) ತೋರಿದರೆ ಅದಕ್ಕೆ ಅ, ಅಲು, ಅಲಿಕೆ ಅಥವಾ ಅಲಿಕ್ಕೆ ಎಂಬ ಪ್ರತ್ಯಯಗಳೂ ಬರುವುವು.

(1) ಇಲ್ಲಿ ಉಣ್ಣು ಎಂಬ ಕ್ರಿಯೆಗೂ ಮಲಗು ಎಂಬ ಕ್ರಿಯೆಗೂ ಒಬ್ಬನೇ ಕರ್ತೃವಾಗಿರುವ ಕಾರಣ ಈ ವಾಕ್ಯವು ಸಮಾನಕರ್ತೃಕವಾಯಿತು. (2) ಇಲ್ಲಿ ಬರು ಎಂಬ ಕ್ರಿಯೆಗೆ ನೀರು ಎಂಬುದೂ, ತುಂಬು ಎಂಬ ಕ್ರಿಯೆಗೆ ಕೆರೆಯೆಂಬುದೂ ಕರ್ತೃಪದಗಳಾಗಿರುವುದರಿಂದಲೂ ಮೊದಲನೆಯ ಕ್ರಿಯೆ ಅಪೂರ್ಣವಾಗಿರುವುದರಿಂದಲೂ ಭಿನ್ನಕರ್ತೃಕ ವಾಕ್ಯವಾಯಿತು. (3) ಹುಟ್ಟಿ ಎಂಬ ಅವ್ಯಯ ಕೃದಂತವು ಮುಳಗಿದನು, ಎಂಬ ಪೂರ್ಣಕ್ರಿಯೆಯಲ್ಲಿ ಅನ್ವಯವಾಗುತ್ತದೆ. (4) ಮಾಡುತ್ತಾ ಎಂಬ ಅಪೂರ್ಣಕ್ರಿಯೆಯು ಇರುವ ಎಂಬ ಕಾರಕಕೃದಂತದಲ್ಲಿ ಅನ್ವಯಿಸುತ್ತದೆ. (5) ಆಲೋಚಿಸದೆ ಎಂಬ ಅಪೂರ್ಣಕ್ರಿಯೆಯು ಪ್ರವೇಶಿಸುವುದು ಎಂಬ ಭಾವಕೃದಂತದಲ್ಲಿ ಅನ್ವಯಿಸುತ್ತದೆ. (6) ಓದದೆ ಎಂಬ ಅಪೂರ್ಣಕ್ರಿಯೆಯು ಇದ್ದರೆ ಎಂಬ ಅಪೂರ್ಣಕ್ರಿಯೆಯಲ್ಲಿ ಅನ್ವಯಿಸುತ್ತದೆ.

ಉದಾಹರಣೆ.

ದು ಪ್ರತ್ಯಯಕ್ಕೆ—ನುಡಿದು ಹೋದನು(1). ನಡೆದು ಬಂದನು.
ಇ ,, —ಮಲಗಿ ಎದ್ದನು. ಆಡಿ ಸೋತನು.
ಉತ್ತಾ ಪ್ರತ್ಯಯಕ್ಕೆ—ನಡೆಯುತ್ತಾ ಎಡವಿದನು. ನೋಡುತ್ತಾ ಇದ್ದನು(2) ಅವನು ಬರುತ್ತಾ ಹೋಗುತ್ತಾ ಅತ್ತಿತ್ತ ನೋಡುತ್ತಾ ಮಾತಾಡುತ್ತಾ ಇದ್ದನು. (3)
ಅದೆ ,, —ಹೇಳದೆ ಬಂದನು, ನಿಲ್ಲದೆ ನಡೆದನು. (4)
ದರೆ ,, —ಬಂದರೆ ಬದುಕದೆ; ಬಿಟ್ಟರೆ ಕೆಟ್ಟೆ (5)
ಅ, ಅಲು, ಅಲಿಕೆ, ಅಲಕ್ಕೆ—ಮಾಡತೊಡಗಿದನು, ಬರಲು ಕಂಡನು. ಬರೆಯಲಿಕೆ (ಬರೆಯಲಿಕ್ಕೆ) ಕುಳಿತನು.

96. ಭಿನ್ನಕರ್ತೃಕಾವ್ಯಯ ಕೃದಂತಗಳು :—

ಯಾವುದಾದರೊಂದು ವಿಷಯ ಅಥವಾ ಸಂಗತಿಯನ್ನು ಸ್ಪಷ್ಟವಾಗಿ ತಿಳಿಸಬೇಕಾದರೆ ಅನೇಕ ವಾಕ್ಯಗಳನ್ನು ಪಯೋಗಿಸಬೇಕಾಗುವುದು. ಆಗ ಪ್ರತಿಯೊಂದು ವಾಕ್ಯವನ್ನೂ ಸಂಪೂರ್ಣಾರ್ಥದಿಂದಲೇ ಬೇರೆಬೇರೆಯಾಗಿ ಹೇಳಿದರೆ ಅವುಗಳ ಪರಸ್ಪರ ಸಂಬಂಧ ತಿಳಿಯುವುದು ಕಷ್ಟವಾಗುವುದು. ಇದಲ್ಲದೆ ಮಾತುಗಳ ಸಂಖ್ಯೆಯೂ ಹೆಚ್ಚುವುದು ಇದಕ್ಕಾಗಿಯೇ ಒಂದು ವಾಕ್ಯವನ್ನು ಸಂಪೂರ್ಣ ಕ್ರಿಯೆಯಲ್ಲಿಟ್ಟು, ಮಿಕ್ಕ ವಾಕ್ಯಗಳನ್ನು ಅದೇ ವಾಕ್ಯದಲ್ಲಿ ಅಪೂರ್ಣಕ್ರಿಯೆಗಳಿಂದ ಅದಕ್ಕೆ ಸೇರಿದಂತೆ ಇಡುವುದುಂಟು. ಆಗ ಪ್ರತಿಯೊಂದು ಕ್ರಿಯೆಗೂ ಕರ್ತೃಪದಗಳು ಬೇರೆಬೇರೆಯಾಗಿರುವುವು. ಹೀಗಿರುವ ಆ ಒಟ್ಟು ವಾಕ್ಯಕ್ಕೆ ಭಿನ್ನಕರ್ತೃಕಪ್ರಯೋಗದ ವಾಕ್ಯವೆಂದೂ ಅದರಲ್ಲಿ ಬರುವ ಅಪೂರ್ಣಕ್ರಿಯೆಗಳಿಗೆ ಭಿನ್ನಕರ್ತೃಕಾವ್ಯಯ ಕೃದಂತಗಳೆಂದೂ ಹೇಳುವರು

(1) ಹೋಗು ಎಂಬ ಕ್ರಿಯೆಗೆ ಮೊದಲೇ ನುಡಿಯೆಂಬ ಕ್ರಿಯೆ ನಡೆದಿರುವುದರಿಂದ ಅದರ ಮೇಲೆ ದು ಪ್ರತ್ಯಯ ಬಂದಿತು. ಇದೇ ಕಾರಣದಿಂದಲೇ ಮಲಗು ಎಂಬ ಕ್ರಿಯೆಗೆ ಇ ಪ್ರತ್ಯಯ ಬಂದಿದೆ. (*82-2) (2) ನೋಡು, ಇರು ಎಂಬ ಎರಡು ಕ್ರಿಯೆಗಳಿಗೂ ಏಕಕಾಲ ತೋರುವುದರಿಂದ ಉತ್ತಾ ಪ್ರತ್ಯಯ ಬಂದಿದೆ. (3) ವಾಕ್ಯದಲ್ಲಿ ಅಪೂರ್ಣಕ್ರಿಯೆಗಳು ಎಷ್ಟಾದರೂ ಇರಬಹುದು. ಅವೆಲ್ಲಾ ಕೊನೆಯ ಪೂರ್ಣ ಕ್ರಿಯೆಯಲ್ಲಿ ಅನ್ವಯಿಸುತ್ತವೆ. (4) ಹೇಳು ಧಾತುವಿನಲ್ಲಿ ನಿಷೇಧಾರ್ಥ ತೋರುವುದರಿಂದ ಅದೆ ಪ್ರತ್ಯಯ ಬಂದಿದೆ. (5) ಬಂದರೆ ಎಂಬುದರಲ್ಲಿ ಬರಲೂ ಬಹುದು ಬದಲೂ ಬಹುದೆಂದು ಪಕ್ಷಾರ್ಥ ತೋರುವುದರಿಂದ ದರೆ ಪ್ರತ್ಯಯ ಬಂದಿದೆ.

ಇದರಲ್ಲಿ ಬರುವ ಭಿನ್ನಕರ್ತೃಕಾವ್ಯಯ ಕೃದಂತ ಪ್ರತ್ಯಯಗಳು:—

ವುದೂ, ಉವದೂ, ಉತ್ತಲೂ, ಅಲು, ಆಗಿ, ದರೆ, ದು ಎಂಬುವು ಮುಖ್ಯವಾಗಿವೆ.

(a) ವುದೂ, ಉವುದೂ (1) ಉತ್ತಲೂ (2) ಎಂಬುವು ಒಂದು ಕ್ರಿಯೆ ನಡೆದ ಕೂಡಲೆ ಇನ್ನೊಂದು ಕ್ರಿಯೆ ನಡೆಯಿತೆಂದು ಸೂಚಿಸುತ್ತವೆ.

ಉದಾಹರಣೆ.

ಅವನು ಬರುವುದೂ ಇವನು ಹೋದನು. ನೀನು ಕರೆಯುವುದೂ ನಾನು ಬಂದೆನು. ಬಿಸಿಲು ಬರುತ್ತಲೂ ಮಂಜು ಹರಿಯಿತು.

(b) ಅಲು, ದು, ಆಗಿ, ಎಂಬುವು ಮೊದಲನೆಯ ಕ್ರಿಯೆ. ಎರಡನೇ ಕ್ರಿಯೆಗೆ ಕಾರಣ ಅಥವಾ ಪ್ರಯೋಜಕವೆಂಬುದನ್ನು ಸೂಚಿಸುತ್ತದೆ. ಆಗಿ ಎಂಬುದನ್ನು ಅಲು ಪ್ರತ್ಯಯದ ಮೇಲೆಯೂ ಅಲು ಇಲ್ಲದೆಯೂ ಪ್ರಯೋಗಿಸುವುದುಂಟು.

ಕಾರಣಕ್ಕೆ-ಅಲು-ಗಾಳಿ ಬರಲು (3) ದೂಳಿ ನೆಗೆಯಿತು.
,, ದು-ದಾರಿ ನಡೆದು ಕಾಲು ನೊಂದಿತು.
,, ಆಗಿ-ಮಳೆ ಬರಲಾಗಿ ನೆಲ ಕೆಸರಾಯ್ತು (4)
,, ಬೆಳೆಬರಲಾಗಿ ದರತಗ್ಗಿತು.
ಪ್ರಯೋಜನಕ್ಕೆ-ಸ್ನಾನಮಾಡಲು ಹೊಳೆಗೆ ಹೋದನು.
ಪಾಠ ಓದಲು ಶಾಲೆಗೆ ಹೋದನು.

ದರೆ ಎಂಬುದು ಪಕ್ಷಾರ್ಥವನ್ನು ಸೂಚಿಸುತ್ತದೆ. } ನೀನು ಬಂದರೆ ನಾನು ಹೊರಡುವೆನು. ಮಳೆ ಬಂದರೆ ಬೆಳೆಯಾಗುವುದು.

ಅಲು ಇಲ್ಲದೆಯೇ ಆಗಿ ಬರುವುದಕ್ಕೆ—ಹಣವಿರಲಿಲ್ಲವಾಗಿ ಸಾಲಮಾಡಿದನು. (5)

---

(1) ಹೊ. ಗ. ದಲ್ಲಿ ವದೂ ಉವದೂ ಎಂದು ಪ್ರಯೋಗವುಂಟು. ಅವನು ಬರುವದೂ ಇವನು ಹೋದನು. ನಾನು ಕರೆಯುವದೂ ನೀನು ಬಂದೆ ಎಂಬಂತೆ. (2) ಉತ್ತಲೇ ಎಂಬ ಪ್ರತ್ಯಯವು ರೂಢಿಯಲ್ಲಿದೆ. ನೀನು ಬರುತ್ತಲೇ ನಾನು ಕಂಡೆನು ಎಂಬಂತೆ. (3) ಅಲು ಪ್ರತ್ಯಯಕ್ಕೆ ಬದಲಾಗಿ ಹ. ಗ. ದಲ್ಲಿ ಅಲೊಡಂ ಎಂಬ ಪ್ರತ್ಯಯವನ್ನು ಹೇಳುವುದುಂಟು. ಗಾಳಿ ಬರಲೊಡಂ ದೂಳಿನೆಗೆಯಿತು ಎಂಬಂತೆ. (4) ಇಲ್ಲಿ ಅಲ್ ಪ್ರತ್ಯಯದ ಮೇಲೆ "ಆಗಿ" ಬಂದಿದೆ. (5) "ಇಲ್ಲವಾಗಿ" ಎಂಬಲ್ಲಿ ಆಗಿ ಎಂಬುದರ ಹಿಂದೆ ಅಲು ಇಲ್ಲ.

IX ತದ್ಧಿತ ಪ್ರಕರಣ.

97. ನಾಮಪದಗಳ(*47)ಮೇಲೆ ಬೇರೆಬೇರೆ ಅರ್ಥಗಳಲ್ಲಿ ಬರುವ ಪ್ರತ್ಯಯಗಳು ತದ್ಧಿತ (1) ಪ್ರತ್ಯಯಗಳೆನಿಸುವುವು. ಈ ಪ್ರತ್ಯಯಗಳು ಸೇರಿ ಆಗುವ ಶಬ್ದಗಳೇ ತದ್ಧಿತಾಂತಗಳು. ತದ್ಧಿತಾಂತಗಳಲ್ಲಿ ತದ್ಧಿತನಾಮ, ತದ್ಧಿತ ಭಾವನಾಮ, ತದ್ಧಿತಾಂತಾವ್ಯಯ ಎಂದು ಮೂರುವಿಧವು.

ಅನೇಕಾರ್ಥಗಳಲ್ಲಿ ನಾಮಪದಗಳ ಮೇಲೆ ಪ್ರತ್ಯಯಗಳು ಸೇರಿ ಯಾವುವುದಾದರೊಂದು ವಸ್ತು ಅಥವಾ ವ್ಯಕ್ತಿಯನ್ನು ಬೋಧಿಸುವ ಶಬ್ದಗಳು ತದ್ಧಿತ ನಾಮವಾಚಕಗಳೆನಿಸುವುವು.

ಉದಾಹರಣೆ.

ಇದು ಇವನಲ್ಲಿ ಇರುವುದು ಎಂಬರ್ಥದಲ್ಲಿ ಉಳ್ಳ, ವಂತ ಪ್ರತ್ಯಯಗಳು ಬರುವುವು.

	=ಹಣವುಳ್ಳ, ಜ್ಞಾನವುಳ್ಳ, ಗುಣವಂತ, ಜ್ಞಾನವಂತ.
,, ,, ,, ,,	ಕ-ಕಪ್ಪುಳ್ಳವನು= ಕರಿಕ, ಬಿಳುಪುಳ್ಳವನು=ಬಿಳಿಕ.
,, ಇವನ ಶೀಲ ,,	ಆಳಿ-ಬಹಳ ಮಾತಾಡುವ ಶೀಲವಿರುವವನು = ಮಾತಾಳಿ. ಬಹಳ ಓದುವ ಶೀಲವಿರುವವನು - ಓದಾಳಿ.
,, ,, ,, ,,	ಬಾಕ - ಹೊಟ್ಟೆ ತುಂಬುವ ಶೀಲವಿರುವವನು = ಹೊಟ್ಟೆಬಾಕ.
,, ಇಷ್ಟು ಬಾರಿ ,,	ಮೆ - ಒಂದುಬಾರಿ = ಒಮ್ಮೆ (ಒರ್ಮೆ ಇರ್ಮೆ ಹ. ಗ.) ನೂರ್ಮೆ ನಾಸಿರ್ಮೆ, ಪಲರ್ಮೆ. (ಇ)
ಇದನ್ನು ಇವನು ಮಾಡುವನೆಂ ,, ಜಾತಿ ತೋರುವಾಗ	ವಾಳ - ಮಡಿಯನ್ನು ಮಾಡುವವನು= ಮಡಿವಾಳ (ಮಡಿವಳ)
,, ,, ,, ,,	ಆರ - ಕುಂಭವನ್ನು ಮಾಡುವವನು = ಕುಂಬಾರ.
,, ,, ,, ,,	ಕರ್ಮ (ಕಬ್ಬಿಣ ಕೆಲಸ)ವನ್ನು ಮಾಡುವವನುಕಮ್ಮಾರ.

(1) ತತ್ - ಆ ನಾಮಪದಗಳಿಂದ ಹಿತ ಉಂಟಾದ ಶಬ್ದಗಳೆಂದರ್ಥವು.

,, ,, ,, ,,	ಗಾರ - ಮಾಲೆಯನ್ನು ಮಾಡುವವನು ಮಾಲೆಗಾರ, ಬಳೆಗಾರ, ಕಂಚುಗಾರ.
,, ,, ತರುವವನೆಂಬ ,,	ಕಾರ - ಓಲೆ (ಕಾಗದವನ್ನು) ತರುವವನು ಓಲೆಕಾರ.
ಇದರಿಂದ ,, ಜೀವಿಸುವನೆಂಬ,,	ಗ, ವಣಿಗ = ಮಾತಿನಿಂದ ಜೀವಿಸುವವನುಮಾತುಗ, ಬೂತುಗ, ನಾರುಗ, ಲಂಚವಣಿಗ.
,, ,, ,, ,,	ಆಡಿಗ (ಆಡಿಗ) - ಹಾವನ್ನು ಆಡಿಸಿ ಜೀವಿಸುವವನು ಹಾವಡಿಗ (ಹಾವಾಡಿಗ) ಹೂವಾಡಿಗ (ಹೂವಡಿಗ)
,, ,, ,, ,,	ಉಳಿಗ - ದೇವರ ಪೂಜೆಯಿಂದ ಜೀವಿಸುವವನು ದೇವುಳಿಗ, ಪಾವುಳಿಗ.
,,ಈ ಸಂಖ್ಯೆ ಪೂರ್ಣವಾಯಿತೆಂಬ ,,	ಆನೆಯ - ಮೊದಲನೆಯ, ಎರಡನೆಯ, ಹತ್ತನೆಯ.
ಇದರಲ್ಲಿ,, ಗಟ್ಟಿಗನೆಂಬರ್ಥ ,,	ಪೋತ — ತಿಂಡಿಯಲ್ಲಿ ಗಟ್ಟಿಗನು ತಿಂಡಿಪೋತ.
, ಇವನು ,, ನೇಮಿಸಲ್ಪಟ್ಟವ,,	ವಳ, ವಳ್ಳ, ಆಯ್ತ - ಪಡೆ (ಸೈನ್ಯ) ಯಲ್ಲಿ ನೇಮಿಸಲ್ಪಟ್ಟವನು - ಪಡೆವಳ್ಳ ಪಡೆವಳ, ಸೂಳು (ಸಮಯ) ತಿಳಿಸುವುದರಲ್ಲಿ ನೇಮಿಸಲ್ಪಟ್ಟವನು= ಸೂಳಾಯ್ತ.
,, ,, ಹುಟ್ಟಿದನು ಅಥವಾ ಇರುವನೆಂಬ ಅಲ, ದ, ಪ್ರತ್ಯಯಗಳು	,, ಇಚ - ಪೊಳಲಲ್ಲಿ ಹುಟ್ಟಿದವನು ಪೊಳಲಿಚ. ,, ಅಲರ್‌ನಲ್ಲಿ ಹುಟ್ಟಿದುದು ಅಥವಾ ಇರುವುದು ಅಲರಿಚ, ಕಾಲೂರು ಮೇಲೂರುಗಳಲ್ಲಿ ಹುಟ್ಟಿದವರು ಕಾಲೂರಿಚ ಮೇಲೂರಿಚ.
,, ,, ,, ,,	ಅಲ = ಮೂಡಲಲ್ಲಿ ಹುಟ್ಟಿದವನು ಮೂಡಲ (1)

(1) ಮೂಡಣ, ಪಡುವಣ ಎಂದು ಅಣ ಪ್ರತ್ಯಯವೂ ಉಂಟು.

,, ,, ,, ,, ದ = ಅಲ್ಲಿ ಹುಟ್ಟಿದವನು - ಅಲ್ಲಿದ, ಇಲ್ಲಿದೆ.

98. ಈ ಕೆಳಗಣ ಅರ್ಥಗಳಲ್ಲಿ ಇಗ, ಗಾರ ಪ್ರತ್ಯಯಗಳು ಬರುವುವು.

ಇಗ	ಗಾರ
ಚಿನ್ನ (ಸೊಗಸು) ಉಳ್ಳವನು - ಚಿನ್ನಿಗ	ಸಾಲವನ್ನು ಮಾಡುವವನು - ಸಾಲಗಾರ (1)
ಗಟ್ಟಿತನ ಉಳ್ಳವನು - ಗಟ್ಟಿಗ	ಕಾವಲಿರುವವನು - ಕಾವಲುಗಾರ
ಕಬ್ಬ(ಕಾವ್ಯ)ವನ್ನು ಮಾಡುವವನು- ಕಬ್ಬಿಗ	ಮೋಸಮಾಡುವವನು-ಮೋಸಗಾರ
	ಪಾಲುಳ್ಳವನು ಪಾಲುಗಾರ
ವ್ರತವನ್ನು ಮಾಡುವವನು-ವ್ರತಿಗ	ಹಾಸ್ಯಮಾಡುವವನು-ಹಾಸ್ಯಗಾರ (ನಗೆಗಾರ)
ಲೆಕ್ಕವನ್ನು ಮಾಡುವವನು - ಲೆಕ್ಕಿಗ	ಹಣವುಳ್ಳವನು - ಹಣಗಾರ
ಹೊಲಬನ್ನು (ಗುಟ್ಟು) ತಿಳಿದವನು ಹೊಲಬಿಗ (ಪೊಲಂಬಿಗ ಹ. ಗ.)	ಬೇಟೆಯಾಡುವವನು-ಬೇಟೆಗಾರ
	ಸೊಗಸು ಮಾಡಿಕೊಳ್ಳುವವನು - ಸೊಗಸುಗಾರ
ಜೋಯಿಸ(ಜ್ಯೋತಿಷ್ಯ)ವನ್ನು ಅರಿತವನು - ಜೋಯಿಸಿಗ	ಜೂದು ಆಡುವವನು - ಜೂದುಗಾರ
ದೀವಟಿಯನ್ನು ಹಿಡಿವವನು - ದೀವಟಿಗ	ಮಿಂಡ (ಜಾರ) ತನ ಮಾಡುವವನು - ಮಿಂಡಗಾರ
ದವಸವನ್ನು ಮಾರುವವನು - ದವಸಿಗ	ಕೂಲಿ ಮಾಡುವವನು-ಕೂಲಿಗಾರ (ಕೂಲಿಕಾರ ಎಂದೂ ಉಂಟು).
ಗಂದ (ಚಿಲ್ಲರೆ ದಿನಸಿ) ವನ್ನು ಮಾರುವವನು - ಗಂದಿಗ	ಚಿತ್ರ ಬರೆಯುವವನು - ಚಿತ್ರಗಾರ
	ಸುಳ್ಳು ಹೇಳುವವನು-ಸುಳ್ಳುಗಾರ
ಗಾಣವನ್ನಾಡುವವನು-ಗಾಣಿಗ	ಜತೆಯಲ್ಲಿರುವವನು - ಜತೆಗಾರ
ಸುಂಕದಲ್ಲಿ ನಿಯಮಿತನಾದವನು - ಸುಂಕಿಗ	ಕಂಚು (ಲೋಹಪಾತ್ರೆಗಳನ್ನು) ಮಾರುವವನು - ಕಂಚುಗಾರ
ವ್ಯಾಕರಣವನ್ನು ಮಾಡಿದವನು - ಬಾಗವಣಿಗ (ವ್ಯಾಕರಣ ತತ್ಸಮ, ಬಾಗರಣ ತದ್ಭವ)	ಮಣಿ (ರತ್ನಗಳನ್ನು) ಮಾರುವವನು- ಮಣಿಗಾರ (ಇ)

(1) ಸಾಲ ಕೊಡುವವನಿಗೂ ಸಾಲಗಾರನೆಂದು ಹೇಳುವ ರೂಢಿಯುಂಟು. ಸಾಲಗಾರರ ಬಾಧೆ ಶೂಲವಿರಿದಂತೆ ಎಂದು ಪ್ರಯೋಗವಿದೆ.

99. ಇತಿ, ಇತ್ತಿ, ಗಿತ್ತಿ, ತಿ, ಇ, ಎ. ಸಾನಿ ಎಂಬುವು ಸ್ತ್ರೀಪ್ರತ್ಯಯಗಳು. ಇವು ಪುಲ್ಲಿಂಗ ಶಬ್ದಗಳಮೇಲೆ ಸೇರಿ ಸ್ತ್ರೀಲಿಂಗಪ್ರಕೃತಿಗಳಾಗುವುವು.

ಉದಾಹರಣೆ.

ಇತಿ —ಬೀಗನ ಹೆಂಡತಿ=ಬೀಗಿತಿ (ಬೀಗಿತ್ತಿಯೆಂದೂ ಉಂಟು.) ಹೀಗೆಯೇ ಬ್ರಾಹ್ಮಣಿತಿ, ಬಣಜಿತಿ, ಒಕ್ಕಲಿತಿ, ಉಪ್ಪಾರಿತಿ.

ಇತ್ತಿ —ಮದವಣಿಗ - ಮದವಣಿಗಿತ್ತಿ, ಹೂವಾಡಿಗಿತ್ತಿ, ಬಣಜಿಗಿತ್ತಿ, ಒಕ್ಕಲಿಗಿತ್ತಿ, ನಟ್ಟುವಗಿತ್ತಿ. (ಇ)

ಗಿತ್ತಿ —ನಾಯಿಂದಗಿತ್ತಿ, ಕುರುಬಗಿತ್ತಿ, ಶೂದ್ರಗಿತ್ತಿ, ಅಗಸಗಿತ್ತಿ, ಬೆಸ್ತಗಿತ್ತಿ.

ತಿ —ಗೊಲ್ಲತಿ, ವಡ್ಡತಿ, ಹೊಲತಿ, ದೊಂಬಾರತಿ(ದೊಂಬರತಿ) ಮಾಲೆಗಾರ್ತಿ.

ಇ —ಅಣುಗಿ, ಹುಡುಗಿ, ಅರಸಿ, ತಿಮ್ಮಿ, ವೆಂಕಟಿ. (ಹಣಗಾರ್ತಿ ಹ. ಗ.)(1)

ಎ —ಗುಣವಂತೆ, ಕಳ್ಳೆ, ಹೆಡ್ಡೆ, ಜಾಣೆ, ಸೂಳಾಯ್ತಿ.

ಸಾನಿ—ಗೌಡಸಾನಿ, ನಾಯಕಸಾನಿ, ದೊರೆಸಾನಿ, ಭೋಯಿಸಾನಿ.

100. ತದ್ಧಿತ ಭಾವನಾಮ—ನಾಮಪದಗಳಿಗೆ ಭಾವಾರ್ಥದಲ್ಲಿ ತದ್ಧಿತ ಪ್ರತ್ಯಯಗಳು ಸೇರಿದರೆ ತದ್ಧಿತ ಭಾವನಾಮಗಳಾಗುವುವು. (2)

ತನ, ಪು, ಉ, ಇಕೆ, ಮೆ, ಎಂಬುವು ತದ್ಧಿತದಲ್ಲಿ ಮುಖ್ಯವಾದ ಭಾವಾರ್ಥ ಪ್ರತ್ಯಯಗಳು. ಇವು ಪ್ರಾಯಶಃ ಷಷ್ಠ್ಯಂತ ಪದಗಳಮೇಲೆ ಬರುವುವು.

ಉದಾಹರಣೆ.

ತನ—ದೊಡ್ಡವನ, ಅಥವಾ ದೊಡ್ಡವರ, ದೊಡ್ಡದರಭಾವ = ದೊಡ್ಡತನ. ಹೀಗೆಯೇ ಚಿಕ್ಕತನ, ಹುಚ್ಚುತನ, ಮಂಕುತನ, ಹುಡುಗತನ, ಅರಸುತನ ಶೂರತನ, ಕಲಿತನ, ಚುರುಕುತನ, ಜಾಣತನ.

ಪು ಬಿಳಿಯದರ ಅಥವಾ ಬಿಳಿಯವರಭಾವ, ಬಿಳ್ಪು(ಬೆಳ್ಪು) ಹೀಗೆಯೇ ಕಪ್ಪು (ಹ. ಗ. ಕರ್ಪು) ಇಂಪು, ಪೆಂಪು, ಸೊಂಪು.

ಉ —ಕಿವುಡನ ಭಾವ - ಕಿವುಡು (ಹೀಗೆಯೇ) ಕುರುಡು, ಹುಚ್ಚು, ಮೂಗು, ತೊದಳು.

---

(1) ಗಾರ ಪ್ರತ್ಯಯಾಂತ ಶಬ್ದಗಳು ಸ್ತ್ರೀಲಿಂಗವಾದಾಗ ಗಾರ್ತಿ (ಹೊ. ಸ. ಗಾತಿ) ಎಂದಾಗುವುದುಂಟು. (2) ಕೃದಂತ ಭಾವನಾಮಗಳಿಗೂ ಇವುಗಳಿಗೂ ಭೇದವೇನೆಂದರೆ :—ಧಾತುಗಳ ಮೇಲೆ ಭಾವಪ್ರತ್ಯಯಗಳು ಸೇರುವುದು ಭಾವಕೃದಂತ. ನಾಮಪದಗಳ ಮೇಲೆ ಭಾವಪ್ರತ್ಯಯ ಸೇರುವುದು ತದ್ಧಿತಭಾವನಾಮ.

ಇಕೆ—ಬ್ರಾಹ್ಮಣನ ಭಾವ (ಅಥವಾ ಕರ್ಮ) ಬ್ರಾಹ್ಮಣಿಕೆ, ಗಾಡಿಕೆ, ಉನ್ನತಿಕೆ ಚೆಲ್ವಿಕೆ, ನಾಚಿಕೆ (ನಾಚುವವನ ಭಾವ).

ಮೆ—ಜಾಣನ ಅಥವಾ ಜಾಣೆಯ ಭಾವ-ಜಾಣ್ಮೆ, ಪೆರ್ಮೆ, ಕೂರ್ಮೆ,(1) ನಲ್ಮೆ.

101. ತದ್ಧಿತಾಂತಾವ್ಯಯಗಳು :—

ಸೂ॥ ನಾಮಪದಗಳ ಮೇಲೆ ಪ್ರತ್ಯಯಗಳು ಸೇರಿ ಸ್ಥಾನ, ಕಾಲ, ರೀತಿಗಳನ್ನು ಬೋಧಿಸುತ್ತಾ ಲಿಂಗವಚನ ವಿಭಕ್ತಿಗಳಲ್ಲಿ ರೂಪಭೇದ ತೋರದಿರುವ ಶಬ್ದಗಳು ತದ್ಧಿತಾಂತಾವ್ಯಯಗಳು.

(1) ಇವಕ್ಕಿದು ಸಮಾನವೆಂಬರ್ಥದಲ್ಲಿ ಅಂತೆ (2) ಹಾಗೆ, ಓಪಾದಿಯಲ್ಲಿ ಅಪ್ಪಂದ, ಅಂದದಲ್ಲಿ, ಮಾದರಿ, ವೊಲ್, ವೋಲ್ ಮೊದಲಾದ ಪ್ರತ್ಯಯಗಳು ರೀತಿವಾಚಕಗಳು. ಉದಾ :—

ರಾಮನಂತೆ, ರಾಮನಹಾಗೆ, ರಾಮನೋಪಾದಿಯಲ್ಲಿ, ರಾಮನಪ್ಪಂದ, ರಾಮನಂದದಲ್ಲಿ, ರಾಮನ ಮಾದರಿ, ರಾಮನವೊಲ್, ರಾಮನವೋಲು (ಕೃಷ್ಣನಿರುವನು).

(2) ಸ್ಥಾನ, ಕಾಲಗಳ ಪರಿಮಾಣ ತೋರುವಾಗ ವರೆಗೆ (3) ತನಕ ಎಂಬ ಪ್ರತ್ಯಯಗಳೂ, ವಸ್ತುಪರಿಮಾಣ ತೋರುವಾಗ, ಅಷ್ಟು, ಮಟ್ಟಿಗೆ ಎಂಬ ಪ್ರತ್ಯಯಗಳೂ ಬರುವುವು.

ಉದಾಹರಣೆ.

ವರೆಗೆ ತನಕ—ಊರಿನವರೆಗೆ ಬಂದವನು ಮನೆಯತನಕ ಬರಲಾರೆಯೋ, ಈ ದಿನ ಸಂಜೆಯುವರೆಗೆ (ತನಕ) ಉಪವಾಸ.

ಅಷ್ಟು—ನನ್ನಷ್ಟು ನೀನು ಓದಲಾರೆ, ಕುದುರೆಯಷ್ಟು ವೇಗವು ಕತ್ತೆಗಿಲ್ಲ. ಕೆರೆಯಷ್ಟು ದೊಡ್ಡದು ಕುಂಟೆಯಲ್ಲ.

ಮಟ್ಟಿಗೆ—ಇಷ್ಟು ಮಟ್ಟಿಗೆ ನೀನು ಓದಿದುದು ಹೆಚ್ಚು. ಒಂದು ರೂಪಾಯಿ ಮಟ್ಟಿಗೆ ನನ್ನಲ್ಲಿದೆ, ಒಂದು ಹರದಾರಿ ಮಟ್ಟಿಗೆ ನಡೆದನು.

---

(1) ಕೂರಿತು ಎಂಬ ಗುಣವಾಚಕಕ್ಕೆ ಮೆ ಪ್ರತ್ಯಯ ಬಂದಿದೆ. (2) ಹ. ಗ. ದಲ್ಲಿ ಅಂತಿರೆ, ಅಂತೆವೊಲ್, ಅಂತೆವೋಲ್ ಎಂಬ ಪ್ರತ್ಯಯಗಳೂ ಉಂಟು. (3) ವರಿಗೆ ಎಂದು ವಾಡಿಕೆ. ಹ. ಗ. ದಲ್ಲಿ ಇವುಗಳಿಗೆ ಎವರಂ, ಎವರೆಗಂ, ಅನ್ನಂ, ಅನ್ನೆಗಂ, ಎಂಬ ಪ್ರತ್ಯಯಗಳು ಬಂದು, ಈವನ್ನೆವರಮ್ಪಿರ್ದ್ದಂ ಸಾವನ್ನವರಮಿಕ್ಕಿದಂ, ಬರ್ಪನ್ನಮಿರ್ದಂ, ಪಡಮಿರ್ಪನ್ನೆವರಂ ದಾನಮಿತ್ತಂ (') ಆಗುವುದು.

(3) ಪ್ರಯೋಜನಾರ್ಥ ತೋರುವಾಗ ಚತುರ್ಥೀವಿಭಕ್ತ್ಯಂತ ಪದಗಳ ಮೇಲೆ ಓಸುಗ, ಓಸ್ಕರ, ಸಲುವಾಗಿ, ಆಗಿ ಎಂಬ ಪ್ರತ್ಯಯಗಳು ಬರುವುವು.

ಉದಾಹರಣೆ.

ತಿಂಡಿಗೋಸ್ಕರ ಬಂದನು, ತಿಂಡಿಗೋಸುಗ ಬಂದನು, ತಿಂಡಿಗೆ ಸಲುವಾಗಿ ಬಂದನು, ತಿಂಡಿಗಾಗಿ ಬಂದನು.

(4) ವಸ್ತುಗಳ ಗುಣದಲ್ಲಿಯಾಗಲಿ, ಪರಿಮಾಣದಲ್ಲಿಯಾಗಲಿ ತಾರತಮ್ಯವನ್ನು ತಿಳಿಸುವಾಗ "ಇಂತ" ಪ್ರತ್ಯಯ ಬರುವುದು.

ಉದಾಹರಣೆ.

ಗುಣಕ್ಕೆ—ದೇಹಶಕ್ತಿಗಿಂತ ಬುದ್ಧಿಶಕ್ತಿ ಒಳ್ಳೆಯದು. ಹಣಕ್ಕಿಂತ ವಿದ್ಯೆ ಒಳ್ಳೆಯದು. ಅಣ್ಣನಿಗಿಂತ ತಮ್ಮ ಜಾಣ, ಎಣ್ಣೆಗಿಂತ ತುಪ್ಪದಲ್ಲಿ ರುಚಿ ಹೆಚ್ಚು.

ಪರಿಮಾಣಕ್ಕೆ—ನಾಲ್ಕಕ್ಕಿಂತ ಐದು ಹೆಚ್ಚು, ಮೈಸೂರಿಗಿಂತ ಮದ್ರಾಸು ದೊಡ್ಡದು, ಬೆಳ್ಳಿಗಿಂತ ಭಂಗಾರಕ್ಕೆ ಬೆಲೆ ಹೆಚ್ಚು. (ಇ)

X ಅವ್ಯಯ ಪ್ರಕರಣಂ.

102. ಲಿಂಗ ವಿಭಕ್ತಿ ವಚನಗಳಲ್ಲಿ ರೂಪವ್ಯತ್ಯಾಸವಾಗದೆ ಏಕರೂಪವಾಗಿರುವ ಶಬ್ದವು ಅವ್ಯಯ (1) ವೆನಿಸುವುದು.

ಅವ್ಯಯಗಳಲ್ಲಿ ಸಾಮಾನ್ಯಾವ್ಯಯ, ವಿಭಕ್ತ್ಯಂತಾವ್ಯಯ, ಅನುಕರಣಾವ್ಯಯ, ವಿರೋಧಾರ್ಥಾವ್ಯಯ, ಅವಧಾರಣಾರ್ಥಾವ್ಯಯ, ಸಮುಚ್ಚಯಾರ್ಥಾವ್ಯಯ, ಕ್ರಿಯಾರ್ಥಾವ್ಯಯ, ನಿಪಾತಾವ್ಯಯ, ಸಂಬಂಧಾರ್ಥಾವ್ಯಯ, ಕೃದಂತಾವ್ಯಯ, ತದ್ಧಿತಾಂತಾವ್ಯಯ ಎಂದು 11 ಮುಖ್ಯಭೇದಗಳು.

ಇವೆಲ್ಲಾ ಪ್ರಾಯಶಃ ಕ್ರಿಯೆ ನಡೆದ ಸ್ಥಾನ, ಕಾಲ, ರೀತಿಗಳನ್ನು ಬೋಧಿಸುತ್ತಾ ವಾಕ್ಯದಲ್ಲಿ ಕ್ರಿಯಾವಿಶೇಷಣಗಳಾಗಿ ಬರುವುವು.

---

(1) ವ್ಯಯ - ಶಬ್ದರೂಪಕ್ಕೆ ಲೋಪ, ಇಲ್ಲದುದು=ಅವ್ಯಯ.

(1) ಸಾಮಾನ್ಯಾವ್ಯಯ—ಇದು ಸಾಧಾರಣವಾಗಿ ಕ್ರಿಯೆ ನಡೆದ ರೀತಿಯನ್ನು ಮಾತ್ರ ಬೋಧಿಸುವುದು.

ಉದಾಹರಣೆ.

ಸುಮ್ಮನೆ (ಇರು), ಬೇಗನೆ (ಬಾ), ತಟ್ಟನೆ (ಏಳು), ಬಿಮ್ಮನೆ (ಹಿಡಿ) ಎಂಬೀ ವಾಕ್ಯಗಳಲ್ಲಿ ಸುಮ್ಮನೆ, ಬೇಗನೆ, ತಟ್ಟನೆ, ಬಿಮ್ಮನೆ ಎಂಬ ಶಬ್ದಗಳು ಇರು ಮೊದಲಾದ ಕ್ರಿಯೆಗಳು ನಡೆಯುವ ರೀತಿಯನ್ನು ಮಾತ್ರ ಬೋಧಿಸುವುದರಿಂದ ಸಾಮಾನ್ಯಾವ್ಯಯಗಳು. ಹೀಗೆಯೇ ನೆಟ್ಟನೆ, ನೆಟ್ಟಗೆ, ಮೆಲ್ಲನೆ, ಮೆಲ್ಲಗೆ, ಚೆನ್ನಾಗಿ, ಸೊಗಸಾಗಿ, ಹಾಗೆ, ಹೀಗೆ, (1) ಸಲೆ, ಕರಂ, ಮತ್ತೆ ಇಗೋ, ಮಿಗೆ (ಇ).

(2) ವಿಭಕ್ತ್ಯಂತಾವ್ಯಯ—ಇವು ಕ್ರಿಯೆ ನಡೆದ ಸ್ಥಾನ ಮತ್ತು ಕಾಲವನ್ನು ಬೋಧಿಸುತ್ತವೆ. ಇವುಗಳ ಮೇಲೆ ತೃತೀಯೆ ಷಷ್ಠೀ ಚತುರ್ಥೀ ವಿಭಕ್ತಿಗಳು ಸೇರುವುದರಿಂದ ವಿಭಕ್ತ್ಯಂತಾವ್ಯಯಗಳೆಂದು ಹೆಸರಾಗಿದೆ. (2)

ಉದಾಹರಣೆ.

ಸ್ಥಾನವಾಚಕಕ್ಕೆ—ಅಲ್ಲಿ, ಇಲ್ಲಿ, ಎಲ್ಲಿ, ಅತ್ತ, ಇತ್ತ, ಎತ್ತ ಎಂಬುವು ಮುಖ್ಯವಾದ ಸ್ಥಾನವಾಚಕಗಳು. ಇವುಗಳ ಮೇಲೆ ವಿಭಕ್ತಿಗಳು ಬರುವುದು ಹೇಗೆಂದರೆ :—

ಅಲ್ಲಿಂದ, ಅಲ್ಲಿಯ, ಅಲ್ಲಿಗೆ, (ಹೀಗೆಯೇ ಇಲ್ಲಿ, ಎಲ್ಲಿ).
ಅತ್ತಣಿಂದ, ಅತ್ತಣ, ಅತ್ತಣ್ಗೆ. (ಹೀಗೆಯೇ ಇತ್ತ, ಎತ್ತ.)

ಕಾಲವಾಚಕಗಳು—ಈಗ, ನಾಳೆ, ಯಾವಾಗ, ಆವಾಗ, ಆಗ, ಅಂದು, ಇಂದು, ಎಂದು, ನಾಳೆ, ನಾಡದು, ಹಿಂದು, ಮುಂದು (ಮುಂಚೆ) ಈಹೊತ್ತು ಎಂಬುವು ಮುಖ್ಯವಾದ ಕಾಲವಾಚಕಗಳು. ಇವುಗಳ ಮೇಲೆ ವಿಭಕ್ತಿ ಪ್ರತ್ಯಯಗಳು ಬರುವುದು ಹೇಗೆಂದರೆ :—

---

(1) ಹ. ಗ. ದಲ್ಲಿಅಹಗೆ, ಇಹಗೆ, ಎಹಗೆ ಎಂದು ಪ್ರಯೋಗವುಂಟು. ಅಂತು, ಇಂತು, ಎಂತು, ಎಂದು ಇದೇ ಅರ್ಥದ ಶಬ್ದಗಳು ಸಾಧಾರಣವಾಗಿ ರೂಢಿಯಲ್ಲಿವೆ. ಇವನ್ನು ಅಂತುಟು, ಎಂತುಟು, ಇಂತುಟು ಎಂದೂ ಹೇಳುವರು. (2) ಇವುಗಳ ಮೇಲೆ ಬಂದ ಪ್ರಥಮಾ, ದ್ವಿತೀಯಾ, ಸಪ್ತಮೀ ವಿಭಕ್ತಿಪ್ರತ್ಯಯಗಳು ಲೋಪವಾಗಿ ಶಬ್ದವು ಪ್ರಕೃತಿರೂಪದಲ್ಲಿಯೇ ನಿಲ್ಲುವುದು. ಪ್ರಥಮಾ ಅಂದು, ದ್ವಿತೀಯಾ ಅಂದು, ಸಪ್ತಮೀ ಅಂದು. (ಇ)

ಈಗಿನ ಮಾತು ನಾಳಿಗೆ ಏತಕ್ಕೆ ? ಎಂದಿನಿಂದ ಕೆಲಸ ಪ್ರಾರಂಭವಾಗುವುದೊ, ಅಂದಿಗೆ ನನ್ನ ಮಾತು ನಂಬಬಹುದು. ಹೀಗೆಯೇ ನಾಡದಿನ, ನಾಳಿಗೆ, ಇಂದಿನಿಂದ, ಹಿಂದಕ್ಕೆ, ಮುಂದಕ್ಕೆ, ಮುಂದಿನ, ಇತ್ಯಾದಿ.

(3) ಅನುಕರಣಾವ್ಯಯ—ಅರ್ಥವಿಲ್ಲದ ಧ್ವನಿಗಳನ್ನು ತಾನು ಕೇಳಿ (hear) ದಂತೆ ಪುನಃ ಹೇಳುವ ಶಬ್ದಗಳು ಅನುಕರಣಾವ್ಯಯಗಳೆನಿಸುವುವು.

ಉದಾಹರಣೆ.

ಪಕ್ಷಿಯು ನೀರಿನಲ್ಲಿ ಧುಡುಂಮನೆ ಧುಮುಕಿತು. ಅದು ಆಗಲೇ ತಟ್ಟನೆ ಎದ್ದು ಪಟಪಟನೆ ರೆಕ್ಕೆಗಳನ್ನೊದರುತ್ತಾ ರೊಯ್ಯನೆ ಹಾರಿಹೋಯಿತು. ಇಲ್ಲಿ ಧುಡಂಮನೆ, ತಟ್ಟನೆ, ಪಟಪಟನೆ, ರೊಯ್ಯನೆ ಎಂಬ ಶಬ್ದಗಳು ಕ್ರಿಯೆ ನಡೆದ ಧ್ವನಿಯನ್ನು ಪುನಃ ಹೇಳಿದಂತಾಗುವುದರಿಂದ ಅನುಕರಣಾವ್ಯಯಗಳೆನಿಸಿದುವು.

(4) ವಿರೋಧಾರ್ಥಾವ್ಯಯಗಳು—ಪರಸ್ಪರ ವಿರೋಧಾರ್ಥವುಳ್ಳ ಎರಡು ವಾಕ್ಯಗಳನ್ನು ಜೋಡಿಸುವ ಅವ್ಯಯಗಳು ವಿರೋಧಾರ್ಥಾವ್ಯಯಗಳೆನಿಸುವುವು.

ಉದಾಹರಣೆ.

ಆ ಹುಡುಗನು ಬಹಳ ಓದುತ್ತಾನೆ; ಆದರೆ ಆಗಲೇ ಮರೆಯುತ್ತಾನೆ. ಬೇಕಾದಷ್ಟು ಮಳೆಯಾಯಿತು; ಆದರೂ ಧಾರಣೆ ಏರುತ್ತಲೇ ಇದೆ. ಇಲ್ಲಿ ಆದರೆ, ಆದರೂ ಎಂಬ ಅವ್ಯಯಗಳು ಓದು—ಮರೆ, ಮಳೆಯಾಯ್ತು—ಧಾರಣೆಯೇರುತ್ತದೆ—ಎಂಬ ಕ್ರಿಯೆಗಳಲ್ಲಿರುವ ಪರಸ್ಪರ ವಿರೋಧವನ್ನು ತಿಳಿಸುವ ಕಾರಣ ವಿರೋಧಾರ್ಥಾವ್ಯಯಗಳೆನಿಸಿದುವು. (ಹೀಗೆಯೇ ಆದಾಗ್ಯೂ ಹಾಗಾದರೂ, ಆದರೇನು ಮೊದಲಾದುವು).

(5) ಅವಧಾರಣಾರ್ಥಾವ್ಯಯಗಳು—"ಇದೇ" ಎಂಬ ನಿಶ್ಚಯವನ್ನು ಸೂಚಿಸುವುದರಲ್ಲಿ ಬರುವುವು. ಆಗಿ, ಹೊರತು, ಅಲ್ಲದೆ, ಏ ಎಂಬುವು ಅವಧಾರಣಾರ್ಥವ್ಯಯಗಳು. ಉದಾ :—

ಆಗಿ —ಅವನಾಗಿ ಬಂದನು. (ಇತರರು ಹೇಳಲಿಲ್ಲ).

ಅಲ್ಲದೆ —ನೀನಲ್ಲದೆ ಇಂಥ ದುರ್ವ್ಯಾಜ್ಯವನ್ನು ಆಡುವವರಿನ್ನು ಯಾರು ? (ನೀನೇ ಎಂದರ್ಥವು.)

ಹೊರತು—ನೀನು ಹೊರತು, ಇದನ್ನು ಕದ್ದವರಿಲ್ಲ. (ನೀನೇ)
ನೀನು ಹೋದ ಹೊರತು ಅದು ಆಗುವುದಿಲ್ಲ. (ಹೋಗಲೇಬೇಕು.)
ಏ —ರಾಜನೇ ದೇಶದ ಸುಖದುಃಖಗಳಿಗೆ ಕಾರಣವು. (ಇನ್ನೊಬ್ಬರಲ್ಲ.)

(6) ಸಮುಚ್ಚಯಾರ್ಥಾವ್ಯಯ—"ಊ" (1) ಎಂಬುದು ಮುಖ್ಯವಾದ ಸಮುಚ್ಚಯಾರ್ಥಾವ್ಯಯವು. ಇದು ಮತ್ತು ಎಂಬರ್ಥದಲ್ಲಿ ಪದಗಳನ್ನೂ ವಾಕ್ಯಗಳನ್ನೂ ಜೋಡಿಸುವಾಗ ಬರುವುದು. ಉದಾ :—

ಪದಗಳಿಗೆ—ಮಳೆಯೂ, ಗಾಳಿಯೂ, ಚಳಿಯೂ ಹೆಚ್ಚಾದುವು. ಇಲ್ಲಿ ಮಳೆ ಹೆಚ್ಚಾಯಿತು, ಗಾಳಿ ಹೆಚ್ಚಾಯಿತು, ಚಳಿ ಹೆಚ್ಚಾಯಿತು ಎಂಬ ವಾಕ್ಯಗಳನ್ನು ಊ ಎಂಬುದು ಜೋಡಿಸುವುದರಿಂದ ಸಮುಚ್ಚಯಾರ್ಥಾವ್ಯಯವು.

ವಾಕ್ಯಗಳಿಗೆ—ಮಿಂಚು ಕಾಣಿಸುವುದೂ ಗುಡುಗು ಕೇಳಿಸಿತು. ಇಲ್ಲಿ ಈಯೆರಡು ವಾಕ್ಯಗಳನ್ನೂ ಊ ಎಂಬುದು ಜೋಡಿಸುವುದರಿಂದ ಸಮುಚ್ಚಯಾರ್ಥಾವ್ಯಯವು.

(7) ಕ್ರಿಯಾರ್ಥಾವ್ಯಯ—ಇವು ಕ್ರಿಯಾಪದಗಳಂತೆ ಬರುವುವು.

ಇಲ್ಲ, ಅಲ್ಲ, ಉಂಟು (2), ಬೇಡ, ಬೇಕು (3), ಬಹುದು (4) ಎಂಬುವು ಮುಖ್ಯವಾದ ಕ್ರಿಯಾರ್ಥಾವ್ಯಯಗಳು. ಉದಾ :—

ಇದಿಲ್ಲ, ಅದುಂಟು, ಏನೂಬೇಡ, ನಾನಲ್ಲ, ಹಣ್ಣುಬೇಕು, ಮಾಡಬಹುದು. (ಇ) ಇಲ್ಲಿ- ಇಲ್ಲ ಮೊದಲಾದುವು ಧಾತುಪ್ರತ್ಯಯಗಳ ಸೇರುವಿಕೆಯಿಂದ ಆದ ಕ್ರಿಯಾಪದಗಳಲ್ಲದಿದ್ದರೂ ಕ್ರಿಯಾರ್ಥವನ್ನು ಪೂರ್ತಿಯಾಗಿ ಕೊಡುವುದರಿಂದ ಕ್ರಿಯಾರ್ಥಾವ್ಯಯಗಳಾದುವು.

---

(1) ಪ. ಗ. ದಲ್ಲಿ ಅಮ್, ಉಮ್ ಎಂಬುವು ಸಮುಚ್ಚಯಾರ್ಥಾವ್ಯಯಗಳು. ಉಮ್ ಎಂಬುದು ದ್ವಿತೀಯಾವಿಭಕ್ತಿಯಲ್ಲಿ ಬಂದಾಗ ಪ್ರಕೃತಿ ಪ್ರತ್ಯಯಗಳ ನಡುವೆ ಬರುವುದು. ಉದಾ :—ಅಮ್‌ಗೆ - ಅದರೊಳಂ ಸುಖಮುಂಟು. ಅರಸಿಗಂ ಬಡತನಮೇ? ಉಮ್‌ಗೆ- ಅವನುಮಂ ಕಂಡೆಂ. ಇಲ್ಲಿ ಅವ+ಉಮ್+ಅಮ್=ಪುಲ್ಲಿಂಗ ಶಬ್ದವಾದುದರಿಂದ ನಕಾರಾಗಮ ಬಂದು ಅವನ್ + ಉಮ್+ಅಂ= ಅವನುಮಂ ಎಂದಾಗುವುದು. (2) ಉಳ್ ಧಾತುವಿಗೆ ಟು ಪ್ರತ್ಯಯ ಬಂದು ಉಂಟು ಆಯಿತೆಂದೂ ಹೇಳುವರು. (3) ಬೇಳ್ಕುಂ ಎಂಬುದರ ಹೊಸಗನ್ನಡ ರೂಪವೆಂದು ಹೇಳುವರು. (4) ಬರ್ಪುದು ಎಂಬುದರ ಹೊ. ಗ. ರೂಪವೆಂದೂ ಹೇಳುವರು.

(8) ನಿಪಾತಾವ್ಯಯಗಳು—ಕೋಪ, ದುಃಖ, ಸಂತೋಷ, ಮೆಚ್ಚಿಗೆ, ಆಕ್ಷೇಪ, ತಿರಸ್ಕಾರ, ಪ್ರಶ್ನೆ, ಭಯ, ಆಶ್ಚರ್ಯ ಮೊದಲಾದ ಭಾವಗಳನ್ನು ಸೂಚಿಸುವ ಅವ್ಯಯಗಳು ನಿಪಾತಾವ್ಯಯಗಳು. ಇವುಗಳಿಗೆ ಭಾವಬೋಧಕಾವ್ಯಯಗಳೆಂದೂ ಹೆಸರುಂಟು.

ಉದಾಹರಣೆ.

ಕೋಪಕ್ಕೆ —ಎಲೋ ಇಲ್ಲಿ ನಿಲ್ಲಬೇಡ, ತೊಲಗು
ದುಃಖ —ಅಂತೋ ಅಕಟಾ ಇನ್ನೇನು ಗತಿ.
ಸಂತೋಷ —ಆಹಾ ಒಪ್ಪಿದೆನು, ಚೆನ್ನಾಗಿದೆ.
ಮೆಚ್ಚಿಗೆ —ಸುರ್ಭು. ಶಹಬಾಸ್, ಭಲಾ ಎಷ್ಟೋ ಒಳ್ಳೆಯದು.
ಆಕ್ಷೇಪ —ಏನೋ ಇದು? ತಿಂಡಿಗಿಂಡಿ ಹೆಚ್ಚಾಯಿತೋ?
ತಿರಸ್ಕಾರ —ಛೀ ಮೂಢ ಇಷ್ಟೇ ಅಲ್ಲವೆ ನಿನ್ನ ಯೋಗ್ಯತೆ?
ಪ್ರಶ್ನೆ —ಕೊಟ್ಟೆಯಾ ಆತನ ಹಣವನ್ನು, ಆ ಪಾಠ ಬಂತೇ ಇಲ್ಲವೆ?
ಭಯ —ಓಹೋ ಅವನು ಅಂಥವನೇ? ಹಾಗಾದರೆ ನಾನು ಬರುವುದಿಲ್ಲ.
ತಡೆ —ಓಹೋ ಹೋ ಅಷ್ಟೇ ಸಾಕು.
ಆಶ್ಚರ್ಯ —ಆಹಾ! ಏನಿದು, ಹಗಲು ಬೆಳದಿಂಗಳೆ?

(9) ಸಂಬಂಧಾರ್ಥಾವ್ಯಯಗಳು—ಇವು ಎರಡು ಶಬ್ದಗಳನ್ನಾಗಲಿ ವಾಕ್ಯಗಳನ್ನಾಗಲಿ, ಪರಸ್ಪರ ಸಂಬಂಧ ಕಲ್ಪನೆಯಿಂದ ಕೂಡಿಸುವುದರಲ್ಲಿ ಬರುವವು.

ಉದಾಹರಣೆ.

ಶಬ್ದಗಳನ್ನು ಕೂಡಿಸುವುದಕ್ಕೆ—ಅವನು ಮತ್ತು ನಾನು ಹೋದೆವು.
ಹಾಲು ಮತ್ತು ಮೊಸರು ಬೇಕು.
ವಾಕ್ಯಗಳನ್ನು ,, —ವಿದ್ಯೆ ಬಂದಿತು ಇನ್ನೂ ಬುದ್ಧಿ ಬರಬೇಕು.
ಬಿಸಿಲು ಬಂದಿತು, ಇಲ್ಲದಿದ್ದರೆ ನೆಲ ಒಣಗುತ್ತಿರಲಿಲ್ಲ.
—ತಪ್ಪು ಮಾಡಿದನು - ಆದರಿಂದ ಶಿಕ್ಷೆಯಾಯಿತು.
—ಮನೆಗೆ ಹೋಗಬೇಕೋ? ಹಾಗಾದರೆ ಹೋಗು

ಈ ವಾಕ್ಯಗಳಲ್ಲಿ ಮತ್ತು, ಇನ್ನೂ, ಇಲ್ಲದಿದ್ದರೆ, ಆದರಿಂದ, ಹಾಗಾದರೆ ಎಂಬವು ಸಂಬಂಧಾರ್ಥಾವ್ಯಯಗಳು.

XI ತದ್ಭವ ಪ್ರಕರಣಂ.

103. ಸಂಸ್ಕೃತ ಶಬ್ದಗಳು ಸ್ವಲ್ಪಭಾಗ ವ್ಯತ್ಯಾಸದಿಂದ ತದ್ಭವಗಳಾಗುವುದನ್ನು (*27) ತಿಳಿಸಿರುವುದು ಸರಿಯಷ್ಟೆ? ಪೂರ್ಣ ವ್ಯತ್ಯಾಸದಿಂದ ಕನ್ನಡದಲ್ಲಿ ರೂಢಿಯಾಗಿ ಬಂದಿರುವ ಕೆಲವು ತದ್ಭವ ಶಬ್ದಗಳ ಸಿದ್ಧರೂಪಗಳು ಮಾತ್ರ ಇಲ್ಲಿ ಬರೆಯಲ್ಪಟ್ಟಿವೆ.

ಸಂಸ್ಕೃತ-ತದ್ಭವ	ಸಂಸ್ಕೃತ-ತದ್ಭವ	ಸಂಸ್ಕೃತ-ತದ್ಭವ
ಅಕ್ಷರ - ಅಕ್ಕರ	ಋಷಿ - ರಿಸಿ	ಘೂಕ - ಗೂಗೆ
ಅಕ್ಷ - ಅಚ್ಚು	ಏಕ - ಎಕ್ಕ	ಚಂದ್ರ ಚಂದಿರ
ಅಕ್ಷಿ - ಅಚ್ಚಿ	ಐಶ್ವರ್ಯ - ಐಸಿರಿ	ಚರ್ಮ - ಸಮ್ಮ
ಅಮೃತ - ಅಮುರ್ದು	ಕಟಕ - ಕಡಗ	ಚತುಷ್ಕ - ಚೌಕ
ಅಭಿಷಂಗ - ಅಬಿಸಂಗ	ಕರ್ತರಿ - ಕತ್ತರಿ	ಚತುರ್ಥಿ - ಚೌತಿ
ಅಟವಿ - ಅಡವಿ	ಕರ್ಕಶ - ಕಕ್ಕಸ	ಚೂರ್ಣ - ಸುಣ್ಣ
ಆರ್ಯ - ಅಜ್ಜ	ಕರ್ಣಾಟಕ - ಕನ್ನಡ	ಛವಿ - ಚವಿ
ಅಲ್ಪ - ಅಲುಪ	ಕುಠಾರ - ಕೊಡಲಿ	ಛತ್ರಿಕಾ - ಸತ್ತಿಗೆ
ಅಂಗುಷ್ಠ - ಉಂಗುಟ	ಕುರಂಟ - ಗೋರಂಟೆ	ಛಲ - ಚಲ
ಆಶ್ಚರ್ಯ - ಅಚ್ಚರಿ	ಕಪಿಂಜಲ - ಕವಿಂಜು	ಜ್ಯೌತಿಷ್ಯ - ಜೋಯಿಸ
ಆಕಾಶ - ಆಗಸ	ಕುಕ್ಕುಟ - ಕೋಳಿ	ಜ್ಯೋತ್ಸ್ನಾ - ಜೊನ್ನ
ಆಕರ - ಆಗರ	ಕಾರ್ಯ - ಕಜ್ಜ	ಜಾತಿ - ಜಾಜಿ (ಬಳ್ಳಿ)
ಆಜ್ಞೆ - ಆಣೆ	ಕಾವ್ಯ - ಕಬ್ಬ	ಝಾಮು - ಜಾವ
ಆಯಾಸ - ಆಯಸ	ಕಾಂಸ್ಯ - ಕಂಚು	ಢಕ್ಕೆ - ಡಕ್ಕೆ
ಇಂದ್ರ - ಇಂದರ	ಕೂಷ್ಮಾಂಡ - ಕುಂಬಳ	ತುವರಿ-ತೊವರಿ (ತೊಗರಿ)
ಇಷ್ಟಿಕಾ - ಇಟ್ಟಿಗೆ	ಕುಮಾರ - ಕುವರ	ತಾತ - ತಂದೆ
ಇಚ್ಛಾ - ಇಚ್ಚೆ	ಕೌಪೀನ - ಕೋವಣ	ತೃತೀಯಾ - ತದಿಗೆ
ಈಶ್ವರ - ಈಸರ	ಖಡ್ಗ - ಕಡುಗ	ತೃಣ - ತಿಣ
ಉನ್ಮತ್ತ - ಉಮ್ಮತ್ತ	ಖನಿ - ಗಣಿ	ತ್ರಿಶೂಲಿ - ತಿಸುಳಿ
ಉಷ್ಟ್ರ - ಒಟ್ಟೆ (ಒಂಟೆ)	ಖದಿರ - ಕದಿರ	ತುಲಸಿ - ತೊಳಚಿ
ಊಷ್ಮ - ಉಮ್ಮ	ಘಟಿಕಾ - ಗಳಿಗೆ	ತ್ಯಾಗ - ಚಾಗ
ಋತು - ರಿತು	ಘುಟಿಕಾ - ಗುಳಿಗೆ	ದೀಪಿಕಾ - ದೀವಿಗೆ
ಋಣ - ರಿಣ	ಘೋಷ - ಗೋಸ	ದಾಡಿಮ - ದಾಳಿಂಬ

ಸಂಸ್ಕೃತ - ತದ್ಭವ	ಸಂಸ್ಕೃತ - ತದ್ಭವ	ಸಂಸ್ಕೃತ - ತದ್ಭವ
ದೃಷ್ಟಿ - ದಿಟ್ಟಿ	ಮುಖ - ಮೊಗ	ವೃಷಭ - ಬಸವ
ಧರ್ಮ - ದಮ್ಮ	ಮರೀಚ - ಮೆಳಸು	ವಿಜ್ಞಾನ - ಬಿನ್ನಣ
ದ್ಯೂತ - ಜೂಜು	(ಮೆಣಸು)	ವಿಜ್ಞಾಪನಾ - ಬಿನ್ನಹ
ದ್ರೋಣಿ - ದೋಣಿ	ಮಾಘ - ಮಾಗಿ	ವೈದ್ಯ- ಬೆಜ್ಜ
ನೀರ - ನೀರ್	ಮೀನ - ಮೀನ್	ವಿದ್ಯೆ-ಬಿಜ್ಜೆ
ನಿದ್ರೆ - ನಿದ್ದೆ	ಮಾನ್ಯತಾ - ಮನ್ನಣೆ	ಶೃಂಗ - ಸಿಂಗ
ಪುರ - ಪೊಳಲ್	ಯಾಮ - ಜಾವ	ಶೃಂಗಾರ - ಸಿಂಗರ
ಪಙ್ಕ್ತಿ - ಹಂತಿ	ಯೌವನ - ಜವ್ವನ	ಶಷ್ಕುಲಿ - ಚಕ್ಕುಲಿ
ಪ್ರಯಾಣ - ಪಯಣ	ಯಾತ್ರಾ - ಜಾತ್ರೆ	ಶಿಲ್ಪಕ - ಚಿಪ್ಪಿಗ
ಪ್ರವಾಳ - ಹವಳ	ಯಜ್ಞ - ಜನ್ನ	ಶ್ರೇಷ್ಠಿ -ಸೆಟ್ಟಿ
ಪರೀಕ್ಷೆ - ಪರಿಕೆ	ಯುಗ - ನೊಗ	ಶ್ರುತಿ - ಸ್ರುತಿ
ಪ್ರಮಾಣ - ಪವಣ್	ರಾಜ - ರಾಯ	ಶ್ಮಶಾನ - ಮಸಣ
ಪೂರ್ಣಮಿ - ಹುಣ್ಣಮೆ	ರಾಜ್ಞಿ - ರಾಣಿ	ಶ್ವಾನ - ಸಾನ
ಪ್ರಾಣ - ಹರಣ	ರಾಕ್ಷಸ - ರಕ್ಕಸ	ಶೂನ್ಯ - ಸೊನ್ನೆ
ಪುಸ್ತಕ - ಹೊತ್ತಗೆ	ಲಕ್ಷ್ಮಿ-ಲಚ್ಚಿ (ಲಕುಮಿ)	ಷಷ್ಠಿ - ಚಟ್ಟಿ
ಪಿಷ್ಟ - ಹಿಟ್ಟು	ಲಕ್ಷಣ - ಲಚ್ಚಣ	ಸುಧಾ - ಸೊದೆ
ಫಲ - ಪಳ	ವೈಶಾಖ - ಬೇಸಿಗೆ	ಸಂಧ್ಯಾ - ಸಂಜೆ
ಬ್ರಹ್ಮ - ಬೊಮ್ಮ	ವ್ಯವಸಾಯ - ಬೇಸಾಯ	ಸ್ವರ್ಣ-ಸೊನ್ನ
ಭ್ರಮರ - ಬವರ	ವ್ಯಯ - ಬೆಯ	ಸ್ಥಾನ - ತಾಣ
ಭ್ರೂ - ಹುಬ್ಬು (ಹ. ಗ.	ವ್ಯಥೆ - ಬೆತೆ	ಸ್ತುತಿ - ತುತಿ
ಪುರ್ವು)	ಸಾಹಸ - ಸಾಸ	ಸಂಸ್ಥಾ - ಸಂತೆ
ಭೂಮಿ - ಬುವಿ	ವೀಥಿ - ಬೀದಿ	ಹಂಸ-ಅಂಚೆ, ಹರ್ಷ-ಹರಿಸ
ಭ್ರಮಣ - ಬವಣು	ವಿಂಧ್ಯಾ - ಬಿಂಜ	ಹೃದಯ - ಹಿಯಯ
ಮೃಗ - ಮಿಗ	ವಂಧ್ಯಾ - ಬಂಜೆ	(ಎರ್ದೆ)
ಮಯೂರ - ಮೋರ	ವಾಪಿ - ಬಾವಿ	ಕ್ಷಾರ - ಕಾರ
ಮಂಥ - ಮಂತು	ವಾಲ - ಬಾಲ	ಕ್ಷೀರ - ಕೀರ

ಕೆಲವು ಹಳಗನ್ನಡ ಶಬ್ದಗಳಿಗೆ ಹೊಸಗನ್ನಡ ರೂಪಗಳು.—

ಹ. ಗ.—ಹೊ. ಗ.	ಹ. ಗ.—ಹೊ. ಗ.	ಹ. ಗ.—ಹೊ. ಗ.
ಕಳ್ತಲೆ - ಕತ್ತಲೆ	ಎರ್ದೆ - ಎದೆ	ಎಳ್ಚರು - ಎಚ್ಚರು
ಪೊಳ್ತು - ಹೊತ್ತು	ಅಳ್ಕರೆ - ಅಕ್ಕರೆ	ಎಳ್ತರ - ಎತ್ತರ

ಪೊಳ್ತರೆ - ಹೊತಾರೆ	ಆಳುಲ್ವುದು - ಆಳುವುದು	ಪೊರಮೊಡು - ಹೊರಡು
ಬೇಳ್ಕುಂ - ಬೇಕು	ತಿರ್ದು - ತಿದ್ದು	ಒರ್ಮೆ - ಒಮ್ಮೆ
ಸಾಲ್ಗುಂ - ಸಾಕು	ಕರ್ಬು - ಕಬ್ಬು	ಒರ್ವ - ಒಬ್ಬ
ನಾಣ್ಚು - ನಾಚು	ಪಲ್ - ಹಲ್ಲು	ಸಾಸಿರ - ಸಾವಿರ
ಕಿವುಳ್ಚು - ಕಿವಿಚು	ಪಾಲು - ಹಾಲು	—(ಇ)—
ಇರುಂಪೆ - ಇರುವೆ	ಎಳ್ಪಿಸು - ಎಬ್ಬಿಸು	

XII ವಾಕ್ಯರಚನೆ.

104. ನಮ್ಮ ಅಭಿಪ್ರಾಯಗಳನ್ನು ವಾಕ್ಯಗಳಿಂದ ನಾವು ಇತರರಿಗೆ ತಿಳಿಸುತ್ತೇವೆ.

(1) ಸೂರ್ಯನು ಹುಟ್ಟಿದನು, (2) ಅರಸನು ರಾಜ್ಯವನ್ನಾಳಿದನು, (3) ವಿಶ್ವಾಮಿತ್ರನಿಂದ ಹರಿಶ್ಚಂದ್ರನ ರಾಜ್ಯವು ಅಪಹರಿಸಲ್ಪಟ್ಟಿತು.

ಇಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದು ಸಂಪೂರ್ಣಾಭಿಪ್ರಾಯವಿರುವುದರಿಂದ ಇವು ವಾಕ್ಯವೆನಿಸಿದುವು.

105. ಜನಗಳು, ನಿನ್ನೆ, ಅವನು ಬರುತ್ತಾ, ನಾನೂ ನೀನೂ, ಓಡಿದನು—ಎಂಬಲ್ಲಿ ಪ್ರತಿಯೊಂದಕ್ಕೂ ಬೇಕಾದ ಪದಗಳು ಸಾಲದಿರುವುದರಿಂದ ವಾಕ್ಯಗಳಲ್ಲ.

ಇವುಗಳನ್ನು—ಜನಗಳು ನಿನ್ನೆ ಸೇರಿದರು, ಅವನು ಬರುತ್ತಾ ಇದ್ದನು, ನಾನೂ ನೀನೂ ಹೋಗೋಣ. ಹುಡುಗನು ಓಡಿದನು, ಎಂದು ಹೇಳಿದರೆ ಒಂದೊಂದು ಸಂಪೂರ್ಣಾರ್ಥ ಬರುವುದರಿಂದ ವಾಕ್ಯಗಳಾಗುವುವು.

ಇದರಿಂದ ತಿಳಿಯುವುದೇನೆಂದರೆ:—

(1) ಒಂದು ಸಂಪೂರ್ಣಾರ್ಥವುಳ್ಳ ಪದಸಮೂಹವು ವಾಕ್ಯ (Sentence) ವೆನಿಸುವುದು. (2) ಅನೇಕ ಪದಗಳನ್ನು ಪರಸ್ಪರ ಸಂಬಂಧವುಂಟಾಗುವಂತೆ ಸರಿಯಾಗಿ ಜೋಡಿಸುವುದು ವಾಕ್ಯರಚನೆ (Synthesis) ಯೆನಿಸುವುದು.

ಉದಾಹರಣೆ

ವರ್ತಕನು ವಿನಸಿಯನ್ನು ಮಾರಿದನು—ಎಂಬಲ್ಲಿ ಒಂದು ಸಂಪೂರ್ಣಾರ್ಥವಿರುವುದರಿಂದ ವಾಕ್ಯವೆನಿಸಿತು. ಇದರಲ್ಲಿರುವ ಮೂರು ಪದಗಳ ಅರ್ಥಕ್ಕೂ ಪರಸ್ಪರ ಸಂಬಂಧವುಂಟಾಗಿ ವ್ಯಾಪಾರವೆಂಬ ಒಂದು ಕೆಲಸ ನಡೆಯಿತೆಂದು ತಿಳಿಸುವುದರಿಂದ ವಾಕ್ಯರಚನೆಯಾಯಿತು.

106. ವಾಕ್ಯದಲ್ಲಿ (೧) ಒಂದು ಬಗೆಯ ಪದಗಳು ಆ ವಾಕ್ಯವು ಯಾರ ಅಥವಾ ಯಾವ ವಸ್ತುಗಳ ವಿಷಯವಾಗಿ ಉಂಟಾಯಿತೆಂಬುದನ್ನು ತಿಳಿಸುತ್ತವೆ. (೨) ಒಂದು ಬಗೆಯ ಪದಗಳು ಅವರಿಂದ ಅಥವಾ ಆ ವಸ್ತುಗಳಿಂದ ಏನು ನಡೆಯಿತೆಂಬುದನ್ನು ತಿಳಿಸುತ್ತವೆ. (೩) ಇನ್ನೊಂದು ಬಗೆಯ ಪದಗಳು ಅವರಿಗೆ ಅಥವಾ ಆ ವಸ್ತುಗಳಿಗೆ ಬೇಕಾಗಿರುವುದೇನೆಂಬುದನ್ನಾಗಲಿ ಅಥವಾ ಅವರಿಂದ ಯಾವ ಕಾರ್ಯವಾಯಿತೆಂಬುದನ್ನಾಗಲಿ, ತಿಳಿಸುತ್ತವೆ. (೪) ಉಳಿದ ಪದಗಳೆಲ್ಲಾ ಈ ಮೂರು ಬಗೆಯ ಪದಗಳನ್ನೂ ವಿಶೇಷಿಸುತ್ತವೆ. ಇಲ್ಲಿ ೧ನೇ ಬಗೆಯ ಪದಗಳಿಗೆ ಕರ್ತೃ(1) (Subject) ಪದಗಳೆಂದೂ, ೨ನೇ ಬಗೆಯ ಪದಗಳಿಗೆ ಕ್ರಿಯಾ (Predicate) ಪದಗಳೆಂದೂ, ೩ನೇ ಬಗೆಯ ಪದಗಳಿಗೆ ಕರ್ಮ (Object) ಪದಗಳೆಂದೂ, ೪ನೇ ಬಗೆಯ ಪದಗಳಿಗೆ ಇವುಗಳ (2) ವಿಶೇಷಣ (Adjuncts) ಗಳೆಂದೂ ಹೇಳಲ್ಪಡುವುವು. ಇದರಿಂದ ತಿಳಿಯುವುದೇನೆಂದರೆ:—

ಸೂ॥ ವಾಕ್ಯದಲ್ಲಿ ಸೇರಿರುವ ಭಾಗಗಳನ್ನು ವಿಂಗಡಿಸಿ ಅವುಗಳಿಗಿರುವ ಪರಸ್ಪರ ಸಂಬಂಧವನ್ನು ತೋರಿಸುವುದು ವಾಕ್ಯವಿಭಜನೆ (Analysies of Sentences) ಎನಿಸುವುದು.

ವಾಕ್ಯವಿಭಜನೆ.

107. ವಾಕ್ಯದಲ್ಲಿ ಕರ್ತೃಪದವೂ, ಕ್ರಿಯಾಪದವೂ ಇರಲೇಬೇಕು. ಕ್ರಿಯಾಪದವು ಸಕರ್ಮಕವಾಗಿದ್ದರೆ ಕರ್ಮಪದವೂ ಇರಬೇಕು.

ಉದಾಹರಣೆ.

ಕರ್ತೃ ಕ್ರಿಯೆಗಳಿಗೆ—(೧) ಹಡಗು ತೇಲುತ್ತದೆ. (೨) ಮಳೆ ಸುರಿಯಿತು.
ಕರ್ತೃ ಕರ್ಮ ಕ್ರಿಯೆಗಳಿಗೆ—(೩) ನಾವು ನಾಟಕವನ್ನು ನೋಡಿದೆವು.
(೪) ಗೋಪಾಲನು ಹಸುವನ್ನು ಹಾಲನ್ನು ಕರೆದನು.

ಇಲ್ಲಿ ೧–೨ನೆಯ ವಾಕ್ಯಗಳಲ್ಲಿರುವ ಕರ್ತೃ ಕ್ರಿಯೆಗಳಲ್ಲಿ ಯಾವುದು ಇಲ್ಲದಿದ್ದರೂ ಒಂದು ಅಭಿಪ್ರಾಯ ಬರುವುದಿಲ್ಲವಾಗಿ, ಇವೆರಡೂ ಇರಲೇಬೇಕಾಗುವುದು. ೩ನೆಯ ವಾಕ್ಯದಲ್ಲಿ "ನೋಡಿದೆವು" ಎಂಬ ಕ್ರಿಯೆಗೆ ಯಾವು

(1) ಕರ್ತೃವಿಶೇಷಣ, ಕರ್ಮವಿಶೇಷಣ, ಕ್ರಿಯಾವಿಶೇಷಣಗಳೆನಿಸುವುವು. ಕೆಲವರು ಕರ್ತೃ ಕರ್ಮ ಕ್ರಿಯೆಗಳಿಗೆ ವಾಕ್ಯರಚನೆಯಲ್ಲಿ ಆಖ್ಯೆ, ಆಖ್ಯಾತಸಮಾಪಕ, ಆಖ್ಯಾತ ಎಂಬ ಬೇರೇ ಹೆಸರುಗಳನ್ನಿಡುವುದುಂಟು. ಇವು ಹೊಸಶಬ್ದಗಳಾಗಿ ಬಾಲಕರಿಗೆ ಗಲಿಬಿಲಿಯಾಗುವುದೆಂದು ಈ ಗ್ರಂಥದಲ್ಲಿ ರೂಢಿ ಶಬ್ದಗಳಾದ ಕರ್ತೃ, ಕರ್ಮ, ಕ್ರಿಯಾ ಎಂಬ ಪದಗಳೇ ಉಪಯೋಗಿಸಲ್ಪಟ್ಟಿವೆ. (2) ಕರ್ತೃ ಕ ರ್ಮ ಕ್ರಿಯೆಗಳ.

ದನ್ನು ಎಂದು ಪ್ರಶ್ನೆ ಮಾಡಿದರೆ "ನಾಟಕವನ್ನು" ಎಂಬ ಕರ್ಮಪದವು ಬೇಕಾಗುವುದು. ೪ನೆಯ ವಾಕ್ಯದಲ್ಲಿ "ಕರೆದನು" ಎಂಬ ಕ್ರಿಯಾಪದಕ್ಕೆ ಏನನ್ನು ಯಾವುದನ್ನು ಎಂಬ ಪ್ರಶ್ನೆಗಳು ಹುಟ್ಟುವುದರಿಂದ ಹಾಲನ್ನು, ಹಸುವನ್ನು ಎಂಬೆರಡು ಕರ್ಮಪದಗಳು (Double objects) ಬೇಕಾಗಿವೆ. ಈ ಎರಡರಲ್ಲಿ "ಹಾಲು" ಎಂಬುದು ಮುಖ್ಯ ಕರ್ಮ (1) (Primary object) ವಾಗಿಯೂ "ಹಸು" ಎಂಬುದು ಅಮುಖ್ಯ ಕರ್ಮ (Secondary object) ವಾಗಿಯೂ ಇರುವವು. (* 80).

108. ವಾಕ್ಯದಲ್ಲಿ ಪ್ರಾಯಶಃ ಮೊದಲು ಕರ್ತೃಪದವೂ, ಬಳಿಕ ಕ್ರಿಯಾಪದವೂ, ಕರ್ಮಪದವಿದ್ದರೆ ಅದು ಈ ಎರಡರ ಮಧ್ಯದಲ್ಲಿಯೂ ಬರುವವು. ಇವುಗಳಿಗೆ ವಿಶೇಷಣಗಳಿದ್ದರೆ ಅವರದರ ಹಿಂದೆಯೇ ಬರುವುವು.

ಉದಾಹರಣೆ.

ಕರ್ತೃ ಕ್ರಿಯೆಗಳಿಗೆ—ಹುಡುಗರು ಓಡುತ್ತಾರೆ.
ಕರ್ಮಪದವಿರುವುದಕ್ಕೆ—ಅರಸನು ರಾಜ್ಯವನ್ನು ಆಳುತ್ತಾನೆ.
ವಿಶೇಷಣಗಳು ಬರುವುದಕ್ಕೆ—ಬುದ್ಧಿಶಾಲಿಗಳಾದ ಜನರು ಒಳ್ಳೆಯ ಕೆಲಸಗಳನ್ನು ತಡವಿಲ್ಲದೆ ಮಾಡುತ್ತಾರೆ.

109. ವಾಕ್ಯದಲ್ಲಿ ಕರ್ತೃವಿಗೂ ಕರ್ಮಕ್ಕೂ ಬರುವ ಪದಗಳು ಸುಬಂತ (Noun) ಪದಗಳಾಗಿಯಾಗಲಿ ಅಥವಾ ಸುಬಂತ ಪದಗಳಿಗೆ ಸಮಾನವಾದ ಪದಸಮುದಾಯ (Equivalents) ವಾಗಲಿ ಇರಬಹುದು. ಕ್ರಿಯಾಪದಕ್ಕೆ ತಿಙಂತ (2) (Verb) ವಾಗಲಿ ಅದಕ್ಕೆ ಸಮಾನವಾದ ಪದಸಮುದಾಯವಾಗಲಿ ಇರುವುದು.

ಉದಾಹರಣೆ.

ಕರ್ತೃ-ಸುಬಂತಕ್ಕೆ—(*a*) ರಾಮನು ಬಂದನು. (*b*) ಹಿರಿಯರು ಜನಗಳಿಂದ ಪೂಜಿಸಲ್ಪಡುತ್ತಾರೆ.
,, ಪದಸಮುದಾಯಕ್ಕೆ—(c) ಭಟರನ್ನು ಹುರಿಗೊಳಿಸುವುದು ಜಯವನ್ನುಂಟುಮಾಡುವುದು.

---

(1) ಹಸುವಿನಿಂದಾಗಬೇಕಾದ ಮುಖ್ಯ ಪ್ರಯೋಜನವು ಹಾಲು ಆಗಿರುವುದರಿಂದ ಅದು ಮುಖ್ಯ ಕರ್ಮವಾಯಿತು. ಹಾಲಿಗೆ ಆಧಾರಭೂತವಾದುದು ಹಸುವಾಗಿರುವ ಕಾರಣ ಅದು ಅಮುಖ್ಯ ಕರ್ಮವಾಯಿತು. (2) ತಿಙ್ ಅಂದರೆ ಕ್ರಿಯಾ ಪ್ರತ್ಯಯವು. ಅದು ಕೊನೆಯಲ್ಲಿರುವುದು ತಿಙಂತ. (ಕ್ರಿಯಾಪದ).

ಕರ್ಮ-ಸುಬಂತಕ್ಕೆ—(*d*) ಬೇಟೆಗಾರರು ಹುಲಿಯನ್ನು ಕೊಂದರು.

,, ಪದಸಮುದಾಯಕ್ಕೆ—(*e*) ಪ್ರಯತ್ನಕ್ಕೆ ಫಲವುಂಟೆಂಬುದನ್ನು ಎಲ್ಲರೂ ನಂಬಬೇಕು.

ತಿಙನ್ತ (ಕ್ರಿಯಾಪದಕ್ಕೆ—(*f*) ಬಿಸಿಲು ಕಾಯುತ್ತದೆ.

,, ಪದಸಮುದಾಯಕ್ಕೆ—(*g*) ನೀನು ಮಾತುಗಳಲ್ಲಿ ಗಟ್ಟಿಗನು. (1)

ಇಲ್ಲಿ ಉದಾಹರಿಸಿರುವ (*a, b, d, f, g*) ಗುರುತುಳ್ಳ ವಾಕ್ಯಗಳಲ್ಲಿರುವ ಕರ್ತೃ ಕರ್ಮಪದಗಳು ಸುಬಂತಗಳಾಗಿಯೇ ಇವೆ. (*c, e*) ಗುರ್ತಿನ ವಾಕ್ಯಗಳಲ್ಲಿರುವ ಕರ್ತೃ ಮತ್ತು ಕರ್ಮ ಪದಗಳು ಅದಕ್ಕೆ ಸಮಾನವಾದ ಪದಸಮುದಾಯವಾಗಿದೆ. (*g*) ಗುರ್ತಿನ ವಾಕ್ಯದಲ್ಲಿ ಕ್ರಿಯಾಪದವಿಲ್ಲದಿದ್ದರೂ ಆ ಪದಸಮುದಾಯವೇ ಕ್ರಿಯಾಪದದ ಅರ್ಥವನ್ನು ಕೊಡುತ್ತದೆ. ಅರ್ಥವು ಸ್ಪಷ್ಟವಾಗಿ ತಿಳಿಯುವುದಕ್ಕೋಸ್ಕರ "ಆಗಿದ್ದೀಯೆ" ಎಂಬುದನ್ನು ಅಧ್ಯಾಹಾರ ಮಾಡುವುದೂ ಉಂಟು.

110. ಕರ್ತೃ ಮತ್ತು ಕರ್ಮಪದಗಳಿಗೆ ವಿಶೇಷಣಗಳಾಗುವ ಪದಗಳು ಸಾಮವಿಶೇಷಣ (*34 39) ಗಳಾಗಿಯಾಗಲಿ, ಅಥವಾ ಅವುಗಳ್ಗೆ ಸಮಾನವಾದ ಪದಸಮುದಾಯವಾಗಲಿ, ಷಷ್ಠೀ ವಿಭಕ್ತ್ಯಂತ ಪದಗಳಾಗಿಯಾಗಲಿ ಇರಬಹುದು. ಕ್ರಿಯೆಯನ್ನು ವಿಶೇಷಿಸುವ ಪದಗಳು ಸ್ಥಾನ (Place), ಕಾಲ (Time), ರೀತಿ (Manner), ಕಾರಣ (Cause) ಗಳನ್ನು (2) ಸೂಚಿಸುವ ಪದಗಳಾಗಲಿ, ಅಥವಾ ಅಂತಹ ಪದಸಮುದಾಯವಾಗಲಿ ಇರಬಹುದು.

ಉದಾಹರಣೆ.

ಕರ್ತೃ ವಿಶೇಷಣಕ್ಕೆ—(ಪದ) ಹಲವು ಜನಗಳು ಸೇರಿದರೆ ಎಲ್ಲವೂ ಸಾಧ್ಯವೇ ಸರಿ.

,, ,, —(ಪದಸಮುದಾಯ) ಬಹಳ ಮಾತಾಡುವ ಮನುಷ್ಯನು ಏನೂ ಮಾಡಲಾರನು.

ಕರ್ಮ ,, —(ಪದ) ಅಗಸರು ಬೆಳ್ಳಗಿರುವ ಬಟ್ಟೆಗಳನ್ನು ತಂದು ಕೊಡುವರು.

,, ,, —(ಪದಸಮುದಾಯ) ನಮಗೆ ಉಪಕಾರ ಮಾಡಿದವರನ್ನು ಮರೆಯಬಾರದು.

---

(1) ಆಗಿದ್ದೀಯೆಂಬುದು ಅಧ್ಯಾಹಾರ. (2) ಈ ವಿಶೇಷಣಗಳು ಒಂದೇ ಕ್ರಿಯೆಯನ್ನು ವಿಶೇಷಿಸುವಾಗ ಕ್ರಮವಾಗಿಯಾಗಲಿ, ವ್ಯತ್ಯಾಸವಾಗಿಯಾಗಲಿ ಬರಬಹುದು.

ಷಷ್ಠ್ಯಂತವಿಶೇಷಣಕ್ಕೆ—ನನ್ನ ಪುಸ್ತಕ ನಿಮ್ಮ ಮನೆಯಲ್ಲಿದೆ.

ಕ್ರಿಯಾ ,,	—(ಪದ) ಹುಡುಗರು ಪಾಠಶಾಲೆಗೆ ಹೋದರು. —(ಪದಸಮುದಾಯ) ಮಳೆಬಿದ್ದ ಕಡೆ ಹುಲ್ಲು ಬೆಳೆಯುತ್ತದೆ.	ಸ್ಥಾನ
,,	—(ಪದ) ನಾಳೆ ಬರುವೆವು. (ಪದಸಮುದಾಯ) ದೀವಳಿಗೆಗೆ ಮೊದಲೇ ನವರಾತ್ರಿ ಬರುವುದು.	ಕಾಲ
,,	—(ಪದ) ಬೇಗಬಾ, ಸರಿಯಾಗಿ ಹೇಳು. (ಪದಸಮುದಾಯ) ನಾನು ಹೇಳಿದ ಹಾಗೆ ಕೇಳು.	ರೀತಿ
,,	—(ಪದ) ಹಣದಿಂದ ಸುಖವುಂಟು. (ಪದಸಮುದಾಯ) ಸೂರ್ಯನು ಉದಯಿಸಲು ತಾವರೆ ಅರಳಿತು.	ಕಾರಣ

111. ಒಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚಾದ ಕರ್ತೃಪದಗಳಾಗಲಿ, ಕರ್ಮಪದಗಳಾಗಲಿ ಬಂದರೆ ಪ್ರತಿಯೊಂದರ ಕೊನೆಯಲ್ಲಿಯೂ "ಊ" ಎಂಬ ಸಮುಚ್ಚಯಾರ್ಥಾವ್ಯಯ (*102-6) ವನ್ನು ಸೇರಿಸುವುದುಂಟು. ಅನೇಕ ಕ್ರಿಯೆಗಳು ಬಂದರೆ ಕೊನೆಯ ಕ್ರಿಯಾಪದವು ಪೂರ್ಣಾರ್ಥವುಳ್ಳದಾಗಿರುವುದು. ಮಿಕ್ಕ ಕ್ರಿಯೆಗಳು ಅಪೂರ್ಣಕ್ರಿಯೆಗಳಾಗಿ ಆದನ್ನೇ ವಿಶೇಷಿಸುವುವು.

ಉದಾಹರಣೆ.

ಅನೇಕ ಕರ್ತೃಗಳಿರುವುದಕ್ಕೆ—ರಾಮನೂ, ಕೃಷ್ಣನೂ ಬಂದರು. (1)

,, ಕರ್ಮ ,, —ನಾನು ಹೊಳೆಯನ್ನೂ, ಬೆಳೆಯನ್ನೂ ನೋಡಿದೆನು.

,, ಕ್ರಿಯೆ ,, —ದುಷ್ಟರನ್ನು ಶಿಕ್ಷಿಸಿ, (2) ಶಿಷ್ಟರನ್ನು ರಕ್ಷಿಸಿ, ನ್ಯಾಯವನ್ನು ಬಿಡದೆ ಆಳುವ ಅರಸನಿಗೆ ಕೀರ್ತಿ ಬರುವುದು.

112. ವಾಕ್ಯಗಳಲ್ಲಿ ಲೋಪವಾಗಿರುವ ಕರ್ತೃ ಕರ್ಮ ಕ್ರಿಯೆಗಳನ್ನು ವಾಕ್ಯವಿಭಜನೆಯಲ್ಲಿ ಅಧ್ಯಾಹಾರ (3) ಮಾಡಿಕೊಳ್ಳಬಹುದು. ಮತ್ತು ಅಧೀನವಾಕ್ಯ (*115 b, 116, 117) ಗಳಲ್ಲಿ ಬರುವ ಅಪೂರ್ಣ ಕ್ರಿಯೆಗಳನ್ನು ಪೂರ್ಣಕ್ರಿಯೆಗಳನ್ನಾಗಿಯೂ, ಕ್ರಿಯಾಸಮಾಸಗಳನ್ನು ವಿಗ್ರಹವಾಕ್ಯ (*56) ಗಳನ್ನಾಗಿಯೂ ಮಾಡಿಕೊಂಡು ವಾಕ್ಯವಿಭಜನೆ ಮಾಡಬೇಕು.

---

(1) ಇಲ್ಲಿ ಬಂದರು ಎಂಬ ಕ್ರಿಯೆಗೆ ಕರ್ತೃತ್ವವು ರಾಮ ಕೃಷ್ಣ ಈ ಇಬ್ಬರಿಗೂ ಇರುವುದರಿಂದ ರಾಮನು ಬಂದನು ಮತ್ತು ಕೃಷ್ಣನು ಬಂದನು ಎಂದರ್ಥವು. (2) ಶಿಕ್ಷಿಸಿ, ರಕ್ಷಿಸಿ, ಬಿಡದೆ ಎಂಬ ಅಪೂರ್ಣ ಕ್ರಿಯೆಗಳು ಆಳುವ ಎಂಬ ಕಾರಕಕೃದಂತ ಕ್ರಿಯೆಯಲ್ಲಿ ಅನ್ವಯಿಸುವವು. (3) ಲೋಪವಾಗಿರುವುದನ್ನು ಸೇರಿಸಿಕೊಳ್ಳುವುದು (Understood.)

ಉದಾಹರಣೆ.

ಅಧ್ಯಾಹಾರಕ್ಕೆ—"ಈಗ ಇದನ್ನು ಮಾಡದಿದ್ದರೆ ಮುಂದೆ ಬಹಳ ಕಷ್ಟ" ಎಂಬ ವಾಕ್ಯವನ್ನು "ಈಗ ಇದನ್ನು ನೀನು ಮಾಡದಿದ್ದರೆ ಮುಂದೆ ಅದು ನಿನಗೆ ಬಹಳ ಕಷ್ಟವಾಗುವುದು ಎಂದು ಮಾಡಬಹುದು. ಇದರಲ್ಲಿ ನೀನು, ಅದು, ನಿನಗೆ, ಆಗುವುದು ಎಂಬ ಪದಗಳು ಅಧ್ಯಾಹಾರ ಮಾಡಲ್ಪಟ್ಟವೆ.

ಅಪೂರ್ಣಕ್ರಿಯೆಗಳಿಗೆ—"ನೀನು ಬಂದು ಹೋಗು" ಎಂಬ ವಾಕ್ಯವನ್ನು ನೀನು ಬಾ ಮತ್ತು ನೀನು ಹೋಗು ಎಂದು 2 ವಾಕ್ಯಗಳನ್ನಾಗಿ ಮಾಡಬಹುದು.

ಕ್ರಿಯಾಸಮಾಸಕ್ಕೆ—"ನಾನು ಊಟಮಾಡಿ ನೀರು ಕುಡಿದೆನು" ಎಂಬ ವಾಕ್ಯದಲ್ಲಿರುವ ಕ್ರಿಯಾಸಮಾಸಪದಗಳನ್ನು ನಾನು ಊಟವನ್ನು ಮಾಡಿದೆನು ಮತ್ತು ನಾನು ನೀರನ್ನು ಕುಡಿದೆನು ಎಂದು ಬಿಡಿಸಿ ವಾಕ್ಯವಿಭಜನೆ ಮಾಡಬೇಕು.

113. ವಾಕ್ಯಗಳಲ್ಲಿ ಸಾಮಾನ್ಯವಾಕ್ಯ, ಮಿಶ್ರವಾಕ್ಯ, ಸಂಯೋಜಿತವಾಕ್ಯ ಎಂದು 3 ವಿಧವು.

ಸಾಮಾನ್ಯವಾಕ್ಯ—(Simple Sentence) ಒಂದೇ ಪೂರ್ಣಕ್ರಿಯೆಯಿರುವ ವಾಕ್ಯವು ಸಾಮಾನ್ಯವಾಕ್ಯವೆನಿಸುವುದು.

ಉದಾಹರಣೆ.

(*a*) ಬೇಸಗೆಯ ಬಿಸಲಿನಿಂದ ಹಿಮಗಾಲದ ಮಂಜು ಹರಿಯಿತು.

(*b*) ಸೂರ್ಯನು ತನ್ನ ಕಿರಣಗಳಿಂದ ಚಂದ್ರನಿಗೆ ಕಾಂತಿಯನ್ನು ಕೊಡುವನು.

(*c*) ಶೂರನಾದ ಭಟನಿಂದ ಪ್ರಬಲರಾದ ಶತ್ರುಗಳು ಕ್ಷಣಮಾತ್ರದಲ್ಲಿ ಸೋಲಿಸಲ್ಪಟ್ಟರು.

(*d*) ಧರ್ಮಿಷ್ಠನಾದ ಅರಸನ ರಾಜ್ಯದಲ್ಲಿ ರಾಜಭಕ್ತಿಯುಳ್ಳ ಪ್ರಜೆಗಳು ನಿರಂತರವೂ ಸುಖಪಡುವರು.

(*e*) ದೇವವಂದ್ಯನಾದ ಶ್ರೀಕೃಷ್ಣನಿಂದ ನೀಚನಾದ ಶಿಶುಪಾಲನ ಶಿರಸ್ಸು ಸಭೆಯವರ ಇದಿರನಲ್ಲಿಯೇ ಸಾವಿರ ಅಂಚುಗಳುಳ್ಳ ಚಕ್ರದಿಂದ ಕತ್ತರಿಸಲ್ಪಟ್ಟಿತು.

(*f*) ಮಕ್ಕಳ ತಿಳಿವಳಿಕೆಯು ವೃದ್ಧರಾದ ತಾಯಿ ತಂದೆಗಳನ್ನು ಬಹಳವಾಗಿ ಆನಂದಪಡಿಸುವುದು.

ಈ ಮೇಲಣ ವಾಕ್ಯಗಳಲ್ಲಿ ಒಂದೊಂದೇ ಪೂರ್ಣಕ್ರಿಯೆ ಇರುವುದರಿಂದ ಸಾಮಾನ್ಯ ವಾಕ್ಯಗಳು.

ಮೇಲಣ ಸಾಮಾನ್ಯ ವಾಕ್ಯಗಳ ವಾಕ್ಯವಿಭಜನೆ.

ವಾಕ್ಯ	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯೆ	ಕ್ರಿಯಾವಿಶೇಷಣ
(a) ಬೇಸಗೆಯ....ಹರಿಯಿತು	ಮಂಜು	ಹಿಮಗಾಲದ	....	....	ಹರಿಯಿತು	ಬೇಸಗೆಯ (1) ಬಿಸಿಲಿನಿಂದ
(b) ಸೂರ್ಯನು....ಕೊಡುವನು	ಸೂರ್ಯನು	....	ಕಾಂತಿಯನ್ನು	....	ಕೊಡುವನು	ತನ್ನ (2) ಕಿರಣಗಳಿಂದ ಚಂದ್ರನಿಗೆ (3)
(c) ಶೂರನಾದ....ಸೋಲಿಸಲ್ಪಟ್ಟರು	ಭಟನಿಂದ	ಶೂರನಾದ	ಶತ್ರುಗಳು	ಪ್ರಬಲರಾದ	ಸೋಲಿಸಲ್ಪಟ್ಟರು	ಕ್ಷಣಮಾತ್ರದಲ್ಲಿ
(d) ಧರ್ಮಿಷ್ಠ....ಸುಖಪಡುವರು	ಪ್ರಜೆಗಳು	ರಾಜಭಕ್ತಿಯುಳ್ಳ	ಸುಖವನ್ನು	....	ಪಡುವರು	ಧರ್ಮಿಷ್ಠನಾದ ಅರಸನ (4) ರಾಜ್ಯದಲ್ಲಿ; ನಿರಂತರವೂ
(e) ದೇವವಂದ್ಯ....ಕತ್ತರಿಸಲ್ಪಟ್ಟಿತು	ಶ್ರೀಕೃಷ್ಣನಿಂದ	ದೇವವಂದ್ಯನಾದ	ಶಿರಸ್ಸು	ನೀಚನಾದ ಶಿಶುಪಾಲನ	ಕತ್ತರಿಸಲ್ಪಟ್ಟಿತು	ಸಾವಿರ ಅಂಚುಗಳುಳ್ಳ (5) ಚಕ್ರದಿಂದ; ಸಭೆಯವರ (6) ಇದಿರಿನಲ್ಲೇ
(f) ಮಕ್ಕಳ....ಆನಂದಪಡಿಸುವುದು	ತಿಳಿವಳಿಕೆ	ಮಕ್ಕಳ	ತಾಯಿ ತಂದೆಗಳನ್ನು	ವೃದ್ಧರಾದ	ಆನಂದಪಡಿಸುವುದು	ಬಹಳವಾಗಿ

(1) ಬಿಸಿಲಿನಿಂದ ಎಂಬುದು ಕ್ರಿಯಾ ವಿಶೇಷಣವಾದುದರಿಂದ ಅದನ್ನು ವಿಶೇಷಿಸುವ ಬೇಸಗೆ ಎಂಬುದೂ ಕ್ರಿಯಾವಿಶೇಷಣವೇ. (1, 2, 3, 4, 5, 6) ಇವುಗಳೂ ಮೇಲಿನಂತೆಯೇ ಕ್ರಿಯಾವಿಶೇಷಣಗಳೇ.

ಈ ಕೆಳಗಣ ವಾಕ್ಯಗಳನ್ನು ಸಾಮಾನ್ಯವಾಕ್ಯಗಳನ್ನಾಗಿ ಮಾಡಿ ಬರೆಯಬೇಕು.

1. ಅಂಗಸಾಧನೆ ಮಾಡಬೇಕು. ಆದರಿಂದ ಶರೀರಬಲವು ಹೆಚ್ಚುತ್ತದೆ. (1)
2. ನಾನು ಮೂರುಗಾವುದವನ್ನು ನಡೆಯುವೆನು, ದಣುವಾಗುವುದಿಲ್ಲ. (2)
3. ರಾಮನು ಒಂದು ಮನೆಗೆ ಹೋದನು. ಅದು ಗೋವಿಂದನದು.
4. ಇಲ್ಲಿ ಒಂದು ಕನ್ನಡಿಯಿದೆ. ಅದರಲ್ಲಿ ನಿನ್ನ ಮುಖವನ್ನು ನೋಡಿಕೋ.
5. ಒಂದು ಅಡವಿಯಲ್ಲಿ ಕಾಗೆ, ಹುಲಿ, ನರಿ ಸೇರಿದ್ದುವು, ಒಬ್ಬ ಬಡಗಿ ಅಲ್ಲಿಗೆ ಹೋದನು, ಅವುಗಳನ್ನು ನೋಡಿದನು.
6. ಪಕ್ಷಿಗಳು ಆಕಾಶಕ್ಕೆ ಹಾರಿದುವು, ಅವು ಬೆಳ್ಳಗಿದ್ದವು, ಅವು ಪಾರಿವಾಳಗಳು.

ಮಿಶ್ರವಾಕ್ಯ (Complex Sentence)

114. ಒಂದು ಅಥವಾ ಅನೇಕ ಅಧೀನವಾಕ್ಯಗಳೂ (Subordinate clauses) ಒಂದು ಪ್ರಧಾನವಾಕ್ಯವೂ (Principle clause) ಇರುವುದು ಮಿಶ್ರವಾಕ್ಯವು. ಪ್ರಧಾನವಾಕ್ಯವೆಂದರೆ :— ಒಂದು ಪೂರ್ಣಕ್ರಿಯೆಯುಳ್ಳ ಸ್ವತಂತ್ರವಾಕ್ಯವು. ಅಧೀನವಾಕ್ಯವೆಂದರೆ :—ಕರ್ತೃ ಕ್ರಿಯೆ, (ಸಕರ್ಮಕವಾಗಿದ್ದರೆ ಕರ್ಮಪದ) ಗಳಿಂದ ಕೂಡಿ, ಸಂಪೂರ್ಣಾರ್ಥವನ್ನು ಕೊಡದಿರುವ ಬೇರೊಂದು ವಾಕ್ಯಕ್ಕೆ ಅಂಗವಾಗಿರುವ ವಾಕ್ಯವು.

ಅಧೀನವಾಕ್ಯದಲ್ಲಿ—ನಾಮಾತ್ಮಕ, ಗುಣಾತ್ಮಕ, ಕ್ರಿಯಾವಿಶೇಷಣಾತ್ಮಕವೆಂದು 3 ವಿಧವು.

115. ನಾಮಾತ್ಮಕವಾಕ್ಯ (Noun clause)

1. "ಸಿಡಿಲು ಬಡಿಯಿತು" ಎಂಬ ವಾಕ್ಯದಲ್ಲಿ ಬಡಿಯಿತು ಎಂಬ ಕ್ರಿಯೆಗೆ ಏನು ಎಂದು ಪ್ರಶ್ನೆಮಾಡಿದರೆ ಸಿಡಿಲು ಎಂಬುದು ಉತ್ತರವಾಗಿ ಆ ವಾಕ್ಯದಲ್ಲಿ ಕರ್ತೃಪದವಾಗಿರುವುದು ಸರಿಯಷ್ಟೆ? ಇದರಂತೆಯೇ (a) "ಸಿಡಿಲು ಬಡಿಯಿತು ಎಂಬುದು ನಿಜವಾಗಿದೆ" ಎಂಬ ವಾಕ್ಯದಲ್ಲಿ ಏನು ಎಂದು ಪ್ರಶ್ನೆಮಾಡಿದರೆ "ಸಿಡಿಲು ಬಡಿಯಿತು ಎಂಬುದು" ಎಂಬ ವಾಕ್ಯವೇ ಉತ್ತರವಾಗಿ ಈ ವಾಕ್ಯದಲ್ಲಿ ಕರ್ತೃವಾಗಿದೆ. ಇದರಲ್ಲಿ—(a) ಗುರ್ತಿನ ಒಟ್ಟು ವಾಕ್ಯದಲ್ಲಿ "ಎಂಬುದು ನಿಜವಾಗಿದೆ" ಎಂಬ ವಾಕ್ಯವು ಪ್ರಧಾನವಾಕ್ಯವಾಗಿಯೂ, "ಸಿಡಿಲು ಬಡಿಯಿತು" ಎಂಬುದು ಅಧೀನವಾಕ್ಯವಾಗಿಯೂ ಇದೆ.

---

(1) ಅಂಗಸಾಧನೆಯಿಂದ ಶರೀರ ಬಲವು ಹೆಚ್ಚುತ್ತದೆ. (2) ನಾನು ದಣಿಯದೆ ಮೂರುಗಾವುದ ನಡೆಯುತ್ತೇನೆ.—(ಎಂಬಂತೆ)

2. "ನಾವು ಕಥೆಯನ್ನು ಕೇಳಿದೆವು" ಎಂಬ ವಾಕ್ಯದಲ್ಲಿ ಕೇಳಿದೆವು ಎಂಬ ಕ್ರಿಯೆಗೆ ಏನನ್ನು ಎಂದು ಪ್ರಶ್ನೆ ಮಾಡಿದರೆ ಕಥೆಯನ್ನು ಎಂಬುದು ಉತ್ತರವಾಗಿ ಆ ವಾಕ್ಯದಲ್ಲಿ ಕರ್ಮಪದವಾಗಿರುವುದಷ್ಟೆ? ಇದರಂತೆಯೇ (b) "ನಾವು ಕಥೆಯನ್ನು ಕೇಳಿದೆವು ಎಂಬುದನ್ನು ನೀವು ನಂಬಬೇಕು" ಎಂಬ ವಾಕ್ಯದಲ್ಲಿ ನಂಬಬೇಕು ಎಂಬ ಕ್ರಿಯೆಗೆ ಏನನ್ನು ಎಂದು ಪ್ರಶ್ನೆಮಾಡಿದರೆ "ನಾವು ಕಥೆಯನ್ನು ಕೇಳಿದೆವು ಎಂಬುದನ್ನು" ಎಂಬುದೇ ಉತ್ತರವಾಗಿ ಈ ವಾಕ್ಯದಲ್ಲಿ ಕರ್ಮಪದವಾಗಿರುವುದು. ಇದರಲ್ಲಿ (b) ಗುರ್ತಿನವೊಟ್ಟು ವಾಕ್ಯದಲ್ಲಿ "ಎಂಬುದನ್ನು ನೀವೇ ನಂಬಬೇಕು" ಎಂಬುದು ಪ್ರಧಾನವಾಕ್ಯವಾಗಿಯೂ ನಾವು ಕಥೆಯನ್ನು ಕೇಳಿದೆವು ಎಂಬುದು ಅಧೀನವಾಕ್ಯವಾಗಿಯೂ ಇರುವುದು.

ಇದರಿಂದ,—

ಸೂ॥ ಒಂದು ವಾಕ್ಯಕ್ಕೆ ಅಂಗವಾಗಿ ನಾಮಪದದಂತೆ ಕರ್ತೃ ಅಥವಾ ಕರ್ಮ ಪದಸ್ಥಾನವನ್ನು ಹೊಂದಿರುವ ವಾಕ್ಯವು ನಾಮಾತ್ಮಕ ಅಧೀನವಾಕ್ಯವೆನಿಸುವುದು.

ಉದಾಹರಣೆ.

1. ಅವನು ಇನ್ನುಬೇಗ ಬರುತ್ತಾನೆಂದು (1) ಯಾರಿಗೂ ತಿಳಿಯದು.
2. ಅವನು ಬಂದರೆ ಇಲ್ಲವೇ ಎಂಬುದನ್ನು ಮೊದಲು ತಿಳಿಯಬೇಕು.
3. ನಾಳೆ ಮಳೆ ಬರುತ್ತದೆಂದು ಜೋಯಿಸರು ಹೇಳಿದರು.
4. ಯುವತಿಯೊಬ್ಬಳು ತನ್ನ ಚಿಕ್ಕಮಗುವನ್ನು ಚೇಳು ಕಚ್ಚಿತೆಂದು ತಿಳಿದು ನೆರೆಮನೆಯಾಕೆ ಒಳ್ಳೆಯ ಔಷಧವನ್ನು ಹಚ್ಚಿಸುವಳೆಂದು ಕೇಳಿ ಅಲ್ಲಿಗೆ ಹೋದಳು

---

(1) ಎಂದು ಎಂಬ ಶಬ್ದಕ್ಕೆ ಬದಲಾಗಿ ವಾಕ್ಯವಿಭಜನೆಯಲ್ಲಿ ಎಂಬುದು, ಎಂಬುದನ್ನು ಎಂಬ ಶಬ್ದಗಳು ಉಪಯೋಗಿಸಲ್ಪಟ್ಟವೆ.

ಮೇಲಣ ಮಿಶ್ರವಾಕ್ಯಗಳಲ್ಲಿ ಪ್ರಧಾನವಾಕ್ಯಗಳ ವಿಭಜನೆ.

	ವಾಕ್ಯಗಳು	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯೆ	ಕ್ರಿಯಾ ವಿಶೇಷಣ
1ನೇ ವಾಕ್ಯ	ಅವನು ಇಷ್ಟು ಬೇಗ................ ....ಯಾರಿಗೂ ತಿಳಿಯದು.	ಎಂಬುದು	—	—	—	ತಿಳಿಯದು	ಯಾರಿಗೂ
2ನೇ	ಅವರು ಬಂದರೇ................ಬೇಕು.	(ನಾವು)	—	ಎಂಬುದನ್ನು	—	ತಿಳಿಯಬೇಕು	ಮೊದಲು
3ನೇ	ನಾಳೆ ಮಳೆ...............ಹೇಳಿದರು.	ಜೋಯಿಸರು	—	ಎಂಬುದನ್ನು	—	ಹೇಳಿದರು	
4ನೇ	ಯುವತಿಯೊಬ್ಬಳು........ಹೋದಳು.	1 ಯುವತಿ	ಒಬ್ಬಳು	ಎಂಬುದನ್ನು	—	ತಿಳಿದಳು	
		2 ಯುವತಿ	ಒಬ್ಬಳು	ಎಂಬುದನ್ನು	—	ಕೇಳಿದಳು	
		3 ಯುವತಿ	ಒಬಳ್ಬು	—	—	ಹೋದಳು	ಅಲ್ಲಿಗೆ

ಮೇಲಣ ವಾಕ್ಯಗಳಲ್ಲಿ ಸಾಮಾತ್ಮಕ ಅಧೀನ ವಾಕ್ಯಗಳ ವಿಭಜನೆ.

	ವಾಕ್ಯ	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯೆ	ಕ್ರಿಯಾವಿಶೇಷಣ
೧ನೇ ವಾಕ್ಯದಲ್ಲಿ	ಅವನು ಇಷ್ಟು ಬೇಗ ಬರುತ್ತಾನೆ.	ಅವನು	—	—	—	ಬರುತ್ತಾನೆ	ಇಷ್ಟುಬೇಗ
೨ನೇ ವಾಕ್ಯದಲ್ಲಿ	ಅವರು ಬಂದರೇ ಇಲ್ಲವೆ?	ಅವರು	—	—	—	ಬಂದರೆ ಇಲ್ಲವೆ?	
೩ನೇ ವಾಕ್ಯದಲ್ಲಿ	ನಾಳೆ ಮಳೆ ಬರುತ್ತದೆ.	ಮಳೆ	—	—	—	ಬರುತ್ತದೆ	ನಾಳೆ
೪ನೇ ವಾಕ್ಯದಲ್ಲಿ	(1) ಚೇಳು ತನ್ನ ಚಿಕ್ಕಮಗುವನ್ನು ಕಚ್ಚಿತು.	ಚೇಳು	—	ಮಗುವನ್ನು	ತನ್ನ ಚಿಕ್ಕ	ಕಚ್ಚಿತು	
	(2) ನೆರೆಮನೆಯಾಕೆ ಒಳ್ಳೆಯ ಔಷಧವನ್ನು ಹಚ್ಚಿಸುವಳು.	ಆಕೆ	ನೆರೆಮನೆಯ	ಔಷಧವನ್ನು	ಒಳ್ಳೆಯ	ಹಚ್ಚಿಸುವಳು	

ಗುಣಾತ್ಮಕಾಧೀನವಾಕ್ಯ. (Adjective clause)

116. (1) ಗುಣವಂತನಾದ ಮನುಷ್ಯನನ್ನು ಎಲ್ಲರೂ ಪ್ರೀತಿಸುವರು.
(2) ವಿದ್ಯಾವಂತನಾದ ಮನುಷ್ಯನನ್ನು ಎಲ್ಲರೂ ಗೌರವಿಸುವರು.
(3) ಧನವಂತನಾದ ಮನುಷ್ಯನನ್ನು ಎಲ್ಲರೂ ಅಪೇಕ್ಷಿಸುವರು.

(ಇದೇ ವಾಕ್ಯಗಳ ಅರ್ಥವನ್ನು ವಿವರಿಸಿ ಹೇಳಿದರೆ)

(1) ಯಾವ ಮನುಷ್ಯನಲ್ಲಿ ಗುಣವುಂಟೋ ಅವನನ್ನು ಎಲ್ಲರೂ ಪ್ರೀತಿಸುವರು.

(2) ಯಾವ ಮನುಷ್ಯನು ವಿದ್ಯಾವಂತನಾಗಿರುವನೋ ಅವನನ್ನು ಎಲ್ಲರೂ ಗೌರವಿಸುವರು.

(3) ಯಾವ ಮನುಷ್ಯನಲ್ಲಿ ಧನವುಂಟೋ ಅವನನ್ನು ಎಲ್ಲರೂ ಅಪೇಕ್ಷಿಸುವರು.

ಎಂದು ಆಗುವುದು.

ಇಲ್ಲಿ ಮನುಷ್ಯನೆಂಬ ನಾಮಪದವನ್ನು ಗುಣವಂತ, ವಿದ್ಯಾವಂತ, ಧನವಂತ ಎಂಬ ಪದಗಳು ವಿಶೇಷಿಸುತ್ತವಷ್ಟೆ? ಮೇಲೆ ವಿವರಿಸಿರುವಂತೆ ಈ ವಿಶೇಷಣ ಪದಗಳಿಂದ ಹುಟ್ಟಿರುವ ವಾಕ್ಯಗಳು ಮನುಷ್ಯನೆಂಬಅದೇ ನಾಮ ಪದವನ್ನೇ ವಿಶೇಷಿಸುತ್ತವೆ.

(ಆದುದರಿಂದ)

ಸೂ॥ ಮುಖ್ಯವಾಕ್ಯದಲ್ಲಿರುವ ನಾಮಪದವನ್ನಾಗಲಿ ಅಥವಾ ಅದಕ್ಕೆ ಸಮಾನವಾದ ಪದಸಮುದಾಯವನ್ನಾಗಲಿ ವಿಶೇಷಿಸುವ ವಾಕ್ಯವು ಗುಣಾತ್ಮಕ ಅಧೀನವಾಕ್ಯವೆನಿಸುವುದು.

ಇದರ ವಿಷಯದಲ್ಲಿ ತಿಳಿಯಬೇಕಾದ ಅಂಶಗಳು :—

117. (*a*) ಗುಣಾತ್ಮಕ ವಾಕ್ಯದ ಕ್ರಿಯೆ ಕಾರಕಕೃದಂತ (*90) ವಾಗಿದ್ದರೆ, ಆ ವಾಕ್ಯವು ಯಾವ ಪದವನ್ನು ಅಥವಾ ಪದಸಮುದಾಯವನ್ನು ವಿಶೇಷಿಸುವುದೋ, ಅದರ ಹಿಂದೆಯೇ ಬರುವುದು.

(*b*) ವಾಕ್ಯವು ಪ್ರಶ್ನಾರ್ಥಕವಾಗಿದ್ದರೆ, ಯಾವುದು, ಯಾರು, ಏನು ಮೊದಲಾದ ಪ್ರಶ್ನಾರ್ಥಕ ಸರ್ವನಾಮ (*34) ಗಳಿಂದ ಪ್ರಾರಂಭಿಸಲ್ಪಟ್ಟು ಅದು, ಅವನು ಮೊದಲಾದ

ನಿತ್ಯಸಂಬಂಧ (1) ಪದಗಳಿಂದ ವಿಶೇಷ್ಯವಾದ ನಾಮಪದಕ್ಕೆ ಸೇರಿಸಲ್ಪಡುವುದು.—ಉದಾಹರಣೆ.

(a) ಕಾರಕಕೃದಂತಕ್ಕೆ—ಹಿರಿಯರ ಮಾತನ್ನು ಕೇಳುವ ಮನುಷ್ಯನು ವೃದ್ಧಿಗೆ ಬರುವನು.

(b) ಪ್ರಶ್ನಾರ್ಥಕ ಸರ್ವನಾಮಕ್ಕೆ—ಯಾವ ಮನುಷ್ಯನು ಹಿರಿಯರ ಮಾತನ್ನು ಕೇಳುವನೋ, ಅವನು ವೃದ್ಧಿಗೆ ಬರುವನು.

118. ಗುಣಾತ್ಮಕ ವಾಕ್ಯಗಳನ್ನು ವಿಭಜನೆ ಮಾಡುವಾಗ ಕಾರಕಕೃದಂತ ಕ್ರಿಯೆಗಳನ್ನು ಪೂರ್ಣಕ್ರಿಯೆಗಳನ್ನಾಗಿ ಮಾಡಿ ಪ್ರಶ್ನಾರ್ಥಕ ಸರ್ವನಾಮಗಳನ್ನು ಲೋಪಮಾಡಬೇಕು.—ಉದಾಹರಣೆ.

ಮನುಷ್ಯನು ಹಿರಿಯರ ಮಾತನ್ನು ಕೇಳಬೇಕು. ಅವನು ವೃದ್ಧಿಗೆ ಬರುವನು. (2)

(1) ನಿನ್ನೆ ನನ್ನನ್ನು ನೋಡಿದ ಮನುಷ್ಯನು ಬಂದನು.
(2) ಹುಲಿ ಏಟುಬಿದ್ದ ತಾವಿನಲ್ಲಿಯೇ ಸತ್ತಿತು
(3) ನೀನು ಹೇಳುವ ಮಾತನ್ನು ನಾನು ಹೇಗೂ ಒಪ್ಪುವುದಿಲ್ಲ.
(4) ನಾನು ನಿನ್ನೆ ಮೈಸೂರಿಗೆ ಬಂದ ರೈಲುಬಂಡಿ ಮೊನ್ನೆರಾತ್ರಿ 10 ಗಂಟೆಯಲ್ಲಿ ಬೆಂಗಳೂರಿಂದ ಹೊರಟಿತು.

ಇಲ್ಲಿ—1ನೇ ವಾಕ್ಯದಲ್ಲಿ—"ನಿನ್ನೆ ನನ್ನನ್ನು ನೋಡಿದ" ಎಂಬ ವಾಕ್ಯವು ಮನುಷ್ಯನು ಬಂದನು ಎಂಬ ಪ್ರಧಾನವಾಕ್ಯದಲ್ಲಿರುವ ಮನುಷ್ಯ ಎಂಬ ನಾಮಪದವನ್ನು ವಿಶೇಷಿಸುವುದರಿಂದ ಗುಣಾತ್ಮಕ ಅಧೀನವಾಕ್ಯವು.

2ನೇ ವಾಕ್ಯದಲ್ಲಿ—"ಏಟುಬಿದ್ದ" ಎಂಬ ವಾಕ್ಯವು ಹುಲಿತಾವಿನಲ್ಲಿಯೇ ಸತ್ತಿತು ಎಂಬ ಪ್ರಧಾನವಾಕ್ಯದಲ್ಲಿರುವ ತಾವು ಎಂಬ ನಾಮಪದವನ್ನು ವಿಶೇಷಿಸುವುದರಿಂದ ಗುಣಾತ್ಮಕ ಅಧೀನವಾಕ್ಯವಾಯಿತು.

(ಹೀಗೆಯೇ ಉಳಿದ ವಾಕ್ಯಗಳನ್ನೂಹಿಸಬೇಕು.)

ಈ ಮಿಶ್ರವಾಕ್ಯಗಳನ್ನು ಮುಂದೆ ತೋರಿಸಿರುವ ಪಟ್ಟಿಯಲ್ಲಿರುವಂತೆ ವಿಭಜನೆ ಮಾಡಬಹುದು.

---

(1) ಯಾವುದು-ಅದು, ಯಾವನು-ಅವನು, ಎಲ್ಲಿ-ಅಲ್ಲಿ, ಹೇಗೆ-ಹಾಗೆ, ಏತಕ್ಕೆ-ಅದಕ್ಕೆ, ಎಷ್ಟು-ಅಷ್ಟು, ಎಂತು-ಅಂತು ಮೊದಲಾದುವು ನಿತ್ಯಸಂಬಂಧ ಪದಗಳು. ಮೊದಲನೆಯ ಪದ ಬಂದಮೇಲೆ ಎರಡನೆಯಪದ ಬರಲೇಬೇಕಾಗಿರುವುದರಿಂದ ಇವು ನಿತ್ಯಸಂಬಂಧಪದಗಳೆನಿಸಿದುವು. (2) ಹಿಂದಣ ಬ್ರಾಗುರ್ತಿನ ವಾಕ್ಯವೇ ಇದಕ್ಕೆ ಉದಾಹರಣೆಯಾಗಿರುವುದು.

ಮೇಲಣ ಗುಣಾತ್ಮಕ ವಾಕ್ಯಗಳಲ್ಲಿ ಪ್ರಧಾನವಾಕ್ಯಗಳ ವಿಭಜನೆ.

ಒಟ್ಟು ವಾಕ್ಯಗಳು	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯೆ	ಕ್ರಿಯಾವಿಶೇಷಣ
೧. ನಿನ್ನೆ ನನ್ನನ್ನು........ಬಂದನು.	ಮನುಷ್ಯನು	ನಿನ್ನೆ ನನ್ನನ್ನು ನೋಡಿದ	....	....	ಬಂದನು	....
೨. ಹುಲಿ....ಸತ್ತಿತು.	ಹುಲಿ	....	....	....	ಸತ್ತಿತು	ಏಟುಬಿದ್ದ ತಾವಿನಲ್ಲಿ
೩. ನೀನು....ಒಪ್ಪುವುದಿಲ್ಲ.	ನಾನು	....	ಮಾತನ್ನು	ನೀನು ಹೇಳುವ	ಒಪ್ಪುವುದಿಲ್ಲ	ಹೇಗೂ
೪. ನಾನು ನಿನ್ನೆ....ಹೊರಟಿತು.	ರೈಲುಬಂಡಿ	ನಾನು ನಿನ್ನೆ ಮೈಸೂರಿಗೆ ಬಂದ	....	....	ಹೊರಟಿತು	ಮೊನ್ನೆ ರಾತ್ರಿ 10 ಗಂಟೆಯಲ್ಲಿ ಬೆಂಗಳೂರಿಂದ

ಗುಣ[illegible]ವಾಕ್ಯಗಳ ವಿಭಜನೆ.

೧ನೆಯ ವಾಕ್ಯದಲ್ಲಿ,— ಮನುಷ್ಯನು ನಿನ್ನೆ ನನ್ನನ್ನು ನೋಡಿದನು.	ಮನುಷ್ಯನು	....	ನನ್ನನ್ನು	....	ನೋಡಿದನು	ನಿನ್ನೆ
೨ ,, ತಾವಿನಲ್ಲಿ ಏಟುಬಿದ್ದಿತು.	ಏಟು	....	....	....	ಬಿದ್ದಿತು	ತಾವಿನಲ್ಲಿ
೩ ,, ನೀನು ಮಾತನ್ನು ಹೇಳುತ್ತೀಯೆ.	ನೀನು	....	ಮಾತನ್ನು	....	ಹೇಳುತ್ತೀಯೆ	....
೪ ,, ನಾನು ನಿನ್ನೆ ಮೈಸೂರಿಗೆ ಬಂದೆನು.	ನಾನು	....	....	....	ಬಂದೆನು	೧. ನಿನ್ನೆ ೨. ಮೈಸೂರಿಗೆ

ಕೆಳಗಣ ವಾಕ್ಯಗಳನ್ನು ಗುಣಾತ್ಮಕ ಅಧೀನವಾಕ್ಯಗಳನ್ನಾಗಿ ಮಾಡಿ:—

1. ಒಬ್ಬನಿಗೆ ಒಂದು ಹಸುವಿದ್ದಿತು; ಅದು ವರ್ಷವರ್ಷವೂ ಎರಡೆರಡು ಕರುಗಳನ್ನು ಈನುತ್ತಿದ್ದಿತು. ಅದನ್ನು ಅವನು 50 ರೂಪಾಯಿಗೆ ಮಾರಿದನು.
2. ಒಂದು ಪಟ್ಟಣವುಂಟು. ಅದರ ಹೆಸರು ಕಟಕಪುರಿ. ಅದನ್ನು ನೀಲವರ್ಣನೆಂಬರಸು ಆಳುತ್ತಿರುವನು. ಅದರ ಸುತ್ತಲೂ ಒಂದು ನದಿ ಬಳಸಿರುವುದು. ಅದರಲ್ಲಿ ನೀರು ಬಹಳ ಆಳವಾಗಿರುವುದು.
3. ನಂದೀ ಬೆಟ್ಟವು ಉದ್ದವಾಗಿಯೂ ವಿಶಾಲವಾಗಿಯೂ ಇರುವುದು. ಅದರಮೇಲೆ ಅಮೃತಸರೋವರವುಂಟು. ಅದರ ನೀರು ಬಹಳ ರುಚಿಯಾಗಿರುವುದು.

ಕ್ರಿಯಾವಿಶೇಷಣಾತ್ಮಕ ಅಧೀನವಾಕ್ಯ. (Adverbial clause)

119. 1. ನಾನು ಸಂಜೆಯಲ್ಲಿ ಬಂದೆನು. 2. ಆವನ ಕಣ್ಣುಗಳು ಕೆಂಡದಂತೆ ಉರಿಯುತ್ತವೆ. 3. ಮದರಾಸಿನಷ್ಟು ಸೆಕೆ ಈ ವೂರಲ್ಲಿಲ್ಲ. ಈ ವಾಕ್ಯಗಳಲ್ಲಿರುವ "ಬಂದನು, [illegible] ಯುತ್ತವೆ, ಇಲ್ಲ" ಎಂಬ ಕ್ರಿಯೆಗಳಿಗೆ ಕ್ರಮವಾಗಿ, "ಸಂಜೆಯಲ್ಲಿ, [illegible], ಮದರಾಸಿನಷ್ಟು, "ಎಂಬ ಪದಗಳು ವಿಶೇಷಣಗಳಾಗಿವೆ." ಈ [illegible] ವಿಶೇಷಣ ಪದಗಳನ್ನೇ "ಸಂಜೆಯಾದಾಗ, ಕೆಂಡವುರಿದಂತೆ, ಮದರಾಸಿನ[illegible] ಸೆಕೆಯಾಗುವಷ್ಟು" ಎಂದು ಒಂದೊಂದು ವಾಕ್ಯವಾ[illegible] ಮಾಡಿದಾಗಲೂ, [illegible]ದೆನು ಮೊದಲಾದ ಕ್ರಿಯೆಗಳನ್ನೇ ವಿಶೇಷಿಸುತ್ತವೆ. ಅದರಿಂದ,—ಒಂದು ವಾಕ್ಯದಲ್ಲಿರುವ ಕ್ರಿಯಾಪದಗಳನ್ನು ವಿಶೇಷಿಸುವ ವಾಕ್ಯಗಳು ಕ್ರಿಯಾವಿಶೇಷಣಾತ್ಮಕ ಅಧೀನವಾಕ್ಯಗಳೆನಿಸುವುವು.

ಇಲ್ಲಿ ತಿಳಿಯಬೇಕಾದ ಅಂಶಗಳು.

ಅವ್ಯಯಕೃದಂತ ಪ್ರತ್ಯಯ (*95) ಗಳಾದ "ಅ, ಅಲು, ಅಲಿಕ್ಕೆ, ದರೆ ಎಂಬುವೂ, ತದ್ಧಿತಾಂತಾವ್ಯಯಗಳಾದ (*101) ಅಂತೆ, ಹಾಗೆ, ಇಂತ, ಇಂತಲೂ ಮೊದಲಾದುವೂ, ಸ್ಥಾನ ರೀತಿ ಕಾಲಗಳನ್ನು ಬೋಧಿಸುವ ಅವ್ಯಯಗಳೂ ಇರುವ ವಾಕ್ಯಗಳು ಪ್ರಾಯಶಃ ಕ್ರಿಯಾವಿಶೇಷಣಾತ್ಮಕ ವಾಕ್ಯಗಳಾಗಿರುವುವು.

ಉದಾಹರಣೆ.

ನಿನ್ನ ಸ್ನೇಹಿತನ ಸ್ಥಿತಿಯನ್ನು ನೋಡಿದರೆ ನೀನು ಎಷ್ಟೋ ದುಃಖಪಡುತ್ತೀಯೆ.—ಇಲ್ಲಿ ನೀನು ಎಷ್ಟೋ ದುಃಖಪಡುತ್ತೀಯೆ ಎಂಬ ಪ್ರಧಾನವಾ

ಕ್ಯದಲ್ಲಿ ಪಡುತ್ತೀಯೆ ಎಂಬ ಕ್ರಿಯಾಪದಕ್ಕೆ "ನಿನ್ನ ಸ್ನೇಹಿತನ ಸ್ಥಿತಿಯನ್ನು ನೋಡಿದರೆ" ಎಂಬ ವಾಕ್ಯವು ವಿಶೇಷಣವಾಗಿರುವುದರಿಂದ ಕ್ರಿಯಾವಿಶೇಷಣಾತ್ಮಕ ಆಧೀನ ವಾಕ್ಯವಾಯಿತು. (ಇ)

1. ಗಾಳಿ ಬೀಸಿದರೂ ಸೆಕೆ ಹೋಗಲಿಲ್ಲ.
2. ಬಿಸಿಲು ಬರಲು ನೆಲವೊಣಗಿತು.
3. ಸಾಲಮಾಡಿ ಮೃಷ್ಟಾನ್ನ ತಿನ್ನುವುದಕ್ಕಿಂತ, ಭಿಕ್ಷವೆತ್ತಿ ಗಂಜಿಯನ್ನು ಕುಡಿಯುವುದೇ ಮೇಲು.

ಈ ವಾಕ್ಯಗಳ ವಿಭಜನೆಯನ್ನು ಮುಂದಣ ಪಟ್ಟಿಯಲ್ಲಿ ನೋಡಿ.

[illegible] — (...) ಪ್ರಧಾನವಾಕ್ಯಗಳ ವಿಭಜನೆ

ಒಟ್ಟು ವಾಕ್ಯಗಳು	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯ	ಕ್ರಿಯಾವಿಶೇಷಣ
(1) ಗಾಳಿ....ಲಿಲ್ಲ.	ಚಳಿ	....	....	....	ಹೋಗಲಿಲ್ಲ	ಗಾಳಿಬೀಸಿದರೂ
(2) ಬಿಸಿಲು....ಗಿತು.	ನೆಲ	....	....	....	ಒಣಗಿತು	ಬಿಸಲುಬರಲು
(3) ಸಾಲ ಮೇಲು (ಆಗಿದೆ).	ಗಂಜಿಯನ್ನು ಕುಡಿಯುವುದು	....	....	....	ಮೇಲು (ಆಗಿದೆ)	(1) ಸಾಲಮಾಡಿ (2) ಮೃಷ್ಟಾನ್ನ ತಿನ್ನುವುದಕ್ಕಿಂತ (3) ಭಿಕ್ಷವೆತ್ತಿ

ಅಧೀನವಾಕ್ಯಗಳ ವಿಭಜನೆ.

ಒಟ್ಟು ವಾಕ್ಯಗಳು	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯ	ಕ್ರಿಯಾವಿಶೇಷಣ
ಗಾಳಿಬೀಸಿತು ಕ್ರಿ. ವಿ. ವಾ. (1ನೇ ವಾಕ್ಯದಲ್ಲಿ)	ಗಾಳಿ	....	....	....	ಬೀಸಿತು	....
ಬಿಸಿಲು ಬಂದಿತು ,, 2ನೇ ,,—ಕ್ರಿ. ವಿ. ವಾ.	ಬಿಸಲು	....	....	....	ಬಂದಿತು	....
(ಜನಗಳು) ಗಂಜಿಯನ್ನು ಕುಡಿಯುವುದು ನಾಮಾತ್ಮಕವಾಕ್ಯ (3ನೇ ವಾಕ್ಯದಲ್ಲಿ)	ಜನಗಳು	....	ಗಂಜಿಯನ್ನು	....	ಕುಡಿಯಬಹುದು	ಭಿಕ್ಷವೆತ್ತಿ
(ಜನಗಳು) ಸಾಲಮಾಡಬಾರದು ಕ್ರಿ. ವಿ. ವಾ. (3ನೇ ವಾಕ್ಯದಲ್ಲಿ)	ಜನಗಳು	....	ಸಾಲವನ್ನು	....	ಮಾಡಬಾರದು	
(ಜನಗಳು) ಮೃಷ್ಟಾನ್ನವನ್ನು ತಿನ್ನಬಾರದು ಕ್ರಿ ವಿ. ವಾ.	ಜನಗಳು	....	ಮೃಷ್ಟಾನ್ನವನ್ನು	....	ತಿನ್ನಬಾರದು	
ಭಿಕ್ಷವನ್ನು ಎತ್ತಬಹುದು. ಕ್ರಿ. ವಿ. ವಾ. (3ನೇ ವಾಕ್ಯದಲ್ಲಿ)	ಜನಗಳು	....	ಭಿಕ್ಷವನ್ನು	....	ಎತ್ತಬಹುದು	

ಈ ಕೆಳಗಣ ವಾಕ್ಯಗಳಲ್ಲಿ ಕ್ರಿಯಾ ವಿಶೇಷಣಾತ್ಮಕ ಅಧೀನ ವಾಕ್ಯಗಳನ್ನು ಕಂಡುಹಿಡಿದು ವಿಭಜನೆ ಮಾಡಿ:—

1. ಈ ವರ್ಷ ನೀನು ಸಾಲವನ್ನು ತೀರಿಸದಿದ್ದರೆ ಮುಂದೆ ತೀರುವುದಿಲ್ಲ.
2. ಓದುವಾಗ ಆಡಬಾರದು.
3. ನೀನು ಹಣಗಾರನಾಗಿರುವಾಗ ನಿನ್ನನ್ನು ಗೌರವಿಸುವ ಜನಗಳೇ ನೀನು ಬಡವನಾದಾಗ ನಿನ್ನನ್ನು ಹಾಸ್ಯಮಾಡುವರು.
4. ಐಶ್ವರ್ಯ ಹೆಚ್ಚಿದಷ್ಟೂ ಅಹಂಕಾರ ತಗ್ಗಬೇಕು.

120. ಕೆಲವು ಮಿಶ್ರವಾಕ್ಯಗಳಲ್ಲಿ ನಾಮಾತ್ಮಕ, ಗುಣಾತ್ಮಕ, ಕ್ರಿಯಾವಿಶೇಷಣಾತ್ಮಕ ವಾಕ್ಯಗಳು ಒಂದಕ್ಕೊಂದು ಸೇರಿ ಬರುವುದುಂಟು.

ಉದಾಹರಣೆ.

ನೀನು ಕಳುಹಿಸಿದ ಹಣವು ನನಗೆ ಸಕಾಲದಲ್ಲಿ ಬರಲಿಲ್ಲವೆಂದು ನಾನು ಕೇಳುತ್ತಿರುವಾಗಲೇ, ಗೋವಿಂದನು ನಿನ್ನನ್ನು ಕರೆದನು.

(a) ಇಲ್ಲಿ—ಗೋವಿಂದನು ನಿನ್ನನ್ನು ಕರೆದನು—ಎಂಬುದು ಪ್ರಧಾನ ವಾಕ್ಯ (Principle Sentence)

(b) ನಾನು ಕೇಳುತ್ತಿರುವಾಗಲೇ—ಎಂಬುದು ಕರೆದನು ಎಂಬ ಆಖ್ಯಾತವನ್ನು ವಿಶೇಷಿಸುವುದರಿಂದ ಕ್ರಿಯಾವಿಶೇಷಣಾತ್ಮಕ ಅಧೀನ ವಾಕ್ಯವಾಯಿತು.

(c) "ಹಣ ನನಗೆ ಸಕಾಲದಲ್ಲಿ ಬರಲಿಲ್ಲ ಎಂದು (ಎಂಬುದನ್ನು)" ಎಂಬುದು "ಕರೆದನು" ಎಂಬ ಕ್ರಿಯೆಗೆ ಕರ್ಮವಾಗಿರುವುದರಿಂದ ನಾಮಾತ್ಮಕ ವಾಕ್ಯವು.

(d) ನೀನು ಕಳುಹಿಸಿದ ಎಂಬುದು ಹಣ ಎಂಬ ನಾಮಪದಕ್ಕೆ ವಿಶೇಷಣವಾಗಿರುವುದರಿಂದ ಗುಣಾತ್ಮಕವಾಕ್ಯವು. (ಇ)

ಸಂಯೋಜಿತವಾಕ್ಯ. (Compound Sentence)

121. 1. ಧರ್ಮರಾಯನು ರಾಜಸೂಯಯಾಗವನ್ನು ಮಾಡಿದನು. 2. ಕೌರವರು ಬಂದಿದ್ದರು. 3. ಯಾಗ ನೆರವೇರಿತು. 4. ಧರ್ಮರಾಯನಿಗೆ ಕೀರ್ತಿಬಂದಿತು. 5. ಕೌರವರು ಕರುಬಿದರು. 6. ದುರ್ಜನರನ್ನು ಪುರಸ್ಕರಿಸಬಾರದು"—ಇಲ್ಲಿರುವ ವಾಕ್ಯಗಳೆಲ್ಲಾ ಸ್ವತಂತ್ರವಾಗಿಯೂ ಪೂರ್ಣಾರ್ಥವುಳ್ಳವುಗಳಾಗಿಯೂ ಇವೆ; ಆದರೆ ಇವುಗಳಿಗೆ ಪರಸ್ಪರಸಂಬಂಧ ಗೊತ್ತಾ

ಗದಿರುವುದರಿಂದ ಇವುಗಳ ಒಟ್ಟು ಅಭಿಪ್ರಾಯವೇನೋ ಗೊತ್ತಾಗುವುದಿಲ್ಲ. ಆದರಿಂದ ಈ ವಾಕ್ಯಗಳನ್ನು ಕೆಲವು ಶಬ್ದಗಳಿಂದ ಪರಸ್ಪರ ಕೂಡಿಸಿದರೆ ಒಂದು ಸಂಪೂರ್ಣಾಭಿಪ್ರಾಯ ಗೊತ್ತಾಗುವುದು. ಹೇಗೆಂದರೆ:—

ಧರ್ಮ........ಮಾಡಿದನು; ಆಗ ಕೌರ........ದ್ದರು; ಹೇಗೋ ಯಾಗ ನೆರವೇರಿತು; ಇದಕ್ಕಾಗಿ ಧರ್ಮ........ಬಂದಿತು; ಆದರೆ ಕೌರವರು ಕರುಬಿದರು; ಆದರಿಂದ ದುರ್ಜನರನ್ನು ಪುರಸ್ಕರಿಸಬಾರದು.

ಇದರಿಂದ ತಿಳಿಯುವುದೇನೆಂದರೆ:—

ಎರಡು ಅಥವಾ ಅನೇಕ ಸ್ವತಂತ್ರ ಅಥವಾ ಸರಿಸಮಾನವಾದ ವಾಕ್ಯಗಳು (Co-ordinate Sntences) ಸಂಯೋಜಕ ಶಬ್ದಗಳಿಂದ ಕೂಡಿಸಲ್ಪಟ್ಟು ಒಂದು ಸಂಪೂರ್ಣಾಭಿಪ್ರಾಯವುಳ್ಳ ವಾಕ್ಯವಾಗುವುದೇ ಸಂಯೋಜಿತ ವಾಕ್ಯವು.

2. ಈ ಕೆಳಗೆ ಹೇಳಲ್ಪಡುವ ಸಂಯೋಜಕ ಶಬ್ದಗಳಿಂದ ಪ್ರಾಯಶಃ ಸಂಯೋಜಿತ ವಾಕ್ಯಗಳುಂಟಾಗುವುವು. ಅವು ಯಾವುವೆಂದರೆ:—

(a) ಸಮುಚ್ಚಯಾರ್ಥಕ (Cumulative)—ಮತ್ತು, ಇನ್ನೂ, ಇದಲ್ಲದೆ, ಬಳಿಕ, ಕೂಡಲೆ, ಆಮೇಲೆ, ಒಡನೆ, ಈಚೆಗೆ. (ಇ)

(b) ವಿರೋಧಾರ್ಥಕ (Adversative)—ಆದರೆ, ಆದರೂ, ಈಗಲೂ, ಅಷ್ಟರಲ್ಲೇ, ಇಂತಾಗಿ.

(c) ಕರಣಾರ್ಥಕ (Illative)—ಆದರಿಂದ (ಆದ್ದರಿಂದ) ಆದುಕಾರಣ (ಆದಕಾರಣ), ಆದಕ್ಕಾಗಿ, ಏತಕ್ಕೆಂದರೆ, ಹೇಗೆಂದರೆ.

(d) ವಿಕಲ್ಪಾರ್ಥಕ (Alternative)—ಅಥವಾ, ಇಲ್ಲವೆ, ಅಲ್ಲದಿದ್ದರೆ, ಇಲ್ಲದಪಕ್ಷದಲ್ಲಿ, ಆಗದಿದ್ದರೆ. (ಇ)

122. ಸಂಯೋಜಿತವಾಕ್ಯಕ್ಕೆ ಸಂಬಂಧಪಟ್ಟ ಕೆಲವು ನಿಬಂಧನೆಗಳು.

.1 ಒಂದೇ ಕರ್ತೃವಿಗೆ ಅನೇಕ ಕ್ರಿಯೆಗಳಿದ್ದರೆ ಕರ್ತೃವನ್ನು ಒಂದು ಸಾರಿ ಮಾತ್ರವೇ ಹೇಳಬೇಕು. ಆದರೆ ವಾಕ್ಯವಿಭಜನೆಯಲ್ಲಿ ಆದೇ ಕರ್ತೃವನ್ನು ಪ್ರತಿಯೊಂದು ಕ್ರಿಯೆಗೂ ಸೇರಿಸಬೇಕು.

ಉದಾಹರಣೆ.

ಸಂಯೋಜಿತವಾಕ್ಯದಲ್ಲಿ—ರಾಮನು ಹುಟ್ಟಿದನು ಮತ್ತು ಬೆಳೆದನು. ಕೂಡಲೆ ವಿಶ್ವಾಮಿತ್ರನೊಡನೆ ಅಡವಿಗೆ ಹೋದನು. (ಇ)

ವಾಕ್ಯವಿಭಜನೆಯಲ್ಲಿ —ರಾಮನು ಹುಟ್ಟಿದನು. ರಾಮನು ಬೆಳೆದನು. ರಾಮನು........ಅಡವಿಗೆ ಹೋದನು. (ಎಂದು ಇರಬೇಕು.

2. ಅನೇಕ ಕರ್ತೃಗಳಿಗೆ ಒಂದೇ ಕ್ರಿಯೆ ಬರುವಾಗ ಕ್ರಿಯೆಯನ್ನು ಒಂದು ಸಾರಿ ಮಾತ್ರವೇ ಹೇಳಬೇಕು. ಆದರೆ ವಾಕ್ಯವಿಭಜನೆಯಲ್ಲಿ ಅದೇ ಕ್ರಿಯೆಯನ್ನೇ ಪ್ರತಿಯೊಂದು ಕರ್ತೃವಿಗೂ ಸೇರಿಸಬೇಕು.

ಉದಾಹರಣೆ.

ಸಂ॥ ವಾಕ್ಯದಲ್ಲಿ —(a) ನೀನೂ ನಾನೂ ಅವನೂ ಬಂದೆವು.

(b) ರಾಮನೂ, ಕೃಷ್ಣನೂ, ದೇವದತ್ತನೂ ಕಾಶೀಪಟ್ಟಣಕ್ಕೆ ಹೋದರು. (ಇದು)

ವಾಕ್ಯವಿಭಜನೆಯಲ್ಲಿ—(a) ನೀನು ಬಂದೆ, ನಾನು ಬಂದೆ, ಅವನೂ ಬಂದನು.

(b) ರಾಮನು ಕಾಶೀಪಟ್ಟಣಕ್ಕೆ ಹೋದನು. ಕೃಷ್ಣನು ಕಾಶೀಪಟ್ಟಣಕ್ಕೆ ಹೋದನು. ದೇವದತ್ತನು ಕಾಶೀಪಟ್ಟಣಕ್ಕೆ ಹೋದನು. (ಎಂದು ಇರಬೇಕು).

ಈ ಕೆಳಗಳ ಸಂಯೋಜಿತ ವಾಕ್ಯಗಳನ್ನು ವಿಭಜನೆಮಾಡಿ.

(1) ನೀನು ಇಂದು ಬರಬಹುದು ಅಥವಾ ನಾಳೆ.

(2) ಈ ಹುಡುಗನು ಬುದ್ಧಿಶಾಲಿ, ಆದರೆ ಸಹಾಯಕರಿಲ್ಲ, ಅದಕ್ಕಾಗಿ ನಮ್ಮ ಕೈಲಾದಷ್ಟು ಸಹಾಯ ಮಾಡೋಣ. ಆದರಮೇಲೆ ದೇವರು ಇದ್ದಾನೆ.

ಮೇಲಣ ಸಂಯೋಜಿತ ವಾಕ್ಯಗಳ ವಿಭಜನೆ.

ವಾಕ್ಯಗಳು	ಸಂಯೋಜಕ ಶಬ್ದಗಳು	ಕರ್ತೃ	ಕರ್ತೃ ವಿಶೇಷಣ	ಕರ್ಮ	ಕರ್ಮ ವಿಶೇಷಣ	ಕ್ರಿಯೆ	ಕ್ರಿಯಾ ವಿಶೇಷಣ
1ನೆಯ ವಾಕ್ಯದಲ್ಲಿ:—							
,, ನೀನು ಇಂದು ಬರಬಹುದು	....	ನೀನು	....	....	....	ಬರಬಹುದು	ಇಂದು
,, ನೀನು (ನಾಳೆ) ಬರಬಹುದು	ಅಥವಾ	ನೀನು	....	....	....	ಬರಬಹುದು	ನಾಳೆ
2ನೆಯ ವಾಕ್ಯದಲ್ಲಿ:—							
ಈ ಹುಡುಗನು ಬುದ್ಧಿಶಾಲಿ	....	ಈ ಹುಡುಗನು	ಬುದ್ಧಿಶಾಲಿ	....	....	(ಆಗಿದ್ದಾನೆ)	
,, ಸಹಾಯಕರಿಲ್ಲ	ಆದರೆ	ಸಹಾಯಕರು	....	....	....	ಇಲ್ಲ	
,, ನಮ್ಮ....ಡೋಣ	ಆದಕ್ಕಾಗಿ	ನಾವು	....	ಸಹಾಯವನ್ನು	ನಮ್ಮ ಕೈಯಲ್ಲಾದಷ್ಟನ್ನು	ಮಾಡೋಣ	
,, ದೇವರು ಇದ್ದಾನೆ	ಆದರಮೇಲೆ	ದೇವರು	....	....	....	ಇದ್ದಾನೆ	

ಈ ಕೆಳಗಣ ವಾಕ್ಯಗಳು ಯಾವ ಯಾವ ಅರ್ಥವುಳ್ಳ ಸಂಯೋಜಕ ಶಬ್ದಗಳಿಂದ ಕೂಡಿಸಲ್ಪಟ್ಟವೆ ?

1. ನಾನು ಅದನ್ನು ಇದುವರೆಗೆ ಯೋಚಿಸಿಲ್ಲ; ಮುಂದೆ ಯೋಚಿಸುವುದೂ ಇಲ್ಲ. 2. ಅವನು ಹಿರಿಯರನ್ನು ದೂಷಿಸಿದನು; ಆದರೆ ಅವರಿಗೆ ಕೊರತೆಯಿಲ್ಲ. ಆದಕ್ಕಾಗಿ ಇವನೇ ಕೆಟ್ಟವನೆನಿಸಿಕೊಂಡನು. 3. ಆತನು ಮತ್ತು ನಾನು ಈಗತಾನೆ ಊರಿಂದ ಬಂದೆವು. 4. ಅದನ್ನು ನೀನೇ ಕದ್ದಿರಬೇಕು. ಏಕೆಂದರೆ, ನೀನು ಹೊರತು ಇನ್ನು ಯಾರೂ ಇಲ್ಲಿಗೆ ಬರಲಿಲ್ಲ. 5. ಆತನು ವಿದ್ಯಾವಂತನು; ಆದರಿಂದ ಆತನ ಮಾತಿನಲ್ಲಿ ಎಲ್ಲರಿಗೂ ಪಥ್ಯವುಂಟು.

XIII ರೂಪನಿಷ್ಪತ್ತಿ. (Parsing)

123. ಇದುವರೆಗೆ ಹೇಳಲ್ಪಟ್ಟ ಶಬ್ದಗಳು ಒಂದು ವಾಕ್ಯದಲ್ಲಿ ಬಂದಾಗ ಅವುಗಳ ಸ್ವಭಾವವು ಇಂಥದು, ಇಂಥ ಪ್ರಯೋಜನಕ್ಕಾಗಿ ಇವು ಬಂದಿವೆ, ಎಂಬುದನ್ನು ತಿಳಿಸತಕ್ಕದು ಆವಶ್ಯಕವೆಂದು ತೋರುವುದು.

ಆದರಿಂದ

ಸೂ॥ ವಾಕ್ಯದಲ್ಲಿರುವ ಶಬ್ದ ವಿಭಾಗಗಳ ವಿವರಣೆಯನ್ನೂ ಅವುಗಳ ಕಾರ್ಯ ಅಥವಾ ಪ್ರಯೋಜನ (Construction) ವನ್ನೂ ತಿಳಿಸುವುದು ರೂಪನಿಷ್ಪತ್ತಿಯೆನಿಸುವುದು.

ಉದಾಹರಣೆ.

(1) ಬುದ್ಧಿಶಾಲಿಯಾದ ಅರಸನು ತನ್ನ ರಾಜ್ಯವನ್ನು ಮಂತ್ರಿಗಳ ಆಲೋಚನೆಯನ್ನು ಕೇಳುತ್ತಾ ಆಳುವನು.

(2) ಯಾಚಕನು ಒಬ್ಬ ದಾನಿಯನ್ನು ವಿನಯವಾಗಿ ಹಣವನ್ನು ಕೇಳಿದನು. ಆದರೆ, ಅದು ಅವನಲ್ಲಿರಲಿಲ್ಲ.

(3) ರಾಮನೆ ಬೇಗಬಾ; ಭಲಾ! ಎಷ್ಟೋ ಬುದ್ಧಿವಂತ, ಓಹೋ ನಿಲ್ಲು.

1ನೆಯ ವಾಕ್ಯಕ್ಕೆ—ಬುದ್ಧಿಶಾಲಿ - ಗುಣವಾಚಕ. ಅರಸನು ಎಂಬುದಕ್ಕೆ ವಿಶೇಷಣವಾಗಿದೆ.

ಆದ—ಕಾರಕಕೃದಂತ "ಆಗು" ಧಾತು "ಅ" ಪ್ರತ್ಯಯ "ಬುದ್ಧಿಶಾಲಿ, " ಅರಸನು" ಎಂಬ ಪದಗಳನ್ನು ಜೋಡಿಸುತ್ತದೆ. (*61 ಟ 2)"

ಅರಸನು—ನಾಮಪದ, ರೂಢನಾಮ, ಅಕಾರಾಂತ, ಪು. ಪ್ರ. ವಿ. ಏ. ವ. ಆಳುವನು ಎಂಬ ಕ್ರಿಯೆಗೆ ಕರ್ತೃ.

ತನ್ನ—ಸರ್ವನಾಮ. ಪುರುಷತ್ರಯಾರ್ಥಕ ಪ್ರ. ಪು. ಪುಲ್ಲಿಂಗ ಷ. ವಿ. ಏ. ವ. ರಾಜ್ಯಕ್ಕೂ ಅರಸನಿಗೂ ಇರುವ ಸಂಬಂಧವನ್ನು ತಿಳಿಸುತ್ತದೆ.

ರಾಜ್ಯವನ್ನು—ನಾಮಪದ, ರೂಢನಾಮ, ಅಕಾರಾಂತ, ನಪುಂ. ದ್ವಿ. ವಿ. ಏಕವ. ಆಳುವನು ಎಂಬ ಕ್ರಿಯಗೆ ಕರ್ಮಪದವಾಗಿದೆ.

ಮಂತ್ರಿಗಳ—ನಾಮಪದ, ಅನ್ವರ್ಥನಾಮ,ಪುಲ್ಲಿಂಗ ಷ ವಿ. ಬ. ವ. ಆಲೋಚನೆ ಯೆಂಬುದರಲ್ಲಿ ಅನ್ವಯಿಸಲ್ಪಡುತ್ತೆ.

ಆಲೋಚನೆಯನ್ನು—ನಾಮಪದ, ಭಾ. ನಾ. ಎಕಾರಾಂತ, ನಪುಂ, ದ್ವಿವಿ. ಏ. ವ. ಕೇಳುತ್ತಾ ಎಂಬ ಅಪೂರ್ಣಕ್ರಿಯೆಗೆ ಕರ್ಮವಾಗಿದೆ.

ಕೇಳುತ್ತಾ—ಅವ್ಯಯ ಕೃದಂತ, ಸಮಾನ ಕರ್ತೃಕ ಕೇಳು, ಧಾತು, ಉತ್ತಾ - ಪ್ರತ್ಯಯ, ವರ್ತಮಾನ, ಕೇಳುವನು ಎಂಬ ಪೂರ್ಣಕ್ರಿಯೆಯಲ್ಲಿ ಅನ್ವಯಿಸಲ್ಪಡುತ್ತದೆ.

2ನೆಯ ವಾಕ್ಯಕ್ಕೆ—ಯಾಚಕನು ನಾಮಪದ, ಅನ್ವರ್ಥನಾಮ, ಅಕಾರಾಂತ, ಪುಲ್ಲಿಂಗ, ಪ್ರ. ವಿ. ಏ. ವ. ಕೇಳಿದನು ಎಂಬ ಕ್ರಿಯೆಗೆ ಕರ್ತೃವಾಗಿದೆ.

ಒಬ್ಬ—ಸಂಖ್ಯೇಯವಾಚಕ, ಪುಲ್ಲಿಂಗ ಏಕವಚನ, ದಾನಿ ಎಂಬುದಕ್ಕೆ ವಿಶೇಷಣವಾಗಿದೆ.

ದಾನಿಯನ್ನು—ನಾಮವಾಚಕ, ಅನ್ವರ್ಥನಾಮ, ಇಕಾರಾಂತ, ಪು. ದ್ವಿ. ವಿ. ಏ. ವ. ಕೇಳಿದನು ಯೆಂಬ ಕ್ರಿಯೆಗೆ ಅಮುಖ್ಯ ಕರ್ಮವಾಗಿದೆ.

ವಿನಯವಾಗಿ—ಕೇಳಿದನು ಎಂಬ ಕ್ರಿಯೆಗೆ ವಿಶೇಷಣವಾಗಿದೆ.

ಹಣವನ್ನು—ನಾಮಪದ, ರೂಢನಾಮ, ಅಕಾರಾಂತ, ನ. ಲಿಂಗ, ದ್ವಿ ವಿ. ಏಕವಚನ. ಕೇಳಿದನು ಎಂಬ ಕ್ರಿಯೆಗೆ ಮುಖ್ಯ ಕರ್ಮವಾಗಿದೆ.

ಕೇಳಿದನು—ಕ್ರಿಯಾಪದ, ಕರ್ತ್ರರ್ಥಕ, ದ್ವಿಕರ್ಮಕ ಪ್ರಯೋಗ, ಕೇಳು-ಧಾತು, ಪ್ರ. ಪು. ಪುಲ್ಲಿಂಗ, ಏ. ವ. ಭೂತರೂಪ, ಯಾಚಕನು ಎಂಬುದಕ್ಕೆ ಕ್ರಿಯೆಯಾಗಿದೆ.

ಆದರೆ—ಅವ್ಯಯ, ವಿರೋಧಾರ್ಥಕ, ಯಾಚಕನು....ಕೇಳಿದನು ಮತ್ತು ಅದು....ಲಿಲ್ಲ ಎಂಬ ಎರಡು ವಾಕ್ಯಗಳನ್ನೂ ಜೋಡಿಸುತ್ತದೆ.

ಅದು—ಸರ್ವನಾಮ ಉಕಾರಾಂತ, ಪ್ರ, ಪು,॥ ನ। ಲಿಂ॥ ಏಕವ॥ ಇರಲಿಲ್ಲ ಎಂಬ ಕ್ರಿಯೆಗೆ ಕರ್ತೃವಾಗಿದೆ.

ಅವನಲ್ಲಿ—ಸರ್ವನಾಮ, ಅಕಾರಾಂತ, ಪುಲ್ಲಿಂಗ, ಸ। ವಿ॥ ಏ, ವ॥ ಇರಲಿಲ್ಲ ಎಂಬ ಕ್ರಿಯೆಯನ್ನು ವಿಶೇಷಿಸುತ್ತದೆ.

ಇರಲಿಲ್ಲ—ಕ್ರಿಯಾಪದ, ಇರು ಧಾತು, ನಿಷೇಧಾರ್ಥಕ, ಭೂತಕಾಲ, ಅದು ಎಂಬುದಕ್ಕೆ ಕ್ರಿಯೆಯಾಗಿದೆ.

3ನೆಯ ವಾಕ್ಯಕ್ಕೆ—ರಾಮನೇ - ನಾಮವಾಚಕ ಅಂಕಿತನಾಮ, ಪುಲ್ಲಿಂಗ, ಸಂಬೋಧನೆ, ಏಕವಚನ, ಪ್ಲುತ ದೂರದಲ್ಲಿರುವವನನ್ನು ಕರೆಯುವುದರಲ್ಲಿ ಬರುವುದು.

ಬೇಗ—ಅವ್ಯಯ, ರೀತಿವಾಚಕ, ಬಾ ಎಂಬ ಕ್ರಿಯೆಗೆ ವಿಶೇಷಣವಾಗಿದೆ.

ಬಾ—ಕ್ರಿಯಾಪದ, ಕರ್ತ್ರರ್ಥಕ, ಬರು ಧಾತು, ಮಧ್ಯ। ಪು॥ ಏ। ವ॥ ನೀನು ಎಂಬ ಕರ್ತೃ (ಅಧ್ಯಾಹಾರ) ವಿಗೆ ಕ್ರಿಯೆಯಾಗಿದೆ.

ಭಲಾ—ನಿಪಾತಾವ್ಯಯ ನಿಂದೆಯನ್ನು ಸೂಚಿಸುತ್ತದೆ. ಬುದ್ಧಿವಂತನು (ಆಗಿದ್ದೀಯೆ) ಎಂಬುದರಲ್ಲಿ ಅನ್ವಯಿಸಲ್ಪಡುತ್ತದೆ.

ಎಷ್ಟೋ—ಎಂಬುದು ಪರಿಮಾಣವಾಚಕ, ಓ ಎಂಬುದು ಹೆಚ್ಚು ಎಂಬ ಅರ್ಥವನ್ನು ಕೊಡುವ ನಿಪಾತಾವ್ಯಯ. ಬುದ್ಧಿವಂತ ಎಂಬುದನ್ನು ವಿಶೇಷಿಸುತ್ತದೆ. ಭಲಾ ಎಂಬುದು ನಿಪಾತಾವ್ಯಯವಾದ್ದರಿಂದ ಅದರ ಮುಂದೆ ಸ್ವರಕ್ಕೆ ಸಂಧಿಕಾರ್ಯವಿಲ್ಲ.

ಬುದ್ಧಿವಂತ—ಗುಣವಾಚಕ, ನೀನು (ಅಧ್ಯಾಹಾರ) ಎಂಬುದನ್ನು ವಿಶೇಷಿಸುತ್ತದೆ. ಇದರ ಮುಂದೆ ಆಗಿದ್ದೀಯೆ ಎಂಬ ಪದ ಅಧ್ಯಾಹಾರವಾಗಿ ಇದು ಕ್ರಿಯಾರ್ಥವನ್ನು ಕೊಡುತ್ತದೆ.

ಓಹೋ—ನಿಪಾತಾವ್ಯಯ, ತಡೆಯನ್ನು ಸೂಚಿಸುತ್ತದೆ. ನಿಲ್ಲು ಎಂಬ ಕ್ರಿಯೆಯಲ್ಲಿ ಅನ್ವಯ.

ನಿಲ್ಲು—ಕ್ರಿಯಾಪದ, ನಿಲ್ಲು ಧಾತು, ಮಧ್ಯ। ಪು। ಏ। ವ॥ ನೀನು (ಅಧ್ಯಾಹಾರ) ಎಂಬ ಕರ್ತೃವಿಗೆ ಕ್ರಿಯೆಯಾಗಿದೆ. (ಇ)

XIV ಛಂದಸ್ಸು.

124. ಇದುವರೆಗೆ ಈ ಗ್ರಂಥದಲ್ಲಿ ಹೇಳಿದ ವ್ಯಾಕರಣಶಾಸ್ತ್ರದ ನಿಯಮಗಳಿಂದ ತಪ್ಪಿಲ್ಲದೆ ಮಾತನಾಡುವುದಕ್ಕೂ ವಾಕ್ಯರೂಪವಾದ ಪ್ರಬಂಧವನ್ನು ಬರೆಯುವುದಕ್ಕೂ ತಕ್ಕಮಟ್ಟಿಗೆ ಅನುಕೂಲವಾಗಬಹುದು. ಆದರೆ ಪದ್ಯರಚನಾ ವಿಷಯಕ್ಕೆ ಮುಖ್ಯವಾಗಿ ಛಂದಶ್ಶಾಸ್ತ್ರದ ನಿಯಮಗಳಲ್ಲಿ ಪರಿಚಯವಿರಬೇಕು. ಬಾಲಕರು ತಮ್ಮ ಪರೀಕ್ಷಾಗ್ರಂಥಗಳಲ್ಲಿ ಅನೇಕ ವಿಧವಾದ ಪದ್ಯಗಳನ್ನು ಓದಬೇಕಾದೀತು. ಪದ್ಯಗಳ ಸ್ವರೂಪಗಳೇ ತಿಳಿಯದೆ ಅವುಗಳನ್ನೋದುವುದರಿಂದ ಸಾಕಾದಷ್ಟು ಪ್ರಯೋಜನ ದೊರೆಯಿತೆಂದು ಹೇಳಲಾಗುವುದಿಲ್ಲ. ಹೇಗೆಂದರೆ:—

ನಾವು ಪದ್ಯಗಳನ್ನೋದುವಾಗ ಅವು ನಾನಾ ತರವಾಗಿ (ಅಂದರೆ) ಕೆಲವು ಉದ್ದವಾಗಿಯೂ ಕೆಲವು ಚಿಕ್ಕವಾಗಿಯೂ ಕೆಲವು ಇನ್ನೂ ಏನೇನೋ ವಿಧವಾಗಿಯೂ ಕಾಣುತ್ತವೆ. ಅವುಗಳಲ್ಲಿ ಹಾಗೆ ವ್ಯತ್ಯಾಸ ಬರಲು ಕಾರಣವೇನೆಂಬುದೇ ನಾವು ತಿಳಿಯಬೇಕಾದ ವಿಷಯಗಳಲ್ಲಿ ಮುಖ್ಯಾಂಶವಾಗಿರುವುದು. ಅದನ್ನು ತಿಳಿಯಲಿಕ್ಕೆ ಸಾಧನಭೂತವಾದುದು ಪ್ರಕೃತದಲ್ಲಿ ಛಂದಶ್ಶಾಸ್ತ್ರವೊಂದೇ.—ಆದುದರಿಂದ,

ಸೂ॥ ಪದ್ಯಗಳನ್ನು ರಚಿಸುವ ಕ್ರಮವನ್ನು, ಅಥವಾ ಕವಿಗಳಿಂದ ರಚಿಸಲ್ಪಟ್ಟಿರುವ ಪದ್ಯರಚನಾಕ್ರಮವನ್ನು ತಿಳಿಸುವುದಕ್ಕೆ ಛಂದಶ್ಶಾಸ್ತ್ರವೆಂದು ಹೆಸರು.

125. ಛಂದಶ್ಶಾಸ್ತ್ರದಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಷಯಗಳು:—ಗುರು, ಲಘು, ಮಾತ್ರೆ, ಗಣ, ಗದ್ಯ, ಪದ್ಯ, ಪಾದ, ಪ್ರಾಸ, ಪ್ರಸ್ತಾರ ಎಂಬ 9 ವಿಷಯಗಳು.—

ಇವುಗಳ ವಿವರವು ಹೇಗೆಂದರೆ—

(1) ಗುರು—ದೀರ್ಘಾಕ್ಷರ, ಒತ್ತಕ್ಷರ (*10) ದ ಹಿಂದಣ ಹ್ರಸ್ವಾಕ್ಷರ, ವಿಸರ್ಗದಿಂದ ಕೂಡಿದ ಅಕ್ಷರ, ಅನುಸ್ವಾರದಿಂದ ಕೂಡಿದ ಅಕ್ಷರ ಇವು ಗುರು ಸಂಜ್ಞಾಕ್ಷರಗಳು.

(2) ಲಘು—ಇವುಗಳಲ್ಲದ (ಸ್ವರವ್ಯಂಜನ ಭೇದವಿಲ್ಲದೆ) ಎಲ್ಲಾ ಹ್ರಸ್ವಾಕ್ಷರಗಳೂ ಲಘುಗಳೆನಿಸುವುವು.

ಉದಾಹರಣೆ.

ಗುರುಸಂಜ್ಞಾಕ್ಷರಗಳು—ದೀರ್ಘಕ್ಕೆ—ಬಾಲಾ, ಶಾಲಾ, ಲೀಲಾ, ಆ, ಈ.
ಒತ್ತಕ್ಷರಕ್ಕೆ—ತನ್ನ, ನಿತ್ಯ, ವಿಶ್ವ, ತತ್ವ (ಇವುಗಳಲ್ಲಿ ಮೊದಲಕ್ಷರಗಳಾದ ತ, ನಿ, ವಿ, ತ ಎಂಬುವುಗಳು ಗುರುಗಳು. ಎರಡನೇ ಅಕ್ಷರಗಳು ನ್ನ, ತ್ಯ, ಶ್ವ, ತ್ವ ಎಂಬುವು ಲಘುಗಳು.
ಬಿಂದುಗೆ—ಬಂದಂ, ಬಿಂಬಂ. (ಇಲ್ಲಿ ಸೊನ್ನೆ ಯಿಂದ ಕೂಡಿದ 4 ಅಕ್ಷರಗಳೂ ಗುರುಗಳು.
ವಿಸರ್ಗಕ್ಕೆ—ಮನಃ, ತಪಃ, ಜ್ಯೋತಿಃ (ಇಲ್ಲಿ ನಃ, ಪಃ, ತಿಃ ಎಂಬವು ಗುರುಗಳು.
ಲಘು ,, —ಅ, ಉ, ನ, ಯ, ನ, ಸ, ಮ, ಯ. (ಇವೆಲ್ಲಾ ಲಘುಗಳು.

ಈ ಶಾಸ್ತ್ರದಲ್ಲಿ ಗುರುವನ್ನು (◡) ಈ ಗುರ್ತಿನಿಂದಲೂ, ಲಘುವನ್ನು (-) ಈ ಗುರ್ತಿನಿಂದಲೂ ತೋರಿಸಲಾಗಿದೆ.

(3) ಮಾತ್ರೆ—ಒಂದು ಹ್ರಸ್ವವನ್ನು ಉಚ್ಚರಿಸುವಷ್ಟು ಕಾಲವು ಮಾತ್ರೆ ಯೆನಿಸುವುದು. ಲಘ್ವಕ್ಷರಗಳೆಲ್ಲಾ ಒಂದು ಮಾತ್ರೆಯ ಅಕ್ಷರಗಳು (ತ, ನ, ಮ, ಇ, ಉ)
ಗುರು ಅಕ್ಷರಗಳೆಲ್ಲಾ ಎರಡು ಮಾತ್ರೆಯ ಅಕ್ಷರಗಳು (ಶಾ, ಕಂ, ಕಃ, ನತ್)
ಪ್ಲುತೋಚ್ಚಾರಣೆಯುಳ್ಳ ಅಕ್ಷರವನ್ನೂ ಛಂದಸ್ಸಿನಲ್ಲಿ ಗುರುವೆಂದೇ ಎಣಿಸಬೇಕು.

(4) ಗಣವೆಂದರೆ—ಕೆಲವು ವರ್ಣಗಳ ಅಥವಾ ಮಾತ್ರೆಗಳ ಸಮುದಾಯವು. ಗಣಗಳಲ್ಲಿ ಅಕ್ಷರಗಣವೆಂದೂ ಮಾತ್ರಾಗಣವೆಂದೂ ಎರಡುವಿಧವು.

(a) ಅಕ್ಷರ ಸಂಖ್ಯೆಯಿಂದೆಣಿಸುವುದೇ ಅಕ್ಷರಗಣ. ಇದು ಗುರು ಲಘು ಭೇದವಿಲ್ಲದೆ ಮೂರು ಮೂರಕ್ಷರಗಳಿಗೆ ಒಂದೊಂದು ಗಣವಾಗಿ ಸಂಸ್ಕೃತದಲ್ಲಿ ಬರುವ ಉಕ್ತಾ, ಅತ್ಯುಕ್ತಾದಿ ಛಂದಸ್ಸುಗಳಿಂದ ಹುಟ್ಟಿದ ಸಮಪಾದ ವೃತ್ತಗಳಲ್ಲಿ "ಮ ಯ ರ ಸ ತ ಜ ಭ ನ" ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವುದು.

(b) ಮಾತ್ರೆಗಳ ಸಂಖ್ಯೆಯಿಂದೆಣಿಸಲ್ಪಡುವುದು ಮಾತ್ರಾಗಣವು. ಇದು 3, 4, 5 ಮಾತ್ರೆಗಳು ಕ್ರಮವಾಗಿ ಉಳ್ಳ ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಎಂಬ ಹೆಸರುಗಳಿಂದ ಕಂದ, ಆರ್ಯೆ, ದ್ವಿಪದಿ, ತ್ರಿಪದಿ, ಷಟ್ಪದಿ, ರಗಳೆ, ಸಾಂಗತ್ಯ ಮೊದಲಾದ ಪದ್ಯಗಳಲ್ಲಿ ಪ್ರಸಿದ್ಧವಾಗಿರುವುದು. ವಿಷ್ಣುಗಣಕ್ಕೆ 5 ಮಾತ್ರೆ. ರುದ್ರಗಣಕ್ಕೆ 6 ಮಾತ್ರೆಯು ಕೆಲವುಕಡೆ ಬರುವುದುಂಟು.

"ಯ ಮಾ ತಾ, ರಾ ಜ, ಭಾ ನ, ಸ ಲ ಗಂ" ಎಂಬೀ ಅಕ್ಷರ ಸಮುದಾಯದಲ್ಲಿ ಮೊದಲಿಂದ ಒಂದೊಂದಕ್ಷರವನ್ನು ಹಿಂದು ಹಿಂದಕ್ಕೆ ಬಿಡುತ್ತಾ ಹೋಗಲು ಮೂರು ಮೂರಕ್ಷರಗಳಿಗೆ ಒಂದೊಂದು ಗಣವಾಗಿ ಆ ಗಣವು ಯಾವ ಅಕ್ಷರದಿಂದ ಮೊದಲಾಗುವುದೋ ಅದೇ ಅಕ್ಷರದ ಹೆಸರಿನ ಗಣವಾಗುವುದು.

ಯಮಾತಾ = ಯಗಣ	ರಾಜಭಾ = ರಗಣ	ನಸಲ = ನಗಣ
ಮಾತಾರಾ = ಮಗಣ	ಜಭಾನ = ಜಗಣ	ಸಲಗಂ = ಸಗಣ
ತಾರಾಜ = ತಗಣ	ಭಾನಸ = ಭಗಣ	

ಇದಲ್ಲದೆ—ಕಂ॥ ಯ, ರ, ತ, ಗಣಂಗಳ ನೆರೆ ಲಘು ।
ವಿರೆ, ಮೊದಲೊಳು ನಡುವೆ ತುದಿ ಯೊಳಾಕ್ರಮದಿಂದಂ ॥
ಗುರುವಿರೆ ಭ, ಜ, ಸ ಗಣಂಗಳ ।
ನೆರೆವುದು ಮ, ನ, ಗಣದೆ ಪೂರ್ಣಗುರು ಲಘುವಿರ್ಕುಂ ॥ ೧ ॥

ಇದಲ್ಲದೆ—ಕಂ॥ "ಗುರು ಲಘು ಮೂರಿರೆ ಮನಗಣ ।
ಗುರು ಲಘು ಮೊದಲಲ್ಲಿ ಬರಲು ಭಯ ಗಣ ಮಕ್ಕುಂ ॥
ಗುರು ಲಘು ನಡುವಿರೆ ಜರಗಣ ।
ಗುರು ಲಘು ಕಡೆಯಲ್ಲಿ ಬರಲು ಸತಗಣಮಕ್ಕುಂ" ॥ ೨ ॥

ಈ ಪದ್ಯಗಳಲ್ಲಿ ಹೇಳಿರುವಂತೆ ಭಗಣದಲ್ಲಿ ಆದಿಗುರು—ಭಾಮಿನಿ
– ∪ ∪
ಯ ,, ಆದಿಲಘು—ಕವಾಟಂ
∪ – –
ಜ ,, ಮಧ್ಯಗುರು—ಸಮಾಧಿ
∪ – ∪
ರ ,, ಮಧ್ಯಲಘು—ಅಂಗಳಂ
– ∪ –

ಸ ,, ಅಂತ್ಯಗುರು—ಸಮಯಂ

– – ∪

ತ ,, ಅಂತ್ಯಲಘು—ಸಾಮಾನ್ಯ

∪ ∪ –

ಮ ,, ಸರ್ವಗುರು—ಸನ್ಮಾನಂ

∪ ∪ ∪

ನ ,, ಸರ್ವಲಘು—ನಯನ

– – –

5. ಗದ್ಯವೆಂದರೆ—ಪದ್ಯರೂಪವಲ್ಲದ (ಛಂದಶ್ಶಾಸ್ತ್ರ ನಿಯಮಗಳಿಗೆ ಒಳಪಡದಿರುವ) ಮತ್ತು ಯಾವುದಾದರೊಂದು ವಿಷಯವನ್ನು ವಿವರಿಸುವುದಕ್ಕಾಗಿ ಪರಸ್ಪರ ಸಂಬಂಧದಿಂದ ಪೂರ್ವೋತ್ತರ ಸಂದರ್ಭಗಳನ್ನನುಸರಿಸಿ ಹೇಳಿರುವ ವಾಕ್ಯಸಮುದಾಯವು. ಇದನ್ನು ವಾಕ್ಯ ಅಥವಾ ವಚನಗ್ರಂಥವೆಂದೂ ಆದು ಸ್ವಲ್ಪವಾಗಿದ್ದರೆ ಪ್ರಬಂಧವೆಂದೂ ಹೇಳುವರು.

ಉದಾಹರಣೆ.

ರಾಮನು ವಿಷ್ಣುವಿನ ಅಂಶದವನು. ಭೂಲೋಕದಲ್ಲಿ ರಾವಣ ಕುಂಭಕರ್ಣಾದಿ ರಾಕ್ಷಸರ ಬಾಧೆಯನ್ನು ದೇವತೆಗಳು ತಡೆಯಲಾರದೆ, ವಿಷ್ಣುವಿನ ಬಳಿಗೆ ಹೋಗಿ ಮೊರೆಯಿಡಲು ಆತನು ಭೂಲೋಕದಲ್ಲಿ ಮನುಷ್ಯರೂಪದಿಂದ ಅವತಾರಮಾಡಿ, ಪಿತೃವಾಕ್ಯ ಪರಿಪಾಲನೆಯ ನೆವದಿಂದ ಕಾಡಿಗೆ ಹೋಗಿ, ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದನೆಂಬ ನೆವದಿಂದ ಲಂಕಾಪಟ್ಟಣಕ್ಕೆ ಕಪಿಸೈನ್ಯದೊಡನೆ ಹೋಗಿ, ಲೋಕಕಂಟಕರಾದ ರಾಕ್ಷಸರನ್ನು ಸಂಹಾರ ಮಾಡಿದನು.

ಇದರಲ್ಲಿ ಅನೇಕ ವಾಕ್ಯಗಳು ಸೇರಿ ಒಂದು ವಿಷಯವನ್ನು ಹೇಳಿರುವುದರಿಂದ ಪ್ರಬಂಧವೆನಿಸಿತು. ಇದನ್ನೇ ವಿಸ್ತರಿಸಿ ಹೇಳಿದರೆ ಗದ್ಯವೆನಿಸುವುದು.

6. ಪದ್ಯವೆಂದರೆ—ಛಂದಶ್ಶಾಸ್ತ್ರದಲ್ಲಿ ಹೇಳಿರುವ ಯತಿ (1), ಗಣ, ಪ್ರಾಸ, ಪಾದ ಮಾತ್ರೆ ಮೊದಲಾದ ನಿಯಮಗಳಿಗೊಳಪಟ್ಟು ಒಂದು ವಿಷಯವನ್ನು ಹೇಳುವ ಪದಗಳ ಅಥವಾ ವಾಕ್ಯಗಳ ಸಮುದಾಯವು.

---

(1) ಕನ್ನಡಭಾಷೆಯಲ್ಲಿ ಯತಿ ನಿಯಮವಿಲ್ಲ.

ಪದ್ಯಗಳಲ್ಲಿ ಸಮಪಾದ (1) ವೃತ್ತ (ಪದ್ಯ) ಗಳೆಂದೂ ವಿಷಮಪಾದ (2) ವೃತ್ತಗಳೆಂದೂ ಎರಡು ವಿಧವು. ಸಮಪಾದ ವೃತ್ತಗಳಲ್ಲಿ ಪ್ರತಿಯೊಂದು ಪದ್ಯಕ್ಕೂ ನಾಲ್ಕು ನಾಲ್ಕು ಪಾದಗಳುಂಟು. ವಿಷಮಪಾದ ವೃತ್ತಗಳಲ್ಲಿ ದ್ವಿಪದಿ(3) ತ್ರಿಪದಿ, ಚತುಷ್ಪದಿ, ಷಟ್ಪದಿ ಮೊದಲಾದ ಅನೇಕ ಪದ್ಯಗಳುಂಟು.

7. ಪಾದವೆಂದರೆ—ಪದ್ಯದ ಪ್ರತಿಯೊಂದು ಪಂಙ್ತಿಯೂ ಒಂದೊಂದು ಪಾದವೆನಿಸುವುದು.

ಸಮಪಾದ ವೃತ್ತಗಳಲ್ಲಿ ಒಂದು ಪಾದದಲ್ಲಿರುವಂತೆಯೇ ಇತರ 3 ಪಾದಗಳಲ್ಲಿ ಒಂದೇ ಕ್ರಮವಾದ ಗಣವಿನ್ಯಾಸವಿರುವುದು. ವಿಷಮಪಾದ ವೃತ್ತಗಳಲ್ಲಿ ವ್ಯತ್ಯಾಸವುಂಟು.

ಉದಾಹರಣೆ.

ಸಮಪಾದ ವೃತ್ತ (ಪದ್ಯ) ಕ್ಕೆ ವಸಂತತಿಲಕಾ ವೃತ್ತಂ :—

ಶ್ರೀ ರಾ ಘ ವಂ ದ ಶ ರ ಥಾ ತ್ಮ ಜ ಮ ಪ್ರ ಮೇ ಯಂ
ᑌ ᑌ - | ᑌ - - | - ᑌ - | - ᑌ - | ᑌ ᑌ
ಸೀ ತಾ ಪ ತಿಂ ರ ಘು ಕು ಲಾ ನ್ವ ಯ ರ ತ್ನ ದೀ ಪಂ
ᑌ ᑌ - | ᑌ - - | - ᑌ - | - ᑌ - | ᑌ ᑌ
ಆ ಜಾ ನು ಬಾ ಹು ಮ ರ ವಿಂ ದ ದ ಳಾ ಯ ತಾ ಕ್ಷಂ
ᑌ ᑌ - ᑌ - - | - ᑌ - | - ᑌ - | ᑌ ᑌ
ರಾ ಮಂ ನಿ ಶಾ ಚ ರ ವಿ ನಾ ಶ ಕ ರಂ ನ ಮಾ ಮಿ ।
ᑌ ᑌ - | ᑌ - - | - ᑌ - | - ᑌ - | ᑌ ᑌ |

ಈ ಪದ್ಯದಲ್ಲಿ ನಾಲ್ಕು ಪಾದಗಳಿವೆ. ಪ್ರತಿಯೊಂದು ಪಾದದಲ್ಲಿಯೂ ತಗಣ, ಭಗಣ, ಜಗಣ, ಜಗಣ ಮತ್ತು 2 ಗುರುಗಳಿಂದ 14 ಅಕ್ಷರಗಳುಳ್ಳ ಪದ್ಯವಾಗಿರುವುದರಿಂದ ಸಮಪಾದ ವೃತ್ತವಾಯಿತು.

ವಿಷಮಪಾದ ವೃತ್ತಕ್ಕೆ—ಕಂದಪದ್ಯ :—

ಶಾ ರ ದೆ ಸ ದ ಮ ಲ ವಿ ದ್ಯಾ । ಸಾ ರ ದೆ ನೀ ರೇ ಜ ಪೀ ಠ ಮು ಖ
ᑌ - - | - - - - | ᑌ ᑌ | ᑌ - - | ᑌ ᑌ - | ᑌ - | - -
ಪೀ ಠೆ ಶ ರ ।
ᑌ | - - ᑌ

---

(1) ಎಲ್ಲಾ ಪಾದಗಳಲ್ಲಿಯೂ ಒಂದೇ ಸಂಖ್ಯೆಯ ಗಣಗಳಿರುವುದು. (2) ಒಂದು ಪಾದಕ್ಕೂ ಇನ್ನೊಂದು ಪಾದಕ್ಕೂ ಗಣ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದು. (3) ಎರಡು ಪಾದಗಳುಳ್ಳ ಪದ್ಯವು. ಹೀಗೆಯೇ ತ್ರಿಪದಿ ಮೊದಲಾದುವು.

ನ್ನೀ ರ ದ ಹೀ ರ ಪ ಟೀ ರ್ಕ ತು । ಷಾ ರೋ ಪ ಮ ಕಾ ಯೆ ತಾ ಯೆ
U - - | U - - | U - - | U U | - - U | - U -
ಕು ಡು ವಾ ಕ್ಷೆ ್ರೀ ಯಂ ॥
U U - | U U ॥

ಈ ಪದ್ಯದಲ್ಲಿಯೂ 4 ಪಾದಗಳಿದ್ದರೂ, 1ನೇ 3ನೇ ಪಾದಗಳಲ್ಲಿ 4 ಮಾತ್ರೆಗಳುಳ್ಳ ಮೂರು ಮೂರು ಗಣಗಳೂ, 2ನೇ 4ನೇ ಪಾದಗಳಲ್ಲಿ ಅಷ್ಟೇ ಮಾತ್ರೆಗಳುಳ್ಳ ಐದೈದು ಗಣಗಳೂ ಉಳ್ಳ ಪದ್ಯವಾಗಿರುವುದರಿಂದ ವಿಷಮ ವಾದ ವೃತ್ತವಾಯಿತು.

8. ಪ್ರಾಸ—ಒಂದು ಪದ್ಯದಲ್ಲಿಯಾಗಲಿ, ಒಂದು ಪದ ಸಮುದಾಯದಲ್ಲಿ ಯಾಗಲಿ ಕೇಳುವವರ ಕಿವಿಗೆ ಹಿತವಾಗಿರುವಂತೆ, ಒಂದೇ ಜಾತಿಯ ಅಕ್ಷರಗಳು ಅಥವಾ ಅಕ್ಷರಗಳುಳ್ಳ ಶಬ್ದಗಳು ಬಾರಿ ಬಾರಿಗೂ ಬರುವಂತೆ ಸೇರಿಸಿ ಹೇಳುವುದು ಪ್ರಾಸವೆನಿಸುವುದು.

ಕನ್ನಡದಲ್ಲಿ ಪದ್ಯದ ಪ್ರತಿಯೊಂದು ಪಾದದಲ್ಲಿಯೂ 2ನೆಯ ಅಕ್ಷರ ಪ್ರಾಸಸ್ಥಾನವೆನಿಸಿರುವುದರಿಂದ ಅಲ್ಲಿ ಒಂದೇ ಜಾತಿಯ ವ್ಯಂಜನ ಅಥವಾ ವ್ಯಂಜನಗಳಿರಬೇಕೆಂಬ ನಿಯಮವುಂಟು. ಇದಕ್ಕೆ (* 125-7) ರಲ್ಲು ಬಂದಿರುವ ಕಂದಪದ್ಯವೇ ಉದಾಹರಣೆಯಾಗಿದೆ. ಅವುಗಳ ಪ್ರಾಸಸ್ಥಾನದಲ್ಲಿ ಅದೇ ಅಕ್ಷರ ಬಂದಿರುವುದಲ್ಲದೆ ಶಾರದೆ, ಸಾರದೆ, ನೀರೇಜ, ಹೀರ, ಪಟೀರ, ನೀರದ, ತುಷಾರ ಮೊದಲಾದ ಪದಗಳೂ ಸಾಲಾಗಿ ಬಂದಿರುವುದರಿಂದ ಕೇಳುವುದಕ್ಕೆ ಇಂಪಾಗಿಯೂ ಇದೆ.

ಪದಸಮುದಾಯ ಅಥವಾ ವಾಕ್ಯ (ಗದ್ಯ) ಬರುವುದಕ್ಕೆ—

ಉದಾಹರಣೆ.

ವಿದ್ಯಾಭ್ಯಾಸದೊಳುದ್ಯಮವುಳ್ಳವರು ಸದ್ಯಃಸುಖವನ್ನು ನೋಡದೆ, ಹೃದ್ಯನಾದ ವಿದ್ಯಾಗುರುವಂ ಸೇರಿ ಶುದ್ಧಮಾನಸರಾಗಿ ತಮ್ಮ ಅವಿದ್ಯೆಯಂ ಕಳೆಯಲೋಸುಗ ಸದುದ್ಯೋಗಿಗಳಾಗಿ ಸದ್ವಿದ್ಯೆಯಿಂದ ತಮ್ಮ ಬುದ್ಧಿಯನ್ನು ತಿದ್ದಿಕೊಳ್ಳುವರು.

ಈ ವಾಕ್ಯದಲ್ಲಿ ದಕಾರವಿರುವ ಶಬ್ದಗಳು ಪದೇ ಪದೇ ಬಂದು ಕೇಳುವವರಿಗೆ ಶ್ರಾವ್ಯವಾಗಿರುವ ಕಾರಣ ಇದೂ ಒಂದು ವಿಧ ಪ್ರಾಸವೆನಿಸಿತು.

9. ಪ್ರಸ್ತಾರ—ಪದ್ಯಪಾದಗಳಲ್ಲಿರುವ ಗಣಗಳನ್ನು ಗುರು ಲಘು ಚಿಹ್ನೆಗಳಿಂದ ತೋರಿಸಿ ಸಮಂಜಸ ಮಾಡುವುದು.

126. ಪ್ರಸ್ತಾರ ಕ್ರಮ ತಿಳಿಯಲು, ಇಲ್ಲಿ ಉದಾಹರಣೆಗಾಗಿ ಪ್ರಸಿದ್ಧವಾಗಿರುವ ಕೆಲವು ಸಮಪಾದ ವೃತ್ತಗಳೂ, ವಿಷಮಪಾದ ವೃತ್ತಗಳೂ ಗಣಮಾತ್ರಾವಿನ್ಯಾಸದಿಂದ ತೋರಿಸಲ್ಪಟ್ಟಿವೆ.

(A) ಸಮಪಾದ ವೃತ್ತಗಳಲ್ಲಿ—

೧. ಉಪೇಂದ್ರವಜ್ರ ವೃತ್ತ :—ಸಹಸ್ರನೇತ್ರಂ ಸುಜನಾಭಿನುತ್ಯಂ

-ᴗ-।ᴗ ᴗ -।- ᴗ-।ᴗᴗ

ಜ ತ ಜ ಗುಗು

ನಾಲ್ಕು ಪಾದಗಳಲ್ಲಿ ಇದೇ ಕ್ರಮವಾಗಿ ಗಣವಿನ್ಯಾಸವು ಬರುವುದು ಉಪೇಂದ್ರವಜ್ರವೃತ್ತ.

೨. ಭುಜಂಗಪ್ರಯಾತಂ—ನೃಪಂ ಶೋಭಿಪಂ ನ್ಯಾಯದಿಂ ಕೀರ್ತಿಯಿಂದಂ

-ᴗ ᴗ।-ᴗ ᴗ।-ᴗ ᴗ।- ᴗᴗ

ಯ ಯ ಯ ಯ

ನಾಲ್ಕು ಪಾದಗಳಲ್ಲಿ ಇದೇ ಕ್ರಮದಿಂದ ಗಣಸಂಖ್ಯೆ ಬರುವುದು ಭುಜಂಗ ಪ್ರಯಾತ ವೃತ್ತಂ.

೩. ಚಂ॥ ಇದುವೆ ವಸಂತಕಾಲ ಮತಿಸಂತಸಮಂ ಕುಡುಗುಂ ಜನೌಘದೊಳ್

- - -।-ᴗ -।ᴗ- -।- ᴗ-।-ᴗ -।-ᴗ -।ᴗ-ᴗ

ನ ಜ ಭ ಜ ಜ ಜ ರ

ಈ ಗಣಗಳು ಪ್ರತಿ ಪಾದದಲ್ಲಿಯೂ ಬರುವುದು ಚಂಪಕಮಾಲಾವೃತ್ತ.

೪. ಉ॥ಮಾ॥ ಶ್ರೀಶನಧೋಕ್ಷಜಂ ವಿಪುಲವಕ್ಷನುದಾರ ಮುಖಾಂಬುಜೋಜ್ವಲಂ

ᴗ--।ᴗ -ᴗ।---।ᴗ--।ᴗ- -।ᴗ -ᴗ।-ᴗ

ಭ ರ ನ ಭ ಭ ರ ಲಗು

ಈ ಗಣಗಳು ಪ್ರತಿ ಪಾದದಲ್ಲಿಯೂ ಬರುವುದು ಉತ್ಪಲಮಾಲಾವೃತ್ತ.

೫. ಮ॥ ವಿ॥ ಚತುರಂ ಸಜ್ಜನ ವಂದಿತಾತ್ಮಚರಿತಂದಾಂತಂ ಕೃತಜ್ಞಂ ನೃಪಂ

--ᴗ।ᴗ--।ᴗ-ᴗ।---।ᴗ ᴗᴗ।-ᴗᴗ।-ᴗ

ಸ ಭ ರ ನ ಮ ಯ ಲಗು

ಈ ಗಣಗಳು ಪ್ರತಿಪಾದದಲ್ಲಿಯೂ ಬರುವುದು. ಮತ್ತೇಭವಿಕ್ರೀಡಿತ ವೃತ್ತ.

೬. ಶಾ॥ ವಿ॥ ಶ್ರೀ ಸಾಂಬಂ ಕರುಣಾಕರಂ ತ್ರಿಣಯನಂ ಗೌರೀವರಂ ಶಂಕರಂ

ᴗ ᴗ ᴗ।--ᴗ।-ᴗ -।- - ᴗ।ᴗᴗ-।ᴗᴗ-।ᴗ

ಮ ಸ ಜ ಸ ತ ತ ಗು

ಈ ಗಣಗಳು ಪ್ರತಿ ಪಾದದಲ್ಲಿಯೂ ಬರುವುದು ಶಾರ್ದೂಲವಿಕ್ರೀಡಿತ ವೃತ್ತ.

೭. ಸ್ರ॥ ಶ್ರೀಮತ್ಕರ್ಣಾಟದೇಶಾಧಿಪನತಿಚತುರಂ ಚಾಮರಾಜೇಂದ್ರಪುತ್ರಂ

UUU|U -U|U--|---|-U U|-U U|-UU

ಮ ರ ಭ ನ ಯ ಯ ಯ

ಈ ಗಣಗಳು ಪ್ರತಿಪಾದದಲ್ಲಿಯೂ ಬರುವುದು ಸ್ರಗ್ಧರಾವೃತ್ತಂ.

೮. ಮಾ॥ ನಯವಿನಯ ಯಶೋವಿಖ್ಯಾತನಾ ರಾಜಪುತ್ರಂ

---|-- -|UUU|-U U|-UU

ನ ನ ಮ ಯ ಯ

ಈ ಗಣಗಳು ಪ್ರತಿಪಾದದಲ್ಲಿಯೂ ಕ್ರಮವಾಗಿ ಬರುವುದು ಮಾಲಿನೀ ವೃತ್ತಂ.

೯. ದ್ರು॥ ವಿ॥ ಜಗವನೊಬ್ಬನೆ ಪಾಲಿಪನೀಶ್ವರಂ

---|U--|U--|U-U

ನ ಭ ಭ ರ

ಈ ಗಣಗಳು ಪ್ರತಿಪಾದದಲ್ಲಿಯೂ ಕ್ರಮವಾಗಿ ಬರುವುದು ದ್ರುತವಿಲಂಬಿತಂ.

೧೦. ಸ್ರ॥ ಗೀತವಿದ್ಯಾ ವಿನೋದಂಗಳಂ ದೊಪ್ಪುಗುಂ

U-U|U -U|U-U|U -U

ರ ರ ರ ರ

ಈ ಗಣಗಳು ಕ್ರಮವಾಗಿ ಪ್ರತಿಪಾದದಲ್ಲಿಯೂ ಬರುವುದು ಸ್ರಗ್ವಿಣೀ ವೃತ್ತ.

೧೧ ಇಂ॥ ವ॥ ವಿದ್ಯಾಪ್ರವೀಣಂ ವಿನಯಾಭಿರಾಮಂ

UU -|UU -|- U -|UU

ತ ತ ಜ ಗು ಗು

ಈ ಗಣಗಳು ಪ್ರತಿ ಪಾದದಲ್ಲಿಯೂ ಕ್ರಮವಾಗಿ ಬರುವುದು ಇಂದ್ರವಜ್ರಾವೃತ್ತ.

೧೨. ಸ್ವಾ॥ ಸ್ವಾಗತಂ ನಿನಗೆ ಭೋಗಿಪ ಭೂಪಾ

U-U|---|U-- |UU

ರ ನ ಭ ಗು ಗು

ಈ ಗಣಗಳು ಪ್ರತಿ ಪಾದದಲ್ಲಿಯೂ ಕ್ರಮವಾಗಿ ಬರುವುದು ಸ್ವಾಗತ ವೃತ್ತ.

(B) ವಿಷಮಪಾದ ವೃತ್ತಗಳಲ್ಲಿ—ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಿಕ ಎಂಬ ಆರು ಷಟ್ಪದಿಗಳು ಮುಖ್ಯವಾದುವು. ಇವುಗಳಲ್ಲಿರುವ ಪ್ರತಿಯೊಂದು ಪದ್ಯಕ್ಕೂ ಆರಾರು ಪಾದಗಳುಂಟು. ಇವುಗಳಲ್ಲಿ ಮೊದಲನೇ 3 ಪಾದಗಳು ಪದ್ಯದ ಪೂರ್ವಾರ್ಧವೆಂದೂ, ಕಡೆಯ 3 ಪಾದಗಳು ಉತ್ತರಾರ್ಧವೆಂದೂ ಹೇಳಲ್ಪಡುವುವು. ಪೂರ್ವಾರ್ಧದಲ್ಲಿ ಯಾವ ಗಣಗಳೂ ಲಕ್ಷಣವೂ ಇರುವುದೋ ಅದೇ ಗಣಗಳೂ ಲಕ್ಷಣವೂ ಉತ್ತರಾರ್ಧದಲ್ಲಿಯೂ ಇರುವುದು. ಇವುಗಳಲ್ಲಿ ಬರುವ ಮಾತ್ರಾಗಣಗಳು ತಾಳ ಕ್ರಮದಿಂದ ಓದುವುದಕ್ಕೆ ರಮ್ಯವಾಗಿರುವುವು. ಮೊದಲನೇ ಎರಡನೇ ಪಾದಗಳಲ್ಲಿ ಎಷ್ಟೆಷ್ಟು ಮಾತ್ರೆಗಳು ಅಥವಾ ಗಣಗಳು ಇರುವುವೋ ಅಷ್ಟು ಅದರಲ್ಲಿ ಅರ್ಧ ಮತ್ತೊಂದು ಗುರು ಸಹ ಮೂರನೇಪಾದದಲ್ಲಿರುವುದು.

ಉದಾಹರಣೆ.

೧ ಶರಷಟ್ಪದಿ—ಅಂಬುಧಿ ಜಾತೆ ಭ । — ಮಾತ್ರೆ 8

U - - । U - -

ವಾಂಬುಧಿ ತರಣಿ ದ । — ,, 8

U - - । - - - -

ಯಾಂಬುಧಿ ಮಾಧವ ಚಿತ್ತಹರೇ ॥— ,, 14

U - - । U - - । U - - । U

ಅರ್ಧಪದ್ಯಕ್ಕೆ ,, 30

ಪೂರಾಪದ್ಯಕ್ಕೆ ,, 60

೨. ಕುಸುಮಷಟ್ಪದಿ—ರಾಮಕರುಣಾಮೂರ್ತಿ । — ,, 10

U - - - । U U -

ಚಾರುತರ ಶುಭಗಾತ್ರ । — ,, 10

U - - - । - - U -

ಕಾರುಣ್ಯದಿಂ ಕಾವುದೈ ಭಕ್ತನಂ— ,, 17

U U - । U U - । U U - । U

ಅರ್ಧಪದ್ಯಕ್ಕೆ ,, 37

ಪೂರಾಪದ್ಯಕ್ಕೆ ,, 74

೩. ಭೋಗಷಟ್ಪದಿ—ರಾಮನಮಿತ ಮಹಿಮನರ್ಥಿ । — ,, 12

U - । - - - । - - - । U -

ಕಾಮಿತಾರ್ಥ ದಾತ ದಿವ್ಯ — ,, 12

U - । U - । U - । U -

ನಾಮ ನೆನಗೆ ಕುಡುಗೆ ತನ್ನ ನಾಮ ಭಜನೆಯಾ 20

∪ -| - - -| - - -| ∪ - | ∪ - | - - -| ∪ —

ಅರ್ಧಪದ್ಯಕ್ಕೆ ,, 44

ಪೂರಾಪದ್ಯಕ್ಕೆ ,, 88

೪. ಭಾ. ಷ.—ವಿದ್ಯೆಯೊಳು ವಿನಯದೊಳು ಗುಣದೊಳು । ,, 14

∪ - | - - - -| - - - | - - - - -

ಬುದ್ಧಿಯೊಳು ಕುಶಲತೆಯೊಳನು ನಯು । ,, 14

∪ - | - - - -|- - - | - - - -

ಗದ್ಯಪದ್ಯಾತ್ಮಕದ ಕೃತಿಯೊಳು ವಿಶದ ಲಿಪಿಯೊಳಗೆ (1) 23

∪ -|∪ ∪ | - - -| - - - - - | - - -| - - - -|∪ —

ಅರ್ಧಪದ್ಯಕ್ಕೆ ,, 51

ಪೂರಾಪದ್ಯಕ್ಕೆ ,, 102

೫. ಪ. ಷ—ರಾಮನ ಸೈನ್ಯದ ಪರಿಮಿತಿ ಯೊರೆಯಲು ।— ,, 16

∪ - - | ∪ - - | - - - - | - - - -

ಭೂಮಿಯ ಹೊತ್ತಿಹ ಫಣಿಪತಿಗರಿದು ಪಿ । ,, 16

∪ - - | ∪ - - | - - - - | - - - -

ತಾಮಹ ನೆನಸಿ ಜಗತ್ತಂ ಪುಟ್ಟಿಪಧಾತನೆ ತಾನರಿಯಂ॥ 26

∪ - - | - - - -|∪ ∪ | ∪ - -| ∪ - - | - - -| ∪ —

ಅರ್ಧಪದ್ಯಕ್ಕೆ ,, 58

ಪೂರಾಪದ್ಯಕ್ಕೆ ,, 116

೬. ವಾ. ಷ—"ರಾಮನಂ ಭುವನಾಭಿರಾಮನಂ ಗುಣರತ್ನ । ,, 26

∪ - - | - - ∪ -| ∪ - ∪ | - - ∪ -

ಧಾಮನಂ ಕುವಲಯ ಶ್ಯಾಮನಂ ರೂಪಜಿತ । ,, 26

∪ - ∪ | - - - ∪ | ∪ - ∪ | ∪ - - -

ಕಾಮನಂ ವದನಜಿತ ಸೋಮನಂ ನಾಮನಂ ದಣಿಯೆ

∪ - ∪ | - - - - - | ∪ - ∪ | ∪ - ∪ | - - -

ಪೊಗಳುವೆನೆಂದಳು (1)" 32

- - |- - ∪ - | ∪

ಅರ್ಧಪದ್ಯಕ್ಕೆ ,, 72

ಪೂರಾಪದ್ಯಕ್ಕೆ ,, 144

(1) ಪಾದಾಂತದಲ್ಲಿ ಲಘುವಿದ್ದರೂ ಗುರುವಾಗುವುದು.

೭. ಆರ್ಯೆ—ಪಲಬಭೂಪತಿಗಳ್ಸ। — ,, 12

--ᑌ। ᑌ --।ᑌᑌ

ತ್ಕುಲ ಧನ ಸೌಂದರ್ಯ ಒಲಯುತರ್ಸಭೆಯೊಳ್ । ,, 18

- - - -। ᑌ ᑌ।- - - - ।ᑌ - - । ᑌ

ಸಲೆರಾಜಿಸುತಿರ್ಪರು ಗಡ । ,, 12

- - ᑌ।- - ᑌ। - - - -

ನಲಭೂಪನ ನರಿಯೆ ನಾನೇವೆಂ — ,, 15

- - ᑌ।- - - -। - ᑌ ᑌ। ᑌ —

ಪೂರ್ಣಪದ್ಯಕ್ಕೆ ,, 57

ಕಂದಪದ್ಯ ಲಕ್ಷಣವು (*125.7) ವಿವರಿಸಲ್ಪಟ್ಟಿದೆ.

೮. ತ್ರಿಪದಿ—"ಬಲ್ಲವರ । ಒಡನಾಟ । ಬೆಲ್ಲವನು । ಮೆದ್ದಂತೆ । ಗಣ 4

ᑌ - - -   - - ᑌ -   ᑌ - - -   ᑌ ᑌ -

ಅಲ್ಲದಹು । ದೆಂಬಜಾ । ಣ ನೊಡನಾಟ । ,, 3

ᑌ - - -   ᑌ - ᑌ   - - - ᑌ -

ಕಲ್ಲು ಹಾ । ಯ್ದಂತೆ । ಸರ್ವಜ್ಞ ॥ ,, 3

ᑌ - ᑌ   ᑌ -   ᑌ ᑌ ᑌ —

ಗಣಗಳು 11

ಈ ಹನ್ನೊಂದು ಗಣಗಳಲ್ಲಿ 6ನೇ 10ನೇ ಗಣಗಳು ಬ್ರಹ್ಮಗಣ. ಉಳಿದುವು ವಿಷ್ಣುಗಣಗಳಿರಬೇಕು.

೯. ಚ. (ಚೌಪದಿ) —ಧರ್ಮವಿ।ಲ್ಲದ ಅರಸು।ಮುರಿವಕಾ।ಲಿನಗೊರಸು ,, 4

ನಿರ್ಮಲಿ।ಲ್ಲದ ಮನಸು।ಕಜ್ಜತಿನಿಸು ,, 3

ಕರ್ಮವಿ।ಲ್ಲದ ಗಂಡು।ಕರಿಯ ಒನ।ಕೆಯತುಂಡು,, 4

ಮರ್ಮವಿ।ಲ್ಲದ ಮಾತು।ಮೊಗೆಯತೂತು ,, 4

ಒಟ್ಟು ಗಣಗಳು 14

ಇಲ್ಲಿ 1-3ನೇ ಪಾದಗಳಲ್ಲಿ 3 ವಿಷ್ಣುಗಣ, 1 ರುದ್ರಗಣ, 2-4ನೇ ಪಾದಗಳಲ್ಲಿ 2 ವಿಷ್ಣುಗಣ. 1 ರುದ್ರಗಣ ಅಂತು 14 ಗಣ ಬರುವುದು ಚೌಪದಿ.

೧೦. ದ್ವಿಪದಿ—ಸಲಗನಿಮು । ಸಿರ್ಫಯುದ । ಹಳುವಂಗಳೊಳಗೆ । ,, 4

ತೊಳಲುತಿರೆ । ಬಂದು ಪಾ । ನೆಗಳದರ । ಬಳಿಗೆ । ,, 4

ಇದರಲ್ಲಿ 5 ಮಾತ್ರೆಯ 3 ವಿಷ್ಣುಗಣಗಳೂ, 3 ಮಾತ್ರೆಯ 1 ಬ್ರಹ್ಮಗಣವೂ ಪ್ರತಿಯೊಂದು ಪಾದದಲ್ಲಿಯೂ ಬಂದು ಪಾದಾಂತದಲ್ಲಿಯೂ ಪ್ರಾಸವಿರಬೇಕು.

೧೧. ಸಾಂಗತ್ಯ—ಪುರುಷ ಕೇ।ಳೈ ಎನ್ನ।ವೋಲು ಭಾ।ಗ್ಯದ ಪುಣ್ಯ। ,, 4
ಹರುಷದೊಳು।ನೀ ಬೇಗ।ಪೋಗಿ। ,, 3
ಮರಿಗಳ।ಸಲಹುತಾ।ಸುಖಿಯಾಗಿ।ಬಾಳೆಂದು। ,, 4
ಎರಗಿ ಕ।ಪೋತಿ ಬಿ।ನ್ನವಿಸೆ ॥ ,, 3

ಒಟ್ಟು ಗಣಗಳು 14

ಇಲ್ಲಿ 1-3ನೇ ಪಾದಗಳಲ್ಲಿ ಮೂರು 5 ಮಾತ್ರೆಯ ರುದ್ರಗಣಗಳೂ, 1 ಬ್ರಹ್ಮಗಣವೂ, 2-4ನೇ ಪಾದಗಳಲ್ಲಿ 2 ರುದ್ರಗಣ, 1 ಬ್ರಹ್ಮಗಣ ಒಟ್ಟು 14 ಗಣವಿರುವುದು.

XV ಪ್ರತ್ಯಕ್ಷ ಪರೋಕ್ಷಕಥನ.

Direct and Indirect Speech

ಒಬ್ಬನು ಹೇಳಿದ ಮಾತನ್ನು ಅವನೇ ಹೇಳಿದಂತೆ ಮತ್ತೊಬ್ಬನು ಇತರರಿಗೆ ಹೇಳುವದುಂಟಷ್ಟೆ? ಈ ಬಗೆಯ ಸಂಭಾಷಣೆಗೆ ಪ್ರತ್ಯಕ್ಷಕಥನ ಅಥವಾ ವಾಕ್ಯಾನುಕರಣ (Direct Speech) ವೆನ್ನುವರು.

(*a*) ಕೃಷ್ಣನು "ನಾನೂ ಪಾಠಶಾಲೆಗೆ ಬರುತ್ತೇನೆ" ಎಂದನು ಎಂದು ರಾಮನು ಗೋವಿಂದನೊಡನೆ ಹೇಳುತ್ತಾನೆ. ಇಲ್ಲಿ ಕೃಷ್ಣನು ಹೇಳಿದುದು ನಾನೂ ಪಾಠಶಾಲೆಗೆ ಬರುತ್ತೇನೆ ಎಂಬ ಮಾತು ಅದನ್ನು ವ್ಯತ್ಯಾಸ ಮಾಡದೆಯೇ ರಾಮನು ಹೇಳಿದುದರಿಂದ ಪ್ರತ್ಯಕ್ಷಕಥನ (ವಾಕ್ಯಾನುಕರಣ) ವಾಯಿತು. ಈರೀತಿ ವಾಕ್ಯಗಳನ್ನೇ ಅನುಕರಿಸುವುದು (ಹೇಳಿದಂತೆಯೇ ಹೇಳುವುದು) ಪ್ರತ್ಯಕ್ಷಕಥನವೆನಿಸುವುದು. ಇಂತಹ ವಾಕ್ಯಗಳನ್ನು ಅನುಕರಣ ಗುರುತು ಅಥವಾ ಕೊಟೇಷನ್ ಗುರುತು (Quotation marks) ಗಳ ಮಧ್ಯೆ ಬರೆಯುವುದುಂಟು.

(*b*) ಮೇಲಣ ವಾಕ್ಯವನ್ನು ರಾಮನೇ ಹೇಳಿದಂತೆ ಹೇಳಿದರೆ, ಕೃಷ್ಣನು ತಾನೂ ಪಾಠಶಾಲೆಗೆ ಬರುತ್ತಾನಂತೆ ಎಂದು ರಾಮನು ಗೋವಿಂದನೊಡನೆ ಹೇಳಿದನು ಎಂದಾಗುವುದು. ಈ ಮಾತು ಕೃಷ್ಣನ ಬಾಯಿಂದ ಬಂದ ಹಾಗಿಲ್ಲ. ಕೃಷ್ಣನು ಬರುವ ವಿಷಯವನ್ನು ರಾಮನು ಹೇಳಿದಂತೆ ಇದೆ. ಈ ರೀತಿಯಾದ ಸಂಭಾಷಣೆಗೆ ಪರೋಕ್ಷಕಥನ (Indirect speech) ವೆನ್ನುವರು.

(*c*) ಇಲ್ಲಿ ತಿಳಿಯಬೇಕಾದ ಅಂಶವೇನೆಂದರೆ:—ಸಾಮಾನ್ಯವಾಗಿ ಪ್ರತ್ಯಕ್ಷಕಥನಗಳಲ್ಲಿ ಬರುವ ಉತ್ತಮಪುರುಷ ಸರ್ವನಾಮ ಮತ್ತು ಕ್ರಿಯಾ

ಪದಗಳಿಗೆ ಪರೋಕ್ಷಕಥನಗಳಲ್ಲಿ ಪ್ರಥಮಪುರುಷವೂ, ಮಧ್ಯಮಪುರುಷಕ್ಕೆ ಉತ್ತಮಪುರುಷವೂ ಬರುವುದುಂಟು.

ಉದಾಹರಣೆ.

(1) "ಮಗನೆ ರಂಗ, ನೀನು ಊರು ಸೇರಿದ ಕೂಡಲೆ ನನಗೆ ಕಾಗದವನ್ನು ಬರೆ" ಎಂದು ತಂದೆಯು ಪ್ರಯಾಣವಾಗಿದ್ದ ತನ್ನ ಮಗನಿಗೆ ಹೇಳಿದುದನ್ನು ರಂಗನು ಕೃಷ್ಣದತ್ತನಿಗೆ ಹೇಳುತ್ತಾನೆ. ಇದನ್ನು ಪರೋಕ್ಷಕಥನದಲ್ಲಿ ಹೇಳಬೇಕಾದರೆ:—

ನಾನು ಊರು ಸೇರಿದ ಕೂಡಲೆ ನನ್ನ ತಂದೆಗೆ ಕಾಗದ ಬರೆಯಬೇಕಂತೆ ಎಂದು ರಂಗನು ಕೃಷ್ಣದತ್ತನಿಗೆ ಹೇಳಿದನು ಎಂದು ಆಗುತ್ತದೆ. ಇಲ್ಲಿ ತಂದೆ ಮಗನಿಗೆ ಹೇಳುವಾಗ ಉಪಯೋಗಿಸಿರುವ ನೀನು ಎಂಬ ಮಧ್ಯಮಪುರುಷಕ್ಕೆ ಪರೋಕ್ಷಕಥನದಲ್ಲಿ ನಾನು ಎಂಬ ಉತ್ತಮಪುರುಷವೂ, ನನಗೆ ಎಂಬ ಉತ್ತಮಪುರುಷಕ್ಕೆ ತಂದೆಗೆ ಎಂದು ಪ್ರಥಮಪುರುಷವೂ ಬಂದಿದೆ. "ಬರೆ" ಎಂಬ ಮಧ್ಯಮಪುರುಷದ ಕ್ರಿಯಾಪದಕ್ಕೆ "ನಾನು ಬರೆಯಬೇಕಂತೆ" ಎಂದೂ ಉತ್ತಮಪುರುಷ ಬಂದಿದೆ.

(2) ಲವನು ಕುಶನನ್ನು ನೋಡಿ—"ನಾನು ರಾಮನ ಸೈನ್ಯಗಳನ್ನೆಲ್ಲಾ ಗೆದ್ದೆನು. ಆತನ ಕುದುರೆಯನ್ನು ಕಟ್ಟಿರುವೆನು" ಎಂದು ಹೇಳುತ್ತಾನೆ. ಈ ಮಾತನ್ನು ಕುಶನು ತನ್ನ ತಾಯಿಯಾದ ಸೀತೆಗೆ ಹೇಳುವಾಗ— ನಮ್ಮ ಲವನು ರಾಮನ ಸೈನ್ಯಗಳನ್ನು ಗೆದ್ದನಂತೆ. ಆತನ ಕುದುರೆಯನ್ನು (ಕಟ್ಟಿರುವನಂತೆ) ಎಂದು ಆಗವುದು.

ಇಲ್ಲಿ ನಾನು ಎಂಬ ಉತ್ತಮಪುರುಷ ಶಬ್ದಕ್ಕೆ ಅವನು ಎಂಬ ಪ್ರಥಮಪುರುಷ ಬಂದಿದೆ. ಗೆದ್ದೆನು ಕಟ್ಟಿದೆನು ಎಂಬ ಉತ್ತಮಪುರುಷ ಕ್ರಿಯಾಪದಗಳಿಗೆ ಪ್ರಥಮಪುರುಷವಲ್ಲಿ ಗೆದ್ದನು, ಕಟ್ಟಿದನು - ಎಂದು ಬಂದಿದೆ.—ಹೀಗೆಯೇ ಊಹಿಸುವುದು.

ಅಭ್ಯಾಸಕ್ಕೆ—

(*a*) ಈ ಕೆಳಗಣ ಪ್ರತ್ಯಕ್ಷಕಥನದ ವಾಕ್ಯಗಳನ್ನು ಪರೋಕ್ಷಕಥನಕ್ಕೆ ತಿರುಗಿಸಿ.

(1) "ನಿನ್ನೆ ರಾತ್ರಿ ನಾನು ಶಾಕುಂತಲ ನಾಟಕವನ್ನು ನೋಡಿದೆನು. ಎಂದು ರಾಮನು ಬ್ರಹ್ಮದತ್ತನಿಗೆ ಹೇಳಿದನು."

(2) "ಎಲೈ ಸೇವಕನೇ ನಿನ್ನ ಸೋಮಾರಿತನಕ್ಕೆ ತಕ್ಕ ಫಲವನ್ನು ಪಡೆಯುವೆ" ಎಂದು ಯಜಮಾನನು ತನ್ನ ಸೇವಕನಿಗೆ ಹೇಳುತ್ತಾನೆ.

(*b*) ಈ ಪರೋಕ್ಷಕಥನದ ವಾಕ್ಯಗಳನ್ನು ಪ್ರತ್ಯಕ್ಷಕಥನಕ್ಕೆ ತಿರುಗಿಸಿ.

(1) ತನ್ನ ಹಸುವನ್ನು ನಾನು ಹಿಡಿಯಲಿಕ್ಕೆ ಕಾರಣವೇನೆಂದು ಚೋರನು ನನ್ನನ್ನು ಕೇಳಿದನೆಂದು ಬೀರನು ಮಾರನಿಗೆ ಹೇಳುತ್ತಾನೆ.

(2) ತನ್ನನ್ನು ಬಿಡಿಸಿದರೆ ನನಗೆ ಹುಲಿ ಸಹಾಯಮಾಡುತ್ತದಂತೆ ಎಂದು ಇಲಿ ತನ್ನ ಸ್ನೇಹಿತನಾದ ಮೊಲದ ಸಂಗಡ ಹೇಳಿತು.

ಇಂತು

ಕಂ|| ಕಿರಿದೆನಿಪೀ ವ್ಯಾಕರಣಮು |
ಸರಿವಿಡರಿಂ ಬಾಲಕರ್ಗೆ ಸಮನಿಸುಗೆನುತುಂ |
ಒರೆದಂ ಕವಿನರಸಿಂಹಂ |
ಪಿರಿಯಗುಣಕೊಲ್ದು ಬಿಡುಗೆ ದೋಷಮನಿದರೊಳ್ ||

ಈ ಗ್ರಂಥದಲ್ಲಿ ಉಪಯೋಗಿಸಿರುವ ಕೆಲವು ಶಬ್ದಗಳ ಅರ್ಥವು.

ಅರ್ಥ - ಪ್ರಯೋಜನ
ಅಡಸು - ಒತ್ತರಿಸು
ಅತಿಕ್ರಮ - ಮೀರುವುದು
ಅಚ್ - ಸ್ವರಾಕ್ಷರಗಳು
ಅಪ್ - ನೀರು
ಅಶ್ವ - ಕುದುರೆ
ಅಂತಃಕರಣ - ಮನಸ್ಸು, ಪ್ರೇಮ
ಅಸ್ತಿಭಾರ - ಮೂಲಾಧಾರ
ಅನ್ಯದೇಶ್ಯ - ಬೇರೇದೇಶಗಳ
ಅಂಕ - ಗುರುತು, ತೊಡೆ
ಅಂತ - ಕೊನೆ
ಅರಿ - ಶತ್ರು, ತಿಳಿ
ಅಲರ್ - ಹೂ
ಅಲರ್ಚು - ಅರಳಿಸು
ಅಲರುಣಿ - ತುಂಬಿ
ಅಪಾಯ - ಕೇಡು
ಅಪೂರ್ಣ - ಪೂರ್ತಿಯಾಗದಿರುವುದು
ಅಭಿಮುಖ - ಕೋರಿಕೆ
ಅಕ್ಷಿ - ಕಣ್ಣು
ಅಂಶ - ಭಾಗ
ಅಪಶದ - ನೀಚ
ಅನಿಶಂ - ಯಾವಾಗಲೂ
ಅನುಕರಣ - ನೋಡಿದಂತೆ ಮಾಡುವುದು
ಅಗಾರ - ಮನೆ
ಅಬ್ಧಿ - ಸಮುದ್ರ
ಅಯಸ್ - ಕಬ್ಬಿಣ
ಅಂಬರ - ಆಕಾಶ, ಬಟ್ಟೆ

ಅರೆ - ಬಂಡೆ, ಅರೆಯುವುದು
ಅನಿಸು - ಅಷ್ಟು
ಆಧಿಪತ್ಯ - ದೊರೆತನ
ಆಡು - ಹೋತ
ಆಡಿಕೆ - ಆಕ್ಷೇಪಣೆ
ಆಲಯ - ಮನೆ
ಆವಳಿ - ಸಮೂಹ
ಆಳಿಕೆ - ದೊರೆತನ
ಆರಯ್ಕೆ - ವಿಚಾರಣೆ
ಆಸು - ಅಷ್ಟು
ಆಸರು - ಆಯಾಸ
ಇಂಗಿತ - ಮನಸ್ಸಿನ ಅಭಿಪ್ರಾಯ
ಇನಿದು - ರುಚಿಯಾದ
ಇನಿಸು - ಸ್ವಲ್ಪ
ಇನಿತು - ಇಷ್ಟು
ಇಕ್ಕು - ಹಾಕು, ಹೊಡೆ
ಇಂಚರ - ನಯವಾದಧ್ವನಿ
ಇಡು - ಬಿಸಾಡು, ಪುಡಿಮಾಡು
ಇಸು - ಬಾಣವನ್ನು ಬಿಡು
ಇಂಪು - ಸಂತೋಷ, ಇಷ್ಟ
ಈಗೆ - ಕೊಡುತ್ತಿರಲಿ
ಈಸು - ಇಷ್ಟು
ಉದ್ಯತ್ - ಏರಿಬರುವ
ಉಣಿಸು - ಊಟ
ಉಪ್ಪತಿ - ಹೆಚ್ಚುವುದು, ಗರ್ವ
ಉಕ್ತ - ಹೇಳಲ್ಪಟ್ಟ
ಉನ್ಮತ್ತ - ಹುಚ್ಚ
ಊಷ್ಮ - ಸೆಕೆ
ಋಣ - ಸಾಲ

ಋಣರ್ಣ - ಸಾಲತೀರಿಸುವುದಕ್ಕೆ ಮಾಡಿದ ಮತ್ತೊಂದು ಸಾಲ
ಋತು - ಎರಡುತಿಂಗಳ ಕಾಲ
ಎವೆ - ಕಣ್ಣುರೆಪ್ಪೆ
ಎನಿತು - ಎಷ್ಟು
ಎಯ್ತಂದ - ಬಂದ
ಎಚ್ಚನು - ಬಾಣವನ್ನು ಬಿಟ್ಟನು
ಎಲರ್ - ಗಾಳಿ
ಎಲರುಣಿ - ಸರ್ಪ
ಎಸಕ - ಉದ್ಯೋಗ
ಏನಸ್ - ಪಾಪ
ಐಸು - ಅಷ್ಟು
ಒತ್ತೆ - ಗಿರವಿ
ಒರೆ - ಹೇಳು
ಓಡು (ನಾ) ಹುರಿಯುವ ಹೆಂಚು
ಓಘ - ಸಮೂಹ
ಓಜ - ಪರಾಕ್ರಮ
ಓಪು - ಸ್ನೇಹ
ಔನ್ನತ್ಯ - ಎತ್ತರ
ಔಡು - ತುಟಿ
ಕಂಟಕ - ಮುಳ್ಳು, ತೊಂದರೆ
ಕಯ್ಪುರೆ - ಕೈಚಪ್ಪಾಳೆ
ಕರಿ - ಆನೆ
ಕಡಿದು - ಕಠಿನವಾದ
ಕಣ್ಣೊಡರ್ - ಕಣ್ಣೆಂಬ ದೀಪ
ಕಲ್ಪೋರೆ - ಕಲ್ಲುಮಡಿಕೆ

ಕಲ್ಮಳೆ - ಕಲ್ಲಿನಮಳೆ
ಕರ್ಮ - ಕೆಲಸ
ಕರಂ - ಚೆನ್ನಾಗಿ
ಕವಲ್ - ಎರಡಾಗಿ ಒಡೆಯುವುದು
ಕೃತಿ - ಕಾವ್ಯ, ಕೆಲಸ
ಕೃಪಾಳುತೆ - ದಯೆ
ಕಲ್ - ಅಭ್ಯಾಸಮಾಡು
ಕಳಿ-ಪೂರಾಹಣ್ಣಾಗುವುದು
ಕಾಪು - ರಕ್ಷಣೆ
ಕಾಮ - ಅಪೇಕ್ಷೆ
ಕಾರು - ವಾಂತಿಮಾಡು
ಕಾಂಡ - ವಿಭಾಗ, ಪ್ರಕರಣ
ಕಾಲೂರು - ಸಣ್ಣಹಳ್ಳಿ
ಕಿಂಚಿತ್ - ಸ್ವಲ್ಪ
ಕಿನಿಸು - ಕೋಪ
ಕಿಸು - ಕೆಂಪಾದ
ಕುಂಬಿಡು - ಅಡ್ಡಬೀಳು
ಕೂರ್ಮ - ಆಮೆ
ಕೂರಸಿ - ಹರಿತವಾದಕತ್ತಿ
ಕೊಡಿಗೆ - ದಾನ
ಕೊಚ್ಚು - ಕತ್ತರಿಸು
ಕೋಡು, ದಾನ, ಕೊಂಬು
ಕೋಲಾಹಲ - ಶಬ್ದ
ಖದಿರ - ಕಿರಣ
ಖೇದ - ವ್ಯಸನ
ಗಮನ - ನಡಿಗೆ, ಸ್ಥಿರಚಿತ್ತ
ಗ್ರೀವ - ಕತ್ತು
ಗೆಯ್ತ - ಕಾರ್ಯ
ಗುರುತ್ವ-ಗೌರವ, ಮರ್ಯಾದೆ
ಘಟ - ಗಡಿಗೆ
ಚತುರ್ದಶ - ಹದಿನಾಲ್ಕು
ಚಕ್ರ ವಿಷ್ಣುವಿನ ಆಯುಧ
ಚಾರುತರ - ಇಂಪಾದ
ಚಿತ್ರ - ಬರೆದ ಆಕೃತಿ, ಆಶ್ಚರ್ಯ
ಚೌಪದಿ - ನಾಲ್ಕು ಪಾದಗಳುಳ್ಳ ಪದ್ಯ
ಛಾಯಾ - ಸೂರ್ಯನ ಹೆಂಡತಿ, ನೆರಳು
ಜಲಧಿ - ಸಮುದ್ರ
ಜಲಮುಕ್ - ಮೇಘ
ಜ್ವಲತ್ - ಪ್ರಕಾಶಿಸುವ
ಜ್ಞಾತಿ - ದಾಯಾದ
ಜ್ಯೋತಿ - ದೀಪ
ಜೊನ್ನ - ಬೆಳುದಿಂಗಳು
ತರು - ಮರ
ತತ್ತ್ವ - ನಿಜವಾದ ಅರ್ಥ
ತ್ವಕ್ - ಚರ್ಮ, ತೊಗಟೆ
ತಮಸ್ - ಅಜ್ಞಾನ, ಕತ್ತಲೆ
ತಗು - ಯೋಗ್ಯವಾದ
ತಡಿ - ಅಂಚು
ತಳಿರು - ಚಿಗುರು
ತೃಣ - ಹುಲ್ಲು
ಠಾಣ - ಸ್ಥಲ
ತಾಗು - ಕಾದಾಡು
ತ್ಯಾಗ - ದಾನ
ತಿನಿಸು - ನವೆ
ತ್ರಿನೇತ್ರ - ಈಶ್ವರ
ತೆಗಳ್ - ನಿಂದೆ
ತೇರಯಿಸು - ಗುಂಪಾಗಿ ಬರುವುದು
ತೆಳ್ಳಿತು - ತೆಳ್ಳಗಿರುವ
ತೇಜ - ಪರಾಕ್ರಮ, ಶಕ್ತಿ, ಕಾಂತಿ
ತೆತ್ತಿಗ - ಆಳು
ತೊಡರ್ಚು - ಆರಂಭಿಸು
ತೊಡು - ಬಿಲ್ಲಿಗೆಬಾಣಸೇರಿಸುವುದು
ದಳ - ಸೈನ್ಯ
ದಧಿ - ಮೊಸರು
ದಣುವು - ಆಯಾಸ
ದಿವ್ಯ - ಸೊಗಸಾದ
ದುಷ್ಕೃತ - ಪಾಪ
ಧಾತೃ - ಬ್ರಹ್ಮ
ನವ-ಹೊಸದು, ಒಂಭತ್ತು
ನಸು - ಸ್ವಲ್ಪ
ನಖ - ಉಗುರು
ನಡೆವೆಣ - ಬದುಕಿದ್ದರೂ ಫಲವಿಲ್ಲದವ
ನನೆ - ಮೊಗ್ಗು
ನಚ್ಚು - ನಂಬು
ನಲ್ಮೆ - ಪ್ರೀತಿ
ನಯನ - ಕಣ್ಣು
ನಾಯಿಂದ - ಹಜಾಮ
ನಾಡು - ದೇಶ
ನಿರ್ಜೀವ - ಪ್ರಾಣವಿಲ್ಲದ
ನಿಷ್ಕಂಟಕ - ತೊಂದರೆಯಿಲ್ಲದ
ನಿಡಿದು - ಉದ್ದವಾದ
ನಿಂದೆ - ಅಪವಾದ
ನಿಮಿರ್ಚು - ಸಿದ್ಧಪಡಿಸು
ನಿಯತ - ಗೊತ್ತಾದ
ನಿಶಾ - ರಾತ್ರಿ
ನೀರಾಜನ - ಆರತಿ
ನೀಲೋತ್ಪಲ - ಕನ್ನೈದಿಲೆ

ನೆನೆ - ಸ್ಮರಿಸು
ನೆಗಳ್ - ಮೊಸಳೆ
ನೆಗಳ್ತೆ - ಖ್ಯಾತಿ
ನೆರವಿ - ಗುಂಪು
ನೆಲೆ - ಸ್ಥಾನ
ನೇಸರ್ - ಸೂರ್ಯ
ನೋಂಪಿ - ವ್ರತ
ನೌ - ಹಡಗು
ಪದ್ಮೆ - ಲಕ್ಷ್ಮಿ
ಪಯಸ್ - ನೀರು, ಹಾಲು
ಪರಿಷತ್ - ಸಭೆ
ಪದಾತಿ - ಕಾಲುಬಲ
ಪಂಚ - ಅಯಿದು
ಪರಿವಾರ - ಸೇವಕಜನ
ಪರಸ್ಪರ - ಒಬ್ಬರಿಗೊಬ್ಬರು
ಪಲ್ಲಟ - ವ್ಯತ್ಯಾಸ
ಪತಿತ - ಬಿದ್ದವನು, ಕೆಟ್ಟವನು
ಪಡೆ - ಹೊಂದು, ಸೈನ್ಯ
ಪಳಿವು - ದೂಷಣೆ
ಪದವು - ಸುಖ
ಪಲ್ - ಹಲ್ಲು
ಪ್ರಮಾದ - ಅಜಾಗ್ರತೆ
ಪಂಕೇಜ - ತಾವರೆ
ಪ್ರಕೃತಿ - ಸ್ವಭಾವ
ಪಾಣಿ - ಕೈ
ಪಾಕ - ಅಡಿಗೆ
ಪ್ರಾಚೀನ - ಪೂರ್ವಕಾಲದ
ಪಿರಿಯವು - ದೊಡ್ಡವು
ಪೀತ - ಹಳದಿ ಬಣ್ಣದ
ಪೆರತು - ಇನ್ನೊಂದು
ಪೆರಗು - ಹಿಂದುಗಡೆ

ಪೆಂಪು - ಹೆಚ್ಚು
ಪೊನ್ - ಭಂಗಾರ
ಪೊರಮಡು - ಹೊರಡು
ಪೊಡಮಡು - ನಮಸ್ಕಾರ ಮಾಡು
ಪೊಲ - ಹೊಲ
ಪೊಗರ್ - ಕಾಂತಿ
ಪೊಯ್ಗಳು - ಏಟುಗಳು (ಪೆಟ್ಟು)
ಪೊಳಲ್ - ಪಟ್ಟಣ
ಪೋರು - ಜಗಳವಾಡು
ಬೃಹತ್ - ದೊಡ್ಡದಾದ
ಬಹಿಃ - ಹೊರಗೆ
ಬಹೀರಾಗ - ಕಪಟಪ್ರೇಮ
ಬಳವಿ - ಬೆಳೆಯುವಿಕೆ
ಬಾವು - ಊದು
ಬಿಸು - ಬಿಸುಗೆ (ಗು. ವಾ.) (ಬೆಚ್ಚಗಿರುವ)
ಬಿನ್ನನೆ - ಗಟ್ಟಿಯಾಗಿ
ಬೀ - ಕೊನೆಯಾಗುವುದು
ಬೀರು - ಎಸೆಯುವುದು
ಬೆಟ್ಟಿತು - ಕಠಿನವಾದ
ಬೆಳ್ಪಾತು - ಅರ್ಥವಿಲ್ಲದ ಮಾತು
ಬೆಚ್ಚು - ಹೆದರುವುದು
ಬೇ, ಬೇಳು - ಸುಡುವುದು
ಬೋಳೈಸು - ಸಮಾಧಾನ ಮಾಡು
ಬುಧ - ವಿದ್ವಾಂಸ, ಗ್ರಹ
ಬೂತು - ದಂಭ
ಭ್ರಷ್ಟ - ಕೆಟ್ಟುಹೋದವನು
ಭ್ರಮಣ - ತಿರುಗುವುದು

ಭ್ರಮೆ - ಭ್ರಾಂತಿ
ಭಾರತಿ - ಸರಸ್ವತಿ, ವಾಕ್ಕು
ಭಿನ್ನ - ಒಡೆದ, ಬೇರೆಯಾದ
ಭಿಷಜ - ವೈದ್ಯ
ಭ್ರೂ - ಹುಬ್ಬು
ಮಯ - ತುಂಬಿರುವ
ಮತ - ಅಭಿಪ್ರಾಯ
ಮನೋಹರ - ಸೊಗಸಾದ
ಮರುಳ - ಹುಚ್ಚ
ಮನ್ನಣೆ - ಮರ್ಯಾದೆ
ಮಹತ್ - ದೊಡ್ಡದಾದ
ಮತಲ್ಲಿಕಾ - ಶ್ರೇಷ್ಠವಾದ
ಮಡಲ್ - ಚಿಗುರುವುದು
ಮಯೂರ - ನವಿಲು
ಮಾಲಾ - ಪಙ್ಕ್ತಿ, ಹೂವಿನಸರ
ಮಾರ್ಪಡು - ಬದಲಾಗು
ಮಾಧುರ್ಯ - ಸಿಹಿ
ಮಾ - ಲಕ್ಷ್ಮಿ
ಮಿಡಿ - ಹೀಚು
ಮಿಗು - ಹೆಚ್ಚಾಗು
ಮೀ - ಸ್ನಾನಮಾಡು
ಮುನಿಸು - ಕೋಪ
ಮುಯ್ಯ್ - ಬದಲಿಗೆ ಬದಲು
ಮೂಡಿಗೆ - ಬತ್ತಳಿಕೆ (ಬಾಣದಚೀಲ)
ಮೂಡಿತು - ಹುಟ್ಟಿತು
ಮೆಲ್ಲಿತು - ಮೃದುವಾದ
ಮೇಳಯಿಸು - ಸೇರಿಸು
ಮೇಲೂರು - ಪಟ್ಟಣ
ಯಥಾಸ್ಥಿತಿ - ಇದ್ದಹಾಗೆ ಇರುವುದು

ರಥ - ಬಂಡಿ
ರಮಾ - ಲಕ್ಷ್ಮಿ
ರಜಸ್ - ಧೂಳಿ
ರಸನಾ - ನಾಲಗೆ
ರಾಗ - ಕೆಂಪು, ಪ್ರೇಮ
ರುಜೆ - ರೋಗ
ಲಸತ್ - ಪ್ರಕಾಶಿಸುವ
ಲತೆ - ಬಳ್ಳಿ
ಲಕ್ಷಣ - ಗುರುತು
ಲಿಪಿ - ಬರಹ
ಲೀಲಾ - ಸೊಗಸು
ವಸಂತ - ಒಂದು ಋತು
ವರ - ಶ್ರೇಷ್ಠವಾದ, ಮದವಣಿಗ
ವಯಸ್ಯ - ಸ್ನೇಹಿತ
ವಂದಿತ - ಸ್ತುತಿಸಲ್ಪಟ್ಟ
ವಂಧ್ಯೆ - ಗೊಡ್ಡು ಹೆಂಗಸು
ವ್ಯಕ್ತಿ - ಆಕಾರ
ವೃಕ - ತೋಳ
ವಾಕ್ - ಮಾತು, ವೇದ
ವಾಗಧಿಪ - ಬೃಹಸ್ಪತಿ
ವಿರಾಡ್ರೂಪ - ವಿಶ್ವರೂಪ
ವಿಧಾತೃ - ಬ್ರಹ್ಮ
ವಿಶ್ವ - ಸಮಸ್ತವಾದ, ಪ್ರಪಂಚ
ವೈಚಿತ್ರ್ಯ - ಚಮತ್ಕಾರ
ಶಂಕರ - ಈಶ್ವರ
ಶ್ರವಣ - ಕಿವಿ
ಶರ - ನೀರು, ಬಾಣ
ಶೃಂಗ - ಶಿಖರ, ಕೋಡು
ಶಾಸನ - ಆಜ್ಞೆ
ಶ್ಯಾಮ - ಕಪ್ಪಾದ
ಶಿಷ್ಟ - ಸಾಧು
ಶೀಲ - ಸ್ವಭಾವ
ಶ್ರೀ - ಲಕ್ಷ್ಮಿ
ಶುಂಠ - ಮೂಢ
ಶ್ರೋತ್ರಿಯ - ಯಜ್ಞಮಾಡಿದವನು
ಷಷ್ಠಿ - ಆರನೇದಿನ, ಅರವತ್ತು
ಷಡಂಗ - ಆರುಶಾಸ್ತ್ರಗಳು
ಸತ್ - ಒಳ್ಳೇ
ಸಖಾಯ - ಸ್ನೇಹಿತ
ಸ್ರಕ್ - ಹೂಮಾಲೆ
ಸಮರ - ಯುದ್ಧ
ಸರಸಿಜ - ಕಮಲ
ಸಮುಚ್ಚಯ - ಒಟ್ಟುಗೂಡಿಸುವುದು
ಸಲೆ - ಚೆನ್ನಾಗಿ
ಸಹೋದರ - ಒಡಹುಟ್ಟಿದವನು
ಸರಿವಳೆ - ಜಡಿಮಳೆ
ಸದ್ಭಾರತಿ - ಶುದ್ಧವಾದ ವಾಕ್ಯ
ಸವಿ - ರುಚಿ
ಸಾರತರ - ಶ್ರೇಷ್ಠವಾದ
ಸಾಮ್ಯ - ಹೋಲಿಕೆ
ಸ್ವಾದು-ರುಚಿಯಾದ (ಸಿಹಿ)
ಸಾರು - ಸೇರುವುದು, ಎಲ್ಲರಿಗೂ ತಿಳಿಸುವುದು
ಸಿಗ್ಗ - ನಾಚಿಕೆಯಿರುವವನು
ಸುಳಿವು - ಸಂಚಾರ
ಸುಕೃತ - ಪುಣ್ಯ
ಸುರಿಗೆ - ಚಿಕ್ಕಚೂರಿ
ಸುಯ್ - ಉಸಿರುಬಿಡು
ಸುಧೆ - ಅಮೃತ
ಸೂಚಿಸು - ಮುಂದಾಗಿ ತಿಳಿಸು
ಸೂತ್ರ - ದಾರ, ಸೂಚನೆ
ಸೊಂಪು - ಸುಖ
ಸೊಡರ್ - ದೀಪ
ಸೊಬಗು - ಸೊಗಸು
ಸೋಜಿಗ - ಆಶ್ಚರ್ಯ
ಸೇವ್ಯ - ಸೇವಿಸಲ್ಪಡಲು ಯೋಗ್ಯನು
ಹತಿ - ಪೆಟ್ಟು
ಹವ್ಯ - ಅಗ್ನಿಯಲ್ಲಿ ಕೊಡುವ ಆಹುತಿ
ಹಸ್ತಿ - ಆನೆ
ಹರಗು - ಹರಡುವುದು
ಹಸುಗೆ - ಭಾಗ
ಹರಿಸ - ಸಂತೋಷ
ಹಿತ - ಇಷ್ಟವಾದ
ಹೆಚ್ಚು - ಕತ್ತರಿಸು, ಅಧಿಕ
ಹೊಳಪು - ಪ್ರಕಾಶ
ಕ್ಷಮಾ - ತಾಳ್ಮೆ
ಕ್ಷೇಮ - ಸುಖ

ಕೆಲವು ಕನ್ನಡ ಶಬ್ದಗಳಿಗೆ ತಕ್ಕ ಇಂಗ್ಲೀಷ್ ಶಬ್ದಗಳು.

ಅಕ್ಷರ - Letter
ಅವರ್ಗೀಯ - Unclassified
ಅನುನಾಸಿಕ - Nasal
ಅಲ್ಪಪ್ರಾಣ - Unaspirated
ಅವಧಾರಣ - Emphasis
ಅನುಕರಣ-Imitation sounds
ಅನ್ವರ್ಥನಾಮ- Denominative noun
ಅವ್ಯಯ - Indiclinable
ಅಭ್ಯಾಸ - Exercise
ಅಂಕಿತನಾಮ - proper noun
ಅಧ್ಯಾಹಾರ - Understood
ಅಮುಖ್ಯಕರ್ಮ-Indirectobject
ಅವ್ಯಯಕೃದಂತ- Gerund infinitive
ಆದೇಶ - Substitute
ಆಗಮ - Augment
ಆಖ್ಯಾತ -Verb
ಇತ್ಯಾದಿ - Etcetra
ಉತ್ತಮಪುರುಷ - firstperson
ಏಕವಚನ - singular number
ಕ್ರಿಯಾಪದ - Verb
ಕರ್ತ್ರರ್ಥಕ - active voice
ಕರ್ಮಾರ್ಥಕ - Passive voice
ಕಾರಕಕೃದಂತ-Relative Participles
ಕೃದಂತ - Verbal Derivative
ಕೃನ್ನಾಮ - participle nouns
ಗುಣವಾಚಕ - Adjective
ಗುಣಿತಾಕ್ಷರ - Syllable
ಚತುರ್ಥೀವಿಭಕ್ತಿ- Dative case
ಛಂದಸ್ಸು - Prosody
ಜೀ - Bow-sting
ತದ್ಧಿತಾಂತ - Naminative Derivative
ತೃತೀಯೆ - Instrumental
ತದ್ಧಿತನಾಮ - Secondary or derevative nouns
ತದ್ಧಿತಭಾವನಾಮ - Secondary abstract noun
ತದ್ಧಿತಾಂತಾವ್ಯಯ - Indiclinables derived from nouns
ತದ್ಭವ - corrupted sanskrit words
ದೀರ್ಘ - Long Vowel
ದ್ವಿಕರ್ಮಕ - Possesing Two objects
ದ್ವಿರುಕ್ತಿ - Repitation
ದ್ವಿತೀಯಾವಿಭಕ್ತಿ - Accusative case
ಧಾತು - Root
ನಪುಂಸಕ - Neuter
ನಾಮವಾಚಕ - Noun
ನಿಪಾತ - particle
ನಿಷೇಧ - Negative case
ಪಂಚಮೀವಿಭಕ್ತಿ- Oblative case
ಪ್ರಕರಣ - Chapter
ಪ್ರಥಮಪುರುಷ - Third person
ಪ್ರಶ್ನೆ - Question

ಪ್ರಥಮಾವಿಭಕ್ತಿ - Nominative case
ಪುಲ್ಲಿಂಗ- Masculine Gender
ಪ್ರಕಾರವಾಚಕ - Denomative noun
ಪರಿಮಾಣವಾಚಕ - Quantative noun
ಪ್ರಾತಿಪದಿಕ-Nominative case
ಪ್ರತ್ಯುದಾಹಾರಣೆ - Exceptional Example
ಪ್ರಕೃತಿ - Uninflected word or theme
ಪದಾಂತಸಂಧಿ-Final combination
ಪದಮಧ್ಯಸಂಧಿ - Internal combination
ಪ್ಲುತ - Too long Vowel
ಪ್ರತ್ಯಯ-Affixes or prefixes
ಪರುಷ - Hard consonant
ಬಹುವಚನ - Plural number
ಭಾವಕೃದಂತ - Verbal nouns
ಭವಿಷ್ಯತ್ - Future
ಭೂತರೂಪ - Past tense
ಭಾವನಾಮ - Abstract noun
ಮಧ್ಯಮಪುರುಷ - Second person
ಮೆಚ್ಚಿಗೆ - Approval
ಮಾತ್ರೆ - Mora
ಮಹಾಪ್ರಾಣ-Aspirated consonant
ಯೋಗವಾಹ - Dependent or semi letter

ರೂಢನಾಮ -Common Noun
ಲೋಪ - Elision
ವ್ಯಂಜನ - Consonant
ವರ್ಗೀಯ - Classified
ವಿಕಲ್ಪ - Option
ವಿಶಂಕೆ - Suspicion
ವಸ್ತುವಾಚಕ - Concrete Noun
ವಾಚ್ಯಲಿಂಗ - Dependent Gender
ವಚನ - Number
ವಿಭಕ್ತಿ - Case
ವಿಧೇಯ ವಿಶೇಷಣ - Adjective used predicatively
ವರ್ತಮಾನ - Present Tense
ವಿಧಿ - Imparativemood
ಶಬ್ದ - Word
ಶಾಸನ - Order
ಷಷ್ಠೀವಿಭಕ್ತಿ - Possessive case
ಸಪ್ತಮೀವಿಭಕ್ತಿ - Locative case
ಸಂಬೋಧನೆ - Vocative case
ಸ್ವರ - Vowel
ಸರಳಾಕ್ಷರ - Soft letter
ಸಂಯುಕ್ತಾಕ್ಷರ - Double consonant
ಸಂಧಿ-Euphonie combination
ಸಮಾಸ - Compound word
ಸರ್ವನಾಮ - Pronoun
ಸಂಖ್ಯಾವಾಚಕ - Numerl Noun
ಸ್ತ್ರೀಲಿಂಗ - Feminine Gender
ಹ್ರಸ್ವ - Short vowel
ಹರಿಸ - Happiness

ಪ್ರಶ್ನೆಗಳು:—

(1) ವ್ಯಾಕರಣವೆಂದರೇನು? ಇದರ ಮೊದಲಲ್ಲಿ ಅಕ್ಷರ ಲಕ್ಷಣವನ್ನು ಹೇಳಲು ಕಾರಣವೇನು?

(2) ಅಚ್ಚಗನ್ನಡದಲ್ಲಿ ಇಲ್ಲದ ಸಂಸ್ಕೃತ ವರ್ಣಗಳೂ, ಕನ್ನಡದಲ್ಲಿ ಮಾತ್ರವೇ ಇರುವ ವರ್ಣಗಳೂ ಯಾವುವು?

(3) ವರ್ಣವೆಂಬುದಕ್ಕೆ ಇನ್ನೊಂದು ಸಂಜ್ಞೆಯೇನು? ಉದಾಹರಣೆ ಮೂಲಕ ತಿಳಿಸಿ. ಐ, ಔ ಎಂಬಕ್ಷರಗಳ ಮೂಲವರ್ಣಗಳುಯಾವುವು?

(4) ಈ ಹೆಸರುಗಳು ಹೇಗೆ ಬಂದಿವೆ? ಸ್ವರ, ಹ್ರಸ್ವ, ಯೋಗವಾಹ, ಅನುನಾಸಿಕ, ವರ್ಗೀಯ, ಅಲ್ಪಪ್ರಾಣ, ಸವರ್ಣ, ಪರುಷ, ಶಿಥಿಲ, ದಿತ್ವ.

(5) ಈ ಕೆಳಗಣ ವಾಕ್ಯದಲ್ಲಿ ಗುಣಿತ, ಸಂಯುಕ್ತ, ದ್ವಿತ್ವಾಕ್ಷರಗಳನ್ನು ತೋರಿಸಿ ನಿಮ್ಮ ಸ್ವಂತ ಮಾತುಗಳಿಂದ ಒಂದೊಂದಕ್ಕೆ ನಾಲ್ಕು ನಾಲ್ಕು ಉದಾಹರಣೆಗಳನ್ನು ಕೊಡಿ.

ವಿದ್ಯೆಯಿಂದ ಜನಗಳಿಗೆ ಜ್ಞಾನವೂ, ಐಶ್ವರ್ಯವೂ ಅಭಿವೃದ್ಧಿಯಾಗುವುವು. ಆದರಿಂದ ಪ್ರತಿಯೊಬ್ಬರೂ ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮಾಡಬೇಕು.

(6) ಸಂಧಿಯೆಂದರೆ ಏನು? ಸಂಧಿ ಮಾಡುವುದೇತಕ್ಕೆ?

(7) ಸ್ವರಸಂಧಿ ವ್ಯಂಜನಸಂಧಿ ಎಂಬ ಹೆಸರುಗಳು ಹೇಗೆ ಬಂದಿವೆ?

(8) ಸಂಧಿ, ಎಲ್ಲಿ ನಿತ್ಯವು? ಎಲ್ಲಿ ವಿಕಲ್ಪವು? ಉದಾ. ಕೊಡಿ.

(9) ಸಂಧಿಕಾರ್ಯಗಳು ಯಾವುವು? ಇವುಗಳಿಗೆ ಈ ಹೆಸರು ಬರಲು ಕಾರಣವೇನು?

(10) ನಾಮರೂಪ ಕೆಡುವುದೆಂದರೆ ಏನು? ಉದಾಹರಣೆ ಮೂಲಕ ವಿವರಿಸಿ.

(11) ಕನ್ನಡ ಸಂಧಿಯಲ್ಲಿ ಮುಖ್ಯವಾಗಿ ಬರುವ ಎರಡು ಆಗಮಗಳು ಯಾವುವು? ಅವು ಎಲ್ಲೆಲ್ಲಿ ಬರುತ್ತವೆ? ಅವೆರಡೂ ಒಂದೇ ಕಡೆ ಬರುವುದುಂಟೋ? ಉದಾಹರಿಸಿ.

(12) ಪ್ರಕೃತಿಭಾವವೆಂದರೆ ಏನು? ಅದು ಎಲ್ಲೆಲ್ಲಿ ಬರುವುದು?

(13) ಸಂಸ್ಕೃತ ಶಬ್ದಸಂಧಿಗಳನ್ನು ಕನ್ನಡ ವ್ಯಾಕರಣದಲ್ಲಿ ವಿವರಿಸಲು ಕಾರಣವೇನು?

(14) ಸಂಸ್ಕೃತ ಸ್ವರಸಂಧಿಗಳೂ, ವ್ಯಂಜನಸಂಧಿಗಳೂ (ನಿಮ್ಮ ಪುಸ್ತಕದಲ್ಲಿ ಬಂದಿರುವುವು) ಯಾವುವು? ಅವುಗಳಿಗೆ ಅಂಥಂಥ ಹೆಸರು ಬರಲು ಕಾರಣಗಳೇನು?

(15) ಈ ಕೆಳಗಣ ಸಂಧಿ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನೂ ಸೂತ್ರಗಳನ್ನೂ ಹೇಳಿ:—ಅತ್ಯಾಶೆ, ವರ್ಷರ್ತು, ಪ್ರಥಮೈಕಾದಶಿ, ಸನ್ಮಾರ್ಗ, ತಚ್ಛಾಪ್ಲಳೆ, ಮಹದೈಶ್ವರ್ಯ, ವಿದ್ವಜ್ಜನ, ಉದ್ಧಾರ, ಷಣ್ಮುಖ, ಸತ್ಕಾರ್ಯ, ಸತ್ಸಹವಾಸ, ಸಚ್ಚಿದಾನಂದ, ದೇವೇಂದ್ರ, ಸೂರ್ಯೋದಯ, ಬಹಿರಾಗ, ಮನೋಜಯ,

(16) ವ್ಯಾಕರಣದಲ್ಲಿ ಯಾವುದನ್ನು ಶಬ್ದವೆನ್ನುವರು? ಶಬ್ದಲಕ್ಷಣ ವೆಂದರೇನು?

(17) ಕನ್ನಡಭಾಷೆಯಲ್ಲಿ ಬರುವ ಮೂರುತರದ ಶಬ್ದಗಳು ಯಾವುವು? ಅವುಗಳ ವಿವರವೇನು?

(18) ಯಾವ ಯಾವ ಬದಲಾವಣೆಗಳಿಂದ ಸಂಸ್ಕೃತ ಶಬ್ದಗಳು ತತ್ಸಮಗಳಾಗುವುವು? 4ನ್ನು ಉದಾಹರಿಸಿ.

(19) ಪ್ರಕೃತಿ, ಪದ, ಪ್ರತ್ಯಯಗಳೆಂದರೇನು? ಒಂದೇ ಪದದಲ್ಲಿ ಈ ಮೂರು ಭಾಗಗಳನ್ನೂ ತೋರಿಸಿ.

(20) ನಾಮವಾಚಕ ಭೇದಗಳು ಯಾವುವು? ಪ್ರತಿಯೊಂದನ್ನು ವಿವರಿಸಿ ಉದಾಹರಿಸಿ.

(21) ರೂಢ, ಅನ್ವರ್ಥ, ಅಂಕಿತನಾಮಗಳ ಪರಸ್ಪರ ಭೇದವನ್ನು ಉದಾಹರಣೆಗಳ ಮೂಲಕ ತಿಳಿಸಿ.

(22) ವಿಶೇಷ್ಯ ವಿಶೇಷಣಗಳೆಂದರೇನು? ವಿಶೇಷಣಗಳಿಗೆ ಪ್ರಾಯಶಃ ಬರುವ ಶಬ್ದಗಳು ಯಾವುವು?

(23) ಸಂಖ್ಯಾವಾಚಕ ಸಂಖ್ಯೇಯವಾಚಕಗಳನ್ನು ಗುರ್ತುತಿಳಿವುದೆಂತು?

(24) ಒಂದೊಂದೇ ಶಬ್ದವು ಅನೇಕ ಲಿಂಗಗಳಲ್ಲಿ ಬರಬಹುದು. ಅಂಥ 4 ಶಬ್ದಗಳನ್ನು ಉದಾಹರಿಸಿ.

(25) ಇವು ಯಾವಲಿಂಗ:—ಹುಲಿ, ವ್ಯಾಘ್ರ, ಸಂತೆ, ಅಂಗಾರಕ, ನಾನು, ಹಸು, ಅರಸಿ. ವಾಚ್ಯಲಿಂಗವೆಂದರೇನು? ಉದಾಹರಣೆಯಿಂದ ತಿಳಿಸಿ.

(26) ಕನ್ನಡದಲ್ಲಿ ಮುಖ್ಯವಾಗಿರುವ ವಚನಗಳೆಷ್ಟು? ದ್ವಿವಚನವು ಯಾವ ಸಂದರ್ಭಲ್ಲಿ ಬರುವುದು?

(27) ಬಹುವಚನಕ್ಕೆ ಬರುವ ಆಗಮಗಳು ಯಾವುವು? ಒಂದೊಂದು ಶಬ್ದಕ್ಕೆ ಎರಡೆರಡು ಆಗಮಗಳು ಬರುವುದುಂಟೋ? ಇದ್ದರೆ ನಾಲ್ಕು ಉದಾಹರಣೆಗಳನ್ನು ಕೊಡಿ.

(28) ಈ ಶಬ್ದಗಳಿಗೆ ಬಹುವಚನದಲ್ಲಿ ಗೊತ್ತಾಗಿ ಬರುವ ಆಗಮಗಳು ಯಾವುವು? ಅಕ್ಕ, ದೊಡ್ಡದು, ಮಗು, ತಾಯಿ, ನೂರು, ಜಾಣೆ, ಹೊಸದು, ಅನಿತು, ಅತ್ತೆ.

(29) ಏಕವಚನಕ್ಕೆ ಬಹುವಚನವೂ, ಬಹುವಚನಕ್ಕೆ ಏಕವಚನವೂ, ಯಾವ ಯಾವ ಸಂದರ್ಭಗಳಲ್ಲಿ ಬರುವುವು? ಉದಾಹರಿಸಿ.

(30) ಕಾರಕವಿಭಕ್ತಿಗಳು, ಕಾರಕಾರ್ಥಗಳು ಯಾವುವು? ವಿಭಕ್ತಿಯೆಂಬ ಶಬ್ದವು ಹೇಗೆ ಅನ್ವರ್ಥವಾಗಿದೆ?

(31) ದಕಾರ, ನಕಾರ, "ಇೞ್" ಆಗಮಗಳು ಎಲ್ಲೆಲ್ಲಿ ಬರುವುವು? "ಅರ್" "ಅಣ್" ಆಗಮಗಳು ಬರುವ ಎರಡೆರಡು ಪದಗಳನ್ನು ಹೇಳಿ.

(32) ಈ ಅರ್ಥಗಳಲ್ಲಿ ಯಾವ ಯಾವ ವಿಭಕ್ತಿಗಳು ಬರುತ್ತವೆ? ಉದಾಹರಿಸಿ. ಕಾರಣಾರ್ಥ, ಕರ್ತ್ರರ್ಥ, ಉದ್ದೇಶ, ಸಂಬಂಧ, ಅವಧಾರಣೆ.

(33) ವಿಭಕ್ತಿ ಪಲ್ಲಟವೆಂದರೇನು? ಪ್ರಥಮೆ ಮೊದಲಾದ 7 ವಿಭಕ್ತಿಗಳಿಗೆ ಮತ್ತೆ ಯಾವ ಯಾವ ವಿಭಕ್ತಿಗಳು ಬರುವುವು? ಒಂದೊಂದುದಾಹರಣೆಯನ್ನು ಕೊಡಿ.

(33) (a) ಗೌರವಾರ್ಥ, ವಿಧೇಯ ವಿಶೇಷಣ, ಜಾತಿವಾಚಕ ಇವುಗಳನ್ನು ವಿವರಿಸಿ ಒಂದೊಂದುದಾಹರಣೆಯನ್ನು ಕೊಡಿ.

(b) ನೀಱ + ಪಶು, ತಱ್ + ತಂದೆ—ಇವುಗಳನ್ನು ಬೇರೆ ಎರಡೆರಡು ರೂಪಗಳಿಂದ ಬರೆಯಿರಿ.

(34) ಸಮಾಸವೆಂದರೆ ಏನು? ಅದನ್ನು ಮಾಡುವುದೇತಕ್ಕೆ? ಸಮಾಸಪದವನ್ನು ವಿಗ್ರಹವಾಕ್ಯ ಮಾಡುವುದು ಹೇಗೆ?

(35) ಕನ್ನಡ ಶಬ್ದ ಸಮಾಸವೆಂದೂ ಸಂಸ್ಕೃತ ಶಬ್ದ ಸಮಾಸವೆಂದೂ 2 ಬಗೆ ಮಾಡಲು ಕಾರಣವೇನು? ಇವೆರಡು ಶಬ್ದಗಳನ್ನೂ ಕೂಡಿಸಿ ಯಾವ ಸಮಾಸಗಳನ್ನು ಮಾಡಬಹುದು?

(36) ಕ ತ ಪ ಗಳಿಗೆ ಗ ದ ಬ ಗಳು ಬರುವುದೆಲ್ಲಿ? ಬಾರದಿರುವುದೆಲ್ಲಿ? ಉದಾಹರಿಸಿ.

(37) ಸಮಾಸಗಳೆಷ್ಟು? ತತ್ಪುರುಷದಲ್ಲೇ ಸೇರಬಹುದಾದ ಸಮಾಸಗಳು ಯಾವುವು? ಕಾರಣ ಸಹಿತ ತಿಳಿಸಿ.

(38) ಸಮಾಹಾರವೆಂದರೆ ಏನು? ಇದು ಯಾವ ಯಾವ ಸಮಾಸದಲ್ಲಿ ಬರುತ್ತದೆ? ಅವೆರಡನ್ನೂ ಕಂಡುಹಿಡಿಯುವುದು ಹೇಗೆ?

(39) ಉಪಮಾನೋಪಮೇಯಗಳೆಂದರೆ ಏನು? ಒಂದು ಉದಾಹರಣೆಯಿಂದ ನಿರ್ಧರಿಸಿ.

(40) ಯಾವುದನ್ನು ಏಕಶೇಷವೃತ್ತಿಯೆನ್ನುವರು? ಈ ಹೆಸರು ಬರಲು ಕಾರಣವೇನು? ಉದಾಹರಿಸಿ.

(41) ಅಂಶಿ ಸಮಾಸಕ್ಕೆ ಸೂತ್ರೋದಾಹರಣೆಗಳನ್ನು ಬರೆಯಿರಿ.

(42) ಬಹುವ್ರೀಹಿ ಸಮಾಸದ ಸೂತ್ರವೇನು? ಸಮಾನಾಧಿಕರಣ—ವ್ಯಧಿಕರಣ, ಸಂಶಯ—ವಿಕಲ್ಪ, ಸಂಭಾವನಾ ಪೂರ್ವಪದ—ಅವಧಾರಣಾ ಪೂರ್ವಪದ, ಉಪಮಾನ ಪೂರ್ವಪದ—ಉಪಮಾನೋತ್ತರಪದ, ಕನ್ನಡ ಸಮಾಸ—ಅರಿಸಮಾಸ, ಲುಪ್ತಮಧ್ಯಮಪದ—ಅಲುಕ್ಸಮಾಸ. ಇವುಗಳಿಗೆ ಪರಸ್ಪರ ಭೇದವೇನು? ಒಂದೊಂದುದಾಹರಣೆಯ ಮೂಲಕ ತಿಳಿಸಿ.

(43) ಇವು ಯಾವ ಸಮಾಸ—ವಿಗ್ರಹವಾಕ್ಯಗಳು ಹೇಗೆ? ಬೇಲದ ಮರ, ಮೊಸರನ್ನ, ಮುಕ್ಕೊಡೆ, ತಾವರೆಗಣ್ಣ, ಮಳೆಬೆಳೆಗಳು, ನಾಲ್ಕೈದು, ಡೊಂಕುಗಾಲು, ಹಣಾಹಣಿ, ಹೊರಕೋಟೆ, ನಡುಮನೆ, ಹೆಸರಿಟ್ಟನು, ನಲವತ್ತು, ಸಹೋದರ, ಹೆಡತಲೆ, ಮುಕ್ಕಣ್ಣ.

(44) ಯಾವ ಪ್ರಕೃತಿಗಳಿಗೆ ಯಾವ ಪ್ರತ್ಯಯಗಳು ಸೇರಿ ಈ ಕೆಳಗೆ ಹೇಳುವ ಪದಗಳಾಗಿರಬಹುದು? ಹುಡುಗರು, ಜಾಣರು, ತಂದೆಗಳು, ಅವರು, ನಾವು, ಹಿರಿಯರು.

(45) ದ್ವಿರುಕ್ತಿಯೆಂದರೆ ಏನು? ಇದು ಯಾವ ಯಾವ ಸಂದರ್ಭದಲ್ಲಿ ಬರುತ್ತದೆ? ನಡೆನಡೆಯೆಂದು ನಡೆದನು, ಇವರಿಗೆ ಕಾಸುಕಾಸು ಕೊಡು, ಮೊಟ್ಟಮೊದಲು ಬಂದೆನು, ಚಿಕ್ಕಚಿಕ್ಕವರಿಗೆ ನಿದ್ರೆ ಹೆಚ್ಚು. ಬಂದೆ ಬಂದೆ ತಡೆ, ಬೆಟ್ಟಬೆಟ್ಟದಲ್ಲೂ ಮೋಡ ಕವಿದಿದೆ, ನೋಡಿ ನೋಡಿ ಸಾಕಾಯಿತು. ಇವು ಯಾವ ಅರ್ಥಗಳಲ್ಲಿ ಬಂದಿವೆ?

(46) ಧಾತುವೆಂಬುದು ಯಾವುದು? ಇದನ್ನು ಕಂಡುಹಿಡಿಯುವುದು ಹೇಗೆ?

(47) ಇವುಗಳ ಭೇದವನ್ನು ತಿಳಿಸಿ ಒಂದೊಂದುದಾಹರಣೆಯನ್ನು ಕೊಡಿ.
(a) ಸಹಜ ಧಾತು—ಹೊಸಧಾತು. (b) ಕರ್ತ್ರರ್ಥಕ ಕ್ರಿಯೆ—ಕರ್ಮಾರ್ಥಕ ಕ್ರಿಯೆ. (c) ಅಕರ್ಮಕ—ಸಕರ್ಮಕ. (d) ಕ್ರಿಯಾಪ್ರತ್ಯಯ — ವಿಕರಣಪ್ರತ್ಯಯ. (e) ಪೂರ್ಣಕ್ರಿಯೆ—ಅಪೂರ್ಣಕ್ರಿಯೆ.

(48) ಯಾವ ಯಾವ ಅರ್ಥ (ರೂಪ) ಗಳಲ್ಲಿ ಧಾತುಗಳ ಮೇಲೆ ಪ್ರತ್ಯಯಗಳು ಬರುತ್ತವೆ?

(49) ಉತ್ತಮ, ಮಧ್ಯಮ, ಪ್ರಥಮ, ಪುರುಷಗಳೆಂದರೆ ಏನು?

(50) ತಿಙನ್ತಗಳೆಂಬ ಹೆಸರು ಕ್ರಿಯಾಪದಗಳಿಗೆ ಬರಲು ಕಾರಣವೇನು?

(51) ಸಂಶಯರೂಪ, ವಿಧಿರೂಪ, ನಿಷೇಧರೂಪ ಎಂಬ ಹೆಸರುಗಳು ಹೇಗೆ ಅನ್ವರ್ಥವಾಗಿವೆ? ಉದಾಹರಣೆಗಳ ಮೂಲಕ ತಿಳಿಸಿ.

(52) ಯಾವ ಯಾವ ಅರ್ಥಗಳಲ್ಲಿ ವಿಧಿರೂಪ ಬರುತ್ತದೆ? ಪ್ರತಿಯೊಂದಕ್ಕೂ ಒಂದೊಂದುದಾಹರಣೆಯನ್ನು ಕೊಡಿ.

(53) ದಕಾರಾದಿ ಪ್ರತ್ಯಯಗಳು ಯಾವುವು? ಇವುಗಳಿಗೆ ಈ ಹೆಸರು ಬರಲು ಕಾರಣವೇನು?

(54) (a) ಮಾಡು ಎಂಬ ಧಾತುವಿಗೆ ಕರ್ಮಾರ್ಥದಲ್ಲಿ ವರ್ತಮಾನ ಭೂತ ರೂಪಗಳಲ್ಲೂ,

(b) ಹೋಗು ಎಂಬ ಧಾತುವಿಗೆ ಕರ್ತ್ರರ್ಥದಲ್ಲಿ ವಿಧಿ, ನಿಷೇಧ ರೂಪಗಳಲ್ಲೂ,

(c) ನಡೆ ಎಂಬ ಧಾತುವಿಗೆ ಕರ್ತ್ರರ್ಥಕದಲ್ಲಿ ಭವಿಷ್ಯತ್ ಸಂಶಯ, ರೂಪಗಳಲ್ಲೂ,

ಆಗುವ ಕ್ರಿಯಾರೂಪಗಳನ್ನು ಪುರುಷತ್ರಯ (1) ವಚನದ್ವಯ (2) ಗಳಲ್ಲೂ ಬರೆಯಿರಿ.

(55) ಕರ್ತೃ, ಕರ್ಮ, ಕ್ರಿಯೆಗಳೆಂದರೇನು? ಇವುಗಳಿಗೆ ಪರಸ್ಪರವಿರುವ ಸಂಬಂಧವನ್ನು ಒಂದುದಾಹರಣೆಯ ಮೂಲಕ ವಿವರಿಸಿ.

(56) ಎರಡು ಕರ್ತೃಗಳೂ (3) ಎರಡು ಕರ್ಮಗಳೂ (4) ಎರಡು ಕ್ರಿಯೆಗಳೂ, (5) ಬರುವ ಒಂದೊಂದು ವಾಕ್ಯವನ್ನು ಹೇಳಿ.

(57) ಅಕರ್ಮಕ ವಾಕ್ಯವು ಕರ್ಮಾರ್ಥಕವಾಗದಿರುವುದಕ್ಕೆ ಮುಖ್ಯ ಕಾರಣವೇನು?

(58) ಕರ್ತ್ರರ್ಥಕ, ಕರ್ಮಾರ್ಥಕ ವಾಕ್ಯಗಳನ್ನು ಕಂಡುಹಿಡಿಯುವುದಕ್ಕೆ ಸುಲಭ ಮಾರ್ಗ ಯಾವುದು?

(59) ಯಾವ ಧಾತುಗಳಿಗೆ ಮತ್ತು ಯಾವ ಕ್ರಿಯಾರೂಪಗಳಿಗೆ ಕಾಲ ಸೂಚಕವಾದ ಆಗಮಗಳು ಬರುವುದಿಲ್ಲ? ಉದಾಹರಿಸಿ.

(60) ಇಸು ಪ್ರತ್ಯಯದಿಂದ ನಾಮಪದಗಳಲ್ಲೂ, ಧಾತುಗಳಲ್ಲೂ ಉಂಟಾಗುವ ವ್ಯತ್ಯಾಸವೇನು? ಕ್ರಮವಾಗಿ ವಿವರಿಸಿ. ಉದಾಹರಿಸಿ.

(61) ಈ ಉದಾಹರಣೆಗಳಿಗೆ ಸಂಬಂಧಪಟ್ಟ ಸೂತ್ರಗಳನ್ನು ಬರೆಯಿರಿ. (a) ಇದು ಹೀಗೆಯೇ ನಡದು ಬರುತ್ತಾ ಇದೆ. (b) ಅವನು ಬರುವುದಿಲ್ಲವೋ, ಹಾಗಾದರೆ ನನ್ನ ಕೆಲಸವಾಯಿತು. (c) ಏಕೆ ಹೊಡೆದಾಡುತ್ತೀರಿ? (d) ನಾನು ಅಡಿಗೆ ಮಾಡಿಕೊಂಡೆನು. (e) ನಾನು ಅವನ್ನು ಮಾರಿಬಿಟ್ಟೆನು. (f) ಇನ್ನು ಒಂದು ವರ್ಷಕ್ಕೆ ಬರುತ್ತೇನೆ.

(61) (a) ಯಾವ ಅಕರ್ಮಕ ಧಾತು ಕರ್ಮಾರ್ಥಕದಲ್ಲಿ ಬರುವುದು? ಉದಾಹರಿಸಿ.

(62) ಕೃದಂತ ತದ್ಧಿತಾಂತಗಳಿಗೆ ಮೂಲಶಬ್ದಗಳು ಯಾವುವು?

(63) ಇವೆರಡರ ಅವಯವಾರ್ಥಗಳನ್ನು ಒಂದೊಂದುದಾಹರಣೆಯೊಡನೆ ಹೇಳಿ.

(64) ಇವೆರಡೆರಡರಲ್ಲಿ ಪರಸ್ಪರ ಭೇದವನ್ನು ಒಂದೊಂದುದಾಹರಣೆಯ ಮೂಲಕ ಸ್ಪಷ್ಟಪಡಿಸಿ. ಭಾವಕೃದಂತ—ತದ್ಧಿತಭಾವನಾಮ, ಅವ್ಯಯಕೃದಂತ—ತದ್ಧಿತಾಂತಾವ್ಯಯ. ಕಾರಕಕೃದಂತ—ಕೃನ್ನಾಮ, ಪೂರ್ಣಕ್ರಿಯೆ—ಅಪೂರ್ಣಕ್ರಿಯೆ.

(65) ಕಾರಕಕೃದಂತ ಪ್ರಕೃತಿಗಳು ಯಾವು ? ಇವುಗಳಿಗೆ ಇನ್ನೊಂದು ಹೆಸರೇನು ?

(66) ಅನೇಕಾರ್ಥಗಳಲ್ಲಿ ಬರುವ ಎರಡು ತದ್ಧಿತಪ್ರತ್ಯಯಗಳನ್ನು ಹೇಳಿ ಪ್ರತಿಯೊಂದು ಅರ್ಥಕ್ಕೂ ಒಂದೊಂದುದಾಹರಣೆಯನ್ನು ಕೊಡಿ.

(67) ಕಾರಕಾರ್ಥಗಳು ಯಾವುವು? ಇವುಗಳಿಗೆ ಈ ಹೆಸರು ಬರಲು ಕಾರಣವೇನು ?

(68) ಈ ಕೆಳಗಣ ಪದಗಳಿಗೆ ಯಾವ ಯಾವ ಹೆಸರನ್ನು ಹೇಳುವಿರಿ? ಕಾರಣ ಸಹಿತ ತಿಳಿಸಿ.

ಕಳವು, ಕಳ್ಳ, ಕದಿಯುವವನು, ನಡೆ, ನಡೆಯದ, ನಂಬುಗೆ, ಹೋಗಲು, ಬಂದರೆ, ಬರುವುದೂ, ಉಂಡಾಡಿಗ, ಹೂವಾಡಿಗ, ಹಣವಂತ, ಒರ್ಮೆ, ಪೆರ್ಮೆ, ನಲ್ಮೆ, ಬೀಗಿತಿ, ಕರಿಕ, ಮುದುಕ, ಅಪ್ಪುಮುಟ್ಟಗೆ, ಆದಕ್ಕೋಸ್ಕರ.

(69) ಈ ಪ್ರತ್ಯಯಗಳಿಂದಾಗುವ ತದ್ಧಿತ ಭಾವನಾಮ, ಅಥವಾ ಭಾವಕೃದಂತಗಳನ್ನು ವಿಂಗಡಿಸಿ ತೋರಿಸಿ. ಟ, ಇಗೆ, ಇಕೆ, ಉ, ಸು, ತನ, ಪು, ಮೆ, ಅವು, ಉ.

(70) ಅವ್ಯಯಕೃದಂತವೆಂಬ ಹೆಸರು ಹೇಗೆ ಬಂದಿದೆ?

(71) ಸಮಾನಕರ್ತೃಕ ಭಿನ್ನಕರ್ತೃಕಗಳಿಗೆ ಪರಸ್ಪರ ಭೇದವನ್ನೂ, ಇವೆರಡಕ್ಕೂ ಸಾಮಾನ್ಯವಾಗಿಯೂ ಬೇರೆಬೇರೆಯಾಗಿಯೂ ಬರುವ ಪ್ರತ್ಯಯಗಳನ್ನೂ ತಿಳಿಸಿ.

(72) ಸ್ತ್ರೀ ಪ್ರತ್ಯಯಗಳು ಯಾವುವು? ಪ್ರತಿಯೊಂದರಿಂದಲೂ ಆಗುವ ಒಂದೊಂದು ಶಬ್ದವನ್ನು ಬರೆಯಿರಿ.

(73) ನಿನ್ನೆಯಿಂದ, ಅಂದಿಗೆ ಎಂಬ ಶಬ್ದಗಳನ್ನು ಅವ್ಯಯಗಳೆಂದು ಹೇಗೆ ಸಾಧಿಸುವಿರಿ?

(74) ಅವ್ಯಯಗಳಲ್ಲಿ ಬರುವ ಮುಖ್ಯಭೇದಗಳು ಯಾವುವು? ಇವು ಎಂಥೆಂಥ ಅವ್ಯಯಗಳು? ತಟತಟನೆ (ನೀರುತೊಟ್ಟಿಕ್ಕಿತು) ಮೆಲ್ಲನೆ, ನೀ ನಾಗಿ, ಆದರೆ, ಆಹಾ, ಅಲ್ಲ, ಏ, ಊ, ಮತ್ತು, ಹಾಗೆ, ಎಲ್ಲಿ.

(75) ನಿಪಾತಾವ್ಯಯಗಳಿಗೆ ಇನ್ನೊಂದು ಹೆಸರು ಯಾವುದು? ಆ ಹೆಸರು ಬರಲು ಕಾರಣವೇನು?

(76) ತದ್ಭವಗಳೆಂದರೇನು? ಇದರ ಮೂಲಶಬ್ದಗಳಾವುವು? ಹಗ್ಗ, ಗರಗಸ, ಆಣೆ, ಉಮ್ಮೆ ಜಾಗ, ತಂದೆ, ಬೊಮ್ಮ, ಬಂಜೆ, ಸಂತೆ ಇವು ಯಾವ ಯಾವ ಶಬ್ದಗಳಿಂದುಂಟಾಗಿವೆ?

(77) ವಾಕ್ಯವೆಂದರೆ ಏನು? ವಾಕ್ಯರಚನೆ—ವಾಕ್ಯವಿಭಜನೆ ಇವುಗಳ ಪರಸ್ಪರ ಭೇದವೇನು? ಉದಾಹರಣೆಗಳಿಂದ ವಿವರಿಸಿ.

(78) ವಾಕ್ಯದ ಮುಖ್ಯಾಂಗಗಳು ಯಾವುವು? ಇವಿಲ್ಲದೆ ವಾಕ್ಯವಾಗು ವುದಿಲ್ಲವೆ? ಅದು ಹೇಗೆ?

(79) ವಾಕ್ಯಭೇದಗಳು ಯಾವುವು? ಅಧೀನವಾಕ್ಯವೆಂದರೇನು? ಇದಕ್ಕೆ ಆ ಹೆಸರು ಏಕೆ ಬಂದಿತು? ಪ್ರತಿಯೊಂದು ಅಧೀನವಾಕ್ಯಕ್ಕೂ ಒಂದೊಂದು ದಾಹರಣೆ ಕೊಡಿ.

(80) ಛಂದಸ್ಸನ್ನು ನೀವು ಏತಕ್ಕೆ ಕಲಿಯಬೇಕು? ಇದನ್ನು ಕಲಿಯ ದಿದ್ದರೆ ಯಾವ ಸಂಗತಿಗಳು ನಿಮಗೆ ಗೊತ್ತಾಗುವುದಿಲ್ಲ?

(81) ಗದ್ಯ—ಪದ್ಯ, ಗುರು—ಲಘು, ಅಕ್ಷರಗಣ—ಮಾತ್ರಾಗಣ, ಸಮ ಪಾದವೃತ್ತ—ವಿಷಮಪಾದವೃತ್ತ ಇವುಗಳ ಪರಸ್ಪರ ಭೇದವನ್ನು ವಿವರಿಸಿ.

(82) ಸಮಪಾದ ವೃತ್ತಗಳಿಗೆ ಬರುವ 8 ಗಣಗಳು ಯಾವುವು? ಅವು ಗಳನ್ನು ಕಂಡುಹಿಡಿಯುವುದು ಹೇಗೆ?

(83) ಯಾವುದಾದರೂ ನಾಲ್ಕು ವಿಷಮಪಾದ ವೃತ್ತಗಳನ್ನು ಹೇಳಿರಿ.

(84) ಪ್ರಸ್ತಾರವೆಂದರೇನು? ಒಂದು ಸಮಪಾದ ವೃತ್ತದ ಒಂದು ಪಾದವನ್ನು ಪ್ರಸ್ತಾರ ಕ್ರಮದಿಂದ ಗಣವಿನ್ಯಾಸಮಾಡಿ ತೋರಿಸಿ.

ಶುದ್ಧಿ ಪತ್ರಿಕೆ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
8	10	ಒಱ್	ಒರ್
9	7	ಇಸು +	ಇಸು =
11	16	ಸೂತ್ರೋಹರಣ	ಸೂತ್ರೋವಾಹರಣೆ
13	18	ಸಂಖ್ವೆಕ್ಕೆ	ಸಂಖ್ಯೆಕ್ಕೆ
17	28	ಕಾಮ	ಕಾಮ (3)
	30	ಹೆಸರು	ಹೆಸರು (3)
19	12	ಶಬೀ	ಶಬ್ದ
27	9	ನಾಲ್ಕುಳು	ನಾಲ್ಕ್ಕಳು
	14	ಯಿಎ	ಯ್ವಿ
30-33	1-12	* 41	* 42
31	12	ದತ್ತಾಣಿಂ	ದತ್ತಣಿಂ
33	29	ವಕಾರಾಗಮ	ನಕಾರಾಗಮ
34	3	ಪ್ರಭುವಿನ	ಪ್ರಭುವ
38	28	ಬರೆಯು	ಒರೆಯು
39	2	* 104-6	* 102-6
42	19	ಕೈಯ್ಸಾಲ	ವಯ್ಸಾಲ
50	29	ಪ್ರಭಾವ	ಸ್ವಭಾವ
61	8	ಪತ್ಯಯ	ಪ್ರತ್ಯಯ
62	22	ಒಳರ್	ಒಳಿರ್
	24	ಒಳರ್	ಒಳಳ್
63	2	* 99	* 79
65	18	ಹಗುರು	ಹರಗು
66	2	ತುಂಬಿಡು	ಕುಂಬಿಡು
67	29	ಬೀಳ್ಟ್ವಿ	ಬೀಟ್ವಿ
69	11	ಬರು ಧಾತು	ಬರು ಹೋಗು ಧಾತುಗಳು
72	9	ಕಾಣುತಿ	ಕಾಣುತ್ತೀ
75	17	ಕೂಡು	ಕೊಡು
76	19	ಬಲವು	ಒಲವು
91	8	ಎತ್ಕ	ಎಕ್ಕ
	16	ಜ್ಯೌತಿಷ್ಕ	ಜ್ಯೌತಿಷ್ಕ
110	6	ಗರುವಾಗ	ಗಿರುವಾಗ
111	18	ಕರಣಾರ್ಥಕ	ಕಾರಣಾರ್ಥಕ
132	18	ತತ್ತಏ	ತತ್ತ್ವ

ಷಟ್ಪದಿ ಕಾವ್ಯಗಳಲ್ಲಿರುವ ಕೆಲವು ವಿಲಕ್ಷಣ ಪ್ರಯೋಗಗಳು.

ಷಟ್ಪದಿ ಕಾವ್ಯಪ್ರಯೋಗ ರೂಪ.	ರೂಢಿಯಲ್ಲಿರುವ ರೂಪ.
ಎವಗೆ, ನವಗೆ, ತವಗೆ	ಎಮಗೆ, ನಮಗೆ, ತಮಗೆ
ನಿನಗಿಲ್ಲೆಲೇಸುಕೃತ	ನಿನಗಿಲ್ಲೆಲೈಸುಕೃತ
ನಮ್ಮುವನು, ನಿಮ್ಮುವನು	ನಮ್ಮನ್ನು, ನಿಮ್ಮನ್ನು
ದೊರೆಗೆ ದೊರೆ ಇದಿರಾಗಿ ಕಾದಿತು	ದೊರೆಗೆ........ಕಾದಿದರು
ಮುಗುದೆಯರು ಮುಸುಕಿತು	........ಮುಸುಕಿದರು
ನಾಗರಿಕ ರೈದಿತುಕೋಟಿಸಂಖ್ಯೆಯಲಿ	ನಾಗರಿಕರೈದಿದರು........
ನೂತನಾಂಬರ ಧೊಸತವಸಿ }	ನೂತನಾಂಬರದ ಹೊಸ........ಮುಂ
ಮುಂಧೊಳೆದನೈ }	ದೆಹೊಳೆದನೈ
ಭಾಳಖಾತಿಯಲಿ	ಬಹಳಖಾತಿಯಲಿ
ಹಾಯ್ಕು ಹಾಯಿಕ್ಕು ಹಾಯಿಂಕು	ಹಾಕು
ಒಳಕೆ ಒಳಯಿಕ್ಕೆ ಒಳಯಿಂಕೆ	ಒಳಕ್ಕೆ
ಅಂಜುವರೆ ನೀಕಾಳೆಗಕ್ಕೆಂದ	ಅಂಜುವುದೆ ನೀನು........ಎಂದನು
ಕರುಣಿಸೂದೆಲೆ ಭೂಪ	ಕರುಣಿಸುವುದೆಲೈಭೂಪ
ಸೀವುತಿವೆ ಕಣ್ಣಾಲಿ	ಸೀಯುತಿವೆ....
ತೆಗದುಕೋ ನೀಕೊಡುವೆ	ತೆಗೆದುಕೊಳ್ ನೀನು....
ಅಂದು ಸರಿದಪನೈರಸಾತಲಕೆ	ಅಂದು ಸರಿದನೈ....
ಈ ದೊರೆಯೊಲಾರದಟರೀಜಗದಿ	ಈದೊರೆಯವೋಲಾ....ಜಗದೊಳು
ಎಂದಪನು, ಬಂದಪನು, ತಂದಪನು	ಎಂದನು, ಬಂದನು, ...
ಬಪ್ಪನು, ಬಹನು, ಹೋಹನು	ಬರುವನು, ಹೋಗುವನು
ಇಹನು, ಇಪ್ಪನು —	ಇರುವನು
ಇರುತಲಿದ್ದನು —	ಇರುತಿರ್ದನು
ಮುನಿದ್ವೈಪಾಯನನುಕೇಳೆಂದ	ಇಲ್ಲ ಶಿಥಿಲವಿರಕೂಡದು
ಈಗ(ಲು)ಆಗ(ಲು)ಯಾವಾಗ(ಲು)	ಈಗಳ್, ಆಗಳ್, ಏಗಳ್
ಇಲ್ಲದಿದ್ದರೆ	....ದಿರ್ದೊಡೆ

ಏನುವನು, ಏನ್ಕೆ, ಏನ್ಕಾ	ಏನನ್ನು ಏತಕ್ಕೆ (ಏಕೆ)
ಬರ್ಪನು ಮೇಣುಬಾರನು	....ಮೇಣ್....
ಓದ್ಕೆ, ಓದಾಣಿಕೆ	ಓದು, ಓದಿಕೆ
ಹೇಂಗೆ, ಹಾಂಗೆ	ಹೇಗೆ, ಹಾಗೆ (ಆಹಗೆ)
ಅದರಂಗೆ ಇದು	ಅದರ ಹಾಗೆ....
ಹೊರವಂಟ, ಹೊರಟ, ಹೊಂಟ	ಪೊರಮಟ್ಟ
ಇದಾನೆ, ಅದಾನೆ, ಐಯ್ದಾನೆ ಅಯ್ವನೆ, ಅವನೆ	ಇರುವನು
ಇದೆ, ಅದೆ, ಅಯ್ತೆ ಅದಾದೆ	ಇರುವುದು
ಕೂತಿಪ್ಪರ್, ಕುಂತಿಪ್ಪರ್	ಕುಳಿತಿರುವ
ಅದಕ್ಕೆ, ಅದ್ಕೆ, ಅದರಿಂಕೆ	ಅದಕ್ಕೆ
ಕಾಣದೊಲು, ರಾಮನೊಲು	ಕಾಣದವೊಲು ರಾಮನವೊಲು
ಹೊತಾರೆ, ಹೊತ್ಮಾರೆ, ಹೊತ್ತು ನುಂಟೆ	ಪೊಳ್ತರೆ
ಬರೋಕೆ, ಬರವಿಂಕೆ	ಬರುವುದಕ್ಕೆ
ವನಧಿಕದಡಿದೆ	....ಕದಡಲ್ಪಟ್ಟಿದೆ
ಹಿರಣೆಯುಗರ್ಭ	ಹಿರಣ್ಯಗರ್ಭ
ಹೋರಟೆ, ಹೋರಟ್ಟೆ	ಹೋರಾಟ
ಅವದಿರಿಗೆ	ಅವಂದಿರಿಗೆ
ಒಂದಿನ ಬಂದನಾಮುನಿಪ	ಒಂದುದಿನ....
ಬರಾವು, ಬರವು	ಬರಹ
ನಾವು ಸಾರಥಿರಥಿಕನೀನಾಗೆ	ನಾನು....
ನಾಕನೆಯರಾನ ಕುಲಸಹ ದೇವ	ನಾಲ್ಕನೆಯವ ರಾನಕುಲಸಹದೇ
ನನಗೆ ಠಾವದಲಿ	....ತಾವದಲ್ಲವೆ?
ಧರ್ಮದಿನಡೆಯಿಸೀನೆಂದ	ಧರ್ಮದಲ್ಲಿ ನಡೆಯುವುದು....
ಇದವಿಚಾರಿಸಲು	ಇದನ್ನು....
ವೀರನಾರಯಣ	ವೀರನಾರಾಯಣ (ಇತ್ಯಾದಿ)

ಇಂತಹ ಪ್ರಯೋಗಗಳು ಅನೇಕವಾಗಿ ಷಟ್ಪದಿಗಳಲ್ಲಿಯೂ ಲೋಕರು ಯಲ್ಲಿಯೂ ಇರುವುವು, ಇವುಗಳಿಗೆ ಲಕ್ಷಣವನ್ನು ಬರೆಯಲು ಸಾಧ್ಯವಿಲ್ಲವೆಂ ದನ್ನು ಈ ಮೇಲಣ ಕೆಲವುದಾಹರಣೆಗಳಿಂದ ಸೂಚಿಸಿದೆ.

ಪ್ರಕಟನೆ.

ಇದೇ ಗ್ರಂಥಕರ್ತರಿಂದ

1.	ಬಾಲವ್ಯಾಕರಣ (ಮೊದಲನೆಯ ಮುದ್ರಣ) ದ ಕಾಪಿಗಳು ಒಂದಕ್ಕೆ	ಬೆಲೆ 0 6 0
2.	ರಘುಪತಿಚರಿತ—ರಘುವಂಶ ಮಹಾಕಾವ್ಯ 8—12ನೇ ಸರ್ಗದವರಿಗೆ ಕನ್ನಡ ಭಾಷಾಂತರ (ಪದ್ಯಕಾವ್ಯ)	0 8 0
3.	ಸಂಕ್ಷೇಪರಾಮಾಯಣ (ಪದ್ಯಕಾವ್ಯ)	0 5 0
4.	ಜಯಚಂದ್ರ ಕಥಾನಕ (Novel)	0 10 0
5.	ವಿದ್ಯಾಧರ (In the Press)	

ಎರಡನೆಯ ಮುದ್ರಣದ ಪ್ರತಿಗಳು ಒಂದೇ ಆರ್ಡರಿಗೆ

5ಕ್ಕೆ ಕಡಮೆಯಿಲ್ಲದೆ ತೆಗೆದುಕೊಳ್ಳುವವರಿಗೆ ಡಿಸ್ಕೌಂಟು ಶೇ॥				6 4 0
10ಕ್ಕೆ	,,	,,	,,	10 0 0
20ಕ್ಕೆ	,,	,,	,,	12 8 0

PANDIT, K. R. NARASIMHAIYA,

KOLAR.